ಶುಕ್ರವಾರ, ಜುಲೈ 25, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಿಂಧುಗೆ ಉನ್ನತಿ ಆಘಾತ

ಭಾರತದ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಒಲಿಂಪಿಯನ್ ಪಿ.ವಿ. ಸಿಂಧು ಅವರನ್ನು ಸೋಲಿಸಿದರು

ಪೆನ್ ಪ್ರಶಸ್ತಿಯ ಗರಿ

ಬುಕರ್ ಪ್ರಶಸ್ತಿ ಪುರಸ್ಕೃತ ಹಿಂದಿ ಲೇಖಕಿ ಗೀತಾಂಜಲಿ ಶ್ರೀ ಅವರ 'ಒನ್ಸ್ ಎಲಿಫೆಂಟ್ಸ್ ಲಿವ್ಡ್ ಹಿಯರ್' ಕೃತಿಯು ಪ್ರತಿಷ್ಠಿತ 'ಪೆನ್' ಅನುವಾದ ಪ್ರಶಸ್ತಿಗೆ ಆಯ್ಕೆಯಾಗಿದೆ

ಚಿಟಿಕೆ ಸುದ್ದಿ

ನರ್ಸರಿ ಬಾಲಕಿ ಮೇಲೆ ಅತ್ಯಾಚಾರ ಪ್ರಕರಣ ದಾಖಲು

ಬೀದರ್: ಖಾಸಗಿ ಶಾಲೆಯೊಂದರ ನರ್ಸರಿಯ, ನಾಲ್ಕು ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆದಿದೆ. ಇಲ್ಲಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

'ಬಾಲಕಿ ಬುಧವಾರ (ಜು.23) ಶಾಲೆಗೆ ಹೋಗಿ ಮನೆಗೆ ಮರಳಿದ್ದಳು. ತಾಯಿ ಮಗಳ ಶಾಲಾ ಉಡುಪು ಬದಲಿಸುವಾಗ ರಕ್ತಸ್ರಾವವಾಗಿರುವುದು ಗೊತ್ತಾಗಿದೆ. ಮರ್ಮಾಂಗದಿಂದ ರಕ್ತಸ್ರಾವ ಆಗುತ್ತಿದ್ದುದನ್ನು ಗಮನಿಸಿದ್ದು, ಕೂಡಲೇ ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ಠಾಣೆಗೆ ದೂರು ನೀಡಿದ್ದು, ಅಪರಿಚಿತರ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹಿಂದಿ' ಪರ ಹೇಳಿಕೆ ಶಾಸಕ ಕ್ಷಮೆಯಾಚನೆ

ಕೋಲಾರ: 'ಹಿಂದಿ ನಮ್ಮ ರಾಷ್ಟ್ರ ಭಾಷೆ. ರಾಜ್ಯ ಸರ್ಕಾರ ಈ ಭಾಷೆ ಕೈಬಿಟ್ಟರೆ ಹೋರಾಟ ಮಾಡುತ್ತೇನೆ' ಎಂದು ಮುಳಬಾಗಿಲು ಕ್ಷೇತ್ರದ ಜೆಡಿಎಸ್ ಶಾಸಕ ಸಮೃದ್ಧಿ ಮಂಜುನಾಥ್ ಹೇಳಿದ್ದಾರೆ.

ಸಮೃದ್ಧಿ ಮಂಜುನಾಥ್

ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ಭಾರಿ ವಿರೋಧ ವ್ಯಕ್ತವಾಗಿದೆ. ಹೇಳಿಕೆ ವಿವಾದದ ಸ್ವರೂಪ ಪಡೆಯುತ್ತಲೇ ಎಚ್ಚೆತ್ತುಕೊಂಡ ಅವರು ಗುರುವಾರ ಕ್ಷಮೆ ಯಾಚಿಸಿದ್ದಾರೆ.

'ನಾನೂ ಕರ್ನಾಟಕದವನು. ಕನ್ನಡಿಗ, ಕನ್ನಡ ಪ್ರೇಮಿ. ಹಿಂದಿ ಶಿಕ್ಷಕರಿಗೆ ಅನ್ಯಾಯ ಆಗಬಾರದೆಂಬುದು ನನ್ನ ಕಾಳಜಿ ಆಗಿತ್ತು. ಹಿಂದಿ ಹೇರಿಕೆ ಬೆಂಬಲಿಸಿ ಈ ಹೇಳಿಕೆ ನೀಡಿಲ್ಲ. ಯಾರಿಗಾದರೂ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ' ಎಂದು ಸ್ಪಷ್ಟನೆ ನೀಡಿದ್ದಾರೆ.

ಹಿನ್ನೆಲೆ: ಮುಳಬಾಗಿಲು ತಾಲ್ಲೂಕಿನ ದುಗ್ಗಸಂದ್ರದಲ್ಲಿ ಮಂಗಳವಾರ ಹೋಬಳಿ ಮಟ್ಟದ ಶಾಲಾ ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಅವರು, 'ಹಿಂದಿ ನಮ್ಮ ರಾಷ್ಟ್ರ ಭಾಷೆ. ಹಿಂದಿ ಭಾಷೆ ಕೈಬಿಟ್ಟರೆ ಹೋರಾಟ ಮಾಡುತ್ತೇನೆ' ಎಂದಿದ್ದರು. 'ಈ ಭಾಷೆ ಕೈಬಿಟ್ಟರೆ ಮುಂದೆ ಕಷ್ಟವಾಗುತ್ತದೆ. ಬಹುತೇಕ ಸಂಸದರು ಹಿಂದಿ ಮಾತನಾಡಲು ಕಷ್ಟ ಪಡುತ್ತಾರೆ. ಹೀಗಾಗಿ, ಹಿಂದಿ ಬೇಕೇ ಬೇಕು' ಎಂದು ಹೇಳಿದ್ದರು.

ಸೋಂಕು ಪತ್ತೆ ಪರೀಕ್ಷೆಗೆ ₹1,700 ಶುಲ್ಕ

ಬೆಂಗಳೂರು: ವೈರಾಣು ಸೋಂಕುಗಳ ಪತ್ತೆಗೆ ನಡೆಸುವ 'ಇನ್‌ಫ್ಲ್ಯೂಯೆಂಜಾ ಪ್ಯಾನೆಲ್' ಪರೀಕ್ಷೆಗೆ ₹1,700 ದರ ನಿಗದಿಪಡಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದ ಕೆಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಹಾಗೂ ಪ್ರಯೋಗಾಲಯಗಳು ಸಾಮಾನ್ಯ ಜ್ವರಕ್ಕೂ ಗಂಟಲ ದ್ರವದ ಮಾದರಿಗಳನ್ನು ಪಡೆದು, 'ಇನ್‌ಫ್ಲ್ಯೂಯೆಂಜಾ ಪ್ಯಾನೆಲ್' ಕಿಟ್‌ಗಳನ್ನು ಬಳಸಿ ಪರೀಕ್ಷೆ ನಡೆಸಿರುವುದು ಗಮನಕ್ಕೆ ಬಂದಿದೆ. ಈ ರೀತಿ ಪರೀಕ್ಷೆಗಳಿಗೆ ₹8 ಸಾವಿರ ದಿಂದ ₹10 ಸಾವಿರದವರೆಗೆ ಪಡೆಯಲಾಗಿದೆ. ಆದ್ದರಿಂದ ಆರೋಗ್ಯ ಇಲಾಖೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಈ ಪರೀಕ್ಷೆಗೆ ದರ ನಿಗದಿ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕುಡುತಿನಿ: ಮೂರು ಹಂತದ ಹೋರಾಟ'

ಬಳ್ಳಾರಿ: 'ವಶಪಡಿಸಿಕೊಂಡ ಜಮೀನಿಗೆ ನ್ಯಾಯಯುತ ಪರಿಹಾರ ನೀಡಿ ಮತ್ತು ಕಾರ್ಖಾನೆ ಸ್ಥಾಪಿಸಿ ಉದ್ಯೋಗ ಸೃಷ್ಟಿಸಿ ಎಂಬ ಬೇಡಿಕೆಯೊಂದಿಗೆ 950 ದಿನದಿಂದ ಪ್ರತಿಭಟಿಸುತ್ತಿರುವ ಕುಡುತಿನಿ ಭೂಸಂತ್ರಸ್ತರು, 3 ಹಂತಗಳಲ್ಲಿ ಹೋರಾಟ ತೀವ್ರಗೊಳಿಸಲು ನಿರ್ಧರಿಸಿದ್ದಾರೆ.

'ಮೊದಲ ಹಂತದಲ್ಲಿ ಸಂಡೂರು ಕ್ಷೇತ್ರದ ಶಾಸಕ, ಸಂಸದರ ಮನೆ ಎದುರು ಪ್ರತಿಭಟನೆ; ಎರಡನೇ ಹಂತದಲ್ಲಿ ಸಂಘ ಸಂಸ್ಥೆಗಳು, ಹೋರಾಟಗಾರರು ಮತ್ತು ನಾಯಕರ ನೇತೃತ್ವದಲ್ಲಿ ಬಳ್ಳಾರಿ ಬಂದ್, ಮೂರನೇ ಹಂತದಲ್ಲಿ ಬೆಂಗಳೂರಿಗೆ ಪಾದಯಾತ್ರೆ ತೆರಳಿ, ಅನಿರ್ದಿಷ್ಟಾವಧಿ ಹೋರಾಟ ನಡೆಸಲು ತೀರ್ಮಾನಿಸಿದ್ದಾರೆ.

ಬಸವರಾಜು

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಯು.ಬಸವರಾಜು, 'ಯಡಿಯೂರಪ್ಪ ಅವರ ಸರ್ಕಾರ 12 ಸಾವಿರ ಎಕರೆ ಭೂಮಿಯನ್ನು ವಶಕ್ಕೆ ಪಡೆಯಿತು. ಯುವಜನರಿಗೆ 14 ವರ್ಷಗಳ ಉದ್ಯೋಗ ನಷ್ಟ ಆಗಿದೆ. ಸಿದ್ದರಾಮಯ್ಯ ಸರ್ಕಾರ ಇದನ್ನು ಗಮನಿಸುತ್ತಿಲ್ಲ' ಎಂದು ಆರೋಪಿಸಿದರು.

ಸ್ಥಳೀಯ ಆರ್ಥಿಕತೆಗೆ ₹1000 ಕೋಟಿ

ಸ್ಪೇಸ್‌ಟೆಕ್ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗೆ ಸಚಿವ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 'ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ' ಆರಂಭಿಸಲು ವರ್ಷಕ್ಕೆ ತಲಾ ₹200 ಕೋಟಿಯಂತೆ 5 ವರ್ಷಗಳಿಗೆ ₹1,000 ಕೋಟಿ ಅನುದಾನ ನೀಡಲು ಗುರುವಾರ ನಡೆದ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಸಭೆ ಬಳಿಕ, ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.


ಎಚ್.ಕೆ.ಪಾಟೀಲ

ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮದಡಿ ರಾಜ್ಯದಲ್ಲಿ ಉದಯೋನ್ಮುಖ ನವೋದ್ಯಮಗಳಿಗೆ ಪರಿಸರ ವ್ಯವಸ್ಥೆ ನಿರ್ಮಿಸಲಾಗುವುದು. ಈ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಮತ್ತು ಮುಂಬರುವ ನವೋದ್ಯಮಗಳಿಗೆ ನಿರ್ಣಾಯಕ ಹಾಗೂ ಅಗತ್ಯ ಬೆಂಬಲವನ್ನು ಒದಗಿಸಲಾಗುವುದು. ಈ ಮೂಲಕ ಕರ್ನಾಟಕವನ್ನು ಜಗತ್ತಿಗೆ ಭವಿಷ್ಯದ ಸಿದ್ಧ ನವೋದ್ಯಮ ನಾಯಕನನ್ನಾಗಿಸಲು ಮುಂದಿನ 5 ವರ್ಷಗಳಲ್ಲಿ ₹1,000 ಕೋಟಿ ಬಂಡವಾಳ ಹೂಡಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಅಥವಾ ಸಚಿವ ಸಂಪುಟ ಪುನಾರಚನೆಯ ವದಂತಿಗಳ ಕುರಿತು ತಲೆ ಕೆಡಿಸಿಕೊಳ್ಳದೇ ಸಚಿವರು ಇಲಾಖೆಯ ಕೆಲಸದ ಕಡೆ ಹೆಚ್ಚಿನ ಗಮನ ಹರಿಸಲಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸ್ಪೇಸ್‌ಟೆಕ್ ಉತ್ಕೃಷ್ಟತಾ ಕೇಂದ್ರ: ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಕ್ಕಾಗಿ 'ಸ್ಪೇಸ್‌ಟೆಕ್ ಉತ್ಕೃಷ್ಟತಾ ಕೇಂದ್ರ' ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ಐದು ವರ್ಷಗಳ ಅವಧಿಗೆ ₹10 ಕೋಟಿ ವೆಚ್ಚ ಮಾಡಲಾಗುವುದು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಇಸ್ರೊ, ಡಿಆರ್‌ಡಿಒ ಮತ್ತು ಇತರ ಸರ್ಕಾರಿ ಪರೀಕ್ಷಾ ಸೌಲಭ್ಯಗಳು ಸಂಪೂರ್ಣ ಸಾಮರ್ಥ್ಯ ತಲುಪಿವೆ. ನವೋದ್ಯಮ ವಲಯವು ಪ್ರತಿ ತಿಂಗಳು ಕನಿಷ್ಠ 30 ಕಾರ್ಯ ನಿರತ ಮಾದರಿಗಳನ್ನು ಪರೀಕ್ಷೆಗೆ ಸಿದ್ಧವಾಗಿ ಹೊರತರುತ್ತಿದೆ. ನವೋದ್ಯಮ ವಲಯಗಳಿಂದ ಪರೀಕ್ಷಾ ಸೌಲಭ್ಯಗಳಿಗೆ ವ್ಯಾಪಕ ಬೇಡಿಕೆ ಇದೆ ಎಂದು ಹೇಳಿದರು.

ಏಳು ಪ್ರಾಧಿಕಾರಗಳಿಗೆ ಕಂದಾಯ ಸಚಿವರು ಅಧ್ಯಕ್ಷರು

ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುವ 7 ಪ್ರಾಧಿಕಾರಗಳ ಅಧ್ಯಕ್ಷತೆಯನ್ನು ಮುಖ್ಯಮಂತ್ರಿಯವರಿಗೆ ನೀಡಲಾಗಿತ್ತು. ಮುಖ್ಯಮಂತ್ರಿ ಸ್ಥಾನದ ಕಾರ್ಯಭಾರದ ಜತೆಗೆ ಮಂಡಳಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನದ ಸ್ಥಾನ ನಿರ್ವಹಿಸುವುದು ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಕಂದಾಯ ಸಚಿವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಸಂಬಂಧ ಮಸೂದೆಗಳಿಗೆ ತಿದ್ದುಪಡಿ ಮಾಡಿದ್ದು, ಸಚಿವ ಸಂಪುಟ ಒಪ್ಪಿಗೆ ನೀಡಿದೆ. ವಿಧಾನಮಂಡಲದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲಾಗುವುದು.

ಪ್ರಾಧಿಕಾರಗಳು: ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಬಸವಕಲ್ಯಾಣ ಅಭಿವೃದ್ಧಿ ಮಂಡಳಿ, ಬನವಾಸಿ ಅಭಿವೃದ್ಧಿ ಪ್ರಾಧಿಕಾರ, ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರ, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ.

ಸುಗ್ರೀವಾಜ್ಞೆ ಮಸೂದೆಯಾಗಿ ಪರಿವರ್ತನೆ: ಸುಗ್ರೀವಾಜ್ಞೆ ರೂಪದಲ್ಲಿದ್ದ 'ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ) ಮಸೂದೆ–2025'ಯನ್ನು ಮುಂಬರುವ ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಲಾಗುವುದು.

ಕೆರೆಗಳ ವಿಸ್ತೀರ್ಣಕ್ಕೆ ಬಫರ್ ಝೋನ್ ತಿದ್ದುಪಡಿ

ಕೆರೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಬಫರ್ ಝೋನ್ ನಿಗದಿಪಡಿಸಲು, ಕೆರೆಯ ಬಫರ್ ಝೋನ್‌ನಲ್ಲಿ ಹಾಗೂ ಕೆರೆಯಲ್ಲಿ ಸಾರ್ವಜನಿಕ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ ಕೈಗೊಳ್ಳಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಇದಕ್ಕಾಗಿ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2014'ಕ್ಕೆ ತಿದ್ದುಪಡಿ ಮಾಡಲಾಗಿದ್ದು, ಇದನ್ನು ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು ಎಂದು ಎಚ್.ಕೆ.ಪಾಟೀಲ ತಿಳಿಸಿದರು.



ಬಾಲ್ಯ ವಿವಾಹ: ನಿಶ್ಚಿತಾರ್ಥವೂ ಶಿಕ್ಷಾರ್ಹ

ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಮಸೂದೆ 2025 ಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, ನಿಶ್ಚಿತಾರ್ಥವೂ ಶಿಕ್ಷಾರ್ಹ ಎಂಬ ಅಂಶವನ್ನು ಸೇರಿಸಲಾಗಿದೆ.

- ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 46 ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ಒಪ್ಪಿಗೆ ನೀಡಲಾಗಿದೆ.
- ಶಂಕರ್‌ನಾಗ್ ಅವರ ಹೆಸರಿನಲ್ಲಿ ಸ್ಥಾಪಿಸಲಾಗಿರುವ 'ರಂಗಶಂಕರ' ಸಂಸ್ಥೆ ಲಾಭರಹಿತ ಸಂಸ್ಥೆಯಾಗಿರುವುದರಿಂದ ಅದರ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಲು ಒಪ್ಪಿಗೆ. ಗುತ್ತಿಗೆ ನವೀಕರಣ ಮೊತ್ತದಲ್ಲಿ ಶೇ 10 ಮಾತ್ರ ಪಾವತಿಸಿಕೊಳ್ಳಲು ಸಹಮತಿ.

ಸುದ್ದಿ 2 ನಿಮಿಷ

'ಎಸ್‌ಟಿ ಪಟ್ಟಿಗೆ ಕೋಲಿ- ಕಬ್ಬಲಿಗ: ಕೇಂದ್ರಕ್ಕೆ ಮತ್ತೆ ಪ್ರಸ್ತಾವ'

ಬೆಂಗಳೂರು: 'ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ, ಬಾರಕಿ ಸಮುದಾಯಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ' ಎಂದು ಕೋಲಿ-ಕಬ್ಬಲಿಗ ಸಮಾಜದ ಮುಖಂಡರಿಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

ಕೋಲಿ-ಕಬ್ಬಲಿಗ ಸಮುದಾಯದ ಮುಖಂಡರು ಮತ್ತು ಜನಪ್ರತಿನಿಧಿಗಳ ಜೊತೆ ಗುರುವಾರ ಚರ್ಚೆ ನಡೆಸಿದ ಪ್ರಿಯಾಂಕ್, 'ಕೇಂದ್ರ ಸರ್ಕಾರ ಪ್ರಸ್ತಾವವನ್ನು ಹಿಂದಕ್ಕೆ ಕಳುಹಿಸಿರುವ ಕಾರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮತ್ತೊಮ್ಮೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವ ಸಂಬಂಧ ಮುಖ್ಯಮಂತ್ರಿಯವರನ್ನು ಭೇಟಿ ಮಾಡಲಾಗುವುದು' ಎಂದರು.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಡಿ. ರಂದೀಪ್ ಅವರಿಂದ ಮಾಹಿತಿ ಪಡೆದ ಪ್ರಿಯಾಂಕ್ ಅವರು, ಕೋಲಿ ಮತ್ತು ಇತರೆ ಸಮುದಾಯಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಲು ಎದುರಾಗಿರುವ ತಾಂತ್ರಿಕ ತೊಡಕುಗಳನ್ನು ಪರಿಶೀಲಿಸಿ ವರದಿ ಸಿದ್ಧಪಡಿಸಲು ಸೂಚಿಸಿದರು. ಸೂಕ್ತ ಮಾಹಿತಿ ಕ್ರೋಡೀಕರಿಸಿದ ಬಳಿಕ ಕೋಲಿ-ಕಬ್ಬಲಿಗ ಜನಾಂಗದ ಮುಖಂಡರ ಜೊತೆ ಮುಖ್ಯಮಂತ್ರಿಯನ್ನು ಭೇಟಿ ಮಾಡಲಾಗುವುದು ಎಂದೂ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಲಬುರಗಿ ಜಿಲ್ಲೆಯ ಶಾಸಕರಾದ ಅಲ್ಲಮಪ್ರಭು ಪಾಟೀಲ, ಖನೀಜ್ ಫಾತಿಮಾ, ಎಂ.ವೈ. ಪಾಟೀಲ, ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮತ್ತು ಕೋಲಿ ಸಮಾಜದ ಮುಖಂಡರು ಸಭೆಯಲ್ಲಿದ್ದರು.

ಸಿಯುಕೆಯಲ್ಲಿ 7 ಹೊಸ ಕೋರ್ಸ್‌ಗಳ ಆರಂಭ

ಕಲಬುರಗಿ: 'ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಏಳು ಕೋರ್ಸ್‌ಗಳನ್ನು ಆರಂಭಿಸಲು ಕೇಂದ್ರದ ಉನ್ನತ ಶಿಕ್ಷಣ ಸಚಿವಾಲಯ ಅನುಮತಿ ನೀಡಿದೆ' ಎಂದು ವಿವಿ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

'ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಸಂಖ್ಯಾಶಾಸ್ತ್ರ ಮತ್ತು ದತ್ತಾಂಶ ವಿಶ್ಲೇಷಣೆಯಲ್ಲಿ ಸ್ನಾತಕೋತ್ತರ ಪದವಿ, 5 ವರ್ಷಗಳ ಬಿಎಎಲ್‌ಎಲ್‌ಬಿ, ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಬಿಟೆಕ್, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಎಂಟೆಕ್, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಎಂಎಸ್ಸಿ, ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನದಲ್ಲಿ ಜೀವವಿಜ್ಞಾನದ ಪುನರ್ರಚನೆ ಕೋರ್ಸ್‌ಗಳಿಗೆ ಅನುಮತಿ ಸಿಕ್ಕಿದೆ. ಈಗಾಗಲೇ ಬಿಎಎಲ್‌ಎಲ್‌ಬಿ ಮತ್ತು ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಬಿಟೆಕ್ ಕೋರ್ಸ್‌ಗಳು ಪ್ರಾರಂಭವಾಗಿವೆ. ಉಳಿದವುಗಳನ್ನು ಶೀಘ್ರದಲ್ಲೇ ಆರಂಭಿಸಲಾಗುವುದು' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಏಳು ಹೊಸ ವಿಭಾಗಗಳಿಗೆ 29 ಅಧ್ಯಾಪಕ ಹುದ್ದೆಗಳು ಮಂಜೂರಾಗಿವೆ. ಇತ್ತೀಚೆಗೆ 80 ಅಧ್ಯಾಪಕ ಮತ್ತು 50 ಅಧ್ಯಾಪಕೇತರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ವಿವಿಯಲ್ಲೀಗ 175 ಅಧ್ಯಾಪಕರಿದ್ದಾರೆ. ಪೂರ್ಣ ಇ-ಆಡಳಿತ ಇದ್ದು, ಪ್ರವೇಶಾತಿಯಿಂದ ಫಲಿತಾಂಶದವರೆಗೂ ಎಲ್ಲವೂ ಆನ್‌ಲೈನ್‌ನಲ್ಲೇ ನಡೆಯುತ್ತಿದೆ' ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಚನ್ನವೀರ ಆರ್.ಎಂ. ಹಾಗೂ ಎಲ್ಲ ವಿಭಾಗಗಳ ಡೀನ್‌ಗಳು ಹಾಜರಿದ್ದರು.

ನಕಲಿ ದಾಖಲೆ: ಕೆಎಸ್‌ಆರ್‌ಟಿಸಿ ಆಪರೇಟರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸಿಬ್ಬಂದಿ ವರ್ಗಾವಣೆಗಾಗಿ ಮತ್ತು ವಜಾಗೊಂಡ ನೌಕರನ ಪುನರ್ ನೇಮಕಕ್ಕಾಗಿ ನಕಲಿ ದಾಖಲೆ ಸೃಷ್ಟಿಸಿದ ಕೆಎಸ್‌ಆರ್‌ಟಿಸಿ ಲೆಕ್ಕಪತ್ರ ವಿಭಾಗದ ಕಿರಿಯ ಸಹಾಯಕ ಕಂ ಡಾಟಾ ಎಂಟ್ರಿ ಆಪರೇಟರ್ ರಿಚರ್ಡ್ ಜೆ. ಅವರನ್ನು ಅಮಾನತು ಮಾಡಲಾಗಿದೆ.

ಶಿವಮೊಗ್ಗ ಘಟಕದಲ್ಲಿ ಸಹಾಯಕ ಕುಶಲಕರ್ಮಿಯಾಗಿರುವ ನಾಗರಾಜಪ್ಪ ಅವರನ್ನು ಅವರ ಕೋರಿಕೆಯಂತೆ ದಾವಣಗೆರೆ ವಿಭಾಗಕ್ಕೆ ವರ್ಗಾವಣೆ ಮಾಡಿಸುವುದಾಗಿ ಭರವಸೆ ನೀಡಿ ರಿಚರ್ಡ್ ₹60 ಸಾವಿರ ಪಡೆದಿದ್ದರು. ವಜಾಗೊಂಡಿರುವ ಚಾಲಕ ನಾಗರಾಜ ಎನ್.ಎ. ಅವರನ್ನು ಪುನರ್ ನೇಮಕ ಮಾಡಲು ಮತ್ತು ಕುಂದಾಪುರ ಘಟಕದಲ್ಲಿ ಚಾಲಕರಾಗಿರುವ ಚಂದ್ರಹಾಸ ಎಸ್. ಆಚಾರಿ ಅವರನ್ನು ಶಿವಮೊಗ್ಗ ವಿಭಾಗಕ್ಕೆ ವರ್ಗಾವಣೆ ಮಾಡಲು ₹1.35 ಲಕ್ಷ ಪಡೆದಿದ್ದರು.

ನಕಲಿ ವರ್ಗಾವಣೆ ಮತ್ತು ಪುನರ್ ನೇಮಕಾತಿ ಆದೇಶಗಳನ್ನು ರಿಚರ್ಡ್ ಸೃಷ್ಟಿಸಿದ್ದರು. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರಾದ ಮುಖ್ಯ ಯಾಂತ್ರಿಕ ಎಂಜಿನಿಯರ್, ಮುಖ್ಯ ಸಂಚಾರ ವ್ಯವಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಸಹಿಗಳನ್ನು ಸ್ಕ್ಯಾನ್ ಮಾಡಿ ಅವರೇ ತಯಾರಿಸಿದ್ದ ಆದೇಶಗಳಿಗೆ ಲಗತ್ತಿಸಿ ಮುದ್ರಿಸಿದ್ದರು. ನಂತರ ಈ ನಕಲಿ ಆದೇಶಗಳನ್ನು ಮೂವರಿಗೆ ಕಳುಹಿಸಿಕೊಟ್ಟಿದ್ದರು. ಇದು ಸಂಸ್ಥೆಯ ನೌಕರರ ನಡತೆ ಮತ್ತು ಶಿಸ್ತು ನಿಯಮಾವಳಿಗಳ ಉಲ್ಲಂಘನೆಯಾಗಿದೆ ಎಂದು ತಿಳಿಸಿ ರಿಚರ್ಡ್ ಅವರನ್ನು ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರೂ ಆಗಿರುವ ಶಿಸ್ತುಪಾಲನಾಧಿಕಾರಿ ಕೆ.ಎಂ.ಅಶ್ರಫ್ ಅಮಾನತು ಮಾಡಿದ್ದಾರೆ.

ಭಕ್ತಸಾಗರ...

ಪ್ರಜಾವಾಣಿ ಚಿತ್ರ

ಭೀಮನ ಅಮಾವಾಸ್ಯೆ ಪ್ರಯುಕ್ತ ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟಕ್ಕೆ ಗುರುವಾರ ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದರು

ಶಾಸಕ ಬೈರತಿ ಬಸವರಾಜ್ ವಿಚಾರಣೆ • ಮತ್ತೆ ಸಿಐಡಿ ನೋಟಿಸ್ ಸಾಧ್ಯತೆ

ಬಿಕ್ಲು ಶಿವ ಹತ್ಯೆ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ. ಭಾರತಿನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಸಿಐಡಿ ಪೊಲೀಸರು ನಡೆಸಲಿದ್ದಾರೆ.

ಜುಲೈ 15ರಂದು ಬಿಕ್ಲು ಶಿವ ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಶಿವ ಅವರ ತಾಯಿ ವಿಜಯಲಕ್ಷ್ಮಿ ಅವರು ನೀಡಿದ ದೂರು ಆಧರಿಸಿ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಸೇರಿದಂತೆ ಐವರ ವಿರುದ್ಧ ಭಾರತಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬೈರತಿ ಬಸವರಾಜ್ ಅವರನ್ನು ಭಾರತಿನಗರ ಠಾಣೆಯ ಪೊಲೀಸರು ಎರಡು ಬಾರಿ ವಿಚಾರಣೆ ನಡೆಸಿದ್ದಾರೆ.

ಬೈರತಿ ಬಸವರಾಜ್

ಶಿವಪ್ರಕಾಶ್

ಆರೋಪಿಗಳಾದ ಕಿರಣ್, ಮದನ್, ಸ್ಯಾಮ್ಯುಯೆಲ್, ಪ್ರದೀಪ್, ವಿಮಲ್, ಅನಿಲ್, ಕೋಲಾರ ಜಿಲ್ಲೆ ಮಾಲೂರಿನ ಅವಿನಾಶ್ ದೀನಹಳ್ಳಿ, ಸುದರ್ಶನ್, ಮುರುಗೇಶ್ ಹಾಗೂ ನರಸಿಂಹ ಸೇರಿದಂತೆ 12 ಮಂದಿಯನ್ನು ಬಂಧಿಸಲಾಗಿದೆ. ಆರೋಪಿಗಳು ಪೊಲೀಸ್ ಕಸ್ಟಡಿ ಹಾಗೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಸಿಐಡಿ ಮೂಲಗಳು ತಿಳಿಸಿವೆ.

ಪ್ರಮುಖ ಆರೋಪಿಯಾಗಿರುವ ಜಗದೀಶ್ ಅಲಿಯಾಸ್ ಜಗ್ಗನ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಆತ ದುಬೈನಲ್ಲಿ ತಲೆಮರೆಸಿಕೊಂಡಿರುವ ಶಂಕೆಯಿದೆ.

'ಜಗದೀಶ್ ವಿರುದ್ಧ ಭಾರತಿನಗರ ಠಾಣೆ ಪೊಲೀಸರು ಲುಕ್ ಔಟ್ ನೋಟಿಸ್ ಜಾರಿ ಮಾಡಿದ್ದರು. ಮುಂದಿನ ತನಿಖೆಯನ್ನು ಸಿಐಡಿ ಪೊಲೀಸರೇ ನಡೆಸಲಿದ್ದಾರೆ. ಬೈರತಿ ಬಸವರಾಜ್ ಅವರಿಗೂ ಸಿಐಡಿ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಬರುವಂತೆ ಸೂಚಿಸುವ ಸಾಧ್ಯತೆಯಿದೆ' ಎಂದು ಮೂಲಗಳು ಹೇಳಿವೆ.

'ಬಿಕ್ಲು ಶಿವ ಹತ್ಯೆಗೂ ಮುನ್ನವೇ ಆರೋಪಿ ಜಗದೀಶ್ ನಾಪತ್ತೆ ಆಗಿರುವ ಮಾಹಿತಿ ಸಿಕ್ಕಿದೆ. ಸುಪಾರಿ ಕೊಟ್ಟು ತಲೆಮರೆಸಿಕೊಂಡಿರುವುದು ತನಿಖೆಯಿಂದ ಗೊತ್ತಾಗಿದೆ. ಬೆಂಗಳೂರಿನಿಂದ ಕೇರಳ, ತಮಿಳುನಾಡು ಬಳಿಕ ಉತ್ತರಾಖಂಡ್‌ಗೆ ತೆರಳಿ ಅಲ್ಲಿಂದ ವಿದೇಶಕ್ಕೆ ಹೋಗಿರುವ ಬಗ್ಗೆ ಮಾಹಿತಿ ಸಿಕ್ಕಿದೆ. ವಿದೇಶದಲ್ಲಿ ತಲೆಮರೆಸಿಕೊಂಡಿರುವ ಮಾಹಿತಿ ಆಧಾರದಲ್ಲಿ ವಿಮಾನ ನಿಲ್ದಾಣಗಳು, ಅಂತರರಾಷ್ಟ್ರೀಯ ಗಡಿ ಪ್ರದೇಶ ಹಾಗೂ ಬಂದರುಗಳಿಗೆ ಪ್ರಕರಣದ ಪೂರ್ಣ ವಿವರಗಳನ್ನು ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಕ್ಲು ಶಿವನಿಗೆ ಆರೋಪಿಗಳು ಪ್ರಾಣ ಬೆದರಿಕೆ ಹಾಕುತ್ತಿದ್ದರು. ಜುಲೈ 15ರಂದು ತಡರಾತ್ರಿ ಬಿಳಿ ಬಣ್ಣದ ಸ್ಕಾರ್ಪಿಯೋ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಮನೆಯ ಮುಂದೆ ಕಾರಿನ ಬಳಿ ನಿಂತಿದ್ದ ಶಿವಪ್ರಕಾಶ್‌ನ ಮೇಲೆ ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಿದ್ದರು. ಕಿತ್ತಗನೂರು ಜಾಗದ ವಿಚಾರವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಬೈರತಿ ಬಸವರಾಜ್ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ' ಎಂದು ವಿಜಯಲಕ್ಷ್ಮಿ ಅವರು ದೂರು ನೀಡಿದ್ದರು.

ಎಂಇಎಸ್ ಬೆಂಬಲಿತರಿಂದ ಗದ್ದಲ

ಪ್ರಜಾವಾಣಿ ವಾರ್ತೆ

ಬೆಳಗಾವಿ ಮಹಾನಗರ ಪಾಲಿಕೆ ಆವರಣದಲ್ಲಿ ಗುರುವಾರ ಗಲಾಟೆ ಕುರಿತು ಶಾಸಕ ಆಸಿಫ್ ಸೇಠ್ ಅವರೊಂದಿಗೆ ಶಾಸಕ ಅಭಯ ಪಾಟೀಲ ಮಾತನಾಡಿದರು

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಸಂಪೂರ್ಣ ಕನ್ನಡ ಅನುಷ್ಠಾನ ಮಾಡಬೇಕು ಎಂಬ ವಿಷಯ ಗುರುವಾರ ಪಾಲಿಕೆಯ ಪರಿಷತ್ ಸಭೆಯಲ್ಲಿ ಗದ್ದಲಕ್ಕೆ ಕಾರಣವಾಯಿತು.

ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಬೆಂಬಲಿತ ಹಾಗೂ ಕನ್ನಡ ಭಾಷಿಕ ಸದಸ್ಯರ ಮಧ್ಯೆ ವಾಗ್ವಾದ ಉಂಟಾಯಿತು. ಎಂಇಎಸ್‌ನ ಉದ್ಧಟತನ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪರಿಷತ್ ಸಭಾಂಗಣಕ್ಕೂ ನುಗ್ಗಲು ಯತ್ನಿಸಿದರು.

ಕನ್ನಡ ಅನುಷ್ಠಾನ

ಸಭೆ ಆರಂಭದಲ್ಲಿಯೇ ಎಂಇಎಸ್ ಬೆಂಬಲಿತ ಸದಸ್ಯ ರವಿ ಸಾಳುಂಕೆ, 'ಕನ್ನಡದ ಜೊತೆ ಮರಾಠಿಯಲ್ಲೂ ನಡಾವಳಿ ನೀಡಬೇಕು. ಭಾಷಾ ಅಲ್ಪಸಂಖ್ಯಾತ ಕಾಯ್ದೆ ಪಾಲಿಸಬೇಕು' ಎಂದರು. ಇದಕ್ಕೆ ಶಿವಾಜಿ ಮಂಡೋಳಕರ, ವೈಶಾಲಿ ಭಾತಕಾಂಡೆ ಬೆಂಬಲ ವ್ಯಕ್ತಪಡಿಸಿದರು.

ಸಿಟ್ಟಿಗೆದ್ದ ನಾಮನಿರ್ದೇಶಿತ ಸದಸ್ಯ ರಮೇಶ ಸೊಂಟಕ್ಕಿ, 'ಇದು ಕರ್ನಾಟಕ. ಇಲ್ಲಿ ಕನ್ನಡವೇ ಆಡಳಿತ ಭಾಷೆ. ಮರಾಠಿಯಲ್ಲಿ ನಡಾವಳಿ ಬೇಕಿದ್ದರೆ ಮಹಾರಾಷ್ಟ್ರಕ್ಕೆ ಹೋಗಿ. ಮರಾಠಿಯಲ್ಲಿ ನಡಾವಳಿ ಕೊಡಬಾರದು' ಎಂದರು. ಬಿಜೆಪಿ ಸದಸ್ಯರೂ ದನಿಗೂಡಿಸಿದರು.

ವಾಗ್ವಾದ ಜೋರಾದಾಗ, ಎಂಇಎಸ್ ಬೆಂಬಲಿತ ಸದಸ್ಯರು ಸಭಾತ್ಯಾಗ ಮಾಡಿದರು. ಮೇಯರ್ ಮಂಗೇಶ ಪವಾರ ಈ ಹಂತದಲ್ಲಿ ಕೆಲಹೊತ್ತು ಸಭೆ ಮುಂದೂಡಿದರು.

'ಕಾಂಗ್ರೆಸ್ ಬೆಂಬಲದಿಂದ ರವಿ ಸಾಳುಂಕೆ ಪ್ರತಿಬಾರಿ ಹೀಗೆ ವರ್ತಿಸುತ್ತಾರೆ. ಶಾಸಕ ಆಸಿಫ್ ಸೇಠ್ ಅವರನ್ನು ನಿಯಂತ್ರಿಸಬೇಕು' ಎಂದು ಶಾಸಕ ಅಭಯ ಪಾಟೀಲ ಆಗ್ರಹಿಸಿದರು.

ಒಳಗಡೆ ಏರುಧ್ವನಿಯ ಚರ್ಚೆ ಆರಂಭದಂತೆ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಕಾರ್ಯಕರ್ತರು ಧಿಕ್ಕಾರ ಕೂಗಿದರು.

'ಮರಾಠಿಯಲ್ಲಿ ನಡಾವಳಿ ಕೇಳಿದವರ ಸದಸ್ಯತ್ವ ರದ್ದುಮಾಡಿ, ಗಡಿಪಾರು ಮಾಡಬೇಕು' ಎಂದು ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ ಗುಡಗನಟ್ಟಿ ಆಗ್ರಹಿಸಿದರು. ಪೊಲೀಸರು ಸಂಘಟನೆಯ ಕಾರ್ಯಕರ್ತರನ್ನು ಹೊರಗೆ ಕಳುಹಿಸಿದರು.

ನೆರೆರಾಜ್ಯದ ದನಗಾಹಿಗಳು ರಾಜ್ಯದ ಅರಣ್ಯಕ್ಕೆ ಬರದಂತೆ ಕ್ರಮ: ಈಶ್ವರ ಖಂಡ್ರೆ

'ಸ್ಥಳೀಯರು ಜಾನುವಾರು ಮೇಯಿಸಬಹುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯವಾಸಿಗಳು, ಬುಡಕಟ್ಟು ಜನಾಂಗದವರು ಮತ್ತು ಸ್ಥಳೀಯರು ಅರಣ್ಯ ಪ್ರದೇಶದಲ್ಲಿ ಜಾನುವಾರುಗಳನ್ನು ಮೇಯಿಸಲು ಅವಕಾಶವಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಸ್ಪಷ್ಟಪಡಿಸಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅರಣ್ಯ ಪ್ರದೇಶದಲ್ಲಿ ಜಾನುವಾರುಗಳನ್ನು ಮೇಯಿಸುವುದರ ಮೇಲೆ ಇರುವ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಈಚೆಗೆ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಹೊರರಾಜ್ಯದ ಗಡಿ ಪ್ರದೇಶದ ಜನರು ನಮ್ಮ ಕಾಡುಗಳಲ್ಲಿ ಜಾನುವಾರುಗಳನ್ನು ಮೇಯಿಸುವುದಕ್ಕೆ ಈಗ ಕಡಿವಾಣ ಹಾಕಲಾಗುತ್ತಿದೆ' ಎಂದರು.

ಈಶ್ವರ ಬಿ. ಖಂಡ್ರೆ

'ತಮಿಳುನಾಡಿನ ಕಾಡುಗಳಲ್ಲಿ ಜಾನುವಾರುಗಳನ್ನು ಮೇಯಿಸಲು ನಿಷೇಧವಿದ್ದು, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದಾರೆ. ಈ ಕಾರಣದಿಂದ ಅಲ್ಲಿನ ದನಗಾಹಿಗಳು ನಮ್ಮ ಅರಣ್ಯ ಪ್ರದೇಶಕ್ಕೆ ಜಾನುವಾರುಗಳನ್ನು ಕರೆತಂದು ಮೇಯಿಸುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

'ಅಲ್ಲಿನ ದನಗಾಹಿಗಳು ಸಾವಿರಾರು ದನ–ಎಮ್ಮೆಗಳನ್ನು ರಾಜ್ಯದ ಅರಣ್ಯ ಪ್ರದೇಶಕ್ಕೆ ಅಟ್ಟಿಕೊಂಡು ಬರುತ್ತಾರೆ. ಒಮ್ಮೆ ಬಂದರೆ, ತಿಂಗಳುಗಟ್ಟಲೆ ಕಾಡಿನಲ್ಲೇ ಬೀಡುಬಿಟ್ಟಿರುತ್ತಾರೆ. ಇದರಿಂದ ನಮ್ಮ ಕಾಡುಗಳಲ್ಲಿ ಎಳೆಚಿಗುರು, ಹುಲ್ಲು ಇಲ್ಲವಾಗುತ್ತಿವೆ. ಇದನ್ನು ತಪ್ಪಿಸುವ ಉದ್ದೇಶದಿಂದ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ' ಎಂದು ವಿವರಿಸಿದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಅಡಿಯಲ್ಲಿ ಮೀಸಲು ಅರಣ್ಯ, ವನ್ಯಜೀವಿಧಾಮ, ಹುಲಿ ಸಂರಕ್ಷಿತ ಅರಣ್ಯಗಳಲ್ಲಿ ಜನರ ಅತಿಕ್ರಮ ಪ್ರವೇಶಕ್ಕೆ ಮತ್ತು ಸಾಕುಪ್ರಾಣಿಗಳನ್ನು ಮೇಯಿಸಲು ಅವಕಾಶ ಇರುವುದಿಲ್ಲ. ಆದರೆ ರಾಜ್ಯದ ಹಲವು ಭಾಗಗಳಲ್ಲಿ ಹೀಗೆ ಮೇಯಿಸುವುದು ರೂಢಿಯಲ್ಲಿದೆ. ಈಗ ಅದನ್ನು ತಡೆಯುವುದಿಲ್ಲ' ಎಂದರು.

'ಜಾನುವಾರುಗಳನ್ನು ಕಾಡಿನಲ್ಲಿ ಮೇಯಿಸುವುದರಿಂದ ಅವುಗಳಿಗಿರುವ ಚರ್ಮಗಂಟು, ಕಾಲುಬಾಯಿ ರೋಗ, ನೆಗಡಿಯಂತಹ ಸೋಂಕುಗಳು ವನ್ಯ ಜೀವಿಗಳಿಗೂ ಹರಡುವ ಅಪಾಯವಿದೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತೇವೆ. ಅತಿಹೆಚ್ಚು ಹಾಲು ನೀಡುವ ಹಸುಗಳ ಸಾಕಾಣಿಕೆಗೆ ಉತ್ತೇಜನ ನೀಡಿ, ಜಾನುವಾರುಗಳನ್ನು ಕಾಡಿಗೆ ಕರೆದುಕೊಂಡು ಹೋಗದಂತೆ ಮನವರಿಕೆ ಮಾಡುತ್ತೇವೆ' ಎಂದು ವಿವರಿಸಿದರು.

'ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿಧಾಮ ವ್ಯಾಪ್ತಿಯಲ್ಲಿ 33,000 ಜಾನುವಾರುಗಳಿವೆ ಎಂಬುದು ಪಶುಸಂಗೋಪನಾ ಇಲಾಖೆಯ ಅಂದಾಜು. ಚಾಮರಾಜನಗರ ಜಿಲ್ಲೆಯಲ್ಲಿ ಈಗಾಗಲೇ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಯೋಜನೆ ಅಡಿಯಲ್ಲಿ ಸುಮಾರು 15 ರೈತರಿಗೆ, ಹೆಚ್ಚು ಹಾಲು ನೀಡುವ ಹೈಬ್ರಿಡ್ ಹಸುಗಳನ್ನು ನೀಡಲಾಗಿದೆ. ಇದನ್ನು ಇನ್ನಷ್ಟು ವಿಸ್ತರಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ' ಎಂದರು.

'ವಿಷಪ್ರಾಶನವೇ ಕಾರಣ'

'ಜಾನುವಾರುಗಳ ಕಾರಣಕ್ಕೆ ಕಾಡಿನಲ್ಲಿ ಆನೆ, ಕಾಡೆಮ್ಮೆ, ಕಾಡುಕೋಣ, ಜಿಂಕೆ, ಕಡವೆ ಇತ್ಯಾದಿಗೆ ಮೇವಿನ ಕೊರತೆ, ನೀರಿನ ಕೊರತೆ ಎದುರಾಗುತ್ತಿದೆ. ಇದರಿಂದಲೇ ಸಂಘರ್ಷ ಉಂಟಾಗುತ್ತಿದೆ.

ಜಾನುವಾರುಗಳನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ವನ್ಯಜೀವಿಗಳಿಗೆ ವಿಷಪ್ರಾಶನ ಮಾಡುವ ಮಟ್ಟಕ್ಕೆ ಹೋದುದರಿಂದಲೇ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸೂಚಿಸಿದ್ದೇನೆ' ಎಂದು ಈಶ್ವರ ಬಿ. ಖಂಡ್ರೆ ಹೇಳಿದರು. ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿಧಾಮದ ವ್ಯಾಪ್ತಿಯಲ್ಲಿ ಈಚೆಗೆ ಒಂದು ಹೆಣ್ಣುಹುಲಿ ಮತ್ತು ಅದರ ನಾಲ್ಕು ಮರಿಗಳು ಅಸಹಜವಾಗಿ ಮೃತಪಟ್ಟಿದ್ದವು. ಅವುಗಳಿಗೆ ವಿಷವಿಕ್ಕಿ ಕೊಲ್ಲಲಾಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಈ ಸಂಬಂಧ ಮೂವರು ದನಗಾಹಿಗಳನ್ನು ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ ಎಂದರು.

ಅಂಬಾರಿ ಹೊರಲಿರುವ ಅಭಿಮನ್ಯು

'ಈ ಬಾರಿಯೂ ಅಭಿಮನ್ಯು ಆನೆಯೇ ದಸರಾದಲ್ಲಿ ಅಂಬಾರಿ ಹೊರಲಿದೆ. ಆಗಸ್ಟ್ 4ರಂದು ಹುಣಸೂರು ಬಳಿಯ ವೀರನಹೊಸಳ್ಳಿಯಿಂದ ವಿಧ್ಯುಕ್ತವಾಗಿ ಗಜಪಯಣಕ್ಕೆ ಚಾಲನೆ ನೀಡಲಾಗುವುದು' ಎಂದು ಈಶ್ವರ ಖಂಡ್ರೆ ತಿಳಿಸಿದರು.

ದಸರಾದ ಜಂಬೂಸವಾರಿಯಲ್ಲಿ ಭಾಗಿಯಾಗುವ 15 ಆನೆಗಳ ಪೈಕಿ 9 ಆನೆಗಳ ಪಟ್ಟಿ ಬಿಡುಗಡೆ ಮಾಡಿದ ಅವರು, '2020ರಿಂದಲೂ ಅಭಿಮನ್ಯು ಅಂಬಾರಿ ಹೊರುತ್ತಿದ್ದಾನೆ. ಈ ಬಾರಿಯೂ ಅವನೇ ಹೊರಲಿದ್ದಾನೆ' ಎಂದರು. 'ಮತ್ತೀಗೋಡು ಶಿಬಿರದ ಭೀಮ (25 ವರ್ಷ), ದುಬಾರೆ ಶಿಬಿರದ ಕಂಜನ್ (24), ಧನಂಜಯ (44) ಮತ್ತು ಪ್ರಶಾಂತ್ (53), ಬಳ್ಳೆ ಶಿಬಿರದ ಮಹೇಂದ್ರ (42), ದೊಡ್ಡಹರವೆ ಶಿಬಿರದ ಏಕಲವ್ಯ (40) ಗಂಡಾನೆಗಳು ಹಾಗೂ ದುಬಾರೆ ಶಿಬಿರದ ಕಾವೇರಿ (45), ಬಳ್ಳೆಯ ಲಕ್ಷ್ಮೀ (53) ಮೊದಲ ಹಂತದಲ್ಲಿ ಮೈಸೂರಿಗೆ ಬರಲಿವೆ' ಎಂದರು.

ವಿಷಪ್ರಾಶನ ಹೇಳಿಕೆ: ಕ್ಷಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಬಸವಜಯ ಮೃತ್ಯುಂಜಯ ಸ್ವಾಮೀಜಿಗೆ ವಿಷಪ್ರಾಶನ ಮಾಡಿಸಿರಬಹುದು ಎಂದು ತಪ್ಪು-ಕಲ್ಪನೆಯಿಂದ ಹೇಳಿದ್ದು, ಕ್ಷಮಿಸಿ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಕೋರಿದ್ದಾರೆ. ಪತ್ರಿಕಾಗೋಷ್ಠಿ ಕರೆದು, ಕ್ಷಮೆ ಕೇಳುವಂತೆ ತಿಳಿಸಿದ್ದೇನೆ' ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಇಲ್ಲಿ ಹೇಳಿದರು.

'ವಿಷಪ್ರಾಶನ ಆರೋಪ ಕುರಿತ ತನಿಖೆಗೆ ಈಗಾಗಲೇ ಕೋರಿದ್ದೇನೆ. ಮಠ ಕಾಯಲು ಜಾಫರ್ ಮತ್ತು ಮಾಲತೇಶ ಅವರಿಗೆ ತಿಳಿಸಿದ್ದೆ. ಸಿ.ಸಿ.ಟಿ.ವಿ ಕ್ಯಾಮೆರಾ ಇದೆ. ಯಾರಾದರೂ ವಿಷ ಬೆರೆಸಿದ್ದರೆ, ಪರಿಶೀಲಿಸಲಿ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ವಿಜಯಾನಂದ ಕಾಶಪ್ಪನವರ

'ಸ್ವಾಮೀಜಿ ದಾಖಲಾಗಿದ್ದ ಆಸ್ಪತ್ರೆ ವರದಿ ಪರಿಶೀಲಿಸಲಿ. ಏಕೆ ದಾಖಲಾಗಿದ್ದರು ಎಂದು ತಿಳಿಯಲಿದೆ. ಇದು ಬಿಜೆಪಿಯವರ ಕುತಂತ್ರ. ಶಾಸಕ ಸಿ.ಸಿ.ಪಾಟೀಲ ಗೌರವದಿಂದ ಮಾತನಾಡಲಿ. ವೈಯಕ್ತಿಕ ಟೀಕೆಯನ್ನು ಸಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

ಪರ್ಯಾಯ ಸ್ವಾಮೀಜಿ ಕುರಿತ ಪ್ರಶ್ನೆಗೆ, 'ಪೀಠದಲ್ಲಿಯೇ ಉಳಿದು ಧಾರ್ಮಿಕ ಚಟುವಟಿಕೆ, ಸಂಸ್ಕಾರ ಕಲಿಸುವ ಕೆಲಸ ಮಾಡಲು ಸ್ವಾಮೀಜಿಗೆ ಕೋರಲಾಗಿದೆ. ಅವರು ಪೀಠ ತ್ಯಾಗ ಮಾಡುವೆ. ಸಂಚರಿಸುವೆ ಎನ್ನುತ್ತಾರೆ. ಹಾಗಿದ್ದರೆ, ಪೀಠಾಧೀಶರಾಗಿದ್ದು ಏಕೆ' ಎಂದರು. 'ಟ್ರಸ್ಟ್‌ನಡಿ ಪೀಠ ಆಗಿದ್ದು, ಇದರಲ್ಲಿ 50ಕ್ಕೂ ಹೆಚ್ಚು ಜನರಿದ್ದಾರೆ. ಇದು, ನನ್ನೊಬ್ಬನ ನಿರ್ಣಯವಲ್ಲ. ಸಂಧಾನಕ್ಕಾಗಿ ಯಾರ ಮನೆಗೂ ಹೋಗಲ್ಲ. ಮನೆಗೆ ಬರುವವರಿಗೆ ಸ್ವಾಗತ. ಮಾಜಿ ಸಚಿವ ಮುರುಗೇಶ ನಿರಾಣಿ ಮಾತನಾಡಿದರೆ, ಮಾತನಾಡುವೆ' ಎಂದರು.

ಪಂಚಮಸಾಲಿ ಪೀಠ: ಗೋಪ್ಯ ಸಭೆ

ಹುನಗುಂದ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಇಳಕಲ್ ವಿಜಯಮಹಾಂತೇಶ ಸಂಸ್ಥಾನಮಠದ ಗುರುಮಹಾಂತ ಸ್ವಾಮೀಜಿ ಮತ್ತು ಸ್ಥಳೀಯ ಮುಖಂಡರು ಸೇರಿ ಪಟ್ಟಣದ ಬಸವ ಮಂಟಪದ ಕೊಠಡಿಯೊಂದರಲ್ಲಿ ಗುರುವಾರ ಅರ್ಧ ಗಂಟೆಗೂ ಹೆಚ್ಚು ಹೊತ್ತು ಗೋಪ್ಯ ಸಭೆ ನಡೆಸಿದರು.

'ಶಾಸಕ ವಿಜಯಾನಂದ ಕಾಶಪ್ಪನವರ ಮತ್ತು ಸ್ವಾಮೀಜಿ ನಡುವಿನ ಬಿಕ್ಕಟ್ಟು ಶಮನಗೊಳಿಸಿ, ಸಂಧಾನ ನಡೆಸುವ ಸಭೆಯ ಉದ್ದೇಶವಾಗಿತ್ತು' ಎನ್ನಲಾಗಿದೆ.

ಶುಕ್ರವಾರ, ಜುಲೈ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 205 | ಪುಟ 18
prajavani.net prajavani ● www.prajavani.net
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದಿವ್ಯಾಗೆ ಹಂಪಿ ಎದುರಾಳಿ

ಭಾರತದ ಕೋನೇರು ಹಂಪಿ ಗುರುವಾರ ಚೀನಾದ ಟಿಂಗ್ಜೀ ಲೀ ಅವರನ್ನು ಸೋಲಿಸಿ ಫಿಡೆ ಮಹಿಳಾ ಚೆಸ್ ವಿಶ್ವಕಪ್ ಫೈನಲ್ ತಲುಪಿದರು. ಪ್ರಶಸ್ತಿ ಸುತ್ತಿನಲ್ಲಿ ಸ್ವದೇಶದ ದಿವ್ಯಾ ದೇಶಮುಖ್ ಅವರನ್ನು ಎದುರಿಸಲಿದ್ದಾರೆ

ನೋವು ಮೀರಿ ನಿಂತ ಪಂತ್

ಮ್ಯಾಂಚೆಸ್ಟರ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಭಾರತದ ರಿಷಭ್ ಪಂತ್ ತಮ್ಮ ಕಾಲಿನ ಬೆರಳು ಮುರಿದ ನೋವಿನಲ್ಲಿಯೂ ಆಡಿ ಅರ್ಧಶತಕ ಗಳಿಸಿದರು

ರನ್	ಎಸೆತ	ಬೌಂಡರಿ	ಸಿಕ್ಸರ್
54	75	3	2

ಸೆನ್ಸೆಕ್ಸ್ 82,184 | ನಿಫ್ಟಿ 25,062 | $/₹ 86.40 | ಚಿನ್ನ (Std. 10g) ₹1,04,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,900 (ಬೆಂಗಳೂರು)

ಹೈಕೋರ್ಟ್‌ಗೆ 'ಸುಪ್ರೀಂ' ಛೀಮಾರಿ

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ
ದರ್ಶನ್‌ಗೆ ಜಾಮೀನು: ತೀರ್ಪು ಕಾಯ್ದಿರಿಸಿದ ಪೀಠ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರು ಆರೋಪಿಗಳಿಗೆ ಜಾಮೀನು ನೀಡಿರುವ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಛೀಮಾರಿ ಹಾಕಿದೆ.

ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಆರ್.ಮಹಾದೇವನ್ ಅವರ ಪೀಠವು ತೀರ್ಪು ಕಾಯ್ದಿರಿಸಿದೆ. 'ಆದೇಶ ಹೊರಡಿಸಿದ ರೀತಿ ನೋಡಿದರೆ ಇದು ಖುಲಾಸೆಗೊಳಿಸುವ ಪ್ರಕರಣ ಎಂದು ನ್ಯಾಯಾಲಯ ನಿರ್ಧರಿಸಿದಂತೆ ಕಾಣುತ್ತಿದೆ' ಎಂದು ಕಟುವಾಗಿ ಟೀಕಿಸಿದೆ.

'ಇದು ಪ್ರಾಥಮಿಕವಾಗಿ ವಿವೇಚನಾ ಅಧಿಕಾರದ ಮತಿಗೆಟ್ಟ ದುರುಪಯೋಗ' ಎಂದಿರುವ ನ್ಯಾಯಪೀಠ, 2024ರ ಡಿಸೆಂಬರ್ 13ರ ತನ್ನ ಆದೇಶದಲ್ಲಿ ಕೊಲೆ ಪ್ರಕರಣದ ಆರೋಪಿಗಳ ಬಂಧನಕ್ಕೆ ಆಧಾರವೇನು ಎಂದು ಪ್ರಶ್ನಿಸಿರುವುದನ್ನು ತೀವ್ರವಾಗಿ ಆಕ್ಷೇಪಿಸಿದೆ. 'ಹತ್ಯೆಯ ಪ್ರಕರಣದಲ್ಲಿ ಆರೋಪಿಗಳ ಬಂಧನಕ್ಕೆ ಆಧಾರವೇನು ಎಂಬುದನ್ನು ಉಲ್ಲೇಖಿಸಿಲ್ಲ ಎಂದು ಜಾಮೀನು ಆದೇಶದಲ್ಲಿ ಕಾರಣ ನೀಡಿರುವುದು ತೀವ್ರ ಆಕ್ಷೇಪಾರ್ಹವಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ರಾಜ್ಯ ಸರ್ಕಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, ವಕೀಲ ಡಿ.ಎಲ್. ಚಿದಾನಂದ ಮತ್ತು ಆರೋಪಿಗಳ ಪರ ಹಿರಿಯ ವಕೀಲ ಸಿದ್ಧಾರ್ಥ ದವೆ ಮತ್ತು ಇತರರ ವಾದಗಳನ್ನು ಸುಪ್ರೀಂ ಕೋರ್ಟ್ ಆಲಿಸಿತು.

ರಾಜ್ಯ ಸರ್ಕಾರ ಮತ್ತು ಆರೋಪಿಗಳ ಪರ ವಕೀಲರು ಸಲ್ಲಿಸಿದ ಲಿಖಿತ ಟಿಪ್ಪಣಿಗಳನ್ನು ದಾಖಲಿಸಿಕೊಂಡ ಪೀಠವು, ಒಂದು ವಾರದೊಳಗೆ ಸಂಕ್ಷಿಪ್ತ ಟಿಪ್ಪಣಿಗಳನ್ನು ಸಲ್ಲಿಸುವಂತೆ ಉಳಿದ ವಕೀಲರಿಗೆ ಸೂಚಿಸಿತು.

ದರ್ಶನ್

ಪವಿತ್ರಾ ಗೌಡ

ಪ್ರಕರಣದಲ್ಲಿ 65 ಸಾಕ್ಷಿಗಳಿದ್ದು, ನಿತ್ಯ ವಿಚಾರಣೆ ನಡೆಸಿದರೆ ಆರು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಲೂತ್ರಾ ಹೇಳಿದರು. ಆಗ ಪೀಠವು, 'ಈ ಪ್ರಕರಣದಲ್ಲಿ ದಿನನಿತ್ಯದ ವಿಚಾರಣೆ ಏಕೆ ನಡೆಸಬೇಕು' ಎಂದು ಪ್ರಶ್ನಿಸಿತು. 'ಹಲವಾರು ವಿಚಾರಣಾಧೀನ ಖೈದಿಗಳು ಕಳೆದ 5–7 ವರ್ಷಗಳಿಂದ ತಮ್ಮ ವಿಚಾರಣೆ ಆರಂಭಗೊಳ್ಳಲು ಕಾಯುತ್ತಲೇ ಇದ್ದಾರೆ' ಎಂದು ಹೇಳಿತು.

ಸಿದ್ಧಾರ್ಥ ದವೆ ಅವರು ಹೈಕೋರ್ಟ್ ಆದೇಶವನ್ನು ಸಮರ್ಥಿಸಿಕೊಂಡರು. 'ನ್ಯಾಯಾಲಯದ ಅಭಿಪ್ರಾಯಗಳು ಪ್ರಾಥಮಿಕವಾಗಿವೆ ಮತ್ತು ಅದು ವಿಚಾರಣಾ ನ್ಯಾಯಾಲಯದ ಮೇಲೆ ಪರಿಣಾಮ ಬೀರುವುದಿಲ್ಲ' ಎಂದರು. ಜೊತೆಗೆ, ಇಬ್ಬರು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ದಾಖಲು ತುಂಬಾ ವಿಳಂಬವಾಗಿದ್ದರಿಂದ ಅದನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ವಾದಿಸಿದರು.

ಆಗ ನ್ಯಾಯಪೀಠ, 'ಹೈಕೋರ್ಟ್ ಇದು ಖುಲಾಸೆಗೊಳಿಸುವ ಪ್ರಕರಣದಂತೆ ತೀರ್ಪು ನೀಡಿದೆ ಎಂದು ನಿಮಗೆ ಅನ್ನಿಸುತ್ತಿಲ್ಲವೇ... ಕಾರಣಗಳನ್ನು ನೀಡಲು ಸಾಕಷ್ಟು ವಿಧಾನಗಳಿವೆ' ಎಂದು ಹೇಳಿತು.

▶10

ಪವಿತ್ರಾ ಮೂಲ ಕಾರಣ: ನ್ಯಾ. ಪಾರ್ದೀವಾಲಾ

ಪ್ರಕರಣದ ಮುಖ್ಯ ಆರೋಪಿ ಪವಿತ್ರಾ ಗೌಡ ಪರ ವಕೀಲರನ್ನು ಉದ್ದೇಶಿಸಿ ನ್ಯಾಯಮೂರ್ತಿ ಪಾರ್ದೀವಾಲಾ, 'ಇವೆಲ್ಲವೂ ನಿಮ್ಮಿಂದಲೇ ಆಗಿದ್ದು. ನೀವು ಅಲ್ಲಿ ಇಲ್ಲದಿದ್ದರೆ, ದರ್ಶನ್ ಆಸಕ್ತಿ ತೋರುತ್ತಿರಲಿಲ್ಲ. ಆಗ ಉಳಿದ ಆರೋಪಿಗಳೂ ಈ ವಿಷಯಕ್ಕೆ ಬರುತ್ತಿರಲಿಲ್ಲ. ಆದ್ದರಿಂದ, ಈ ಪ್ರಕರಣಕ್ಕೆ ನೀವೇ ಮೂಲ ಕಾರಣ' ಎಂದರು.

ಹೈಕೋರ್ಟ್ ನ್ಯಾಯಮೂರ್ತಿಯು ಇಂತಹ ತಪ್ಪು ಮಾಡುವುದೇ: ನ್ಯಾಯಪೀಠ

- ಪ್ರಕರಣದ ಆರೋಪಿಗಳಿಗೆ ಜಾಮೀನು ಮಂಜೂರು ಮಾಡುವಲ್ಲಿ ತನ್ನ ವಿವೇಚನೆಯನ್ನು ಹೈಕೋರ್ಟ್ ಬಳಸಿಕೊಂಡ ರೀತಿಯ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ ನ್ಯಾಯಪೀಠ, ಇದು ಆರೋಪಿಗಳು ಖುಲಾಸೆಯಾಗುವಂತೆ ತೀರ್ಪು ನೀಡಿದಂತಿದೆ ಎಂದಿದೆ. 'ಹೈಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ನಮಗೆ ಹೇಳಲು ವಿಷಾದವಾಗುತ್ತದೆ, ಆದರೆ, ಹೈಕೋರ್ಟ್ ಎಲ್ಲ ಜಾಮೀನು ಅರ್ಜಿಗಳಲ್ಲಿಯೂ ಇಂತಹದೇ ಆದೇಶವನ್ನು ನೀಡುತ್ತದೆಯೇ' ಎಂದು ಪ್ರಶ್ನಿಸಿದೆ.
- 'ಜಾಮೀನು ಅರ್ಜಿಯನ್ನು ವಿಚಾರಣೆ ನಡೆಸಿದ ರೀತಿ ನಮಗೆ ಬೇಸರ ತಂದಿದೆ. ಕೊನೆಯದಾಗಿ ನ್ಯಾಯಮೂರ್ತಿಯು ಸೆಕ್ಷನ್ 302 ಐಪಿಸಿ ಪ್ರಕರಣದಲ್ಲಿ ಬಂಧನಕ್ಕೆ ಸೂಕ್ತ ಕಾರಣವನ್ನು ಉಲ್ಲೇಖಿಸಿಲ್ಲ ಎಂದು ಹೇಳಿದ್ದಾರೆ. ಸೆಷನ್ಸ್ ನ್ಯಾಯಾಧೀಶರು ಇಂತಹ ತಪ್ಪು ಮಾಡಿದರೆ ಅರ್ಥ ಮಾಡಿಕೊಳ್ಳಬಹುದು. ಆದರೆ, ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಈ ರೀತಿ ಹೇಳಿಕೆ ನೀಡುವುದೇ, ಇಂತಹ ತಪ್ಪು ಮಾಡುವುದೇ' ಎಂದು ನ್ಯಾಯಪೀಠ ಅಚ್ಚರಿ ವ್ಯಕ್ತಪಡಿಸಿದೆ.
- ಅಶ್ಲೀಲ ಸಂದೇಶಗಳನ್ನು ಕಳುಹಿಸಿ ರೇಣುಕಸ್ವಾಮಿ ತಪ್ಪು ಮಾಡಿದ್ದಾರೆ. ಹಾಗೆಂದು ಮಾರಕವಾಗಿ ಹಲ್ಲೆ ನಡೆಸಿ ಕೊಲೆ ಮಾಡಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಆರೋಪಿಗಳ ವಿರುದ್ಧ ಪ್ರಬಲ ಪುರಾವೆಗಳಿವೆ. ಜಾಮೀನು ರದ್ದುಪಡಿಸಬಾರದು ಏಕೆ ಎಂದು ಪೀಠವು ಪ್ರಶ್ನಿಸಿದೆ.

ರೇಣುಕಸ್ವಾಮಿ ಅವರನ್ನು ಕೊಲೆ ಮಾಡಿ ಮೋರಿಯಲ್ಲಿ ಎಸೆಯಲಾಗಿತ್ತು. ಆರೋಪಿಗಳು ಎರಡು ಕಾರುಗಳಲ್ಲಿ ಓಡಾಡಿದ ಬಗ್ಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ದಾಖಲಾಗಿವೆ. ರೇಣುಕಸ್ವಾಮಿ ಮೇಲೆ ದರ್ಶನ್ ತೀವ್ರ ಹಲ್ಲೆ ನಡೆಸಿದ್ದರು. ಇಬ್ಬರು ಪ್ರತ್ಯಕ್ಷದರ್ಶಿ ಸಾಕ್ಷಿಗಳಿದ್ದಾರೆ. ಆರೋಪಿಗಳ ವಿರುದ್ಧ ಪ್ರಬಲ ಪುರಾವೆಗಳು ಇವೆ. ಜಾಮೀನು ಪಡೆದ ಬಳಿಕ ದರ್ಶನ್ ಪ್ರಕರಣದ ಸಾಕ್ಷಿಗಳ ಜತೆಗೆ ಓಡಾಡಿದ್ದಾರೆ. ಅವರ ಜಾಮೀನು ರದ್ದುಗೊಳಿಸಬೇಕು.

ಸಿದ್ಧಾರ್ಥ ಲೂತ್ರಾ, ರಾಜ್ಯ ಸರ್ಕಾರದ ವಕೀಲ

ಪ್ರಕರಣದ ತನಿಖೆಯೇ ದೋಷಪೂರಿತವಾಗಿದೆ. ಪ್ರತ್ಯಕ್ಷದರ್ಶಿಗಳ ಹೇಳಿಕೆ ವಿರೋಧಾಭಾಸದಿಂದ ಕೂಡಿದೆ ಎಂಬುದನ್ನು ಹೈಕೋರ್ಟ್ ಗಮನಿಸಿದೆ. ಒಬ್ಬ ಪ್ರತ್ಯಕ್ಷದರ್ಶಿಯ ಹೇಳಿಕೆಯನ್ನು ಘಟನೆ ನಡೆದ 12 ದಿನಗಳ ಬಳಿಕವಷ್ಟೇ ದಾಖಲಿಸಲಾಗಿದೆ. ಅವರ ಹೇಳಿಕೆಗಳನ್ನು ವಿಳಂಬವಾಗಿ ದಾಖಲಿಸಿದ್ದರಿಂದ ಅವುಗಳನ್ನು ನಂಬುವಂತಿಲ್ಲ. ಅವರ ಸಾಕ್ಷ್ಯಗಳನ್ನು ಬೆಂಬಲಿಸಲು ಆರೋಪಪಟ್ಟಿಯಲ್ಲಿ ಯಾವುದೇ ಪುರಾವೆಗಳಿಲ್ಲ. ಇದಲ್ಲದೇ, ಪ್ರಕರಣದಲ್ಲಿ 272 ಸಾಕ್ಷಿಗಳಿದ್ದು, ವಿಚಾರಣೆ ಇನ್ನೂ ಆರಂಭವಾಗಿಲ್ಲ.

ಸಿದ್ಧಾರ್ಥ ದವೆ, ದರ್ಶನ್ ಪರ ವಕೀಲ

ಗಜ ಪಯಣ

ಪ್ರಜಾವಾಣಿ ಚಿತ್ರ: **ಆನೇಕಲ್ ಮಹೇಶ್ ಕುಮಾರ ಎಸ್.**

ಜಪಾನ್‌ಗೆ ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಯೋಜನೆ ಅಡಿ ಕಳಿಸಲು ಬನ್ನೇರುಘಟ್ಟ ಉದ್ಯಾನದ ನಾಲ್ಕು ಆನೆಗಳನ್ನು ಗುರುವಾರ ಕಬ್ಬಿಣದ ಪೆಟ್ಟಿಗೆಗಳಲ್ಲಿ ಸೇರಿಸಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಗಿಸಲಾಯಿತು. ವಿಶೇಷವಾಗಿ ಸಿದ್ಧಪಡಿಸಲಾದ ಸರಕು ಸಾಗಣೆ ವಿಮಾನದಲ್ಲಿ ಆನೆಗಳು ಪ್ರಯಾಣ ಬೆಳೆಸಿದವು

ಶೇ 100ರಷ್ಟು ಸಾಕ್ಷ್ಯ ಇದೆ: ರಾಹುಲ್

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಚುನಾವಣಾ ಆಯೋಗದ ವಿರುದ್ಧ ವಾಗ್ದಾಳಿ ತೀವ್ರಗೊಳಿಸಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, 'ಕರ್ನಾಟಕದ ಒಂದು ಕ್ಷೇತ್ರದಲ್ಲಿ ವಂಚನೆಗೆ ಅವಕಾಶ ನೀಡಿರುವುದನ್ನು ಸಾಬೀತುಪಡಿಸಲು ನಮ್ಮ ಬಳಿ ಶೇಕಡ 100ರಷ್ಟು ಸಾಕ್ಷ್ಯಗಳು ಇವೆ' ಎಂದು ಗುರುವಾರ ಹೇಳಿದ್ದಾರೆ.

'ಕರ್ನಾಟಕದ ಕ್ಷೇತ್ರವೊಂದರಲ್ಲಿ ಭಾರಿ ಪ್ರಮಾಣದಲ್ಲಿ ಚುನಾವಣಾ ಅಕ್ರಮ ನಡೆದಿದೆ' ಎಂಬ ಹೇಳಿಕೆ ಪುನರುಚ್ಚರಿಸಿದ ಅವರು, 'ಹೊಸ ಮತದಾರರು ಎಂದು ಹೇಳಿಕೊಂಡು 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಸಾವಿರಾರು ಮಂದಿಯನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ' ಎಂದು ಆರೋಪಿಸಿದ್ದಾರೆ.

ಸಂಸತ್ತಿನ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣಾ ಆಯೋಗವು ಭಾರತದ ಚುನಾವಣಾ ಆಯೋಗದಂತೆ ಕಾರ್ಯನಿರ್ವಹಿಸುತ್ತಿಲ್ಲ ಮತ್ತು 'ತಾನು ಮಾಡಬೇಕಾದ ಕೆಲಸವನ್ನು ಮಾಡುತ್ತಿಲ್ಲ' ಎಂದು ದೂರಿದ್ದಾರೆ.

▶6

ಆಧಾರರಹಿತ ಆರೋಪ: ಇ.ಸಿ ತಿರುಗೇಟು

'ರಾಹುಲ್ ಗಾಂಧಿ ಅವರು 'ಆಧಾರರಹಿತ ಆರೋಪ' ಮಾಡುವುದರ ಜೊತೆಗೆ, ಸಾಂವಿಧಾನಿಕ ಸಂಸ್ಥೆಗೆ ಬೆದರಿಕೆ ಹಾಕುತ್ತಿದ್ದಾರೆ' ಎಂದು ಚುನಾವಣಾ ಆಯೋಗವು (ಇ.ಸಿ) ಕಾಂಗ್ರೆಸ್ ನಾಯಕನ ಆರೋಪಗಳಿಗೆ ತಿರುಗೇಟು ನೀಡಿದೆ.

ರಾಹುಲ್ ಹೇಳಿಕೆಗೆ ಆಯೋಗವು ಗುರುವಾರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ಕರ್ನಾಟಕದ ಚುನಾವಣೆಗೆ ಸಂಬಂಧಿಸಿದಂತೆ ತಕರಾರುಗಳು ಇದ್ದಲ್ಲಿ, 1951ರ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 80ರ ಪ್ರಕಾರ ಚುನಾವಣಾ ತಕರಾರು ಅರ್ಜಿ ಸಲ್ಲಿಸಬಹುದಿತ್ತು. ಅಥವಾ ಅರ್ಜಿ ಸಲ್ಲಿಸಿದ್ದಿದ್ದರೆ, ಹೈಕೋರ್ಟ್ ತೀರ್ಪಿಗೆ ಕಾಯಬಹುದಿತ್ತು. ಅದರ ಬದಲು ರಾಹುಲ್ ಅವರು 'ಆಧಾರರಹಿತ' ಆರೋಪ ಮಾಡಿದ್ದಾರೆ. ಸಾಂವಿಧಾನಿಕ ಸಂಸ್ಥೆಗೆ ಬೆದರಿಕೆ ಹಾಕಲು ಚುನಾವಣಾ ಆಯೋಗವನ್ನು ಆಯ್ಕೆ ಮಾಡಿಕೊಂಡಿರುವುದು 'ತೀರಾ ದುರದೃಷ್ಟಕರ' ಎಂದು ಹೇಳಿದೆ.

ಭಾರತ, ಬ್ರಿಟನ್ ಪ್ರಧಾನಿಗಳ ಸಮ್ಮುಖದಲ್ಲಿ ಪೀಯೂಷ್– ರೆನಾಲ್ಡ್ಸ್ ಅಂಕಿತ

ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ

ಲಂಡನ್ (ಪಿಟಿಐ): ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದವೊಂದಕ್ಕೆ ಭಾರತ ಮತ್ತು ಬ್ರಿಟನ್ ಗುರುವಾರ ಸಹಿ ಮಾಡಿವೆ. ಈ ಒಪ್ಪಂದವು ಎರಡೂ ದೇಶಗಳ ಅರ್ಥ ವ್ಯವಸ್ಥೆಗಳಿಗೆ ಉತ್ತೇಜನ ನೀಡಲಿದೆ.

2030ರ ವೇಳೆಗೆ ಎರಡೂ ದೇಶಗಳ ನಡುವಿನ ವ್ಯಾಪಾರ ವಹಿವಾಟಿನ ಮೊತ್ತವನ್ನು 120 ಬಿಲಿಯನ್ ಅಮೆರಿಕನ್ ಡಾಲರ್‌ಗೆ (ಅಂದಾಜು ₹10.36 ಲಕ್ಷ ಕೋಟಿ) ಹೆಚ್ಚಿಸಲು ಒಪ್ಪಂದವು ಸಹಾಯ ಮಾಡಲಿದೆ.

ಭಾರತದಿಂದ ಬ್ರಿಟನ್ನಿಗೆ ರಫ್ತಾಗುವ ಶೇಕಡ 99ರಷ್ಟು ಉತ್ಪನ್ನಗಳಿಗೆ ಈ ಒಪ್ಪಂದದ ಕಾರಣದಿಂದಾಗಿ ಸುಂಕವಿಲ್ಲದೆ ಅಲ್ಲಿನ ಮಾರುಕಟ್ಟೆಗೆ ಪ್ರವೇಶ ಸಿಗಲಿದೆ. ಬ್ರಿಟನ್ನಿನಿಂದ ಭಾರತಕ್ಕೆ ಆಮದಾಗುವ ವಿಸ್ಕಿ, ಕಾರುಗಳು ಮತ್ತು ಇತರ ಹಲವು ಉತ್ಪನ್ನಗಳ ಮೇಲಿನ ತೆರಿಗೆ ಕಡಿಮೆ ಆಗಲಿದೆ.

ಈ ಒಪ್ಪಂದಕ್ಕೆ ಭಾರತದ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ಬ್ರಿಟನ್ನಿನ ವಾಣಿಜ್ಯ ಸಚಿವ ಜೊನಾಥನ್ ರೆನಾಲ್ಡ್ಸ್ ಅವರು ಎರಡೂ ದೇಶಗಳ ಪ್ರಧಾನಿಗಳ ಸಮ್ಮುಖದಲ್ಲಿ ಸಹಿ ಮಾಡಿದರು. ಮೂರು ವರ್ಷ ನಡೆದ ಮಾತುಕತೆಗಳ ಪರಿಣಾಮವಾಗಿ ಈ ಒಪ್ಪಂದವು ಅಂತಿಮ ರೂಪ ಪಡೆದಿದೆ.

'ಇದು ಎರಡೂ ದೇಶಗಳ ಪಾಲಿಗೆ ಐತಿಹಾಸಿಕ ದಿನ ಎಂದು ನಾನು ಭಾವಿಸಿದ್ದೇನೆ. ಈ ದಿನ ನಿಮ್ಮನ್ನು (ಭಾರತದ ಪ್ರಧಾನಿ ನರೇಂದ್ರ ಮೋದಿ) ಸ್ವಾಗತಿಸುವುದಕ್ಕೆ ಹಾಗೂ ನಾವು ನೀಡಿದ್ದ ಭರವಸೆಯನ್ನು ಈಡೇರಿಸುತ್ತಿರುವುದಕ್ಕೆ ನನಗೆ ಸಂತಸವಾಗುತ್ತಿದೆ' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಮೋದಿ ಅವರನ್ನು ಉದ್ದೇಶಿಸಿ ಹೇಳಿದರು. ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಮೋದಿ ಅವರು, 'ಭಾರತ ಮತ್ತು ಬ್ರಿಟನ್ ಸಹಜ ಪಾಲುದಾರರು, ಎರಡೂ ದೇಶಗಳು ತಮ್ಮ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯ ಬರೆಯುತ್ತಿವೆ' ಎಂದರು.

ಒಪ್ಪಂದ ಏರ್ಪಡುವುದಕ್ಕೂ ಮೊದಲು ಸ್ಟಾರ್ಮರ್ ಅವರು, 'ಇದು ಬ್ರಿಟನ್ನಿನಲ್ಲಿ ಸಹಸ್ರಾರು ಉದ್ಯೋಗ ಸೃಷ್ಟಿಸಲಿದೆ, ಉದ್ಯಮ ವಲಯಕ್ಕೆ ಹೊಸ ಅವಕಾಶಗಳನ್ನು ತೆರೆಯಲಿದೆ, ಬೆಳವಣಿಗೆಗೆ ಉತ್ತೇಜನ ನೀಡಲಿದೆ' ಎಂದರು.

ಬ್ರಿಟನ್ನಿನ ಉತ್ಪನ್ನಗಳಿಗೆ ಭಾರತದಲ್ಲಿ ವಿಧಿಸುವ ಸರಾಸರಿ ಸುಂಕದ ಪ್ರಮಾಣವು ಶೇ 15ರಷ್ಟು ಇರುವುದು ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಶೇ 3ಕ್ಕೆ ಇಳಿಯಲಿದೆ ಎಂದು ಬ್ರಿಟನ್ನಿನ ವ್ಯಾಪಾರ ಮತ್ತು ಉದ್ಯಮ ಇಲಾಖೆ ಹೇಳಿದೆ. ಅಂದರೆ, ಸಾಫ್ಟ್ ಡ್ರಿಂಕ್ಸ್, ಸೌಂದರ್ಯವರ್ಧಕಗಳು, ಕಾರುಗಳು, ವೈದ್ಯಕೀಯ ಉಪಕರಣಗಳನ್ನು ಭಾರತದಲ್ಲಿ ಮಾರಾಟ ಮಾಡುವ ಬ್ರಿಟನ್ನಿನ ಕಂಪನಿಗಳಿಗೆ ಅನುಕೂಲ ಆಗಲಿದೆ.

ಇನ್ನಷ್ಟು ಸುದ್ದಿಗಳು ▶10

ಮುಕ್ತ ವ್ಯಾಪಾರ ಒಪ್ಪಂದದ ಬಳಿಕ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹಸ್ತಲಾಘವ ಮಾಡಿದರು. ಪೀಯೂಷ್ ಗೋಯಲ್, ಜೊನಾಥನ್ ರೆನಾಲ್ಡ್ಸ್ ಈ ಸಂದರ್ಭದಲ್ಲಿ ಇದ್ದರು — ಪಿಟಿಐ ಚಿತ್ರ

ಭಾರತದ ಗ್ರಾಹಕರಿಗೆ ಏನು ಅನುಕೂಲ?

- ಸುಂಕ ಇಳಿಕೆಯಿಂದಾಗಿ ಬ್ರಿಟನ್ನಿನ ವಿಸ್ಕಿ, ಜಿನ್ ತಯಾರಕರಿಗೆ ಅನುಕೂಲ ಆಗಲಿದೆ. ಇವುಗಳ ಮೇಲಿನ ಸುಂಕವು ಶೇ 150ರಷ್ಟು ಇರುವುದು ಒಪ್ಪಂದ ಜಾರಿಗೆ ಬಂದ ತಕ್ಷಣದಿಂದ ಶೇ 75ಕ್ಕೆ ಇಳಿಯಲಿದೆ. ಮುಂದಿನ 10 ವರ್ಷಗಳಲ್ಲಿ ಇದು ಶೇ 40ಕ್ಕೆ ಬರಲಿದೆ. ಇದರಿಂದಾಗಿ ಇವುಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ತಗ್ಗಲಿದೆ
- ಆಟೊಮೊಬೈಲ್ ಮೇಲಿನ ಸುಂಕವು ಈಗ ಶೇ 100ರಷ್ಟು ಇರುವುದು ಶೇ 10ಕ್ಕೆ ಇಳಿಕೆ ಆಗಲಿದೆ. ಆದರೆ ಇದಕ್ಕೆ ಕೋಟಾ ನಿಗದಿ ಮಾಡಲಾಗಿದೆ
- ಬ್ರಿಟನ್ನಿನಿಂದ ಆಮದಾಗುವ ಸೌಂದರ್ಯವರ್ಧಕಗಳು, ಏರೋಸ್ಪೇಸ್ ವಲಯದ ಉತ್ಪನ್ನಗಳು, ಕುರಿ ಮಾಂಸ, ವೈದ್ಯಕೀಯ ಉಪಕರಣಗಳು, ಸಾಲ್ಮನ್ ಮೀನು, ಚಾಕಲೇಟ್, ಬಿಸ್ಕತ್ತುಗಳು, ಎಲೆಕ್ಟ್ರಿಕಲ್ ಯಂತ್ರೋಪಕರಣಗಳು ಭಾರತದ ಮಾರುಕಟ್ಟೆಯಲ್ಲಿ ಅಗ್ಗವಾಗಲಿವೆ
- ಟಿಸಿಎಸ್, ಇನ್ಫೊಸಿಸ್‌ನಂತಹ ಭಾರತದ ಐ.ಟಿ. ಕಂಪನಿಗಳಿಗೆ ಸಹಾಯ ಆಗಲಿದೆ. ಈ ಕಂಪನಿಗಳು ಬ್ರಿಟನ್ನಿನಲ್ಲಿನ ತಮ್ಮ ಕಾರ್ಯಾಚರಣೆಗಳಿಗಾಗಿ ಭಾರತದಿಂದ ಅಲ್ಲಿಗೆ ಕಳುಹಿಸುವ ನೌಕರರಿಗಾಗಿ ನೀಡಬೇಕಿರುವ ಸಾಮಾಜಿಕ ಭದ್ರತಾ ಕೊಡುಗೆಯಿಂದ 36 ತಿಂಗಳವರೆಗೆ ವಿನಾಯಿತಿ ಇರಲಿದೆ. ಇದರಿಂದಾಗಿ ಭಾರತದ 900 ಕಂಪನಿಗಳಿಗೆ ಅನುಕೂಲ ಆಗಲಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿದೆ

ಕಾಲ್ತುಳಿತ: ತಪ್ಪಿತಸ್ಥರ ವಿರುದ್ಧ ಕ್ರಮ

ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ವರದಿ ಒಪ್ಪಿಕೊಂಡ ಸಚಿವ ಸಂಪುಟ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತದಿಂದ 11 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಆಯೋಗದ ವರದಿಯ ಶಿಫಾರಸುಗಳನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಕೊಂಡಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲು ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ತಪ್ಪಿತಸ್ಥರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಸ್ವರೂಪದ ಮೊಕದ್ದಮೆ ದಾಖಲಿಸಲಾಗುವುದು ಎಂದು ಹೇಳಿದರು.

ಖಾಸಗಿ ಸಂಸ್ಥೆಗಳು ಮತ್ತು ಸರ್ಕಾರದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ವರದಿ ಶಿಫಾರಸು ಮಾಡಿದೆ. ಅಲ್ಲದೇ, ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಒಳಾಡಳಿತ ಇಲಾಖೆಗೆ ಸೂಚಿಸಲಾಗುವುದು ಎಂದರು.

ವರದಿಯ ಮುಖ್ಯ ಅಂಶಗಳು: 'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪೂರ್ವಾನುಮತಿ ಇಲ್ಲದೇ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಇಷ್ಟು ದೊಡ್ಡ ಮಟ್ಟದಲ್ಲಿ ಜನ ಸೇರುವಾಗ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು. ಆ ನಿಯಮವನ್ನು ಉಲ್ಲಂಘಿಸಲಾಗಿತ್ತು. ಅಲ್ಲದೇ, ಅಂದಿನ ಪೊಲೀಸ್ ಕಮಿಷನರ್ ಬಿ.ದಯಾನಂದ್, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಎಚ್.ಟೆಕ್ಕಣ್ಣನವರ್, ಕಬ್ಬನ್ ಪಾರ್ಕ್ ಉಪವಿಭಾಗದ ಹಿಂದಿನ ಎಸಿಪಿ ಸಿ.ಬಾಲಕೃಷ್ಣ ಮತ್ತು ಕಬ್ಬನ್ ಪಾರ್ಕ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಗಿರೀಶ್ ಎ.ಕೆ ಅವರಿಗೆ ಈ ವಿಜಯೋತ್ಸವ ಅನಧಿಕೃತ ಎಂಬುದು ಸ್ಪಷ್ಟವಾಗಿ ಗೊತ್ತಿತ್ತು. ಸೂಕ್ತ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಆಯೋಜಿಸಲಾಗುತ್ತಿದೆ ಎಂಬುದು ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಆದರೂ ವಿಜಯೋತ್ಸವ ತಡೆಯುವಲ್ಲಿ ವಿಫಲರಾದರು. ಆಯೋಜಕರು ಸೂಕ್ತ ವ್ಯವಸ್ಥೆ ಮಾಡುವುದಕ್ಕೂ ಮೊದಲೇ ಪೊಲೀಸ್ ಆಯುಕ್ತರ ನಿರ್ದೇಶನದ ಮೇರೆಗೆ ಇತರ ಪೊಲೀಸ್ ಅಧಿಕಾರಿಗಳು ಸಂಘಟಕರೊಂದಿಗೆ ಶಾಮೀಲಾಗಿ ಬಂದೋಬಸ್ತ್ ಕಾರ್ಯದಲ್ಲಿ ತೊಡಗಿದ್ದರು' ಎಂದು ವರದಿ ಉಲ್ಲೇಖಿಸಿದೆ.

'ಕಾಲ್ತುಳಿತಕ್ಕೆ ಆಯೋಜಕರೇ ಹೊಣೆಗಾರರು. ಕ್ರೀಡಾಂಗಣದ ಪ್ರವೇಶ ದ್ವಾರದ ಬಳಿ ಗುಂಪನ್ನು ಸರಿಯಾಗಿ ನಿರ್ವಹಿಸಲಿಲ್ಲ. ಪ್ರವೇಶಕ್ಕೆ ಸಂಬಂಧಿಸಿದಂತೆ ಬೇಕಾಬಿಟ್ಟಿಯಾಗಿ ಉದ್ಘೋಷಣೆ ಮಾಡುತ್ತಿದ್ದರು. ಇದೇ ಕಾಲ್ತುಳಿತ, ಸಾವು–ನೋವುಗಳಿಗೆ ಮೂಲ ಕಾರಣ. ಪೂರ್ವ ತಯಾರಿ ಇಲ್ಲದೇ, ತಪ್ಪು ನಿರ್ಧಾರಗಳ ಮೂಲಕ ಸಂಘಟಕರೇ ಅಲ್ಲಿ ಅನಾಹುತಕಾರಿ ಸ್ಥಿತಿಯನ್ನು ಸೃಷ್ಟಿಸಿದರು. ಇದರಲ್ಲಿ ಆಯೋಜಕರ ದಿವ್ಯ ನಿರ್ಲಕ್ಷ್ಯ ಎದ್ದು ಕಾಣುತ್ತದೆ' ಎಂದು ಹೇಳಿದೆ.

ವರದಿ ಓದಿಲ್ಲ: ಈ ದುರಂತದಲ್ಲಿ ಕೇವಲ ಪೊಲೀಸರನ್ನು ಹೊಣೆಗಾರರನ್ನಾಗಿ ಮಾಡಿ ಇತರ ಹಿರಿಯ ಅಧಿಕಾರಿಗಳು ಮತ್ತು ಮುಖ್ಯಮಂತ್ರಿಯವರ ಮಾಜಿ ರಾಜಕೀಯ ಕಾರ್ಯದರ್ಶಿಯ ಪಾತ್ರವನ್ನು ವರದಿಯಲ್ಲಿ ಪ್ರಸ್ತಾಪಿಸದೇ ಇರುವುದನ್ನು ಸುದ್ದಿಗಾರರು ಪ್ರಶ್ನಿಸಿದಾಗ, 'ವರದಿಯನ್ನು ಪೂರ್ತಿ ಓದಿಲ್ಲ' ಎಂದು ಎಚ್.ಕೆ.ಪಾಟೀಲ ತಿಳಿಸಿದರು.

'ಕಾರಣರಾದವರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು' ಎಂಬ ಪ್ರಶ್ನೆಗೆ, ಇನ್ನಷ್ಟೇ ತೀರ್ಮಾನ ಆಗಬೇಕು ಎಂದರು.

ಮುಖ್ಯಾಂಶಗಳು

- ತಪ್ಪಿತಸ್ಥರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಸ್ವರೂಪದ ಮೊಕದ್ದಮೆ
- ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸೂಚನೆ

ದುರಂತಕ್ಕೆ ಕಾರಣಕರ್ತರು ಯಾರ್‍ಯಾರು?

ರಾಯಲ್ ಚಾಲೆಂಜರ್ಸ್ ಪ್ರೈವೆಟ್ ಲಿಮಿಟೆಡ್/ಆರ್‌ಸಿಬಿ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್, ಕೆಎಸ್‌ಸಿಎ ಮತ್ತು ಅದರ ಅಧ್ಯಕ್ಷ ರಘುರಾಮ್ ಭಟ್, ಮಾಜಿ ಕಾರ್ಯದರ್ಶಿ ಎಸ್.ಶಂಕರ್, ಮಾಜಿ ಖಜಾಂಚಿ ಇ.ಎಸ್.ಜಯರಾಮ್, ಆರ್‌ಸಿಎಸ್‌ಪಿಎಲ್‌ನ ಉಪಾಧ್ಯಕ್ಷ ರಾಜೇಶ್ ಮೆನನ್, ಡಿಎನ್‌ಎ ಎಂಟರ್‌ಟೈನ್‌ಮೆಂಟ್‌ನ ವ್ಯವಸ್ಥಾಪಕ ನಿರ್ದೇಶಕ ಟಿ. ವೆಂಕಟವರ್ಧನ್, ಉಪಾಧ್ಯಕ್ಷ ಸುನಿಲ್ ಮಾಥುರ್.

ಬೆಂಗಳೂರು ನಗರದ ಈ ಹಿಂದಿನ ಪೊಲೀಸ್ ಕಮಿಷನರ್ ಬಿ.ದಯಾನಂದ್, ಹಿಂದಿನ ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಹಿಂದಿನ ಡಿಸಿಪಿ ಶೇಖರ್ ಎಚ್.ಟೆಕ್ಕಣ್ಣನವರ್, ಕಬ್ಬನ್ ಪಾರ್ಕ್ ಉಪವಿಭಾಗದ ಹಿಂದಿನ ಎಸಿಪಿ ಸಿ.ಬಾಲಕೃಷ್ಣ, ಕಬ್ಬನ್ ಪಾರ್ಕ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಗಿರೀಶ್ ಎ.ಕೆ. ಈ ದುರಂತಕ್ಕೆ ಕಾರಣರು. ಇವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಆಯೋಗ ಸೂಚಿಸಿದೆ.

ರಷ್ಯಾ ವಿಮಾನ ಪತನ: 48 ಮಂದಿ ಸಾವು

ಮಾಸ್ಕೊ (ಎಪಿ): ರಷ್ಯಾದ ಆ್ಯಂಟೊನೊವ್–24 (ಎಎನ್–24) ವಿಮಾನವು ಪತನಗೊಂಡ ಪರಿಣಾಮ, ಆರು ಸಿಬ್ಬಂದಿ ಸೇರಿ 48 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

▶10

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಧರ್ಮಸ್ಥಳ: ಅಪರಾಧ ಕೃತ್ಯಗಳ ತನಿಖೆಗೆ ಸರ್ಕಾರ ರಚಿಸಿದ್ದ ತಂಡ

ಹಿಂದೆ ಸರಿದ ಇಬ್ಬರು ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ತನಿಖೆಗೆ ರಾಜ್ಯ ಸರ್ಕಾರ ರಚಿಸಿದ್ದ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಹಿಂದೆ ಸರಿಯಲು ಐಪಿಎಸ್ ಅಧಿಕಾರಿ ಸೌಮ್ಯಲತಾ ಹಾಗೂ ಮತ್ತೊಬ್ಬ ಐಪಿಎಸ್‌ಯೇತರ ಅಧಿಕಾರಿ ನಿರ್ಧರಿಸಿದ್ದಾರೆ.

ಧರ್ಮಸ್ಥಳ ಗ್ರಾಮದ ಸುತ್ತಮುತ್ತ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ, ರಾಜ್ಯ ಮಹಿಳಾ ಆಯೋಗವು ಜುಲೈ 14ರಂದು ಸರ್ಕಾರಕ್ಕೆ ಪತ್ರ ಬರೆದಿತ್ತು. ಅಲ್ಲದೇ ವ್ಯಕ್ತಿಯೊಬ್ಬರು ನ್ಯಾಯಾಧೀಶರ ಎದುರು ದಾಖಲಿಸಿದ್ದ ಹೇಳಿಕೆಯಲ್ಲಿನ ಆರೋಪಗಳ ಕುರಿತು ತನಿಖೆ ನಡೆಸುವಂತೆ ವಕೀಲರು, ಸಾಮಾಜಿಕ ಕಾರ್ಯಕರ್ತರು ಆಗ್ರಹಿಸಿದ್ದರು. ಅದನ್ನು ಆಧರಿಸಿ ಸರ್ಕಾರವು ಜುಲೈ 20ರಂದು ಎಸ್‌ಐಟಿ ರಚಿಸಿ, ತನಿಖೆಗೆ ಆದೇಶಿಸಿತ್ತು.

ಎಸ್‌ಐಟಿ

ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು. ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್.ಅನುಚೇತ್, ಸಿಎಆರ್ ಕೇಂದ್ರದ ಡಿಸಿಪಿ ಸೌಮ್ಯಲತಾ ಮತ್ತು ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ ಸದಸ್ಯರಾಗಿದ್ದರು. ಈ ತಂಡಕ್ಕೆ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡದ ಇನ್‌ಸ್ಪೆಕ್ಟರ್‌ಗಳು, ಸಬ್ ಇನ್‌ಸ್ಪೆಕ್ಟರ್‌ಗಳು, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್‌ಗಳನ್ನು ಒಳಗೊಂಡ 20 ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಿ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಜುಲೈ 22ರಂದು ಆದೇಶಿಸಿದ್ದರು.

'ಸೌಮ್ಯಲತಾ ಅವರು ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಅವರಿಗೆ ಪತ್ರ ಬರೆದಿದ್ದು, ವೈಯಕ್ತಿಕ ಕಾರಣಕ್ಕೆ ವಿಶೇಷ ತನಿಖಾ ತಂಡದಿಂದ ಹೊರಗುಳಿಯಲು ನಿರ್ಧರಿಸಿದ್ದೇನೆ. ಆದ್ದರಿಂದ, ತಮ್ಮನ್ನು ತಂಡದಿಂದ ಕೈಬಿಡಬೇಕೆಂದು ಮನವಿ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ತನಿಖೆಯ ರೂಪರೇಷೆಗಳ ಕುರಿತು ಸಿಐಡಿ ಕಚೇರಿಯಲ್ಲಿ ನಡೆದಿದ್ದ ಎಸ್‌ಐಟಿ ಸಭೆಗೂ ಸೌಮ್ಯಲತಾ ಅವರು ಗೈರಾಗಿದ್ದರು. ಅವರ ಮನವಿಯನ್ನು ಪುರಸ್ಕರಿಸಿರುವ ಪ್ರಣವ್ ಮೊಹಾಂತಿ, ತಂಡದಿಂದ ಸೌಮ್ಯಲತಾ ಅವರ ಹೆಸರನ್ನು ಕೈಬಿಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ' ಎಂದು ಗೊತ್ತಾಗಿದೆ.

'ಜುಲೈ 22ರಂದು ನಿಯೋಜಿಸಿದ್ದ 20 ಅಧಿಕಾರಿಗಳ ಪೈಕಿ, ಐಪಿಎಸ್ ಯೇತರ ಅಧಿಕಾರಿಯೊಬ್ಬರು ತಂಡದಿಂದ ಕೈಬಿಡುವಂತೆ ಪತ್ರ ಬರೆದಿದ್ದಾರೆ' ಎಂದು ಮೂಲಗಳು ಹೇಳಿವೆ.

ಹೊಸಬರ ನೇಮಕ ಸಾಧ್ಯತೆ: 'ಈ ವಿಚಾರವನ್ನು ತನಿಖಾ ತಂಡದ ಮುಖ್ಯಸ್ಥರು, ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರಿಬ್ಬರ ಜಾಗಕ್ಕೆ ಹೊಸ ಅಧಿಕಾರಿಗಳ ನೇಮಕ ಮಾಡುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

'ಪತ್ರ ಬರೆದಿರುವುದಾಗಿ ಗೊತ್ತಾಗಿದೆ'

'ಅಧಿಕೃತವಾಗಿ ಅವರು ನನಗೆ ಮಾಹಿತಿ ನೀಡಿಲ್ಲ. ಆದರೆ, ತನಿಖಾ ತಂಡದಿಂದ ಹೊರಗುಳಿಯುವುದಾಗಿ ಪತ್ರ ಬರೆದಿದ್ದಾರೆ ಎಂಬುದು ಗೊತ್ತಾಗಿದೆ. ವೈಯಕ್ತಿಕ ಕಾರಣ ಇದೆ. ಹಾಗಾಗಿ, ತಂಡದಿಂದ ಹೊರಗುಳಿಯುವುದಾಗಿ ಅವರು ಮಾಹಿತಿ ನೀಡಿದ್ದಾರೆ. ಒಂದು ವೇಳೆ ಆ ರೀತಿಯಿದ್ದರೆ ಪರಿಶೀಲಿಸಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ತಿಳಿಸಿದರು.

ಹುಲಿಗಳ ಸಾವು: ರಾಜ್ಯದ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಲೆ ಮಹದೇಶ್ವರ ಬೆಟ್ಟದ ಅರಣ್ಯದಲ್ಲಿ ಐದು ಹುಲಿಗಳು ವಿಷ ಪ್ರಾಶನದಿಂದ ಮೃತಪಟ್ಟಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠವು ರಾಜ್ಯ ಸರ್ಕಾರಗಳ ಅಭಿಪ್ರಾಯ ಪಡೆದು ಮಾನವ–ವನ್ಯಜೀವಿ ಸಂಘರ್ಷಕ್ಕೆ ಕೇಂದ್ರ ಪರಿಸರ ಸಚಿವಾಲಯ ನೀತಿ ರೂಪಿಸಬೇಕು ಎಂದು ಸೂಚಿಸಿತು.

ರಾಜ್ಯದ ಲೋಪ–ಕೇಂದ್ರ ಬೊಟ್ಟು: ಐದು ಹುಲಿಗಳ ಸಾವಿನ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಲೋಪವೂ ಇದೆ ಎಂದು ಕೇಂದ್ರ ಸರ್ಕಾರ ಬೊಟ್ಟು ಮಾಡಿದೆ.

ರಾಜ್ಯಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ಜಗ್ಗೇಶ್ ಕೇಳಿದ ಪ್ರಶ್ನೆಗೆ ಅರಣ್ಯ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಲಿಖಿತ ಉತ್ತರ ನೀಡಿದರು.

▶7

'ಮಹದಾಯಿ ಯೋಜನೆ ತಡೆಯಲಿ ನೋಡೋಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿ ಹಿಂಪಡೆದು ಶೀಘ್ರವೇ ಕಾಮಗಾರಿ ಆರಂಭಿಸುತ್ತೇವೆ. ಗೋವಾ ಸರ್ಕಾರ ತಡೆಯಲಿ, ನಾನೂ ನೋಡುತ್ತೇನೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಮಹದಾಯಿ ಯೋಜನೆ ಆರಂಭಿಸಲು ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ಅನುಮತಿ ನೀಡುವುದಿಲ್ಲ' ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದರು. ಇದಕ್ಕೆ, ಗುರುವಾರ ಪ್ರತಿಕ್ರಿಯಿಸಿದ ಶಿವಕುಮಾರ್, 'ಕರ್ನಾಟಕಕ್ಕೆ ನೋಟಿಸ್ ನೀಡಲು ಗೋವಾದವರಿಗೆ ಹಕ್ಕಿಲ್ಲ. ಏನೇ ನೋಟಿಸ್ ನೀಡಿದರೂ ನಾವು ಯೋಜನೆ ಕಾಮಗಾರಿ ಆರಂಭಿಸುತ್ತೇವೆ. ಅವರು (ಸಾವಂತ್) ಮಾನಸಿಕ ಸ್ಥಿಮಿತ ಕಳೆದುಕೊಂಡು ಈ ರೀತಿ ಮಾತನಾಡಿದ್ದಾರೆ' ಎಂದರು.

'ನಮ್ಮದು ಒಕ್ಕೂಟ ವ್ಯವಸ್ಥೆಯ ರಾಷ್ಟ್ರ. ಇಲ್ಲಿ ಅಂತರರಾಜ್ಯಗಳ ನಡುವಣ ಸಂಬಂಧ ಹೇಗಿರಬೇಕು ಎಂಬುದು ಅವರಿಗೆ ತಿಳಿದಿಲ್ಲ. ಇದು ನಮ್ಮ ನೆಲ, ನಮ್ಮ ಯೋಜನೆ. ನಾವು ಮಾಡುತ್ತೇವೆ. ಇದನ್ನು ಪ್ರಶ್ನಿಸುವುದು ಅವರ ಹಕ್ಕಲ್ಲ. ಮಹದಾಯಿ ವಿಚಾರದಲ್ಲಿ ನ್ಯಾಯಮಂಡಳಿಯ ತೀರ್ಪು ಹೊರಬಿದ್ದಿದೆ. ಯೋಜನೆ ಜಾರಿಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಿಸಲಾಗಿದೆ' ಎಂದರು.

'ಮಹದಾಯಿ ಯೋಜನೆ ಜಾರಿಯಾಗಲಿದೆ ಎಂದು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ, ಕೇಂದ್ರದ ಹಾಲಿ ಸಚಿವ ಪ್ರಲ್ಹಾದ ಜೋಶಿ ಸಂಭ್ರಮಾಚರಣೆ ಮಾಡಿದ್ದರು' ಎಂದೂ ಹೇಳಿದರು.

▶7

ಮಹದಾಯಿ ವಿಚಾರದಲ್ಲಿ ಕೇಂದ್ರಕ್ಕೆ ಎಲ್ಲ ಸಂಸದರ ನಿಯೋಗ ಕರೆದೊಯ್ಯಲು ನಾನು ಪ್ರಯತ್ನಿಸುತ್ತೇನೆ. ನಮ್ಮ ಜೊತೆ ಯಾರು ಬರುತ್ತಾರೊ ಬಿಡುತ್ತಾರೊ ನಮ್ಮ ಕೆಲಸ ಮಾಡುತ್ತೇವೆ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ.

ಪರಿಸರ ಇಲಾಖೆ ಅಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಸೂಚನೆ

‘ಪಿಒಪಿ ಗಣಪನ ಮೂರ್ತಿಗಳ ಮೇಲೆ ಕಣ್ಣಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ (ಪಿಒಪಿ) ಗಣಪ ಮತ್ತು ಗೌರಿಯ ಮೂರ್ತಿಗಳ ತಯಾರಿಕೆ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಈಗಿನಿಂದಲೇ ಕ್ರಮ ತೆಗೆದುಕೊಳ್ಳುವಂತೆ ಪರಿಸರ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಹೇಳಿದರು.

ಈಶ್ವರ ಖಂಡ್ರೆ

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪಿಒಪಿ ಮೂರ್ತಿಗಳಲ್ಲಿ ಗಂಧಕ, ರಂಜಕ, ಜಿಪ್ಸಂ ಮತ್ತು ಮೆಗ್ನೀಷಿಯಂತಹ ಅನೇಕ ಅಪಾಯಕಾರಿ ರಾಸಾಯನಿಕಗಳಿರುತ್ತವೆ. ಇವುಗಳಿಗೆ ಪಾದರಸ, ಕ್ಯಾಡ್ಮಿಯಂ, ಸೀಸ ಮತ್ತು ಇಂಗಾಲ ಒಳಗೊಂಡ ರಾಸಾಯನಿಕ ಬಣ್ಣ ಲೇಪಿಸಲಾಗುತ್ತದೆ. ಇವುಗಳನ್ನು ಜಲಮೂಲಗಳಲ್ಲಿ ವಿಸರ್ಜಿಸುವುದರಿಂದ, ನೀರು ಮಲಿನವಾಗುತ್ತದೆ’ ಎಂದರು.

‘ಪಿಒಪಿ ಗಣಪ ಮತ್ತು ಗೌರಿಯ ಮೂರ್ತಿಗಳ ತಯಾರಿಕೆ, ದಾಸ್ತಾನು, ಮಾರಾಟ ಮತ್ತು ಬಳಕೆಯನ್ನು 2023ರಲ್ಲೇ ನಿಷೇಧಿಸಲಾಗಿದೆ. ಹಬ್ಬ ಹತ್ತಿರವಾಗುತ್ತಿದೆ, ಪಿಒಪಿ ಮೂರ್ತಿಗಳ ತಯಾರಿಕೆಗೆ ಈಗಿನಿಂದ ಕಡಿವಾಣ ಹಾಕಿದರೆ ಸೂಕ್ತ. ಜನರಲ್ಲಿ, ಮೂರ್ತಿ ತಯಾರಕರಲ್ಲಿ ಜಾಗೃತಿ ಮೂಡಿಸಬೇಕು. ‘ಬಹುಮಹಡಿ ಕಟ್ಟಡ, ವಸತಿ ಸಮುಚ್ಚಯಗಳು ಮತ್ತು ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘಗಳನ್ನು ಸಂಪರ್ಕಿಸಿ, ಪರಿಸರಸ್ನೇಹಿ ಗಣಪತಿ ಮೂರ್ತಿಗಳನ್ನು ಪೂಜಿಸುವಂತೆ ತಮ್ಮ ಸದಸ್ಯರಿಗೆ ತಿಳಿಸುವಂತೆ ಮನವಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

ಕಿಟೆಲ್ ಜೀವನ ಸಾಕ್ಷ್ಯಚಿತ್ರದಲ್ಲಿ ಸೆರೆ

ಇದೇ 27ರಂದು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಮ್ಮಲೂರಿನಲ್ಲಿ ಇರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ಇದೇ 27ರಂದು ಬೆಳಿಗ್ಗೆ 11 ಗಂಟೆಗೆ ‘ಅರಿವು ಮತ್ತು ಗುರುವು’ ಸಾಕ್ಷ್ಯಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ. ಈ ಸಾಕ್ಷ್ಯ ಚಿತ್ರವು ನಿಘಂಟು ತಜ್ಞ ಫರ್ಡಿನೆಂಡ್ ಕಿಟೆಲ್ ಅವರ ಜೀವನ ಮತ್ತು ಸಾಧನೆಯನ್ನು ಪರಿಚಯಿಸುತ್ತದೆ.

ಕಿಟೆಲ್

80 ನಿಮಿಷಗಳ ಈ ಸಾಕ್ಷ್ಯಚಿತ್ರವನ್ನು ಪ್ರಶಾಂತ್ ಪಂಡಿತ್ ನಿರ್ದೇಶಿಸಿದ್ದಾರೆ. ಚಿದಾನಂದ್ ಜಿ.ಎಲ್. ಮತ್ತು ಫ್ಲೋರಿನಾ ಸ್ಟೈನರ್ ಅವರ ಛಾಯಾಗ್ರಹಣವಿದೆ. ಆನಂದ್ ವಿ. ಮತ್ತು ಮಹಾವೀರ್ ಎಸ್. ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿದೆ. 2023ರಲ್ಲಿ ಬಿಡುಗಡೆಯಾದ ಈ ಸಾಕ್ಷ್ಯಚಿತ್ರದಲ್ಲಿ, ಕನ್ನಡ, ಇಂಗ್ಲಿಷ್ ಮತ್ತು ಜರ್ಮನ್ ಭಾಷೆಯಲ್ಲಿ ಹಿನ್ನೆಲೆ ಧ್ವನಿ ನೀಡಲಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಉಪ ಶೀರ್ಷಿಕೆ ಹೊಂದಿದೆ. ಕಿಟೆಲ್ ಅವರು ಭಾರತ ಮತ್ತು ಜರ್ಮನಿಯಲ್ಲಿ ವಾಸವಿದ್ದ ಸ್ಥಳಗಳಲ್ಲಿ ಈ ಸಾಕ್ಷ್ಯಚಿತ್ರವನ್ನು ಚಿತ್ರೀಕರಿಸಲಾಗಿದೆ. ಕನ್ನಡ ನಾಡಿನ ವಿವಿಧೆಡೆ ಸುಮಾರು 30 ವರ್ಷಗಳು ನೆಲೆಸಿದ್ದ ಅವರು, ಜರ್ಮಿನಿಗೆ ತೆರಳಿದ ಬಳಿಕವೂ ಕನ್ನಡದ ಕೆಲಸ ಮುಂದುವರಿಸಿದ್ದರು. ಅವರ ಜೀವನಯಾನವನ್ನು ಅವರೇ ತಮ್ಮ ಮಾತುಗಳಲ್ಲಿ ಹೇಳಿದಂತೆ ಕಟ್ಟಿಕೊಡಲಾಗಿದೆ.

ಕಿಟೆಲ್ ಅವರು ‘ಕನ್ನಡ– ಇಂಗ್ಲಿಷ್ ನಿಘಂಟು’ ರಚಿಸುವ ಜತೆಗೆ ಕನ್ನಡ ಸಾಹಿತ್ಯ ಲೋಕಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಭಾರತಕ್ಕೆ ಧರ್ಮ ಪ್ರಚಾರಕ್ಕಾಗಿ ಜರ್ಮನಿಯಿಂದ ಬಂದಿದ್ದ ಅವರು, ಇಲ್ಲಿನ ಸಂಸ್ಕೃತಿಯನ್ನು ಅರಿಯುವ ಜತೆಗೆ ಕನ್ನಡವನ್ನೂ ಕಲಿತಿದ್ದರು. ಭಾರತ ಮತ್ತು ಜರ್ಮನಿಯ ನಡುವೆ ಭಾಷಾ ಹಾಗೂ ಸಾಂಸ್ಕೃತಿಕ ವಿನಿಮಯಕ್ಕೆ ಕೊಡುಗೆ ನೀಡಿದ ಅವರು, ಲೇಖಕ, ಅನುವಾದಕ, ಭಾಷಾ ವಿಜ್ಞಾನಿ ಹಾಗೂ ಶಬ್ದಕೋಶ ತಜ್ಞರಾಗಿ ಕಾರ್ಯನಿರ್ವಹಿಸಿದ್ದರು. ಈ ಸಾಕ್ಷ್ಯಚಿತ್ರವು ಶಬ್ದಕೋಶ ಮತ್ತು ಭಾಷಾ ವಿಜ್ಞಾನ ಕ್ಷೇತ್ರಗಳಲ್ಲಿ ಕಿಟೆಲ್ ಅವರ ಪ್ರಯಾಣವನ್ನು ದಾಖಲಿಸಿದೆ.

ಮುಖ್ಯಾಂಶಗಳು

- ಪ್ರಶಾಂತ್ ಪಂಡಿತ್ ನಿರ್ದೇಶನದ 80 ನಿಮಿಷಗಳ ಸಾಕ್ಷ್ಯಚಿತ್ರ
- ಕನ್ನಡ, ಇಂಗ್ಲಿಷ್ ಮತ್ತು ಜರ್ಮನ್ ಭಾಷೆಯಲ್ಲಿ ಹಿನ್ನೆಲೆ ಧ್ವನಿ
- ಕಿಟೆಲ್ ಅವರು ಭಾರತ, ಜರ್ಮನಿಯಲ್ಲಿದ್ದ ಸ್ಥಳಗಳಲ್ಲಿ ಚಿತ್ರೀಕರಣ

‘ಕಿಟೆಲ್ ಅವರು ಕನ್ನಡ ನಾಡಿಗೆ ಅನುಪಮ ಕೊಡುಗೆ ನೀಡಿದ್ದಾರೆ. 2020ರಲ್ಲಿ ಈ ಸಾಕ್ಷ್ಯಚಿತ್ರ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಬಳಿಕ ಕೋವಿಡ್ ಕಾಣಿಸಿಕೊಂಡಿದ್ದರಿಂದ, ಪೂರ್ಣಗೊಳಿಸಲು ಮೂರು ವರ್ಷಗಳು ಬೇಕಾಯಿತು. ವಿದ್ವಾಂಸರು, ಸಂಶೋಧನಾ ಸಂಸ್ಥೆಗಳು ಸೇರಿ ವಿವಿಧೆಡೆ ಲಭ್ಯವಿರುವ ಮಾಹಿತಿಯನ್ನು ಕಲೆಹಾಕಿ, ಚಿತ್ರೀಕರಿಸುವ ಕೆಲಸ ಸುಲಭವಾಗಿರಲಿಲ್ಲ. ಜರ್ಮನಿಯಲ್ಲಿರುವ ಅವರ ನಿವಾಸಕ್ಕೂ ಭೇಟಿ ನೀಡಿ, ಚಿತ್ರೀಕರಿಸಲಾಗಿದೆ. ಈ ಸಾಕ್ಷ್ಯಚಿತ್ರವು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿ ವಿವಿಧೆಡೆ ಪ್ರದರ್ಶನ ಕಂಡಿದೆ’ ಎಂದು ಚಿತ್ರ ನಿರ್ದೇಶಕ ಪ್ರಶಾಂತ್ ಪಂಡಿತ್ ತಿಳಿಸಿದರು.

ಈ ಸಾಕ್ಷ್ಯಚಿತ್ರ ವೀಕ್ಷಣೆಗೆ ಉಚಿತ ಪ್ರವೇಶವಿದೆ. ಚಿತ್ರ ನಿರ್ದೇಶಕ ಪ್ರಶಾಂತ್ ಪಂಡಿತ್ ಅವರು ಉಪಸ್ಥಿತರಿರಲಿದ್ದು, ಪ್ರದರ್ಶನದ ಬಳಿಕ ಸಂವಾದಕ್ಕೂ ಅವಕಾಶ ಇರಲಿದೆ.

ಐವಿಎಫ್‌ನಿಂದ ಕನಸು ಸಾಕಾರ: ಡಾ. ಸ್ನೇಹಾ ಶೆಟ್ಟಿ

ಬೆಂಗಳೂರು: ‘ಬಂಜೆತನ ಸಮಸ್ಯೆಗೆ ಐವಿಎಫ್ ತಂತ್ರಜ್ಞಾನ ಪರಿಹಾರವಾಗಿದ್ದು, ಈ ತಂತ್ರಜ್ಞಾನದ ನೆರವಿನಿಂದ ಅನೇಕ ದಂಪತಿಗಳಿಗೆ ಮಗು ಪಡೆಯುವ ಕನಸು ಸಾಕಾರವಾಗಿದೆ’ ಎಂದು ಎಚ್‌ಎಸ್‌ಆರ್ ಲೇಔಟ್ ಮತ್ತು ವೈಟ್‌ಫೀಲ್ಡ್‌ನಲ್ಲಿರುವ ವೃಕ್ಷ್ ಫರ್ಟಿಲಿಟಿ ಕೇಂದ್ರದ ಕ್ಲಿನಿಕಲ್ ನಿರ್ದೇಶಕಿ ಡಾ. ಸ್ನೇಹಾ ಶೆಟ್ಟಿ ತಿಳಿಸಿದ್ದಾರೆ.

ಡಾ. ಸ್ನೇಹಾ

‘ಐವಿಎಫ್ ತಂತ್ರಜ್ಞಾನವು ಭರವಸೆ, ವಿಜ್ಞಾನ ಮತ್ತು ದೃಢ ಸಂಕಲ್ಪದ ಸಂಯೋಜನೆಯಾಗಿದೆ. ಫಲವತ್ತತೆ ಚಿಕಿತ್ಸಾ ವಿಧಾನದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಹಿಂದೆ ಅಸಾಧ್ಯವಾದದ್ದು ಈಗ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನಿಂದ ಸಾಧ್ಯವಾಗುತ್ತಿದೆ. ನಮ್ಮ ಕೇಂದ್ರದಲ್ಲಿ ಪ್ರತಿನಿತ್ಯವೂ ಈ ಕ್ಷೇತ್ರದಲ್ಲಿ ಅದ್ಭುತ ಫಲಿತಾಂಶವನ್ನು ನೋಡುತ್ತಿದ್ದೇವೆ’ ಎಂದು ಹೇಳಿದ್ದಾರೆ.

‘ಪ್ರತಿಯೊಂದು ಐವಿಎಫ್ ಪ್ರಕ್ರಿಯೆ ಹಿಂದೆ ಧೈರ್ಯ, ಪ್ರೀತಿ ಮತ್ತು ನಂಬಿಕೆಯ ಕಥೆಯಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ಮಕ್ಕಳಿಗೆ ಸುವಾಸನೆ ಭರಿತ ಹಾಲು

ಪ್ರಾಥಮಿಕ ಶಿಕ್ಷಣ ಸಚಿವರ ಜತೆ ಬಮುಲ್ ಅಧ್ಯಕ್ಷರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲಾ ಮಕ್ಕಳಿಗೆ ಹಾಲಿನ ಪುಡಿ ಬದಲಿಗೆ ಸುವಾಸನೆ ಭರಿತ ಹಾಲು ನೀಡಲು ಬೆಂಗಳೂರು ಮಿಲ್ಕ್ ಯೂನಿಯನ್ ಲಿಮಿಟೆಡ್ (ಬಮುಲ್) ಮುಂದಾಗಿದೆ.

ಪ್ರಾಯೋಗಿಕವಾಗಿ ಬಮುಲ್ ವ್ಯಾಪ್ತಿಯ ಬೆಂಗಳೂರು ದಕ್ಷಿಣ (ರಾಮನಗರ), ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಶಾಲಾ ವಿದ್ಯಾರ್ಥಿಗಳಿಗೆ ವಿತರಿಸಲು ನಿರ್ಧರಿಸಿದೆ.

ವಿಕಾಸಸೌಧದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವ ಮಧುಬಂಗಾರಪ್ಪ ಮತ್ತು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ಸಭೆ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚೆ ನಡೆಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲು ತೀರ್ಮಾನ ಮಾಡಲಾಗಿದೆ.

ಮೂರು ಜಿಲ್ಲೆಯ ಶಾಲಾಮಕ್ಕಳಿಗೆ ನಿತ್ಯ ಅಂದಾಜು 250 ಟನ್ ಹಾಲಿನ ಪುಡಿ ಪೂರೈಕೆ ಮಾಡಲಾಗುತ್ತಿದೆ. ಹಾಲಿನ ಪುಡಿಯನ್ನು ನೀರಿನಲ್ಲಿ ಬೆರೆಸಿ ಮಕ್ಕಳಿಗೆ ತಲಾ 200 ಗ್ರಾಂ ನೀಡಬೇಕಾಗಿದೆ. ಕೆಲವು ಕಡೆ ಶುದ್ಧ ನೀರು ಬಳಕೆ ಮಾಡದೆ ಇರುವುದು ಗೊತ್ತಾಗಿದೆ. ಅಲ್ಲದೆ, ಹಾಲಿನ ಪುಡಿಯನ್ನು ಹೋಟೆಲ್, ಅಂಗಡಿಗಳಿಗೆ ಮಾರಾಟ ಮಾಡುವ ದೂರುಗಳು ಬಂದಿವೆ.

ಹಾಗಾಗಿ ಹಾಲಿನ ಪುಡಿ ನೀಡುವ ಬದಲು ಸುವಾಸಿತ ಹಾಲು ನೀಡುವುದರಿಂದ ಮಕ್ಕಳು ಸೇವನೆ ಮಾಡಲು ಅನುಕೂಲವಾಗಲಿದೆ. ಪರಿಶುದ್ಧವಾದ ಹಾಲನ್ನು ಬಾದಾಮ್, ಪಿಸ್ತಾ, ಮಾವು, ಕಿತ್ತಲೆ, ಫೈನಾಪಲ್, ಬಾಳೆಹಣ್ಣು ಸೇರಿ ಹತ್ತು ಬಗೆಯ ಸುವಾಸನೆಭರಿತ ಹಾಲು ಸಿದ್ಧಪಡಿಸಬಹುದು ಎಂದು ಚರ್ಚೆ ನಡೆದಿದೆ.

ಈಗಾಗಲೇ ‘ತೃಪ್ತಿ’ ಎಂಬ ಹೆಸರಿನಲ್ಲಿ 1 ಲೀಟರ್ ಪ್ಯಾಕ್‌ನಲ್ಲಿ ಸುವಾಸನೆ ಭರಿತ ಹಾಲನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ. ಇದೇ ಹಾಲನ್ನು ಆಯಾ ಶಾಲಾ ಮಕ್ಕಳ ಸಂಖ್ಯೆಗೆ ಅನುಗುಣವಾಗಿ 5 ಅಥವಾ 10 ಲೀಟರ್ ಪ್ಯಾಕ್ ಅನ್ನು ಶಾಲೆಗೆ ಪೂರೈಸಿದರೆ ಸುಲಭವಾಗಿ ಹಂಚಿಕೆ ಮಾಡಬಹುದಾಗಿದೆ ಎಂದು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ತಿಳಿಸಿದರು.

ಆ್ಯಪ್ ವಂಚನೆ: ₹7 ಕೋಟಿ ಮುಟ್ಟುಗೋಲು

ಬೆಂಗಳೂರು: ಕ್ರಿಪ್ಟೋಕರೆನ್ಸಿ ಹೂಡಿಕೆ ವಹಿವಾಟು ನಡೆಸಲು ಕ್ರಿಪ್ಟೋಮೈನಿಂಗ್ ಯಂತ್ರಗಳನ್ನು ನೀಡುತ್ತೇವೆ ಎಂದು ನಂಬಿಸಿ, ನೂರಾರು ಜನರಿಗೆ ವಂಚಿಸಿದ್ದ ‘ಷೇರ್‌ಶಾ ಆ್ಯಪ್’ ವಂಚನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ₹7.02 ಕೋಟಿ ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಕೊಟಾಟಾ ಟೆಕ್ನಾಲಜಿ ಲಿಮಿಟೆಡ್ ಮೂಲಕ 2022ರಲ್ಲಿ ‘ಷೇರ್‌ಶಾ ಆ್ಯಪ್’ ಬಿಡುಗಡೆ ಮಾಡಿ, ಗ್ರಾಹಕರಿಂದ ಹಣ ಸಂಗ್ರಹಿಸಿತ್ತು. ಕ್ರಿಪ್ಟೋಕರೆನ್ಸಿಯಲ್ಲಿ ಹೂಡಿಕೆ ಮಾಡಿ, ದೊಡ್ಡ ಮೊತ್ತದ ಲಾಭ ನೀಡುತ್ತೇವೆ ಎಂದು ನಂಬಿಸಿ ಮತ್ತಷ್ಟು ಗ್ರಾಹಕರಿಂದ ಹಣ ಪಡೆಯಲಾಗಿತ್ತು. ಹಣವನ್ನೂ ನೀಡದೆ, ಯಂತ್ರವನ್ನೂ ನೀಡದೆ ಆ್ಯಪ್ ಅನ್ನು ಸ್ಥಗಿತಗೊಳಿಸಲಾಗಿತ್ತು.

ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ನೀಡಲಾಗಿದ್ದ ದೂರಿನ ಆಧಾರದಲ್ಲಿ ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ನಾಲ್ವರು ಅಪರಾಧಿಗಳನ್ನು ಬಂಧಿಸಿದ್ದರು. ಜತೆಗೆ ಕೊಟಾಟಾ ಟೆಕ್ನಾಲಜಿ ಲಿಮಿಟೆಡ್‌ನ ಬ್ಯಾಂಕ್ ಖಾತೆಗಳಿಂದ ₹15 ಕೋಟಿ ಠೇವಣಿ, ಲಾಕರ್‌ಗಳಿಂದ 1.6 ಕೆ.ಜಿ ಚಿನ್ನವನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಬಹುಕೋಟಿ ವಂಚನೆ ಕೃತ್ಯವಾದ ಕಾರಣ ಇ.ಡಿ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿತ್ತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಚೇರಿ, ಅನೆಕ್ಸ್ ಕಟ್ಟಡ –1, ಬಿಬಿಎಂಪಿ ಪ್ರಧಾನ ಕಚೇರಿ, ಎನ್.ಆರ್. ಚೌಕ, ಬೆಂಗಳೂರು–560002

No: BBMP/C.Comm/PSR(G)/1059/2025-26 ನಮೂನೆ–1 Dated:24.07.2025

ಪ್ರಕಟಣೆ [ಸೆಕ್ಷನ್ 14ಬಿ(4)(i)] ರಂತೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ (4) ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, ಮುಖ್ಯ ಆಯುಕ್ತರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅವರಿಗೆ, **ಬಳ್ಳಾರಿ ರಸ್ತೆಯ ಹೆಬ್ಬಾಳ ಫ್ಲೈಓವರ್ ನಿಂದ ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನವರೆಗೆ (ಚ: 0.00 ಮೀ ನಿಂದ 200.00 ಮೀ) ಭೂಗತ 3 ಪಥದ ಅವಳಿ ರಸ್ತೆ ನಿರ್ಮಾಣಗೊಳಿಸಲು** ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶದ ಅವಶ್ಯಕವಿರುತ್ತದೆ.

ಸಾರ್ವಜನಿಕ ಉದ್ದೇಶಕ್ಕಾಗಿ ಜಮೀನುಗಳ ಅಗತ್ಯವಿರುವ ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳಿಗೆ ತಮ್ಮ ಹಕ್ಕುಗಳನ್ನು ಸಲ್ಲಿಸಲು (i) ಮಾರಾಟ / ವಿಭಜನೆ / ಇತರ ಹಕ್ಕು ಪತ್ರಗಳು (ii) ನವೀಕೃತ RTC ಯ (iii) ಮ್ಯುಟೇಶನ್ ಪ್ರತಿ (iv) ತೆರಿಗೆ ಪಾವತಿಸಿದ ರಸೀದಿಗಳು (v) ಕೃಷಿಯೇತರ ಉದ್ದೇಶದ ಮೇಲೆ ಪರಿವರ್ತನೆ ಆದೇಶ (vi) ಕಂದಾಯ ಸ್ಕೆಚ್ (vii) ಆಕಾರ್ ಬ್ಯಾಂಡ್ ಇತ್ಯಾದಿ, ಸಂಬಂಧಿತ ದಾಖಲೆಗಳ ನಕಲುಗಳ ಪ್ರತಿಗಳೊಂಡಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಸ್ಥಳದಲ್ಲಿ ವೈಯಕ್ತಿಕವಾಗಿ ಕೆಳಗಿನ ವಿಳಾಸದಲ್ಲಿ ಸೂಚಿಸಿದವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂ ಮಾಲೀಕರು ಇರುವ ಸ್ಥಳ / ಆಸಕ್ತ ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಸಲ್ಲಿಸಲು ಹಾಜರಾಗಬೇಕಾದ ಸ್ಥಳ	ವಿಭಾಗೀಯ / ಉಪ ವಿಭಾಗೀಯ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (LAQ & TDR) ಕೊಠಡಿ ಸಂಖ್ಯೆ: 208, 2ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560 002.	ಕಾರ್ಯನಿರ್ವಾಹಕ ಎಂಜಿನಿಯರ್ ರಸ್ತೆ ಮೂಲಸೌಕರ್ಯ, ಯಲಹಂಕ ವಿಭಾಗ, ಬಿಬಿಎಂಪಿ	ಅಧಿಸೂಚನೆಯ ದಿನಾಂಕದಿಂದ 30 ದಿನಗಳು, ಸಮಯ : ಬೆಳಗ್ಗೆ 10.00 ರಿಂದ ಸಂಜೆ : 5.00 ಗಂಟೆಯವರೆಗೆ

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾದ ಅನುಸೂಚಿತ ಆಸ್ತಿಗಳ ಭೂ ಮಾಲೀಕರು / ಆಸಕ್ತ ಪಕ್ಷಗಳು ಮುಖ್ಯ ಆಯುಕ್ತರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗೆ ಒಪ್ಪಿಗೆಯನ್ನು ನೀಡಬೇಕು.

ಭೂಮಾಲೀಕರು ವಿತ್ತೀಯ ಪರಿಹಾರದ ಬದಲಿಗೆ ಡಿಆರ್ (ಕಾಲ್ಪನಿಕ ಭೂಮಿ) ಎಂದು ಒಪ್ಪಿಸಿದ ಭೂಮಿಯ ಎರಡು ಪಟ್ಟು ವಿಸ್ತೀರ್ಣವನ್ನು ಪಡೆಯುತ್ತಾರೆ ಮತ್ತು ಎರಡು ಬಾರಿ ಕಟ್ಟಡದ ಪ್ರದೇಶವನ್ನು ಒಪ್ಪಿಸಿದ ಕಟ್ಟಡದ ಪ್ರದೇಶದ ಮೌಲ್ಯದಿಂದ ಭಾಗಿಸಿದ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ ಕಟ್ಟಡವನ್ನು ನಿರ್ಮಿಸಲಾಗಿದೆ. ಕಾಲ್ಪನಿಕ ಭೂಮಿಯನ್ನು ಮೂಲ ಪ್ಲಾಟ್‌ನಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನಗೊಳಿಸುವುದರ ಮೂಲಕ ಮತ್ತು ಪ್ಲಾಟ್ ಸ್ವೀಕರಿಸುವ ಮೂಲಕ ಬಳಸಿಕೊಳ್ಳಬಹುದು. ಕಾಲ್ಪನಿಕ ಭೂಮಿಯ ಎಫ್‌ಎಆರ್‌ಗೆ ಅರ್ಹವಾಗಿದೆ ಮತ್ತು ಅಭಿವೃದ್ಧಿ ಹಕ್ಕುಗಳ ನಿಯಮಗಳು, 2016 ರ ಪ್ರಯೋಜನದ ನಿಯಮಗಳಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಸ್ವೀಕರಿಸುವ ಪ್ಲಾಟ್‌ನಲ್ಲಿ ಹೆಚ್ಚುವರಿ ನಿರ್ಮಿಸಲಾದ ಪ್ರದೇಶವಾಗಿ ಬಳಸಬಹುದು. ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿ ಮತ್ತು ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳ ವಿವರಗಳ ಬಗ್ಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತದೆ ಮತ್ತು ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು (DRCs) ನೀಡಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರು (LAQ & TDR) ರವರ ಕಛೇರಿಗೆ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ತಿಳಿಸಬೇಕು.

ಷೆಡ್ಯೂಲ್

“ಬಳ್ಳಾರಿ ರಸ್ತೆಯ ಹೆಬ್ಬಾಳ ಮೇಲ್ಸೇತುವೆಯಿಂದ ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನವರೆಗೆ (ಚ: 0.00 ಮೀ ನಿಂದ 200.00 ಮೀ) ಭೂಗತ 3 ಪಥದ ಅವಳಿ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು.

Sl No	Name of the Village	Sy No/ Khatha No	Type of Land		Nature of Land			Dimension of the land / plot and extent in sq.m		Boundaries of the land /plot				Building Details			Present activity on Land/Building (Specify Specific activity such as shop, office, factory, apartment individual house etc.,	Market (guidelines) value of the land per Sqm			Name and address of the owner of the plot/land for which DRC is to be issued / already issued.
			Vacant	Built up	Agriculture	Converted Undeveloped	Approved layout / developed land Building Site	Dimension	Extent	East	West	North	South	Extent in Sqm	Type of Construction and No. of Floors	Floor area Ratio		Agriculture/B-Khatha	Converted Undeveloped	A Khatha, Developed Site	
Name of the District: **Bengaluru Urban.** Name of the Taluk: **Yelahanka**																					
1	Hebbala	109/4	Vacant Land			-			286.18	Existing Road	Road as per Village map	Sy.no 109/3	Sy.no 110	-	-	-	-	35,880/-	47,740/-	68,200/-	Munivenkatappa, M.Ramaiah S/o Muniyappa & M.S Mahadevaiah S/o M.Shivanna
2	Hebbala	109/3	Vacant Land			-			354.81	Existing Road	Road as per Village map	Sy.no 109/2	Sy.no 109/4	-	-	-	-	35,880/-	47,740/-	68,200/-	Pillappa S/o Thammanna & K.I.A.D.B
3	Hebbala	109/2	Vacant Land			-			432.90	Existing Road	Road as per Village map	Sy.no 109/1	Sy.no 109/3	-	-	-	-	35,880/-	47,740/-	68,200/-	C.Muniyappa S/o Chikkapapaiah, K.I.A.D.B & National Highway, Muniyappa S/o Papanna
4	Hebbala	109/1	Vacant Land			-			596.48	Existing Road	Road as per Village map	Sy.no 108/2	Sy.no 109/2	-	-	-	-	35,880/-	47,740/-	68,200/-	K.I.A.D.B & Ramakrishnamurthy S/o Chikka-muninagappa, Chandrashekar.C S/o Chikka-muninagappa, C.Ashwath S/o Chikkamuninagappa, C.Venu S/o Chikkamuninagappa
5	Hebbala	108/2	Vacant Land			-			1381.39	Existing Road	Road as per Village map	Sy.no 108/1	Sy.no 109/1	-	-	-	-	35,880/-	47,740/-	68,200/-	S.B Ramachandrappa S/o Bairamma, Acquired Notification Highway & M.S Mahadevaiah S/o M.Shivanna
6	Hebbala	108/1	Vacant Land			-			3135.35	Existing Road	Road as per Village map	Sy.no 107/1	Sy.no 108/2	-	-	-	-	35,880/-	47,740/-	68,200/-	Marappa S/o Sonnappa, Lakshmamma S/o H.M Siddappa, P.Marappa S/o Late Chikkasiddappa alias Puttanna alias Puttappa, P.Muniraju S/o Late Chikkasiddappa alias Puttanna alias Puttappa, P.Sharadamma W/o Late K.Murthy and P.Manjula W/o K.Muniraju, Anjali alias Anjanamma W/o Anjanappa
7	Hebbala	107/2	Vacant Land			-			42.84	Existing Road	Sy.no 107/1	Road as per Village map	Sy.no 108/1	-	-	-	-	35,880/-	47,740/-	68,200/-	M.S Mahdevaiah S/o M.Shivanna
8	Hebbala	107/1	Vacant Land			-			1011.71	Sy.no 107/2	Road as per Village map	Road as per Village map	Sy.no 108/1	-	-	-	-	35,880/-	47,740/-	68,200/-	M.S Mahdevaiah S/o M.Shivanna & K.I.A.D.B
Total extent in Sq.m									**7241.66**												

ಗಮನಿಸಿ:

* ಭೂಮಿಯ ಮಾರುಕಟ್ಟೆ ಮೌಲ್ಯವು ಭೂಮಾಲೀಕರಿಂದ ದಾಖಲೆಗಳ ತಯಾರಿಕೆಯ ಆಧಾರದ ಮೇಲೆ ನಮೂನೆ–III ಹಂತದಲ್ಲಿ ನಿರ್ಧರಿಸಲು ಭೂ ಪರಿವರ್ತನೆ ಮತ್ತು ಅಭಿವೃದ್ಧಿ ಸ್ಥಿತಿಗೆ ಒಳಪಟ್ಟಿರುತ್ತದೆ.

* ಕಟ್ಟಡದ ವ್ಯಾಪ್ತಿಯನ್ನು ನಮೂನೆ–III ಸಾರ್ವಜನಿಕ ಸೂಚನೆಯ ಹಂತದಲ್ಲಿ ಕಟ್ಟಡ ಮೌಲ್ಯಮಾಪನ ಮತ್ತು ಅಭಿವೃದ್ಧಿ ಹಕ್ಕುಗಳ ನಿಯಮಗಳು, 2016ರ ಪ್ರಯೋಜನಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತದೆ.

ಸಹಿ/–
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2ನೇ ವಿಮಾನ ನಿಲ್ದಾಣ ಸ್ಥಳ ಆಖೈರು

ಕೇಂದ್ರ ಸರ್ಕಾರಕ್ಕೆ ಒತ್ತಡ • ಕೇಂದ್ರ ಸಚಿವರ ಭೇಟಿಯಾದ ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕರ್ನಾಟಕದ ವೈಮಾನಿಕ ವಲಯದ ವಿವಿಧ ಬೇಡಿಕೆ ಈಡೇರಿಕೆಗೆ ಮನವಿ
- ಹುಬ್ಬಳ್ಳಿ, ಬೆಳಗಾವಿ ವಿಮಾನ ನಿಲ್ದಾಣ ವಿಶ್ವ ಮಟ್ಟಕ್ಕೇರಿಸಲು ಕೋರಿಕೆ

ನವದೆಹಲಿ: ಬೆಂಗಳೂರಿನಲ್ಲಿ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸ್ಥಳ ಆಖೈರು, ವಿಜಯಪುರ ವಿಮಾನ ನಿಲ್ದಾಣ ಲೋಕಾರ್ಪಣೆಗೆ ಒಪ್ಪಿಗೆ, ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸುವುದು ಸೇರಿದಂತೆ ಕರ್ನಾಟಕದ ವೈಮಾನಿಕ ವಲಯದ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರನ್ನು ಗುರುವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಬೆಂಗಳೂರಿನ ಸಮೀಪ ಮತ್ತೊಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದಕ್ಕಾಗಿ ಆಯ್ಕೆ ಮಾಡಿದ್ದ ಮೂರು ಸ್ಥಳಗಳನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಉನ್ನತ ಮಟ್ಟದ ತಂಡವು ಪರಿಶೀಲಿಸಿದೆ. ಹೀಗಾಗಿ ಒಂದು ಸ್ಥಳವನ್ನು ಆದಷ್ಟು ಶೀಘ್ರವೇ ಆಖೈರು ಮಾಡಿದರೆ, ರಾಜ್ಯವು ಮುಂದಿನ ಕೆಲಸ ಕೈಗೆತ್ತಿಕೊಳ್ಳಲು ಅನುಕೂಲವಾಗಲಿದೆ' ಎಂದು ಪಾಟೀಲ ತಿಳಿಸಿದ್ದಾರೆ. ವಿಜಯಪುರದಲ್ಲಿ ಉದ್ಘಾಟನೆಗೆ ಸಿದ್ಧವಾಗಿರುವ ವಿಮಾನ ನಿಲ್ದಾಣಕ್ಕೆ ಕೇಂದ್ರ ಪರಿಸರ ಇಲಾಖೆಯ ಅನುಮತಿ ಬಾಕಿರುವ ಬಗ್ಗೆ ಚರ್ಚಿಸಿದರು.

ಕೆ.ರಾಮಮೋಹನ್ ನಾಯ್ಡು ಜತೆಗೆ ಎಂ.ಬಿ.ಪಾಟೀಲ ಚರ್ಚಿಸಿದರು

ಪ್ರಾದೇಶಿಕ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ ಮತ್ತು ಗೋವಾ ಈ ಭಾಗಗಳಿಗೆ ವಿಮಾನ ಸಂಪರ್ಕ ಸುಧಾರಣೆಯ ಅಗತ್ಯಗಳನ್ನು ಪರಿಗಣಿಸಿ ಹುಬ್ಬಳ್ಳಿ, ಬೆಳಗಾವಿ ವಿಮಾನ ನಿಲ್ದಾಣಗಳನ್ನು ಅಂತರರಾಷ್ಟ್ರೀಯ ದರ್ಜೆಗೇರಿಸಬೇಕೆಂದು ಪಾಟೀಲ ಮನವಿ ಸಲ್ಲಿಸಿದರು.

ಎರಡೂ ವಿಮಾನ ನಿಲ್ದಾಣಗಳಲ್ಲಿ ಗಂಟೆಗೆ 2,400 ಪ್ರಯಾಣಿಕರನ್ನು ನಿರ್ವಹಿಸಬಲ್ಲ ಹೊಸ ಟರ್ಮಿನಲ್ ನಿರ್ಮಿಸಲಾಗುತ್ತಿದೆ. ಎ321 ದರ್ಜೆಯ ವಿಮಾನಗಳ ಕಾರ್ಯಾಚರಣೆ ಸಾಧ್ಯವಾಗುವಂತೆ 12 ಪಾರ್ಕಿಂಗ್ ಬೇ ಅಭಿವೃದ್ಧಿಪಡಿಸಲಾಗುತ್ತಿದ್ದು, ರಾತ್ರಿ ವೇಳೆಯಲ್ಲೂ ಲ್ಯಾಂಡಿಂಗ್ ಆಗುವಂತೆ ಕ್ರಮ ವಹಿಸಲಾಗಿದೆ. ಜತೆಗೆ ಬೆಳಗಾವಿಯಿಂದ ಫೌಂಡ್ರಿ, ಏರೋಸ್ಪೇಸ್ ಸಾಧನಗಳು, ಅಲ್ಯುಮಿನಿಯಂ ಸಾಧನಗಳು, ಹಣ್ಣು ಮತ್ತು ತರಕಾರಿಗಳನ್ನು ಸಾಗಿಸಲು ಪ್ರತ್ಯೇಕ ಟರ್ಮಿನಲ್ ಇದೆ. ಇದಲ್ಲದೆ ಬೆಳಗಾವಿಯಲ್ಲಿ 3 ವಿ.ವಿಗಳು, 3 ಮೆಡಿಕಲ್ ಕಾಲೇಜುಗಳು, ಕೆಎಲ್ಇ ವಿವಿ ಎಲ್ಲವೂ ಇದ್ದು ವಿಶೇಷವಾಗಿ ಮಲೇಷ್ಯಾದಿಂದ ಹೆಚ್ಚಿನ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದಾರೆ ಎಂದು ಅವರು ಮನದಟ್ಟು ಮಾಡಿಕೊಟ್ಟರು.

ಹುಬ್ಬಳ್ಳಿಯಲ್ಲಿ 16,900 ಚ.ಮೀ. ವಿಸ್ತೀರ್ಣದ ಹೊಸ ಟರ್ಮಿನಲ್ ನಿರ್ಮಿಸಲಾಗುತ್ತಿದ್ದು, ಎಬಿ320 ದರ್ಜೆಯ ವಿಮಾನಗಳ ನಿರ್ವಹಣೆ ಸಾಧ್ಯವಾಗುವಂತೆ ಮಾಡಲಾಗುತ್ತಿದೆ. ವರ್ಷಕ್ಕೆ 3 ಲಕ್ಷ ಪ್ರಯಾಣಿಕರ ನಿರ್ವಹಣೆ ನಡೆಯುತ್ತಿದೆ ಎಂದು ಅವರು ಗಮನ ಸೆಳೆದರು.

ನಾಗರಿಕ ವಿಮಾನಯಾನ ವಲಯದಲ್ಲಿ ಕರ್ನಾಟಕ ರಾಜ್ಯವನ್ನು ಪಾಲುದಾರ ಎಂದು ಪರಿಗಣಿಸಬೇಕು. ಇದರಿಂದಾಗಿ ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ವಹಿಸುತ್ತಿರುವ ರಾಜ್ಯದ ಮಂಗಳೂರು, ಮೈಸೂರು, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳಿಂದ ರಾಜ್ಯಕ್ಕೂ ಲಾಭದ ಪಾಲು ಸಿಗಲಿದೆ. ಈ ವಿಷಯದಲ್ಲಿ ರಾಜ್ಯದ ಪಾತ್ರವನ್ನು ಭೂಸ್ವಾಧೀನ ಮತ್ತು ಸೌಕರ್ಯಗಳ ಅಭಿವೃದ್ಧಿಗೆ ಮಾತ್ರ ಸೀಮಿತಗೊಳಿಸಬಾರದು ಎಂದು ಕೋರಿದ್ದಾರೆ.

ಉಪ ನಿರ್ದೇಶಕಿ, ಎಫ್‌ಡಿಸಿ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಉಡುಪಿ: ಸೌಹಾರ್ದ ಸಹಕಾರ ಸಂಘದ ಆಡಳಿತ ಚುನಾವಣೆ ನಡೆಸಿಕೊಡಲು ಲಂಚದ ಬೇಡಿಕೆ ಇಟ್ಟ ಆರೋಪದ ಮೇರೆಗೆ ಉಡುಪಿ ಜಿಲ್ಲಾ ಸಹಕಾರಿ ಸಂಘದ ಲೆಕ್ಕ ಪರಿಶೋಧನಾ ಇಲಾಖೆಯ ಉಪ ನಿರ್ದೇಶಕಿ ರೇಣುಕಾ ಹಾಗೂ ಪ್ರಥಮ ದರ್ಜೆ ಸಹಾಯಕ ಜಯರಾಮ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಸೌಹಾರ್ದ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆ ನಡೆಸಿಕೊಡಲು ತಲಾ ₹5 ಸಾವಿರದಂತೆ ಒಟ್ಟು ₹10 ಸಾವಿರ ಲಂಚಕ್ಕೆ ಇವರು ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಶಾಂತಿನಿಕೇತನ ಸೌಹಾರ್ದ ಸಹಕಾರಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ನರೇಂದ್ರ ಅವರು ಉಡುಪಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ರೇಣುಕಾ ಅವರು ಉಡುಪಿಯಲ್ಲಿರುವ ತಮ್ಮ ಕಚೇರಿಯಲ್ಲಿ ಹಣ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಅವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಮಂಗಳೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಕುಮಾರಚಂದ್ರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಮಂಜುನಾಥ್ ಶಂಕರಹಳ್ಳಿ, ಇನ್‌ಸ್ಪೆಕ್ಟರ್ ರಾಜೇಂದ್ರ ನಾಯಕ್ ಮತ್ತಿತರರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಎರಡು ದಿನ ಸಾಂಸ್ಕೃತಿಕ, ಮನರಂಜನೆ ಕಾರ್ಯಕ್ರಮ

26, 27ಕ್ಕೆ 'ಕುಂದಾಪ್ರ ಕನ್ನಡ ಹಬ್ಬ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕುಂದಾಪ್ರ ಕನ್ನಡ ಪ್ರತಿಷ್ಠಾನದಿಂದ ಕಾರ್ಯಕ್ರಮ
- 26ರಂದು ಸಂಜೆ 5ಕ್ಕೆ ಸಿ.ಎಂ ಸಿದ್ದರಾಮಯ್ಯ ಉದ್ಘಾಟನೆ
- 27ರಂದು ಸಮಾರೋಪ ಸಮಾರಂಭ

ಬೆಂಗಳೂರು: ಕುಂದಾಪ್ರ ಕನ್ನಡ ಪ್ರತಿಷ್ಠಾನದ ವತಿಯಿಂದ 'ಕುಂದಾಪ್ರ ಕನ್ನಡ ಹಬ್ಬ' ಜುಲೈ 26 ಮತ್ತು 27ರಂದು ಹೊಸಕೆರೆಹಳ್ಳಿ ನೈಸ್ ರೋಡ್ ಜಂಕ್ಷನ್ ಬಳಿ ಇರುವ ನಂದಿ ಲಿಂಕ್ ಗ್ರೌಂಡ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಕುಂದಾಪ್ರ ಕನ್ನಡ ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ಶೆಟ್ಟಿ ಬಾರ್ಕೂರು ಮತ್ತು ಉಪಾಧ್ಯಕ್ಷ ನರಸಿಂಹ ಬೀಜಾಡಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಇದು ಆರನೇ ಕುಂದಾಪ್ರ ಕನ್ನಡ ಹಬ್ಬವಾಗಿದ್ದು, ಶನಿವಾರ ಬೆಳಿಗ್ಗೆಯೇ ಕಾರ್ಯಕ್ರಮ ಆರಂಭವಾಗಲಿದೆ. ಸಂಜೆ 5ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಬ್ಬ ಉದ್ಘಾಟಿಸಲಿದ್ದಾರೆ. ಇದೇ ವೇಳೆ ಕುಂದಾಪ್ರ ಕನ್ನಡ ಅಧ್ಯಯನ ಪೀಠ ಲೋಕಾರ್ಪಣೆಗೊಳ್ಳಲಿದೆ. ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್, ಮಾಜಿ ಸಂಸದ ಕೆ. ಜಯಪ್ರಕಾಶ್ ಹೆಗ್ಡೆ, ಶಾಸಕರಾದ ಕಿರಣ್ ಕುಮಾರ್ ಕೊಡ್ಗಿ, ಗುರ್ಮೆ ಸುರೇಶ್ ಶೆಟ್ಟಿ, ಉದ್ಯಮಿಗಳು, ನಟ, ನಟಿಯರು ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಜುಲೈ 27ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉದ್ಯಮಿಗಳು, ಕಲಾವಿದರು ಭಾಗವಹಿಸಲಿದ್ದಾರೆ. ಎರಡೂ ದಿನ ಪ್ರವೇಶ ಉಚಿತವಾಗಿದೆ ಎಂದರು.

ಕುಂದಾಪುರ ಮೂಲದ ಸಾಧಕರಾದ ಮಣಿಪಾಲ ಗ್ರೂಪ್ ಆಫ್ ಹಾಸ್ಪಿಟಲ್ಸ್ ಅಧ್ಯಕ್ಷ ಡಾ.ಎಚ್. ಸುದರ್ಶನ ಬಲ್ಲಾಳ್ ಅವರಿಗೆ ಶನಿವಾರ ಹಾಗೂ ಸಿನಿಮಾ ನಿರ್ದೇಶಕ ಯೋಗರಾಜ್ ಭಟ್ ಅವರಿಗೆ ಭಾನುವಾರ 'ಊರ ಗೌರವ' ವಿಶೇಷ ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಎರಡು ದಿನಗಳಲ್ಲಿ 400ಕ್ಕೂ ಹೆಚ್ಚು ಕಲಾವಿದರು ವಿವಿಧ ಸಾಂಸ್ಕೃತಿಕ ಹಾಗೂ ಮನರಂಜನೆ ಕಾರ್ಯಕ್ರಮಗಳನ್ನು ನೀಡಲಿದ್ದಾರೆ. ಅಟ್ಟಣಿಗೆ ಆಟ ಎನ್ನುವ ವಿಶೇಷ ಯಕ್ಷಗಾನ ಪ್ರದರ್ಶನ ಇರಲಿದೆ. ಕುಂದಾಪುರದ ಅಪರೂಪದ ವಿಶೇಷ ಖಾದ್ಯಗಳ ಆಹಾರ ಮೇಳ ಇರಲಿದ್ದು, ಮಾಂಸಾಹಾರ ಮತ್ತು ಸಸ್ಯಾಹಾರಗಳ 50ಕ್ಕೂ ಅಧಿಕ ಬಗೆಯ ತಿನಿಸುಗಳಿರಲಿವೆ. ಕುಂದಾಪುರದ್ದೇ ಆದ ವಿಶೇಷ ವಸ್ತುಗಳು ಸಿಗುವ ಕುಂದಾಪುರ ಸಂತೆ ನಡೆಯಲಿದೆ ಎಂದು ವಿವರಿಸಿದರು.

ಎರಡು ದಿನಗಳ ಈ ಸಮಾರಂಭದಲ್ಲಿ ನಟರಾದ ರಿಷಬ್ ಶೆಟ್ಟಿ, ಪ್ರಮೋದ್ ಶೆಟ್ಟಿ ಪ್ರವೀರ್ ಶೆಟ್ಟಿ, ಶೈನ್ ಶೆಟ್ಟಿ, ಸಂಗೀತ ನಿರ್ದೇಶಕ ರವಿ ಬಸ್ರೂರು, ನಟಿ ರಕ್ಷಿತಾ ಪ್ರೇಮ್ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ, ಎಚ್. ಅಮರನಾಥ್ ಶೆಟ್ಟಿ, ವಿಜಯ್ ಶೆಟ್ಟಿ, ಪ್ರಸಾದ್ ಶೆಟ್ಟಿ ಇದ್ದರು.

ಯಾಸಿನ್ ಭಟ್ಕಳ ವಿಚಾರಣೆ

ಮಂಗಳೂರು: ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ ಪ್ರಕರಣದ ಆರೋಪಿ, ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಯಾಸೀನ್ ಭಟ್ಕಳ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಗುರುವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ಎದುರಿಸಿದ್ದಾನೆ. ಮುಂದಿನ ವಿಚಾರಣೆ ಆ.20ರಂದು ನಿಗದಿಯಾಗಿದೆ.

ಬನ್ನೇರುಘಟ್ಟದಿಂದ ಜಪಾನ್‌ಗೆ ಗಜ ಪಯಣ

ಭಾರವಾದ ಹೆಜ್ಜೆ ಹಾಕಿದ ಆನೆಗಳು • ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಯೋಜನೆಯಡಿ ರವಾನೆ

ಪ್ರಜಾವಾಣಿ ವಾರ್ತೆ

ನಾನು ಹೋಗಲ್ಲ.... ಉದ್ಯಾನದ ಸ್ನೇಹಿತರನ್ನು ಬಿಟ್ಟು ತೆರಳಲ್ಲ ಎಂದು ಹಟ ಹಿಡಿದಿದ್ದ ಸುರೇಶ್ ನೆಲ ಬಿಟ್ಟು ಮೇಲೇಳಲಿಲ್ಲ (ಎಡಚಿತ್ರ). ಬನ್ನೇರುಘಟ್ಟ ಉದ್ಯಾನದಿಂದ ಪ್ರಾಣಿ ವಿನಿಮಯ ಯೋಜನೆಯಡಿ ಜಪಾನ್‌ಗೆ ತೆರಳುವ ಮುನ್ನ ನಾಲ್ಕು ಆನೆಗಳಿಗೆ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು

ಆನೇಕಲ್: ತುಳಸಿ, ಶ್ರುತಿ ಮತ್ತು ಗೌರಿಗೆ ತಾಯ್ನಾಡು ಬಿಟ್ಟು ಜಪಾನ್‌ಗೆ ಹೋಗುವ ಸಂಭ್ರಮವಾದರೆ, ಅವರೊಂದಿಗೆ ಹೊರಟು ನಿಂತ ಸುರೇಶನಿಗೆ ತಾನು ಹುಟ್ಟಿ ಬೆಳೆದ ನೆಲ ಮತ್ತು ಸ್ನೇಹಿತರನ್ನು ಬಿಟ್ಟು ಹೋಗಲು ಮನಸ್ಸಿಲ್ಲ. ಲಾರಿ ಹತ್ತಲು ಒಲ್ಲೆ ಎಂದು ಕಣ್ಣೀರು ಹಾಕುತ್ತಾ ಹಟ ಹಿಡಿದು ನಿಂತುಬಿಟ್ಟ!

ಪ್ರತಿನಿತ್ಯ ಜಗಳವಾಡುತ್ತಿದ್ದ ಬಸವನಿಗೆ (ಆನೆ) ವಿದಾಯ ಹೇಳುವ ಮುನ್ನ ಅರ್ಧತಾಸು ಮುದ್ದಾಡಿದ. ಸೊಂಡಿಲು ಬೀಸಿ ಬರಸೆಳೆದು ಅಪ್ಪಿದ. ಕೊನೆಗೆ ಒಲ್ಲದ ಮನಸ್ಸಿನಿಂದ ಭಾರವಾದ ಹೃದಯದೊಂದಿಗೆ ಲಾರಿ ಹತ್ತಿದ. ಆಗ ಬಸವನ ಕಣ್ಣು ತೇವಗೊಂಡಿದ್ದವು. ಗೆಳೆಯನಿಗೆ ಕಣ್ಣೀರಿನೊಂದಿಗೆ ಬೀಳ್ಕೊಡುಗೆ ನೀಡಿದ.

ಈ ಭಾವನಾತ್ಮಕ ದೃಶ್ಯ ಕಂಡು ಬಂದಿದ್ದು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ. ಈ ಕ್ಷಣಗಳಿಗೆ ಉದ್ಯಾನದ ಸಿಬ್ಬಂದಿ ಸಾಕ್ಷಿಯಾದರು. ಮೂಕ ಪ್ರಾಣಿಗಳ ವೇದನೆಗೆ ಅವರೂ ಕಣ್ಣೀರಾದರು.

ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಯೋಜನೆ ಅಡಿ ಜಪಾನ್‌ನ ಹಿಮೇಜಿ ಸೆಂಟ್ರಲ್ ಪಾರ್ಕ್‌ಗೆ ಹೊರಟು ನಿಂತ ಬನ್ನೇರುಘಟ್ಟ ಜೈವಿಕ ಉದ್ಯಾನದ ನಾಲ್ಕು ಆನೆಗಳಿಗೆ ಗುರುವಾರ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಎಂಟು ವರ್ಷದ ಸುರೇಶ್, ಒಂಬತ್ತು ವರ್ಷದ ಗೌರಿ, ಏಳು ವರ್ಷದ ಶ್ರುತಿ ಹಾಗೂ ಐದು ವರ್ಷದ ತುಳಸಿಗೆ ಹೂವುಗಳಿಂದ ಅಲಂಕರಿಸಿದ್ದ ಉದ್ಯಾನದ ಸಿಬ್ಬಂದಿ ಅವುಗಳಿಗೆ ಇಷ್ಟದ ತಿಂಡಿ ತಿನಿಸಿ, ಮುದ್ದುಮಾಡಿದರು.

ಕಾವಲು ಕಟ್ಟೆಯ ಸಮೀಪ ಕ್ರೇನ್ ಮೂಲಕ ಆನೆಗಳನ್ನು ಲಾರಿಗೆ ಹತ್ತಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಬೆಳಿಗ್ಗೆ 9.30ಕ್ಕೆ ಆನೆಗಳಿಗೆ ಪೂಜೆ ಸಲ್ಲಿಸಿ ಲೋಹದ ಪೆಟ್ಟಿಗೆ ಒಳಗೆ ಹಾಕಿ ಕ್ರೇನ್ ಸಹಾಯದಿಂದ ಲಾರಿಯಲ್ಲಿ ಇರಿಸಲಾಯಿತು.

ಉದ್ಯಾನ ಬಿಟ್ಟು ಹೋಗಲು ಮನಸ್ಸಿಲ್ಲದೆ ಅಲುಗಾಡದೆ ನಿಂತ ಸುರೇಶ್‌ನನ್ನು ಲಾರಿಗೆ ಹತ್ತಿಸಲು ಸಿಬ್ಬಂದಿ ಪರದಾಡಿದರು. ಎಲ್ಲ ಆನೆಗಳ ರಾಜನಂತಿದ್ದ ಸುರೇಶ್‌ನನ್ನು ಚಿಕ್ಕದಾದ ಪೆಟ್ಟಿಗೆ (ಕ್ರಾಲ್) ಒಳಗೆ ಕಳಿಸಲು ಸಿಬ್ಬಂದಿ ಒಂದೂವರೆ ತಾಸು ಶ್ರಮಪಟ್ಟರು.

ಬೆಳಗ್ಗೆಯಿಂದ ಸಂಭ್ರಮದಲ್ಲಿದ್ದ ಶ್ರುತಿ ಎಂಬ ಆನೆ ಪೆಟ್ಟಿಗೆ ಒಳಗೆ ಹೋಗುವ ವೇಳೆ ಗದ್ಗದಿತಳಾದಳು. ಮಾವುತರು ಮತ್ತು ಅಧಿಕಾರಿಗಳು ಬಾಳೆ ಹಣ್ಣಿನ ಆಸೆ ತೋರಿಸಿ ಪೆಟ್ಟಿಗೆ ಒಳಗೆ ಹತ್ತಿಸಲು ಯಶಸ್ವಿಯಾದರು.

ಪ್ರತಿ ಆನೆಯನ್ನು ಕ್ರಾಲ್‌ಗೆ ಹತ್ತಿಸಲು ಸಿಬ್ಬಂದಿ ಒಂದು ತಾಸಿಗೂ ಹೆಚ್ಚು ಸಮಯ ತೆಗೆದುಕೊಂಡರು. ಆನೆಗಳು ಗಾಬರಿಯಾಗದಂತೆ ಅತ್ಯಂತ ಸೂಕ್ಷ್ಮವಾಗಿ ಮಧ್ಯಾಹ್ನ 2.30ಕ್ಕೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಗಿಸಲಾಯಿತು.

> **ಆನೆಗಳು ನಮ್ಮ ಬದುಕಿನ ಭಾಗ. ಪ್ರತಿದಿನ ಆನೆಗಳನ್ನು ನೋಡಿಕೊಳ್ಳುವುದೇ ನಮ್ಮ ಕೆಲಸ. ಏಳೆಂಟು ವರ್ಷಗಳಿಂದ ನೋಡಿಕೊಂಡ ಆನೆಗಳು ಜಪಾನ್‌ಗೆ ತೆರಳುತ್ತಿರುವುದು ನೋವಿನ ವಿಷಯ.**
> **ಕಾರ್ತೀಕ್,** ಶ್ರುತಿಯ ಮಾವುತ

ಆನೆಗಳಿಗೆ ವಿಮಾನ ನಿಲ್ದಾಣದಲ್ಲಿ ತಿನ್ನಲು ಬಾಳೆಹಣ್ಣು, ಕ್ಯಾರೇಟ್, ಸೌತೆಕಾಯಿಯ ವ್ಯವಸ್ಥೆ ಮಾಡಲಾಗಿತ್ತು. ಸರಕು ಸಾಗಣೆ (ಕಾರ್ಗೊ) ವಿಮಾನದಲ್ಲಿ ಜಪಾನ್‌ನತ್ತ ಪ್ರಯಾಣ ಬೆಳೆಸಿದವು.

ಪ್ರಾಣಿ ವಿನಿಮಯ ಯೋಜನೆ ಅಡಿ ಅಂತರರಾಷ್ಟ್ರೀಯ ಮಾನದಂಡಗಳ ಪ್ರಕಾರ ಆನೆಗಳನ್ನು ಕಳುಹಿಸಲು ವ್ಯವಸ್ಥೆ ಮಾಡಲಾಗಿತ್ತು.

ವಿಮಾನದಲ್ಲಿ ಸತತ ಎಂಟು ತಾಸು ನಿಂತು ಪ್ರಯಾಣ ಮಾಡಲು ಈ ಆನೆಗಳಿಗೆ ಮೂರು ತಿಂಗಳಿಂದ ವಿಶೇಷ ತರಬೇತಿ ನೀಡಲಾಗಿದೆ. ಅವುಗಳೊಂದಿಗೆ ಮಾವುತರು, ಕಾವಾಡಿಗಳು, ವೈದ್ಯರು ಮತ್ತು ತಜ್ಞರ ತಂಡ ಕೂಡ ತೆರಳಿತು.

ಉದ್ಯಾನದ ಆನೆ ಸುವರ್ಣ ಮಗ ಸುರೇಶ್, ವೇದಾ ಮಗಳು ತುಳಸಿ, ವನಶ್ರೀ ಮಗಳು ಶ್ರುತಿ ಮತ್ತು ರೂಪಾ ಪುತ್ರಿ ಗೌರಿ. ಇವೆಲ್ಲ ಬನ್ನೇರುಘಟ್ಟದಲ್ಲಿಯೇ ಹುಟ್ಟಿ ಬೆಳೆದ ಮಕ್ಕಳು.

ಮೊದಲ ಬಾರಿಗೆ ಪ್ರಾಣಿ ವಿನಿಯಮ

ಬನ್ನೇರುಘಟ್ಟ ಉದ್ಯಾನದಿಂದ ಇದೇ ಮೊದಲ ಬಾರಿ ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಕಾರ್ಯಕ್ರಮ ರೂಪಿಸಲಾಗಿದೆ. ಕೇಂದ್ರ ಮೃಗಾಲಯ ಪ್ರಾಧಿಕಾರ, ಚೀಫ್ ವೈಲ್ಡ್ ಲೈಫ್ ವಾರ್ಡನ್, ಪಶುವೈದ್ಯಕೀಯ ಇಲಾಖೆ, ಕೇಂದ್ರ ಪರಿಸರ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಪ್ರಾಣಿ ವಿನಿಮಯ ಕಾರ್ಯಕ್ರಮ ರೂಪಿಸಲಾಗಿದೆ.

ವಿದೇಶಿ ವ್ಯಾಪಾರದ ಪ್ರಧಾನ ನಿರ್ದೇಶನಾಲಯ (ಡೈರೆಕ್ಟರ್ ಜನರಲ್ ಆಫ್ ಫಾರಿನ್ ಟ್ರೇಡ್ ಮತ್ತು ಸೈಟಸ್) ಒಪ್ಪಂದದಂತೆ ಪ್ರಾಣಿ ವಿನಿಮಯ ಮಾಡಿಕೊಳ್ಳಲಾಗುತ್ತಿದೆ. ಜಪಾನ್ ಮತ್ತು ಭಾರತ ರಾಯಭಾರಿ ಕಚೇರಿಗಳು ಪ್ರಾಣಿಗಳ ವಿನಿಮಯಕ್ಕೆ ಹೆಚ್ಚು ಸಹಕಾರ ನೀಡಿವೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

ದೇಶಕ್ಕೆ ಮೊದಲ ಬಾರಿಗೆ ಪೂಮಾ

ಪ್ರಾಣಿ ವಿನಿಮಯ ಯೋಜನೆ ಅಡಿ ನಾಲ್ಕು ಆನೆಗಳನ್ನು ಜಪಾನ್‌ಗೆ ನೀಡಿ ಪ್ರತಿಯಾಗಿ ನಾಲ್ಕು ಚೀತಾ, ಎರಡು ಜಾಗ್ವಾರ್, ನಾಲ್ಕು ಪೂಮಾ, ಮೂರು ಚಿಂಪಾಂಜಿ ಮತ್ತು ಎಂಟು ಕ್ಯಾಪುಚಿನ್ ಕೋತಿಗಳನ್ನು ತರಿಸಿಕೊಳ್ಳಲಾಗುತ್ತಿದೆ.

ಪೂಮಾ (ಬೆಕ್ಕು ಜಾತಿಯ ಪರ್ವತ ಸಿಂಹ) ದೇಶದಲ್ಲಿಯೇ ಮೊದಲ ಬಾರಿಗೆ ಬನ್ನೇರುಘಟ್ಟಕ್ಕೆ ಬರುತ್ತಿದೆ. ಕ್ಯಾಪುಚಿನ್ ಕೋತಿಗಳು ಮತ್ತು ಚೀತಾಗಳು ಆಗಸ್ಟ್ ಸೆಪ್ಟಂಬರ್ ತಿಂಗಳಿನಲ್ಲಿ ಬನ್ನೇರುಘಟ್ಟಕ್ಕೆ ಬರಲಿವೆ.

ಉಳಿದ ಪ್ರಾಣಿಗಳು ವರ್ಷಾಂತ್ಯಕ್ಕೆ ಬರಲಿವೆ. ಈ ವಿನಿಮಯವು ಬನ್ನೇರುಘಟ್ಟ ಉದ್ಯಾನದಲ್ಲಿ ಪ್ರಾಣಿಗಳ ಸಂಖ್ಯೆ ಹೆಚ್ಚಿಸಲು ಉಪಯಕ್ತವಾಗಲಿದೆ.

ಚೆನ್ನೈ, ಒಡಿಶಾ, ಮೈಸೂರು ಉದ್ಯಾನಗಳಿಗೆ ಹೋಲಿಸಿದರೆ ಬನ್ನೇರುಘಟ್ಟದಲ್ಲಿ ಪ್ರಾಣಿಗಳ ಸಂಖ್ಯೆ ಕಡಿಮೆಯಿದೆ. ಪ್ರವಾಸಿಗರನ್ನು ಸೆಳೆಯಲು ಮತ್ತು ಪ್ರಾಣಿಗಳ ಸಂಖ್ಯೆ ಹೆಚ್ಚಿಸಲು ಪ್ರಾಣಿ ವಿನಿಮಯ ಉಪಯುಕ್ತ ಎಂದು ಸೂರ್ಯಸೇನ್ ತಿಳಿಸಿದರು.

ಜಪಾನ್, ಭಾರತ ಆನೆಗಳ ಸಂಬಂಧ

ಜಪಾನ್ ಮತ್ತು ಭಾರತದ ಆನೆಗಳಿಗೆ ವಿಶೇಷ ಸಂಬಂಧವಿದೆ. ಜಪಾನ್ ಜನರಿಗೂ ಏಷ್ಯಾ ಆನೆಗಳೆಂದರೆ ಅತ್ಯಂತ ಪ್ರಿಯವಾದ ಪ್ರಾಣಿ. 1955ರ ಎರಡನೇ ಮಹಾಯುದ್ಧದಲ್ಲಿ ಜಪಾನ್‌ನಲ್ಲಿ ಏಕೈಕ ಆನೆ ಆಹಾರವಿಲ್ಲದೇ ಮೃತಪಟ್ಟಿತ್ತು. ನಂತರದ ದಿನಗಳಲ್ಲಿ ಜವಾಹರ ಲಾಲ್ ನೆಹರೂ ಅವರು ಜಪಾನ್‌ಗೆ ಆನೆಗಳನ್ನು ಕೊಡುಗೆಯಾಗಿ ನೀಡಿದ್ದರು.

2021ರಲ್ಲಿ ಮೈಸೂರು ಮೃಗಾಲಯದಿಂದ ಮೂರು ಆನೆಗಳನ್ನು ಜಪಾನ್‌ಗೆ ಕಳುಹಿಸಲಾಗಿತ್ತು. ಇದೀಗ ಬನ್ನೇರುಘಟ್ಟ ಉದ್ಯಾನವನದಿಂದ ನಾಲ್ಕು ಆನೆಗಳನ್ನು ಜಪಾನ್‌ಗೆ ಕಳುಹಿಸಲಾಗುತ್ತಿದೆ.

ಇಂಗ್ಲಿಷ್‌ಗೆ ಸ್ಪಂದಿಸುವ ತರಬೇತಿ

ಜಪಾನ್ ಸಿಬ್ಬಂದಿ ಸಹ ಬನ್ನೇರುಘಟ್ಟಕ್ಕೆ ಆಗಮಿಸಿ ಆನೆಗಳಿಗೆ ಇಂಗ್ಲಿಷ್‌ಗೆ ಸ್ಪಂದಿಸುವ ತರಬೇತಿ ನೀಡಿದ್ದಾರೆ. ಆನೆಗಳೊಂದಿಗೆ ಆನೆ ಮೇಲ್ವಿಚಾರಕ ಸುರೇಶ್, ಮಾವುತರಾದ ಕಾಳಪ್ಪ, ದೇವಪ್ಪ, ಕಾರ್ತಿಕ್, ಅಯ್ಯಪ್ಪ, ಜೀವಶಾಸ್ತ್ರಜ್ಞೆ ಐಶ್ವರ್ಯ ಮತ್ತು ಪಶುವೈದ್ಯರಾದ ಕಿರಣ್, ಆನಂದ್ ಅವರು ಜಪಾನ್‌ಗೆ ತೆರಳಿದ್ದಾರೆ.

ಸಂವಹನ, ಸ್ಪಂದಿಸುವ ಗುಣ ಸೇರಿದಂತೆ ಜಪಾನ್‌ನ ವಾತಾವರಣಕ್ಕೆ ಹೊಂದಿಕೊಳ್ಳಲು ಆನೆಗಳಿಗೆ ಸಿಬ್ಬಂದಿ ಸಹಾಯವಾಗಲಿದ್ದಾರೆ. ಆನೆಗಳ ಆಹಾರ ಪದ್ಧತಿ ಬದಲಾಗದಂತೆ ವ್ಯವಸ್ಥೆ ಮಾಡಲು ಜಪಾನ್ ಉದ್ಯಾನದಲ್ಲಿ ಅಕ್ಕಿ ಮತ್ತು ರಾಗಿಯ ವ್ಯವಸ್ಥೆ ಮಾಡಲಾಗಿದೆ.

ಸುದ್ದಿ 2 ನಿಮಿಷ

ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ

ಕೆ.ಆರ್.ಪುರ: ತಾಲ್ಲೂಕು ಆಸ್ಪತ್ರೆಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಡಿ.ದೇವರಾಜು ಅರಸು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗುರುರಾಜ್ ಮಾತನಾಡಿ, ‘85ಕ್ಕೂ ಹೆಚ್ಚು ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಲಾಗಿದೆ. ಸಮಸ್ಯೆ ಇರುವ ಮಕ್ಕಳಿಗೆ ಔಷಧಿ ನೀಡಲಾಗಿದೆ’ ಎಂದರು.

ಪ್ರಥಮ ಚಿಕಿತ್ಸಾ ಪೆಟ್ಟಿಗೆಯ ನಿರ್ವಹಣೆ, ಅಡುಗೆ ತಯಾರಿಕಾ ವಿಧಾನ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯಗಳ ನಿರ್ವಹಣೆ, ತ್ಯಾಜ್ಯ ವಿಲೇವಾರಿ ಕುರಿತು ಪರಿಶೀಲಿಸಲಾಗಿದೆ ಎಂದು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀಶೈಲ ಕನ್ನಾಳ್ ತಿಳಿಸಿದರು.

ಡಾ.ನಿಸರ್ಗ, ವಾರ್ಡನ್ ಕಸ್ತೂರಿ, ಆರೋಗ್ಯ ಸುರಕ್ಷಾಧಿಕಾರಿ ಶಶಿಕಲಾ, ಕಿರಣ್, ಪರಸಪ್ಪ, ನಾಗವೇಣಿ, ಕವಿತಾ ಇದ್ದರು.

ಹಿತ ಆಯುರ್ವೇದ ಕಾಲೇಜಿಗೆ ಮೃತದೇಹ ದಾನ

ಪೀಣ್ಯ ದಾಸರಹಳ್ಳಿ: ದೊಡ್ಡಬಿದರುಕಲ್ಲಿನಲ್ಲಿರುವ ಹಿತ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರಕ್ಕೆ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಡಾ. ರಾಮಣ್ಣವರ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೃತದೇಹವನ್ನು ದಾನವಾಗಿ ನೀಡಲಾಗಿದೆ.

ಟ್ರಸ್ಟ್ ಅಧ್ಯಕ್ಷ ಡಾ. ಮಹಾಂತೇಶ್ ರಾಮಣ್ಣವರ ಮಾತನಾಡಿ, ‘ವಿದ್ಯಾರ್ಥಿಗಳ ಶೈಕ್ಷಣಿಕ, ಸಂಶೋಧನಾ ಉದ್ದೇಶಕ್ಕೆ ಇದರಿಂದ ನೆರವಾಗಲಿದೆ. ಮೃತದೇಹ ಇರದಿದ್ದರೆ ಅಧ್ಯಯನ, ಸಂಶೋಧನೆಯೇ ನಡೆಯುವುದಿಲ್ಲ’ ಎಂದು ತಿಳಿಸಿದರು

‘ಬೆಂಗಳೂರಿನಲ್ಲಿರುವ ಆಯುರ್ವೇದ ಕಾಲೇಜುಗಳು ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜು ಮೃತದೇಹದ ಕೊರತೆ ಎದುರಿಸುತ್ತಿವೆ. ಸರ್ಕಾರಿ ಕಾಲೇಜುಗಳು ಮೃತದೇಹಗಳ ಕೊರತೆಯನ್ನು ಹೇಗೋ ನಿಭಾಯಿಸಿಕೊಳ್ಳುತ್ತವೆ. ಆದರೆ, ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಇದು ಸುಲಭವಲ್ಲ. ದೇಹದಾನದ ಕುರಿತು ಇರುವ ತಪ್ಪು ಮಾಹಿತಿ ಹೋಗಬೇಕು. ದೇಹದಾನಕ್ಕೆ ದಾನಿಯ ಜೊತೆಗೆ ಕುಟುಂಬದ ಎಲ್ಲಾ ಸದಸ್ಯರ ಲಿಖಿತ ಒಪ್ಪಿಗೆ ಕಡ್ಡಾಯ’ ಎಂದರು.

ಕಾಲೇಜು ಮುಖ್ಯಸ್ಥ ಡಾ. ಸೀತಾರಾಮಯ್ಯ ಆರ್., ಕಾರ್ಯದರ್ಶಿ ಬಸವರಾಜೇಂದ್ರ, ಟ್ರಸ್ಟಿಗಳಾದ ನಾಗೇಶ್, ಕೋಟೇಶ್ವರ ಹಾಗೂ ಕಾಲೇಜಿನ ಪ್ರಾಂಶುಪಾಲ ಡಾ. ಲಕ್ಷ್ಮೀಬಾಪು ಹುಲಕುಂಡ್ ಇದ್ದರು.

ಅಂಬೇಡ್ಕರ್ ಭಾವಚಿತ್ರಕ್ಕೆ ಅಗೌರವ: ನೋಟಿಸ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ವಿಭಾಗದಲ್ಲಿ ಡಾ.ಬಿ. ಆರ್. ಅಂಬೇಡ್ಕರ್ ಭಾವಚಿತ್ರವನ್ನು ಮೂರು ತಿಂಗಳವರೆಗೆ ಸರಿಯಾದ ಜಾಗದಲ್ಲಿ ಹಾಕದೇ ಅಗೌರವ ತೋರಿದ ವಿಭಾಗದ ನಿರ್ದೇಶಕ ನೀಮ್ ಜ್ಞಾನದೇವ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ನಿಯಮ ಉಲ್ಲಂಘಿಸಿದ್ದು, ಈ ಬಗ್ಗೆ ನಿಮ್ಮ ವಿರುದ್ಧ ಏಕೆ ಶಿಸ್ತು ಕ್ರಮ ಕೈಗೊಳ್ಳಬಾರದು ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ನೋಟಿಸ್ ತಲುಪಿದ ಏಳು ದಿನಗಳಲ್ಲಿ ಸಮಂಜಸ ಉತ್ತರ ಬಾರದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ವಿ.ವಿ ಕುಲಸಚಿವರು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಸಂಯುಕ್ತ ಸ್ವಕುಳ ಸಾಳಿ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2024–25ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ, ಯಾವುದೇ ಪದವಿಗಳಲ್ಲಿ ಶೇ 60ಕ್ಕಿಂತ ಅಧಿಕ ಅಂಕಗಳಿಸಿದ ಸ್ವಕುಳಸಾಳಿ ಸಮುದಾಯದ ವಿದ್ಯಾರ್ಥಿಗಳು ಜುಲೈ 31ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಕರ್ನಾಟಕ ರಾಜ್ಯ ಸ್ವಕುಳಸಾಳಿ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ ಭಂಡಾರೆ ತಿಳಿಸಿದ್ದಾರೆ. ಮಾಹಿತಿಗೆ: 94490 68757, 98807 19172.

ಎರಡು ವರ್ಷದೊಳಗೆ ಕೋರ್ಸ್ ಮುಗಿಸುವಂತೆ ಇಲಾಖೆ ಸೂಚನೆ

ಬಿ.ಇಡಿ ವ್ಯಾಸಂಗ: 364 ಉಪನ್ಯಾಸಕರಿಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ 2008 ಫೆ.4ರ ನಂತರ ನೇಮಕಗೊಂಡು, ಅನುದಾನಕ್ಕೆ ಒಳಪಟ್ಟಿರುವ ಉಪನ್ಯಾಸಕರ ಪೈಕಿ ಬಿ.ಇಡಿ ಪದವಿ ಹೊಂದಿರದ 364 ಉಪನ್ಯಾಸಕರನ್ನು ‘ವಿಶೇಷ ಪ್ರಕರಣ’ವೆಂದು ಪರಿಗಣಿಸಿ ಬಿ.ಇಡಿ ವ್ಯಾಸಂಗಕ್ಕೆ ವೇತನಸಹಿತವಾಗಿ ನಿಯೋಜಿಸಲು ಅನುಮತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಆದರೆ, ಹೀಗೆ ನಿಯೋಜನೆಯಿಂದ ತೆರವಾಗುವ ಹುದ್ದೆಗಳಿಗೆ ನೇಮಕವಾಗುವ ಅತಿಥಿ ಉಪನ್ಯಾಸಕರ ವೇತನವನ್ನು ನಿಯೋಜನೆಗೊಳ್ಳುವ ಉಪನ್ಯಾಸಕರ ವೇತನದಿಂದಲೇ ಭರಿಸಲಾಗುವುದು ಎಂದು ಆದೇಶದಲ್ಲಿ ಶಾಲಾ ಶಿಕ್ಷಣ (ಪದವಿಪೂರ್ವ) ಇಲಾಖೆ ವಿವರಿಸಿದೆ.

ಬಿ.ಇಡಿ ವ್ಯಾಸಂಗಕ್ಕೆ ನಿಯೋಜನೆಗೊಳ್ಳುವ ಉಪನ್ಯಾಸಕರ ಕಾರ್ಯಭಾರದ ಆಧಾರದಲ್ಲಿ ಅತಿಥಿ ಉಪನ್ಯಾಸಕರನ್ನು ಇಲಾಖೆಯ ನಿರ್ದೇಶಕರು ನೇಮಿಸಿಕೊಳ್ಳಬೇಕು. ಹೀಗೆ ನೇಮಕಗೊಂಡವರ ವೇತನವನ್ನು ನಿಯೋಜನೆಗೊಂಡ ಉಪನ್ಯಾಸಕರ ವೇತನದಲ್ಲಿಯೇ ಭರಿಸುವ ಸಂಬಂಧ ನಿಯೋಜನೆ ಮೇಲೆ ತೆರಳುವ ಉಪನ್ಯಾಸಕರಿಂದ ಒಪ್ಪಿಗೆ ಪತ್ರ ಪಡೆದುಕೊಳ್ಳಬೇಕು. ಬಿ.ಇಡಿ ವ್ಯಾಸಂಗವನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ಪೂರೈಸಬೇಕು. ಈ ವ್ಯಾಸಂಗಕ್ಕೆ ತಗಲುವ ಶುಲ್ಕ ಅಥವಾ ವೆಚ್ಚವನ್ನು ಇಲಾಖೆಯಿಂದ ಪಾವತಿಸುವುದಿಲ್ಲ. ಎರಡು ವರ್ಷದೊಳಗೆ ಬಿ.ಇಡಿ ಕೋರ್ಸ್ ಮುಗಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಬಿ.ಇಡಿ ವ್ಯಾಸಂಗಕ್ಕೆ ನಿಯೋಜನೆಗೊಂಡ ಉಪನ್ಯಾಸಕರಿಗೆ, ಕಾರ್ಯನಿರತ ಅವಧಿಯಲ್ಲಿ ಲಭ್ಯವಿದ್ದ ಯಾವುದೇ ರಜಾ ಸೌಲಭ್ಯ ಸಿಗುವುದಿಲ್ಲ. ಬಿ.ಇಡಿ ಪದವಿ ಮುಗಿಸಿದ ಉಪನ್ಯಾಸಕರು ತಮ್ಮ ಪರೀಕ್ಷಾ ಅವಧಿಯ ಬಳಿಕ ವೇತನ ಬಡ್ತಿ ಪಡೆಯಲು ಅರ್ಹರಾಗಲಿದ್ದಾರೆ. ಪ್ರಸ್ತಾಪಿತ ಬಿ.ಇಡಿ ವ್ಯಾಸಂಗಕ್ಕೆ ನಿಯೋಜಿಸುವ ಸಮಯ ಮತ್ತಿತರ ಅಂಶಗಳನ್ನು ನಿರ್ದೇಶಕರ ಹಂತದಲ್ಲಿಯೇ ನಿರ್ಧರಿಸಬೇಕು ಎಂದೂ ಸ್ಪಷ್ಟಪಡಿಸಲಾಗಿದೆ.

ಬಿ.ಇಡಿ ಪದವಿ ಕಡ್ಡಾಯ

ಸರ್ಕಾರಿ, ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ 2008 ಫೆ.4ರ ನಂತರ ನೇಮಕಗೊಂಡಿರುವ ವಿವಿಧ ವಿಷಯಗಳ ಉಪನ್ಯಾಸಕರಿಗೆ ಬಿ.ಇಡಿ ವ್ಯಾಸಂಗವನ್ನು ಕಡ್ಡಾಯಗೊಳಿಸಲಾಗಿದೆ. 2015ರ ಏಪ್ರಿಲ್ 9ರಂದು ಹೊರಡಿಸಿದ ಆದೇಶದಲ್ಲಿ, 2007 ಜ. 1ರಿಂದ ಆರು ವರ್ಷಗಳ ಅವಧಿಯಲ್ಲಿ ಬಿ.ಇಡಿ ಪದವಿ ಪೂರ್ಣಗೊಳಿಸದಿದ್ದರೆ ಅಂಥವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಸೂಚಿಸಲಾಗಿತ್ತು.

ಮಾರ್ಚ್ 5ರಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದ ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು, 2008ಕ್ಕೂ ಮೊದಲು ನೇಮಕಗೊಂಡ ಒಟ್ಟು 876 ಉಪನ್ಯಾಸಕರು ಅನುದಾನದ ವ್ಯಾಪ್ತಿಗೆ ಸೇರಿದ್ದಾರೆ. ಈ ಪೈಕಿ, 450 ಉಪನ್ಯಾಸಕರು ಸರ್ಕಾರ ಹೊರಡಿಸಿದ್ದ 2021ರ ಆದೇಶ ಪ್ರಕಾರ ಬಿ.ಇಡಿ ಪದವಿ ಪಡೆಯುವುದರಿಂದ ವಿನಾಯಿತಿ ಪಡೆದಿದ್ದಾರೆ. ನಿಧನ, ನಿವೃತ್ತಿ ಮತ್ತಿತರ ಕಾರಣಗಳಿಂದ 62 ಉಪನ್ಯಾಸಕರ ಹುದ್ದೆಗಳು ತೆರವಾಗಿವೆ. ಉಳಿದ 364 ಉಪನ್ಯಾಸಕರು ಬಿ.ಇಡಿ ಪದವಿ ಪಡೆಯದೆ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಉಪನ್ಯಾಸಕರನ್ನು ಬಿ.ಇಡಿ ಪದವಿ ಪಡೆಯಲು ವೇತನಸಹಿತವಾಗಿ ನಿಯೋಜನೆ ಮಾಡುವಂತೆ ಕೋರಿಕೆ ಸಲ್ಲಿಸಿದ್ದರು.

ಔಷಧ ಖರೀದಿಗೆ ₹880 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025–26ರ ಸಾಲಿಗೆ ₹880.68 ಕೋಟಿ ವೆಚ್ಚದಲ್ಲಿ 890 ಔಷಧಗಳು, ಮಾತ್ರೆಗಳು, ರಾಸಾಯನಿಕಗಳನ್ನು ಖರೀದಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಭೆ ಬಳಿಕ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ, ‘ಔಷಧಗಳ ದರ ಪರಿಗಣನೆಗಾಗಿ ಪ್ರಸಕ್ತ ಔಷಧಿಗಳಿಗೆ ಅನ್ವಯಿಸುವ ಹಿಂದಿನ ದರ, ಅಂದಾಜು ದರವನ್ನು ಆಧಾರವಾಗಿಟ್ಟುಕೊಂಡು ಹೊಸ ದರ ನಿರ್ಧರಿಸಲಾಗಿದೆ. ಹೊಸ ಔಷಧಗಳಿಗೆ ಅನ್ವಯಿಸುವ ಇತರೆ ರಾಜ್ಯಗಳ ವೈದ್ಯಕೀಯ ಸರಬರಾಜು ನಿಗಮಗಳಲ್ಲಿ ಖರೀದಿಸಿದ ಕನಿಷ್ಠ ದರಗಳು ಅಥವಾ ಮಾರುಕಟ್ಟೆಯ ಶೇ 40ರ ದರದಂತೆ ಪರಿಗಣಿಸಿ ಔಷಧ ಖರೀದಿಸಲು ಪ್ರಸ್ತಾಪಿಸಲಾಗಿದೆ’ ಎಂದರು.

ಖಾಸಗಿ ಆಂಬುಲೆನ್ಸ್ ಸೇವಾ ನಿರ್ವಾಹಕರನ್ನು ನಿಯಂತ್ರಿಸಲು ಮತ್ತು ಸಂಚಾರಿ ವೈದ್ಯಕೀಯ ಘಟಕಗಳನ್ನು ಖಾಸಗಿ ವೈದ್ಯಕೀಯ ಸಂಸ್ಥೆ ಎಂದು ನೋಂದಾಯಿಸುವುದು ಅಗತ್ಯವಿದೆ. 30 ದಿನಗಳೊಳಗೆ ಕಾಯಂ ನೋಂದಣಿ ನೀಡಲು ಈ ತಿದ್ದುಪಡಿ ಮಾಡಲಾಗಿದೆ ಎಂದು ಪಾಟೀಲ ತಿಳಿಸಿದರು.

ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಸ್ಥಾಪಿಸಲು ಹೆಚ್ಚುವರಿಯಾಗಿ ಅವಶ್ಯವಿರುವ ವೈದ್ಯಕೀಯ ಉಪಕರಣ, ಪೀಠೋಪಕರಣ ಹಾಗೂ ಇತರೆ ಬಾಬ್ತುಗಳ ಒಟ್ಟು ₹62 ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
My Client Mr V R Beedu holds the title for the property bearing Site number 1584, Kodigehalli, Kothihosahalli, Byatarayanapura, Yelahanka Hobli, Bangalore North Taluk, Sahakara Nagara, Bangalore - 560092.
He owns the property by virtue of a sale deed bearing number 0941 dated 19/2/1992 executed in his favour by the Ministry of Communication Employees Cooperative Housing Society Limited.
The same deed in his possession has been laminated for safety reasons
He intends to avail a home loan from SBI and wishes to create a registered mortgage in favour of SPB Branch (06866) of SBI on St Marks Road, Bangalore 560001
If anyone has any claim on the captioned property can please contact me on my number 9986349626 and email id basappa_1978@yahoo.co.in
H D Basappa,
Advocate

JOB OPPORTUNITIES

Teachers/ Professors

REQUIRED HIGH school and middle school Teacher for English, Social and Science teacher Whatsapp 9901501185 email kenmoreschool@gmail.com

REAL ESTATE SELLING

Sites

Hanumanthnagar

SRINIVASNAGAR, 30X50, East Facing Site 40' Road, Prime Location 19,000/- Sft. E-Katha, Clear Document -9845000299

Vishweshwariah Layout

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 7411994069, 9742681666

RENTAL PROPERTIES

Accommodation Available

Commercial

FOR LEASE: Begumpet Main Road. Hyderabad, Showroom Space15,000 SFT. Grade A Building, Agents Welcome, Call Ph: 9347576914.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Financial Services

CORPORATE BORROWER requires business loan above 100 crores against Chennai, Bangalore property. Only Genuine financers Call 9514214850

Business Offers

Finance

MSME LOANS Available for any startup companies,any existing companies NOTE:Also one approved loan available contact-7204995189

PROPERTY CORNER

LAND FOR SALE
4.5 Acres of Land in **Sulthan Bathery, Wayanad, Kerala,** suitable for Resorts, IT Park, Residential, or Commercial Development, Strategically located along the highway. Clear legal titles and fully suitable for construction purpose.
Contact: 8590922639

PERSONAL

Change of Name

CHANGE OF NAME
I, **Manju Sebastian Kandathil,** residing at Villa No. 58, Reliaable Residenza Layout, Off Rayasandra Main Road, Chikkanagamangala, Bengaluru-560099. have changed my name to **MANJU SEBASTIAN** vide affidavit dated 15.07.2025 before notary B.M. Chandrashekar, Bengaluru. Henceforth I shall be called **MANJU SEBASTIAN** only.

CHANGE OF NAME
I, Mrs. Vivienne Edmund, W/o. Mr. Edmund Januario Joao Mascarenhas @ Edmund Mascarenhas, born on 10.02.1973, residing at, No.05, Reliable Lake dew residency, Near Vibgyor School, Haralur, Bengaluru-560102, have changed my name to Mrs. Vivienne Mascarenhas W/o. Mr. Edmund Mascarenhas vide affidavit dated: 21/07/2025 before notary Mr.A.S.Narayana Reddy, Bangalore.

CHANGE OF NAME
I, Miss. Mryna Edmund D/o. Mr. Edmund Januario Joao Mascarenhas @ Edmund Mascarenhas, born on 01.03.1998, residing at, No.05, Reliable Lake dew residency, Near Vibgyor School, Haralur, Bengaluru-560102, have changed my name to Miss Mryna Mascarenhas D/o. Mr. Edmund Mascarenhas vide affidavit dated: 21/07/2025 before notary Mr.A.S.Narayana Reddy, Bangalore.

CHANGE OF NAME
I, **MANSI KISHORE RAICHA,** wife of Udyan Nayak aged 40 years, residing at B606 Gcorp Residences, ST Bed Layout, Near Nirguna Mandir, Kormangala, Bangalore South, Bengaluru Karnataka 560034 have changed my name to **MANSI RAICHA** vide affidavit dated: 24.07.2025 before advocate and notary K.V. Mani, Bengaluru.

I, VEENA_CHENGAPPA W/o.Chengappa Ajjiranda Appachu R/a#68, 1st`Block B.M.Road, Kushalnagar Kodagu Dist.571234. have changed`my Name_to VEENA_C.C. vide`affidavit dated:26.6.2025 before`Notary Manjunatha.S.K. Kushalnagar.

Lost

LOST / MISPLACED
I, **JAYARAM R,** residing at # 61, 1st Main, 3rd Cross, Near Akknur Raghavendra Swamy Mutt, Gavipuram extension, Bengaluru-560019 have lost/ misplaced my **Khata Certificate of BDA site Site 69, Banashankari 6th Stage, 4th Block, Bengaluru.** Finder please contact: **9060703840**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ:ಕಾನಿಇಂ/ಯೋವಿದ/ಸಕಾಇಂ-4/2025-26/1527 ದಿನಾಂಕ: 24.07.2025

ಸಾರ್ವಜನಿಕರ ಎಚ್ಚರಿಕೆಗಾಗಿ

ಸಾರ್ವಜನಿಕರ ಎಚ್ಚರಿಕೆಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕವಿಪ್ರನಿನಿಯು ಬೆಂಗಳೂರಿನ ಮೆ: ಬಿಎಂಆರ್‌ಸಿಎಲ್ 220 ಕೆ.ವಿ (ಇಹೆಚ್‌ಟಿ) ಆರ್‌ಎಸ್‌ಎಸ್ ಫ್ರೀಡಂ ಪಾರ್ಕ್ ಇಂಟರ್‌ನ್ಯಾಷನಲ್/ಸಿಲ್ಕ್ ಬೋರ್ಡ್ ಪಕ್ಕದಲ್ಲಿರುವ ಅಗರ ಗ್ರಾಮದ 220 ಕೆ.ವಿ. 1000 ಚ.ಮೀ.ಮೀ ಭೂಗತ ಕೇಬಲ್ ಅಸ್ತಿತ್ವದಲ್ಲಿರುವ 220/66/11 ಕೆ.ವಿ ಹೆಚ್‌ಎಸ್‌ಆರ್ ಲೇಔಟ್ ಆರ್‌ಎಸ್‌ಎಸ್‌ನಿಂದ ಮೆ: ಬಿಎಂಆರ್‌ಸಿಎಲ್‌ನ 220/33 ಕೆ.ವಿ ಸಿಲ್ಕ್ ಬೋರ್ಡ್ ಆರ್‌ಎಸ್‌ಎಸ್‌ವರೆಗೂ ಸುಮಾರು 5 ಕಿ.ಮೀ ಉದ್ದದ ಭೂಗತ ಕೇಬಲನ್ನು ಎಳೆಯಲಾಗಿರುತ್ತದೆ. ಸದರಿ 220 ಕೆ.ವಿ. ಭೂಗತ ಕೇಬಲ್‌ನಲ್ಲಿ **ದಿನಾಂಕ: 25.07.2025** ರಂದು ಅಥವಾ ತದನಂತರದ ದಿನಗಳಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಲಾಗುವುದು.

ಸದರಿ 220 ಕೆ.ವಿ. ಭೂಗತ ಕೇಬಲ್ ವಿದ್ಯುತ್ ಮಾರ್ಗವು 220 ಕೆ.ವಿ (ಇಹೆಚ್‌ಟಿ) ಆರ್‌ಎಸ್‌ಎಸ್ ಫ್ರೀಡಂ ಪಾರ್ಕ್ ಇಂಟರ್‌ನ್ಯಾಷನಲ್/ಸಿಲ್ಕ್ ಬೋರ್ಡ್ ಪಕ್ಕದಲ್ಲಿರುವ ಅಗರ ಗ್ರಾಮದ 220 ಕೆ.ವಿ. 1000 ಚ.ಮೀ.ಮೀ ಭೂಗತ ಕೇಬಲ್ ಅಸ್ತಿತ್ವದಲ್ಲಿರುವ 220/66/11 ಕೆ.ವಿ ಹೆಚ್‌ಎಸ್‌ಆರ್ ಲೇಔಟ್ ಆರ್‌ಎಸ್‌ಎಸ್‌ನಿಂದ ಮೆ: ಬಿಎಂಆರ್‌ಸಿಎಲ್ ನ 220/33 ಕೆ.ವಿ ಸಿಲ್ಕ್ ಬೋರ್ಡ್ ಆರ್‌ಎಸ್‌ಎಸ್‌ವರೆಗೂ ಸುಮಾರು 5 ಕಿ.ಮೀ ಉದ್ದದ ಭೂಗತ ಕೇಬಲನ್ನು ಮೆ: ಬಿಎಂಆರ್‌ಸಿಎಲ್ ಈ ಕೆಳಕಂಡ ಮಾರ್ಗದ ಮೂಲಕ ಹಾದು ಹೋಗುತ್ತದೆ.

1. **220/66/11 ಕೆ.ವಿ ಹೆಚ್‌ಎಸ್‌ಆರ್ ಲೇಔಟ್ ಆರ್‌ಎಸ್‌ಎಸ್‌ನಿಂದ ಹೆಚ್‌ಎಸ್‌ಆರ್ 24ನೇ ಮುಖ್ಯರಸ್ತೆ, 22ನೇ ಅಡ್ಡರಸ್ತೆ.**
2. **220/66/11 ಕೆ.ವಿ ಹೆಚ್‌ಎಸ್‌ಆರ್ ಲೇಔಟ್ ಆರ್‌ಎಸ್‌ಎಸ್‌ನಿಂದ ಹೆಚ್‌ಎಸ್‌ಆರ್ 19ನೇ ಮುಖ್ಯರಸ್ತೆ,**
3. **220/66/11 ಕೆ.ವಿ ಹೆಚ್‌ಎಸ್‌ಆರ್ ಲೇಔಟ್ ಆರ್‌ಎಸ್‌ಎಸ್‌ನಿಂದ ಔಟರ್ ರಿಂಗ್ ರಸ್ತೆ ಕಡೆಗೆ**
4. **220/66/11 ಕೆ.ವಿ ಹೆಚ್‌ಎಸ್‌ಆರ್ ಲೇಔಟ್ ಆರ್‌ಎಸ್‌ಎಸ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಆರ್‌ಎಸ್‌ಎಸ್.**

ಆದುದರಿಂದ ಈ ಮೇಲ್ಕಂಡ 220 ಕೆ.ವಿ. ಕೆ.ವಿ. ಭೂಗತ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಯಾವುದೇ ಸಾರ್ವಜನಿಕರು / ಬೃ.ಬೆಂ.ಮ.ಪಾಲಿಕೆ / ಸರ್ಕಾರಿ ಸಂಸ್ಥೆಗಳು / ಪಟ್ಟಣ ಪಂಚಾಯಿತಿ / ಗ್ರಾಮ ಪಂಚಾಯಿತಿ / GAIL / BDA / BWSSB / ಖಾಸಗಿ ಸಂಸ್ಥೆ / ರೈತರುಗಳು ರಸ್ತೆಯನ್ನು ಅಗೆಯಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗುವುದಿಲ್ಲ ಹಾಗೂ ಇದರಿಂದ ಆಗುವ ಕವಿಪ್ರನಿನಿಯ ಆಸ್ತಿ ಹಾಗೂ ಕಂದಾಯ ನಷ್ಟವನ್ನು ಸಂಬಂಧಪಟ್ಟವರೇ ಭರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/-, ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಯೋಜನೆ ವಿಭಾಗ ದಕ್ಷಿಣ, ಕವಿಪ್ರನಿನಿ,
ಆನಂದರಾವ್ ವೃತ್ತ, ಬೆಂಗಳೂರು-09.

ನಗರಸಭೆ
ಚಿಂತಾಮಣಿ
ಟೆಂಡರ್ ಪ್ರಕಟಣೆ

ಇ-ಪ್ರಕ್ಯೂರ್‌ಮೆಂಟ್ ಮೂಲಕ ಕೆಜಿ, ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/54/2025–26 ದಿನಾಂಕ: 22.07.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ: DMA/2025-26/BD/WORK_INDENT46996 , DMA/2025-26/BD/WORK_INDENT40504, DMA/2025-26/BD/WORK_INDENT40383 ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿರುತ್ತಾರೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು.

ಸೂಚನೆಗಳು: ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 22.08.2025 ರಂದು ಸಮಯ ಸಂಜೆ 17:30 ಗಂಟೆಯವರೆಗೆ** ತಾಂತ್ರಿಕ ಬಿಡ್ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ: 25.08.2025 ರಂದು ಸಮಯ ಬೆಳಗ್ಗೆ 11:00 ಗಂಟೆಗೆ** ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 29.08.2025 ರಂದು ಸಮಯ ಬೆಳಗ್ಗೆ 11:00 ಗಂಟೆಗೆ ತೆರೆಯಲಾಗುವುದು.**

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:148/ಕೆಎಸ್‌ಎಂಸಿಎ/2025–26

ದೇವದಾಸಿಯರ ಸಮಸ್ಯೆ ಕುರಿತು ಗುರುವಾರ ಸುದ್ದಿಗೋಷ್ಠಿ ನಡೆಸಲು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಗುಂಪಾಗಿ ಫೋಟೊ ತೆಗೆಸಿಕೊಂಡರು.

‘ಮರುಸಮೀಕ್ಷೆಗೆ ವಯೋಮಿತಿ ನಿಗದಿ ಬೇಡ’

ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವದಾಸಿಯರ ಮರುಸಮೀಕ್ಷೆಗೆ 45 ವರ್ಷ ಆದವರನ್ನು ಮಾತ್ರ ಪರಿಗಣಿಸುವ ನಿರ್ಧಾರವನ್ನು ಸರ್ಕಾರ ಕೈಬಿಡಬೇಕು. ಯಾವುದೇ ರೀತಿಯ ವಯೋಮಿತಿ ನಿಗದಿಪಡಿಸದೇ, ಎಲ್ಲ ದೇವದಾಸಿಯರನ್ನು ಪರಿಗಣಿಸಬೇಕು’ ಎಂದು ಮಾಜಿ ಸಚಿವ ಎಚ್‌.ಆಂಜನೇಯ ಆಗ್ರಹಿಸಿದರು.

ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಈ ಹಿಂದೆ ನಡೆದ ಸಮೀಕ್ಷೆಯಲ್ಲಿ 46,660 ದೇವದಾಸಿಯರನ್ನು ಗುರುತಿಸಲಾಗಿದೆ. ಹಲವಾರು ದೇವದಾಸಿಯರು ಕಾರಣಾಂತರಗಳಿಂದ ಹಿಂದೆ ನಡೆದ ಸಮೀಕ್ಷೆಯಿಂದ ಹೊರಗೆ ಉಳಿದಿದ್ದಾರೆ. ಇದರಿಂದ ಅವರಿಗೆ ಯಾವುದೇ ರೀತಿಯ ಸರ್ಕಾರಿ ಯೋಜನೆಗಳು ಸಿಗುತ್ತಿಲ್ಲ. ಮರುಸಮೀಕ್ಷೆ ನಡೆಸುತ್ತಿರುವ ಸಂದರ್ಭದಲ್ಲಿ ವಯೋಮಿತಿ ನಿಗದಿಪಡಿಸಿರುವುದು ಸರಿಯಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮರುಸಮೀಕ್ಷೆಯನ್ನು ಕಚೇರಿಯಲ್ಲಿ ಕುಳಿತು ಮಾಡಬಾರದು. ರಾಜ್ಯದ 15 ಜಿಲ್ಲೆಗಳಲ್ಲಿರುವ ದೇವದಾಸಿಯರ ಪ್ರತಿಯೊಂದು ಮನೆಗೆ ತೆರಳಿ ಸಮೀಕ್ಷೆ ನಡೆಸಬೇಕು. ಇದರಲ್ಲಿ ಸ್ಥಳೀಯ ಆಡಳಿತ, ಸಮುದಾಯ ಹಾಗೂ ಸಂಘಟನೆಗಳ ನೆರವು ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ವೇದಿಕೆಯ ರಾಜ್ಯ ಘಟಕದ ಸಂಚಾಲಕ ಯಮನೂರಪ್ಪ ಮಾತನಾಡಿ, ‘ದೇವದಾಸಿಯರ ಮರು ಸಮೀಕ್ಷೆ ಪ್ರಕ್ರಿಯೆ ಭಾಗವಾಗಿ ವಿವಿಧ ಹಂತಗಳಲ್ಲಿ ರಚಿಸುವ ಸಮಿತಿಗಳಲ್ಲಿ ದೇವದಾಸಿಯರು ಹಾಗೂ ಅವರ ಮಕ್ಕಳನ್ನು ಆದ್ಯತೆ ಮೇರೆಗೆ ಪರಿಗಣಿಸಬೇಕು. ದೇವದಾಸಿಯರ ಪರವಾಗಿ ನಿರಂತರವಾಗಿ ಕೆಲಸ ಮಾಡುವ ಸಂಘ–ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ರಾಜ್ಯ ಸಮಿತಿಯನ್ನು ರಚಿಸಬೇಕು’ ಎಂದು ಆಗ್ರಹಿಸಿದರು.

‘ನಿರ್ದಿಷ್ಟ ಮಾನದಂಡಗಳು ಮತ್ತು ಕಾರ್ಯಸೂಚಿ ಒಳಗೊಂಡ ಮಾರ್ಗಸೂಚಿಯನ್ನು ಮರು ಸಮೀಕ್ಷೆಗೆ ಸಿದ್ಧಪಡಿಸಬೇಕು, ಸಮೀಕ್ಷೆ ಕೈಗೊಳ್ಳುವವರಿಗೆ ಸಮರ್ಪಕವಾದ ತರಬೇತಿ ನೀಡಬೇಕು. ಕಾಲಮಿತಿಯಲ್ಲಿ ಸಮೀಕ್ಷೆ ಪೂರ್ಣಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ದೇವದಾಸಿಯರ ಮಕ್ಕಳ ಮದುವೆಗೆ ಸರ್ಕಾರ ನಿಗದಿಪಡಿಸಿರುವ ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಸಿ ಒಂದು ವರ್ಷವಾದರೂ ಪ್ರೋತ್ಸಾಹ ಧನ ನೀಡಿಲ್ಲ. ಅಧಿಕಾರಿಗಳನ್ನು ಪ್ರಶ್ನಿಸಿದರೆ ಅನುದಾನದ ಕೊರತೆ ಇದೆ ಎಂಬ ಉತ್ತರ ನೀಡುತ್ತಿದ್ದಾರೆ’ ಎಂದು ಆರೋಪಿಸಿದರು.

ವೇದಿಕೆಯ ಪ್ರಧಾನ ಕಾರ್ಯದರ್ಶಿ ರೇಣುಕಾ, ಸದಸ್ಯ ಜಡೆಮ್ಮ ಸುದ್ದಿಗೋಷ್ಠಿಯಲ್ಲಿದ್ದರು.

ಯಶವಂತಪುರ–ತಾಳಗುಪ್ಪ ನಡುವೆ ವಿಶೇಷ ರೈಲು

ಬೆಂಗಳೂರು: ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಯಶವಂತಪುರ–ತಾಳಗುಪ್ಪ ನಡುವೆ ಎರಡೂ ಕಡೆಯಿಂದ ತಲಾ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಯಶವಂತಪುರದಿಂದ ಆಗಸ್ಟ್ 1 ಮತ್ತು 8ರಂದು ರಾತ್ರಿ 10.30ಕ್ಕೆ ರೈಲು ಹೊರಡಲಿದೆ. ಮರುದಿನ ಬೆಳಿಗ್ಗೆ 4.15ಕ್ಕೆ ತಾಳಗುಪ್ಪ ತಲುಪಲಿದೆ. ತಾಳಗುಪ್ಪದಿಂದ ಆಗಸ್ಟ್ 2 ಮತ್ತು 9ರಂದು ಬೆಳಿಗ್ಗೆ 8.15ಕ್ಕೆ ಹೊರಡಲಿದೆ. ಅದೇ ದಿನ ಸಂಜೆ 4.30ಕ್ಕೆ ಯಶವಂತಪುರ ತಲುಪಲಿದೆ.

ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ ಟೌನ್, ಆನಂದಪುರ, ಸಾಗರ ಜಂಬಗಾರುಗಳಲ್ಲಿ ನಿಲುಗಡೆ ಮಾಡಲಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಐಎಫ್‌ಎಸ್ ಅಧಿಕಾರಿ ಶ್ರೀನಿವಾಸುಲು ಅವರನ್ನು ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ.

ವಿ.ವಿಜಯ್ ಮೋಹನ್ ರಾಜ್ ಅವರನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ವಿಶ್ವಜಿತ್ ಮಿಶ್ರಾ ಅವರಿಗೆ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

TEXMO®
ಬೋರ್‌ವೆಲ್ ಸಬ್‌ಮರ್ಸಿಬಲ್‌ಗಳು • ಸಿಂಗಲ್ ಫೇಸ್ ಗೃಹೋಪಯೋಗಿ ಪಂಪುಗಳು • ಸಿಂಗಲ್ ಫೇಸ್ ಜೆಟ್ ಪಂಪುಗಳು
AQUA GROUP
ನಿಮ್ಮ ವಿಶ್ವಸನೀಯ ಪಂಪ್‌ಗಳು
AQUATEX®
ಕೃಷಿಮೊನೊಬ್ಲಾಕ್ • ತೆರೆದ ಬಾವಿ ಸಬ್‌ಮರ್ಸಿಬಲ್‌ಗಳು • ವಿದ್ಯುತ್ ಮೋಟರ್‌ಗಳು
• ಅಕ್ವಾಟೆಕ್ಸ್ ಕೇಬಲ್ • ಅಕ್ವಾಟೆಕ್ಸ್ ಪ್ಯಾನೆಲ್‌ಬೋರ್ಡ್ • ಅಕ್ವಾಟೆಕ್ಸ್ ಹೆಚ್‌ಡಿಪಿಇ ಪೈಪ್ಸ್ • ಅಕ್ವಾಟೆಕ್ಸ್ ಕಾಲಮ್ ಪೈಪ್ಸ್
SERVICE 24 HOURS
For Aquasub Engineering TÜV SÜD ISO 9001-2008
ಅಕ್ವಾಸಬ್ ಇಂಜಿನಿಯರಿಂಗ್ ಮತ್ತು ಅಕ್ವಾಪಂಪ್ ಇಂಡಸ್ಟ್ರೀಸ್
ಪ್ರಧಾನ ಕಛೇರಿ : ಕೊಯಮತ್ತೂರು ಬೆಂಗಳೂರು ✆:080–23381891 ಹುಬ್ಬಳ್ಳಿ ✆:8217863378
More Stars More Savings Energy Savings Guide
ಅಧಿಕೃತ ಡೀಲರ್ಸ್: ಬೆಂಗಳೂರು: ಶಾಂತಲಕ್ಷ್ಮಿ ಎಲೆಕ್ಟ್ರಿಕಲ್ಸ್ ✆9845505597 । ಗುರು ಅಸೋಸಿಯೇಟ್ಸ್ 9480826460 । ಜೆ.ವಿ.ಬಿ. ಫ್ಲೋಟೆಕ್ 9845446176 । ಎ.ಎನ್. ಎಂಟರ್‌ಪ್ರೈಸಸ್ ✆9901163007 । ಸಿಂಟ್ರಾನ್‌ಸೇಲ್ಸ್ ಕಾರ್ಪೋರೇಷನ್ ✆9844425588 । ತಿರುಮಲ ಎಂಟರ್‌ಪ್ರೈಸಸ್ ✆9886091121 । ಶ್ರೀ ಮಂಜುನಾಥ ಏಜೆನ್ಸಿಸ್ ✆7411551876 । ಇ.ಎಸ್.ಪಿ.ಆರ್. ಎಲೆಕ್ಟ್ರಿಕಲ್ ಸರ್ವೀಸ್ಸ್ ✆9845469172 । ವಿನಾಯಕ ಮಾರ್ಕೆಟಿಂಗ್ ✆9448379398 । ವಿಎಸ್‌ಪಿ ಪಂಪ್ಸ್ ✆9880165527 । ಎಂಎಸ್ ಆಗ್ರೋಟೆಕ್ ✆9740166606 । ಮಂಜುನಾಥ್ ಎಂಟರ್ ಪ್ರೈಸಸ್ ✆9880871679 । ರಾಮನಗರ : ಮಂಜುಶ್ರೀ ಎಲೆಕ್ಟ್ರಿಕಲ್ಸ್ ✆9242220554 । ರಾಜಾನಕುಂಟೆ : ಮಂಜುನಾಥ ಟ್ರೇಡರ್ಸ್ ✆9343736456 । ದೇವನಹಳ್ಳಿ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 । ವಿಜಯಪುರ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 । ಹೊಸಕೋಟೆ : ಪ್ರಭು ಎಲೆಕ್ಟ್ರಿಕಲ್ಸ್ ✆9448081876 । ಕನಕಪುರ : ಶ್ರೀ ಮಂಜುನಾಥೇಶ್ವರ ಎಂಟರ್‌ಪ್ರೈಸಸ್ ✆9972049822 । ಕೆಂಗೇರಿ: ಎಸ್.ಎಲ್.ವಿ. ಪಂಪ್ಸ್ ✆9448513248 । ಪೀಣ್ಯ: ವಿನಾಯಕ ಎಂಟರ್‌ಪ್ರೈಸಸ್ ✆9741414592 । ನೆಲಮಂಗಲ : ಗುರು ಅಸೋಸಿಯೆಟ್ಸ್ ✆9448373404 । ಕೋಲಾರ : ಉಮಾ ಎಲೆಕ್ಟ್ರಿಕಲ್ಸ್ ✆9902808605 । ಓಂಕಾರ ಏಜೆನ್ಸಿಸ್ ✆9880190749 । ಶ್ರೀನಿವಾಸಪುರ : ವಿಜಯಲಕ್ಷ್ಮಿ ಏಜೆನ್ಸಿಸ್ ✆9845141512 । ಬಂಗಾರಪೇಟೆ : ವರದರಾಜ ಏಜೆಸ್ಸಿಸ್ ✆9743354145 । ಬಾಗೇಪಲ್ಲಿ : ಮಾರುತಿ ಎಂಟರ್‌ಪ್ರೈಸಸ್ ✆9844406508 । ಚಿಕ್ಕಬಳ್ಳಾಪುರ : ಮಂಜುನಾಥ ಎಲೆಕ್ಟ್ರಿಕಲ್ಸ್ ✆9448886619 । ಚಿಂತಾಮಣಿ : ರಾಜೇಶ್ವರಿ ಟ್ರೇಡರ್ಸ್ ✆9880156246 । ಶಿಡ್ಲಘಟ್ಟ : ರಾಜೇಶ್ವರಿ ಎಂಟರ್‌ಪ್ರೈಸಸ್ ✆9880856246 । ಗುಡಿಬಂಡೆ : ನಾಗರಾಜ ಎಂಟರ್‌ಪ್ರೈಸಸ್ ✆9880104195 । ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ಸ್ಟೋರ್ಸ್ ✆9448664483 । ಹೆಚ್.ಕ್ರಾಸ್ : ಉಮಾ ಇಂನಿಯರಿಂಗ್ ವರ್ಕ್ಸ್ ✆9448165195 । ಗೌರಿಬಿದನೂರು : ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ಸ್ ✆9448314982 । ಮಾಲೂರು : ಶ್ರೀದೇವಿ ಎಲೆಕ್ಟ್ರಿಕಲ್ಸ್ ✆9961320501 । ಚೇಳೂರು : ಮಾರುತಿ ಎಲೆಕ್ಟ್ರಿಕಲ್ಸ್ ✆9448950429 । ತುಮಕೂರು : ಗುರು ಏಜೆನ್ಸಿಸ್ ✆8095242587 । ಶಿರಾ : ಗುರು ಎಂಟರ್ ಪ್ರೈಸಸ್ ✆9448093767 । ಮಧುಗಿರಿ : ಪ್ರಸಾದ ಎಂಟರ್‌ಪ್ರೈಸಸ್ ✆9448250601 । ತಿಪಟೂರು : ಶ್ರೀನಿವಾಸ ಎಂಟರ್‌ಪ್ರೈಸಸ್ ✆9448106005 । ಚಿಕ್ಕನಾಯಕನಹಳ್ಳಿ : ಸಿದ್ಧಶ್ರೀ ಟ್ರೇಡರ್ ✆7624844129 । ಪೇರಸಂದ್ರಾ : ಶ್ರೀ ನಂಜುಡೇಶ್ವರ ಎಂಟರ್‌ಪ್ರೈಸಸ್ ✆9886534395 । ದೊಡ್ಡಬಳ್ಳಾಪುರ : ಕಾರ್ಪರ್ತಿ ಏಜೆನ್ಸಿಸ್ ✆9880165527 । ವಿ.ಎಸ್.ಪಿ ಪಂಪ್ಸ್ ✆9448379398 । ಮುಳಬಾಗಿಲು : ರೆಡ್ಡಿ ಎಲೆಕ್ಟ್ರಿಕಲ್ಸ್ ✆9986995862 ।

ಕಾರ್ಯಕ್ರಮದಲ್ಲಿ ಬಿ.ಎಸ್‌.ಯಡಿಯೂರಪ್ಪ ಹಾಗೂ ಎಸ್‌.ಆರ್‌.ವಿಶ್ವನಾಥ್ ಅವರು ಫಲಾನುಭವಿಗಳಿಗೆ ಹೊಲಿಗೆಯಂತ್ರ ವಿತರಿಸಿದರು. ವಾಣಿಶ್ರೀ ವಿಶ್ವನಾಥ್ ಇದ್ದರು.

ತ್ರಿಚಕ್ರ ವಾಹನ, ಹೊಲಿಗೆ ಯಂತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರ ಹುಟ್ಟುಹಬ್ಬದ ಪ್ರಯುಕ್ತ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ವತಿಯಿಂದ ಸಿಂಗನಾಯಕನಹಳ್ಳಿಯ ಹೋಟೆಲ್‌ನಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ತ್ರಿಚಕ್ರವಾಹನ, ದಿನಪತ್ರಿಕೆಗಳ ವಿತರಕರಿಗೆ ಸೈಕಲ್, ಮಹಿಳೆಯರಿಗೆ ಹೊಲಿಗೆಯಂತ್ರ, ಬ್ಯುಟಿಷಿಯನ್ ಕಿಟ್, ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಅಂಗನವಾಡಿ ಕೇಂದ್ರಗಳಿಗೆ ಟಿ.ವಿ, ಶಾಲಾ-ಕಾಲೇಜುಗಳಿಗೆ ಎಲ್‌ಇಡಿ ಪರದೆ, ಔಷಧಿ, ಟೈಲ್ಸ್ ಮತ್ತು ಕಟ್ಟಡ ಕಾರ್ಮಿಕರಿಗೆ ಕಿಟ್, ಕನ್ನಡಕ ಸೇರಿ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ ಕಾರುಗಳನ್ನು ವಿತರಿಸಲಾಯಿತು.

ಆರೋಗ್ಯ ಶಿಬಿರ ಆಯೋಜಿಸಲಾಗಿತ್ತು. ರಕ್ತದಾನ ಶಿಬಿರದಲ್ಲಿ 1210 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ಶಾಸಕ ವಿಶ್ವನಾಥ್ ಮಾತನಾಡಿ, ‘ಹುಟ್ಟುಹಬ್ಬದ ನೆಪದಲ್ಲಿ ಬಡಜನರಿಗೆ ಹಾಗೂ ಫಲಾನುಭವಿಗಳಿಗೆ ಹಲವು ಸೌಲಭ್ಯಗಳನ್ನು ವಿತರಿಸಿರುವುದು ಸಂತಸ ತಂದಿದೆ. ಜನರ ಆಶೀರ್ವಾದವಿದ್ದರೆ ಕ್ಷೇತ್ರವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸುವ ಮೂಲಕ ಮಾದರಿ ಕ್ಷೇತ್ರವನ್ನಾಗಿ ಪರಿವರ್ತಿಸಲು ಸಂಕಲ್ಪ ಮಾಡಲಾಗುವುದು’ ಎಂದು ತಿಳಿಸಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ, ಸಚಿವ ಬೈರತಿ ಸುರೇಶ್, ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಮುಖಂಡರಾದ ದಿಬ್ಬೂರು ಜಯಣ್ಣ, ಎಸ್‌.ಎನ್‌.ರಾಜಣ್ಣ, ಅಲೋಕ್ ವಿಶ್ವನಾಥ್, ಸತೀಶ್ ಕಡತನಮಲೆ, ಡಿ.ಜಿ.ಅಪ್ಪಯಣ್ಣ, ಅದ್ದೆ ವಿಶ್ವನಾಥಪುರ ಮಂಜುನಾಥ್, ಟಿ.ಮುನಿರೆಡ್ಡಿ, ಎಸ್‌.ಜಿ.ನರಸಿಂಹಮೂರ್ತಿ, ಎಸ್‌.ಜಿ.ಪ್ರಶಾಂತ್ ರೆಡ್ಡಿ ಹಾಜರಿದ್ದರು.

ಜ್ಞಾನಭಾರತಿ: ಸಂಚಾರ ನಿರ್ಬಂಧಿಸಲು ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಆವರಣದಲ್ಲಿ ಹೆಚ್ಚಿನ ವಾಹನ ದಟ್ಟಣೆಯಿಂದ ಶಬ್ದ ಮಾಲಿನ್ಯ ಹಾಗೂ ಅಪಘಾತ ಪ್ರಕರಣಗಳು ಹೆಚ್ಚಾಗಿರುವುದರಿಂದ ವಾಹನ ಸಂಚಾರ ನಿರ್ಬಂಧಿಸಲು ಸರ್ಕಾರ ಹಾಗೂ ಪೊಲೀಸ್ ಇಲಾಖೆಗೆ ಪತ್ರ ಬರೆಯಲು ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಜ್ಞಾನಭಾರತಿ ಆವರಣದಲ್ಲಿ ನಿತ್ಯ 25 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿದ್ದು, ವಾಹನ ದಟ್ಟಣೆಯಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಆಗುತ್ತಿದೆ. ಜೊತೆಗೆ ಇಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಈ ನಿಟ್ಟಿನಲ್ಲಿ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ, ವಿದ್ಯಾರ್ಥಿಗಳು ಹಾಗೂ ಶೈಕ್ಷಣಿಕ ಚಟುವಟಿಕೆಗಳ ಹಿತದೃಷ್ಟಿಯಿಂದ ನಾಗರಬಾವಿ ಕಡೆಯಿಂದ ವಿಶ್ವವಿದ್ಯಾಲಯದೊಳಗೆ ಹಾದು ಹೋಗುವ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಸಂಚಾರ ನಿರ್ಬಂಧಿಸುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಜ್ಞಾನಭಾರತಿ ಆವರಣದಲ್ಲಿ ಸಂಘ–ಸಂಸ್ಥೆಗಳು ಹಾಗೂ ವ್ಯಕ್ತಿಗಳು ಗಿಡಗಳನ್ನು ನೆಡುವುದಾದರೆ ಸಿಂಡಿಕೇಟ್‌ನ ಅನುಮತಿ ಪಡೆದುಕೊಳ್ಳಬೇಕು. ವಾಯು ವಿಹಾರಿಗಳ ಸಂಘ ಸೇರಿದಂತೆ ಸಂಘ ಸಂಸ್ಥೆಗಳು ಜ್ಞಾನಭಾರತಿ ಆವರಣದಲ್ಲಿ ಯಾವುದೇ ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧಿಸಲು ನಿರ್ಣಯ ಕೈಗೊಳ್ಳಲಾಗಿದೆ. ಅನಧಿಕೃತವಾಗಿ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡರೆ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ದೂರು ನೀಡಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ.

‘ಮೆಣಸಿನ ರಾಣಿ’ ಎಂದೇ ಪ್ರಸಿದ್ಧವಾಗಿರುವ ರಾಣಿ ಚೆನ್ನಭೈರಾದೇವಿ ಅವರ ಸ್ಮರಣಾರ್ಥ ಅಂಚೆ ಚೀಟಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ಗುರುವಾರ ಬಿಡುಗಡೆ ಮಾಡಿದರು.

ಕುಸ್ತಿ ದಿಗ್ಗಜ ಹಲ್ಕ್ ಹಾಗನ್ ನಿಧನ

ಮಿಯಾಮಿ (ಎಎಫ್‌ಪಿ): ವೃತ್ತಿಪರ ಕುಸ್ತಿಯ ದಿಗ್ಗಜ ಹಲ್ಕ್ ಹಾಗನ್ (71) ಗುರುವಾರ ನಿಧನರಾದರು ಎಂದು ಅಮೆರಿಕದ ಮಾಧ್ಯಮಗಳು ವರದಿಮಾಡಿವೆ.

ಹಲ್ಕ್ ಹಾಗನ್

6.7 ಅಡಿ ಎತ್ತರದ ಆಜಾನುಬಾಹು ಆಗಿದ್ದ ಹಲ್ಕ್ ಅವರ ಹ್ಯಾಂಡಲ್‌ಬಾರ್ ಮೀಸೆ ಮತ್ತು ಕುಸ್ತಿಯ ಶೈಲಿ ಜನಪ್ರಿಯವಾಗಿದ್ದವು. ಅವರು ಫ್ಲಾರಿಡಾದಲ್ಲಿರುವ ತಮ್ಮ ಮನೆಯಲ್ಲಿಯೇ ‘ಹೃದಯಸ್ತಂಭನ’ದಿಂದಾಗಿ ನಿಧನರಾದರು ಎಂದು ಮೂಲಗಳು ತಿಳಿಸಿವೆ.

ಹಲ್ಕ್ ಅವರ ಮೂಲ ಹೆಸರು ಟೆರಿ ಬೊಲಿ. ವಿಶ್ವ ರೆಸ್ಲಿಂಗ್ ಫೆಡರೇಷನ್ (ಡಬ್ಲ್ಯುಡಬ್ಲ್ಯುಎಫ್ ಈಗ ಡಬ್ಲ್ಯುಡಬ್ಲ್ಯುಇ) ಆಯೋಜಿಸುವ ಪ್ರೊ ರೆಸ್ಲಿಂಗ್‌ನಲ್ಲಿ 1979ರಲ್ಲಿ ಮೊದಲ ಬಾರಿಗೆ ಅವರು ಕಣಕ್ಕಿಳಿದಿದ್ದರು. ಆಗಿನ ಪ್ರಸಿದ್ಧ ಕುಸ್ತಿಪಟು ಗಳಾದ ಆ್ಯಂಡ್ರೆ ದ ಜೈಂಟ್ ಮತ್ತು ರಾಡಿ ಪೈಪರ್ ಅವರೊಂದಿಗೆ ಪೈಪೋಟಿ ನಡೆಸಿದರು. ಹಲ್ಕ್ ಅವರು ಪ್ರೊ ರೆಸ್ಲಿಂಗ್ ಅಷ್ಟೇ ಅಲ್ಲ, ಸಿನಿಮಾ ಮತ್ತು ಕಿರುತೆರೆ ಮೂಲಕವೂ ಜನಪ್ರಿಯರಾಗಿದ್ದರು. ‘ರಾಕಿ 3’, ನೋ ಹೋಲ್ಡ್ಸ್ ಬಾರ್ಡ್‌’ ಚಿತ್ರಗಳು ಮತ್ತು ‘ಬೇ ವಾಚ್’ ಟಿ.ವಿ. ಶೋನಲ್ಲಿ ಅವರು ನಟಿಸಿದ್ದರು. 2005ರಲ್ಲಿ ಅವರಿಗೆ ಡಬ್ಲ್ಯುಡಬ್ಲ್ಯುಇ ಹಾಲ್ ಆಫ್ ಫೇಮ್ ಗೌರವ ನೀಡಲಾಗಿತ್ತು.

HARSHA
Happiness. Redefined.
3+ ದಶಕಗಳು. 10 ಲಕ್ಷ+ ಸಂತೃಪ್ತ ಗ್ರಾಹಕರು.
ಬೆಂಗಳೂರಿನ
ಡಿಜಿಟಲ್ ಹಾಗೂ ಗೃಹೋಪಕರಣಗಳ
ವಿನೂತನ ಮಳಿಗೆ

ಇದೀಗ @ ಉಳ್ಳಾಲ್ ಮುಖ್ಯ ರಸ್ತೆ • ಇದೀಗ @ ಉಳ್ಳಾಲ್ ಮುಖ್ಯ ರಸ್ತೆ
ಉದ್ಘಾಟಕರು:
ಶ್ರೀ ಕಪಿಲ್ ಅಗರ್ವಾಲ್
ಆಡಳಿತ ನಿರ್ದೇಶಕರು - ಸೇಲ್ಸ್, ಲೀಭೇರ್ ಅಪ್ಲೈನ್ಸಸ್ ಇಂಡಿಯಾ ಪ್ರೈ. ಲಿ.
ಮುಖ್ಯ ಅತಿಥಿ:
ಶ್ರೀ ಬಿ. ಸಿದ್ದೇಗೌಡ
ಕ್ಲಾಸ್ -1, PWD ಕಾಂಟ್ರಾಕ್ಟರ್, ಬೆಂಗಳೂರು
ಶುಕ್ರವಾರ, 25 ಜುಲೈ 2025 ಸಂಜೆ 4:00 ಗಂಟೆಗೆ
‘ಹರ್ಷ’, ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಬೆಂಗಳೂರು
‘ಹರ್ಷ’, ಇದೀಗ ನಿಮಗೆ ಇನ್ನಷ್ಟು ಹತ್ತಿರವಾಗುವ ಸಲುವಾಗಿ ಉಳ್ಳಾಲ್ ಮುಖ್ಯ ರಸ್ತೆಯಲ್ಲಿ ಶುಭಾರಂಭಗೊಳ್ಳಲಿದೆ, ಡಿಜಿಟಲ್ ಹಾಗೂ ಗೃಹೋಪಕರಣಗಳ ವಿನೂತನ ಮಳಿಗೆ. ‘ಹರ್ಷ’ದ ಈ ಹೊಸ ಮಳಿಗೆಯ ಉದ್ಘಾಟನಾ ಸಮಾರಂಭಕ್ಕೆ ನಿಮಗಿದೋ ನಮ್ಮೊಲವಿನ ಆಹ್ವಾನ. ಡಿಜಿಟಲ್, ಗೃಹೋಪಕರಣ, ಕಿಚನ್ ಹಾಗೂ ಇಲೆಕ್ಟ್ರಿಕ್ ಉಪಕರಣಗಳ ಉತ್ಕೃಷ್ಟ ಸಂಗ್ರಹ ಜೊತೆಗೆ ಸುಲಭ ಹಾಗೂ ಸ್ಮಾರ್ಟ್ ಶಾಪಿಂಗ್ ಅನುಭವದೊಂದಿಗೆ ನಿಮ್ಮೆಲ್ಲಾ ಆಕಾಂಕ್ಷೆಗಳನ್ನು ಸಾಕಾರಗೊಳಿಸಿ. ಬನ್ನಿ, ನಿಮ್ಮನ್ನು ಸ್ವಾಗತಿಸಲು ‘ಹರ್ಷ’ ಬಳಗ ಸನ್ನದ್ಧವಾಗಿದೆ.
ಉಡುಪಿ । ಬ್ರಹ್ಮಾವರ । ಕುಂದಾಪುರ । ಸುರತ್ಕಲ್ । ಮಂಗಳೂರು । ಪುತ್ತೂರು । ಶಿವಮೊಗ್ಗ । ಸಾಗರ । ಹುಬ್ಬಳ್ಳಿ । ಧಾರವಾಡ । ಬೆಳಗಾವಿ । ಕಲಬುರಗಿ । ಮೈಸೂರು । ಬೆಂಗಳೂರು
eHarsha.India digital_harsha www.harshaindia.com

ಪೇಂಟರ್ ವೃತ್ತಿಯಿಂದ ನಿರ್ದೇಶನದವರೆಗೆ

ರಾಜ್ ಬಿ.ಶೆಟ್ಟಿ ತಮ್ಮ ಲೈಟರ್ ಬುದ್ಧ ಫಿಲಂಸ್‌ನಡಿ ನಿರ್ಮಾಣ ಮಾಡಿರುವ 'ಸು ಫ್ರಂ ಸೋ' (ಸುಲೋಚನಾ ಫ್ರಂ ಸೋಮೇಶ್ವರ) ಸಿನಿಮಾದ ಸಾರಥಿ ಜೆ.ಪಿ.ತೂಮಿನಾಡು. ತುಳು ರಂಗಭೂಮಿಯಿಂದ ಸಿನಿಮಾ ರಂಗಕ್ಕೆ ಹೆಜ್ಜೆ ಇಟ್ಟ ಇವರು ರಾಜ್ ಬಿ.ಶೆಟ್ಟಿ ಅವರ ತಂಡದಲ್ಲೇ ಗುರುತಿಸಿಕೊಂಡವರು. 'ಸು ಫ್ರಂ ಸೋ'ನಲ್ಲಿ ನಿರ್ದೇಶನದ ಜೊತೆಗೆ ನಟನೆಯ ಅನುಭವವನ್ನು ಅವರಿಲ್ಲಿ ಹಂಚಿಕೊಂಡಿದ್ದಾರೆ...

• ಅಭಿಲಾಷ್ ಪಿ.ಎಸ್.

• ನಿಮ್ಮ ಹಿನ್ನೆಲೆ...

ನಾನು ಮಂಗಳೂರಿಗೆ ಹತ್ತಿರವಿರುವ ತೂಮಿನಾಡು ಊರಿನವನು. ಇದು ಕರ್ನಾಟಕ–ಕೇರಳ ಗಡಿ ಭಾಗ. ಒಂಬತ್ತನೇ ತರಗತಿಯವರೆಗೆ ಕಲಿತ ನಾನು ಮನೆಗಳಿಗೆ ಬಣ್ಣಬಳಿಯುವ ಪೇಂಟರ್ ಆಗಿ ಕೆಲಸ ಮಾಡುತ್ತಿದ್ದೆ. ನಮ್ಮ ಊರಿನಲ್ಲಿ ಮಹಾಕಾಳಿ ಭಜನಾ ಮಂದಿರವಿದೆ. ನವರಾತ್ರಿಗೆ ನಡೆಯುವ ಕಾರ್ಯಕ್ರಮದಲ್ಲಿ ಹಾಸ್ಯ ಪ್ರಹಸನ, ಹಾಸ್ಯಮಯ ನಾಟಕಗಳನ್ನು ಮಾಡುತ್ತಿದ್ದೆ. ನಟ ಪ್ರಕಾಶ್ ತೂಮಿನಾಡು ಹಾಗೂ ನಾನು ಒಂದೇ ಊರಿನವರು. ನನ್ನ ನಟನೆಯನ್ನು ನೋಡಿ ಪ್ರಕಾಶಣ್ಣ 'ಶಾರದಾ ಆರ್ಟ್ಸ್ ಮಂಜೇಶ್ವರ' ತಂಡಕ್ಕೆ ಸೇರಿಸಿಕೊಂಡರು. ಇಲ್ಲಿ ಬಂದ ಬಳಿಕ ನಾನು ನಾಟಕಗಳನ್ನು ಬರೆಯಲು ಆರಂಭಿಸಿದೆ. 'ನನ ದುಂಬು', 'ಉತ್ತರ ಕೊರ್ಲೆ', 'ಬಂಜಿಗ್ ಹಾಕೊಡ್ಚಿ', 'ಕೈ ಪತ್ತಿನಾರ್', 'ಕಥೆ ಎಡ್ಡೆಂಡು'... ಹೀಗೆ ಹಲವು ನಾಟಕಗಳನ್ನು ಬರೆದು ನಿರ್ದೇಶಿಸಿದೆ. 'ಕಥೆ ಎಡ್ಡೆಂಡು' ಈಗಲೂ ಓಡುತ್ತಿರುವ ನಾಟಕ.

• ಸಿನಿಮಾ ನಂಟು ಪ್ರಾರಂಭವಾಗಿದ್ದು ಹೇಗೆ?

ರಾಜ್ ಬಿ.ಶೆಟ್ಟಿ ಅವರು ತುಳು ಸಿನಿಮಾ ಮಾಡಲು ಯೋಜನೆ ರೂಪಿಸಿದ್ದರು. ತಮ್ಮ ಸಿನಿಮಾದಲ್ಲಿ ಪ್ರಕಾಶ್ ತೂಮಿನಾಡು ಅವರಿಗೆ ಒಂದು ಪಾತ್ರವನ್ನು ಆಫರ್ ಮಾಡಿದ್ದರು. ಒಂದೇ ಊರಿನವರಾಗಿದ್ದ ಕಾರಣ ಪ್ರಕಾಶಣ್ಣನ ಜೊತೆ ನಾನೂ ಹೋಗಿದ್ದೆ. ಹೀಗೆ ಒಂದು ಪಾತ್ರ ನನಗೂ ದೊರೆಯಿತು. ಕಾರಣಾಂತರಗಳಿಂದ ಆ ತುಳು ಸಿನಿಮಾ ಆಗಲಿಲ್ಲ. ಬದಲಾಗಿ ರಾಜ್ ಅವರ ಜೊತೆ ನಮ್ಮ ನಂಟು ಗಟ್ಟಿಯಾಗುತ್ತಾ ಸಾಗಿತು. 'ಒಂದು ಮೊಟ್ಟೆಯ ಕಥೆ' ಸಿನಿಮಾದಲ್ಲಿ ಸಣ್ಣದೊಂದು ಪಾತ್ರ ಮಾಡುವ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಟ್ಟೆ. ಬಳಿಕ 'ಗರುಡ ಗಮನ ವೃಷಭ ವಾಹನ', 'ಕಥಾಸಂಗಮ', 'ಸ್ವಾತಿ ಮುತ್ತಿನ ಮಳೆ ಹನಿಯೇ' ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾಗಳಲ್ಲಿ ನಟಿಸಿದೆ.

• ಸಿನಿ ಪಯಣಕ್ಕೆ ದೊಡ್ಡ ತಿರುವು ನೀಡಿದ್ದು 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಅಲ್ಲವೇ?

ಖಂಡಿತಾ ಹೌದು. ರಾಜ್ ಬಿ.ಶೆಟ್ಟಿ ಅವರೇ ಈ ಪಾತ್ರಕ್ಕೆ ನನ್ನನ್ನು ಶಿಫಾರಸು ಮಾಡಿದ್ದರು. ಈ ಪಾತ್ರದಿಂದಲೇ ಜನರು ಈಗ ನನ್ನನ್ನು ಗುರುತಿಸುತ್ತಿದ್ದಾರೆ. ಹೆಚ್ಚಿನ ತೆರೆ ಅವಧಿ ಈ ಪಾತ್ರಕ್ಕಿತ್ತು.

ನಟನೆಯ ಅನುಭವ ಇರುವ ಕಾರಣ ಮುಂದೆ ಒಳ್ಳೆಯ ಪಾತ್ರಗಳು ಬಂದರೆ ನಟನೆಯಲ್ಲಿ ಮುಂದುವರಿಯುತ್ತೇನೆ. ಒಳ್ಳೊಳ್ಳೆಯ ನಿರ್ದೇಶಕರ ಕಥೆಗಳ ಭಾಗವಾಗುವ ಆಸೆಯಿದೆ. ಜೊತೆಗೆ ಕಥೆ ಹೇಳಿ ಜನರಿಗೆ ಮನರಂಜನೆ ನೀಡಬೇಕು ಎನ್ನುವ ತುಡಿತವೂ ಅಷ್ಟೇ ಇದೆ.

• ನಿರ್ದೇಶಕನಾಗಿದ್ದು ಹೇಗೆ?

ನಾಟಕಗಳನ್ನು ನಿರ್ದೇಶಿಸುತ್ತಿರುವಾಗಲೇ ಸಿನಿಮಾ ಮಾಡಬೇಕು ಎನ್ನುವ ಹುಚ್ಚು ಇತ್ತು. ಈ ನಿಟ್ಟಿನಲ್ಲಿ ಹಲವು ಕಥೆಗಳನ್ನು ಮಾಡಿಟ್ಟುಕೊಂಡಿದ್ದೆ. ಆದರೆ ರಾಜ್ ಬಿ.ಶೆಟ್ಟಿ ಅವರನ್ನು ಭೇಟಿಯಾದ ಬಳಿಕ ನನ್ನ ಆಲೋಚನೆಗಳೆಲ್ಲವೂ ಬದಲಾದವು. ಒಂದು ಕಥೆಯನ್ನು ನೋಡುವ ದೃಷ್ಟಿಕೋನ, ಅದನ್ನು ಸೆರೆ ಹಿಡಿಯುವ ಮಾದರಿ ಎಲ್ಲವನ್ನೂ ಅವರಿಂದ ಕಲಿತೆ. ಆರೇಳು ವರ್ಷಗಳ ಮುಂಚೆ ಸಿನಿಮಾ ಕಥೆ ಬರೆಯಿರಿ ಎಂದು ರಾಜ್ ಬಿ.ಶೆಟ್ಟಿ ಅವರು ಹೇಳಿದ್ದರು. ಆಗ 'ಸು ಫ್ರಂ ಸೋ' ಸಿನಿಮಾದ ಒನ್ ಲೈನ್ ಹೇಳಿದ್ದೆ. ನಮ್ಮೂರಿನಲ್ಲೇ ನೋಡಿದ್ದ ವ್ಯಕ್ತಿಯನ್ನು ಪಾತ್ರವಾಗಿಟ್ಟುಕೊಂಡು ಕಥೆ ವಿವರಿಸಿದ್ದೆ. ನಾನು ನಿರ್ದೇಶಕನಾಗಬೇಕೆಂದೇ ಸಿನಿಮಾ ಕ್ಷೇತ್ರಕ್ಕೆ ಬಂದಿದ್ದೆ. ಈ ನಡುವೆ ಹಲವು ಸಿನಿಮಾಗಳಲ್ಲಿ ನಟಿಸುವ ಅವಕಾಶ ಸಿಕ್ಕಿತು. ನಟನೆಯ ಜೊತೆಗೆ 'ಸು ಫ್ರಂ ಸೋ' ಕೆಲಸವನ್ನು ಮುಂದುವರಿಸಿಕೊಂಡು ಬಂದಿದ್ದೆ.

• ನಿರ್ದೇಶನದ ಜೊತೆಗೆ ನಟನೆಯ ಸವಾಲು ಹೇಗಿತ್ತು?

'ಸು ಫ್ರಂ ಸೋ'ಗೆ ನಿರ್ದೇಶನದ ಯೋಚನೆಯಷ್ಟೇ ಇತ್ತು. ನಾನು ಈಗ ನಿಭಾಯಿಸಿದ 'ಅಶೋಕ' ಪಾತ್ರಕ್ಕೆ ಬೇರೆಯವರ ಹುಡುಕಾಟದಲ್ಲಿದ್ದೆ. ಕಥೆಯನ್ನು ತಂಡಕ್ಕೆ ವಿವರಿಸುತ್ತಿದ್ದಾಗ 'ಅಶೋಕ'ನ ಪಾತ್ರವನ್ನು ನೀವೇ ಮಾಡಿ ಎಂದು ರಾಜ್ ಅವರು ತಿಳಿಸಿದರು. ತಂಡವೂ ಒತ್ತಾಯಿಸಿತು. ನಿರ್ದೇಶನದ ಜೊತೆಗೆ ನಟನೆ ಯಾವತ್ತಿಗೂ ಸವಾಲೇ. ಒಬ್ಬ ನಿರ್ದೇಶಕನಿಗೆ, ಬರಹಗಾರರಿಗೆ ಏನು ಬೇಕು ಎನ್ನುವುದು ನಮ್ಮ ನಿರ್ಮಾಪಕ ರಾಜ್ ಬಿ.ಶೆಟ್ಟಿ ಅವರಿಗೆ ತಿಳಿದಿದೆ. ಅವರಿಗೆ ಸಾವಿರ ತಲೆನೋವು ಇದ್ದರೂ ಅದನ್ನು ತೋರ್ಪಡಿಸದೆ, ಮನೆಯಲ್ಲಿ ಮಕ್ಕಳನ್ನು ಸಲಹುವ ಹಿರಿಯರಂತೆ ಇದ್ದರು. ❖

• ಹೊಸ ಪ್ರಚಾರ ತಂತ್ರದ ಉದ್ದೇಶವೇನು?

ನಮ್ಮ ತಂಡ ಹೊಸತಾದರೂ ನಟರು ಅನುಭವ ಉಳ್ಳವರು. ಜೊತೆಗೆ ರಾಜ್ ಬಿ.ಶೆಟ್ಟಿ ಅವರ ಲೈಟರ್ ಬುದ್ಧ ಫಿಲ್ಮ್ಸ್ ಎಂಬ ನಿರ್ಮಾಣ ಸಂಸ್ಥೆಯ ಬೆಂಬಲವಿದೆ. ನಾವು ತಂಡವಾಗಿ ಈ ಪ್ರಚಾರ ಯೋಜನೆ ರೂಪಿಸಿದೆವು. ಸೆಲಿಬ್ರಿಟಿ ಶೋಗಳನ್ನು ಆಯೋಜಿಸಿ ಸೆಲಿಬ್ರಿಟಿಗಳು ಸಿನಿಮಾವನ್ನು ಹೊಗಳುವುದು ಸಾಮಾನ್ಯವಾಗಿದೆ. ಸಿನಿಮಾ ಒಳ್ಳೆದಿಲ್ಲದಿದ್ದರೂ ಹೊಗಳುತ್ತಾರೆ ಎಂದು ಜನರಿಗೂ ಅರಿವಾಗಿದೆ. ಹೀಗಾಗಿ ನಾವು ಜನರೇ ಸಿನಿಮಾ ಬಗ್ಗೆ ಮಾತನಾಡಲಿ ಎಂದು ಹೊಸ ಮಾದರಿ ಅನುಸರಿಸಿದೆವು. ಮಂಗಳೂರು, ಶಿವಮೊಗ್ಗ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಪೈಯ್ಡ್ ಪ್ರೀಮಿಯರ್ ಆಯೋಜಿಸಿದೆವು. ಮೈಸೂರಿನಲ್ಲಿ ಎರಡು ಶೋಗಳು ಹೌಸ್‌ಫುಲ್ ಆಗಿದ್ದವು.

'ಸ್ವಪ್ನಮಂಟಪ'ದಲ್ಲಿ ರಂಜನಿ

• ಎಪಿಎಸ್

ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ತಮ್ಮ ಅಭಿನಯದ ಮೂಲಕ ಮನಗೆದ್ದಿರುವ ನಟಿ ರಂಜನಿ ರಾಘವನ್, ನಿರ್ದೇಶಕಿಯಾಗಿಯೂ ಹೆಜ್ಜೆ ಇಟ್ಟಿದ್ದಾರೆ. ಅವರು ನಿರ್ದೇಶಿಸುತ್ತಿರುವ 'ಡಿಡಿ ಢಿಕ್ಕಿ' ಸಿನಿಮಾದ ಶೂಟಿಂಗ್ ಪ್ರಗತಿಯಲ್ಲಿದ್ದು, ಇದೇ ಸಂದರ್ಭದಲ್ಲಿ ಅವರು ನಟಿಸಿರುವ 'ಸ್ವಪ್ನಮಂಟಪ' ಸಿನಿಮಾ ಜುಲೈ 25ರಂದು ತೆರೆಕಂಡಿದೆ. ಈ ಸಿನಿಮಾ ಹಾಗೂ ನಿರ್ದೇಶನದ ಸವಾಲುಗಳ ಕುರಿತು 'ಸಿನಿಮಾ ರಂಜನೆ' ಜೊತೆಗೆ ರಂಜನಿ ಮಾತನಾಡಿದ್ದಾರೆ.

'ಪ್ರತಿಯೊಬ್ಬರಿಗೂ ಇರುವ ಒಂದು ಸಮಾನಾಂತರವಾದ ಪ್ರಪಂಚ 'ಸ್ವಪ್ನಮಂಟಪ'. ನಾವು ಒಂದು ಕಡೆ ಇದ್ದುಕೊಂಡು ಕಾಣುವ ಮತ್ತೊಂದು ಕನಸಿನ ಲೋಕವದು. ಅದು ವೃತ್ತಿ ಜೀವನದಲ್ಲಾಗಲಿ ಅಥವಾ ವೈಯಕ್ತಿಕ ಜೀವನದಲ್ಲಾಗಲಿ ಒಂದು ಹಂತಕ್ಕೆ ತಲುಪಬೇಕು ಎಂದು ಎಲ್ಲರಿಗೂ ಕನಸು ಇರುತ್ತದೆ. ಆ ಕನಸಿನ ಜಾಗ 'ಸ್ವಪ್ನಮಂಟಪ'. ಚಿತ್ರದಲ್ಲಿ ಮೂರು ಶೇಡ್‌ಗಳಲ್ಲಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ. ಈ ಒಂದು ಸವಾಲೇ ಈ ಚಿತ್ರವನ್ನು ಮಾಡಲು ಹುಮ್ಮಸ್ಸು ನೀಡಿತು. ಶಿಕ್ಷಕಿಯಾಗಿ, ರಾಣಿಯಾಗಿ ನಾನು ಇಲ್ಲಿ ನಟಿಸಿದ್ದೇನೆ. ನನ್ನ ಇನ್ನೊಂದು ಶೇಡ್‌ಗೆ ಕಾರಣವೇನು ಎನ್ನುವುದನ್ನು ಸಿನಿಮಾದಲ್ಲೇ ನೋಡಬೇಕು. ಆರಂಭದಲ್ಲಿ ಈ ಪಾತ್ರಗಳನ್ನು ನಿಭಾಯಿಸಲು ಸಾಧ್ಯವೇ ಎನ್ನುವ ಸಂಶಯವಿತ್ತು. ಆದರೆ ಸಿನಿಮಾ ಮುಗಿದ ಬಳಿಕ ಎಲ್ಲರೂ ಈ ಪಾತ್ರವನ್ನು ಇಷ್ಟಪಟ್ಟರು' ಎಂದು ಮಾತು ಆರಂಭಿಸಿದರು ರಂಜನಿ.

'ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದಡಿ ಕೆಲಸ ಮಾಡಲು ಸಿಗುತ್ತದೆ ಎನ್ನುವ ಕಾರಣಕ್ಕೇ ಸಿನಿಮಾ ಒಪ್ಪಿಕೊಂಡಿದ್ದೆ. ನನಗೆ ಈ ಮಾದರಿಯ ಸಿನಿಮಾ ಪ್ರಪಂಚವನ್ನು ಅನ್ವೇಷಿಸುವ ಆಸಕ್ತಿ ಇತ್ತು. ಇಂತಹ ಚಿತ್ರಗಳು ಚಲನಚಿತ್ರೋತ್ಸವಗಳಲ್ಲಿ ಮೊದಲು ಪ್ರದರ್ಶನಗೊಂಡರೂ ಒಳ್ಳೆಯ ಸಿನಿಮಾ ಎಂದು ಸ್ವೀಕೃತವಾದಾಗ ನಮ್ಮ ವೃತ್ತಿ ಜೀವನದಲ್ಲಿ ಮೈಲುಗಲ್ಲುಗಳಾಗಬಹುದು. ನಟಿ ಸೌಂದರ್ಯ ಅವರು 'ದ್ವೀಪ' ಸಿನಿಮಾದಲ್ಲಿ ನಟಿಸಿದ್ದನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ. ಹೀಗಾಗಿ ಈ ರೀತಿಯ ಸಿನಿಮಾಗಳಲ್ಲೂ ನಟಿಸಿ ಅನ್ವೇಷಿಸಬೇಕು ಎನ್ನುವ ಕಾರಣಕ್ಕೆ ಒಪ್ಪಿಕೊಂಡಿದ್ದೆ' ಎಂದರು.

'ನಿರ್ಮಾಪಕರು ಈ ಸಿನಿಮಾವನ್ನು ಇದೀಗ ಜನರ ಎದುರಿಗೆ ಇಡುತ್ತಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಖಂಡಿತವಾಗಿಯೂ ಇದೊಂದು ಸವಾಲಿನ ಕೆಲಸವೇ. ನಿಗದಿತ ಪ್ರೇಕ್ಷಕರನ್ನು ತಲುಪುವುದು ಮುಖ್ಯ. ವಿಜಯ ರಾಘವೇಂದ್ರ ಅವರ ಜೊತೆ ಎರಡನೇ ಬಾರಿ ನಟಿಸಿದೆ. ಅವರ ವ್ಯಕ್ತಿತ್ವ ಎಲ್ಲರಿಗೂ ಇಷ್ಟ. ಈ ಮಾದರಿಯ ಪಾತ್ರಗಳಿಗೆ ಅವರು ಹೇಳಿಮಾಡಿಸಿದಂಥ ವ್ಯಕ್ತಿ. 'ಸ್ವಪ್ನಮಂಟಪ'ದಲ್ಲಿ ವಿಜಯ್ ಅವರ ರಾಜನ ಪಾತ್ರವನ್ನು ನೋಡಿದಾಗ 'ಕಲ್ಲರಳಿ ಹೂವಾಗಿ' ಸಿನಿಮಾ ನೆನಪಾಗುತ್ತದೆ' ಎನ್ನುತ್ತಾ ರಂಜನಿ ತಮ್ಮ ನಿರ್ದೇಶನದ 'ಡಿಡಿ ಢಿಕ್ಕಿ' ಸಿನಿಮಾದತ್ತ ಮಾತು ಹೊರಳಿಸಿದರು.

'ನನ್ನ ನಿರ್ದೇಶನದ ಸಿನಿಮಾದ ಶೇಕಡ 80ರಷ್ಟು ಚಿತ್ರೀಕರಣ ಮುಗಿದಿದೆ. ಕ್ಲೈಮ್ಯಾಕ್ಸ್ ಮತ್ತು ಒಂದು ಹಾಡಿನ ಚಿತ್ರೀಕರಣ ಬಾಕಿ ಇದೆ. ಇನ್ನೆರಡು ತಿಂಗಳಲ್ಲಿ ಸಿನಿಮಾ ಯಾವಾಗ ಬಿಡುಗಡೆ ಎಂದು ಹೇಳುತ್ತೇನೆ. ನಿರ್ದೇಶನದಲ್ಲಿ ಪ್ರತಿ ದಿನವೂ ಸವಾಲುಗಳಿದ್ದವು. ಮಾಡಲೇಬೇಕು ಎಂದು ಪಣತೊಟ್ಟು ಕೆಲಸ ಆರಂಭಿಸಿದರೆ ನಮ್ಮ ಶಕ್ತಿಯನ್ನು ಯಾರಿಂದಲೂ ನಾಶಗೊಳಿಸಲು ಸಾಧ್ಯವಿಲ್ಲ. ಈ ಸಿನಿಮಾದ ನಿರ್ದೇಶನ ಮಾಡುತ್ತಿರಬೇಕಾದರೆ ಬರಗೂರು ರಾಮಚಂದ್ರಪ್ಪ ಅವರ ಶೈಲಿಯನ್ನು ಅನುಸರಿಸುತ್ತಿದ್ದೆ. ಅವರು ಒಂದು ದೃಶ್ಯದ ಚಿತ್ರೀಕರಣ ಆರಂಭಕ್ಕೂ ಮುನ್ನ ಎಲ್ಲರನ್ನೂ ಜೊತೆಗೂಡಿಸಿ ಪಾಠ ಮಾಡಿದಂತೆ ವಿವರಣೆ ನೀಡುತ್ತಿದ್ದರು. ಇಂದಿನ ಕ್ಯಾರಾವಾನ್ ಜಗತ್ತಿನಲ್ಲಿ ಇದು ಅಪರೂಪವಾಗಿದೆ. ನಾನು ನಮ್ಮ ಸಿನಿಮಾದಲ್ಲಿ ಬರಗೂರು ಅವರ ಶೈಲಿ ಅನುಸರಿಸಿದ್ದೇನೆ' ಎಂದು ಮಾತಿಗೆ ವಿರಾಮವಿತ್ತರು. ❖

'ಸ್ವಪ್ನ ಮಂಟಪ'ದ ಕಥೆಯೇನು?

ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರು ತಮ್ಮದೇ ಕಾದಂಬರಿಯನ್ನು ಆಧರಿಸಿ ನಿರ್ದೇಶಿಸಿರುವ ಸಿನಿಮಾವಿದು. ವಿಜಯ ರಾಘವೇಂದ್ರ ಹಾಗೂ ರಂಜಿನಿ ರಾಘವನ್ ಮುಖ್ಯ-ಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರವನ್ನು ಮೈಸೂರಿನ ಬಾಬುನಾಯ್ಕ್ ತಮ್ಮ ಮಲೈಮಹದೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯಿಂದ ನಿರ್ಮಿಸಿದ್ದಾರೆ. ಚಿತ್ರಕ್ಕೆ ಬರಗೂರು ರಾಮಚಂದ್ರಪ್ಪ ಅವರೇ ಚಿತ್ರಕಥೆ, ಸಂಭಾಷಣೆ, ಗೀತರಚನೆ ಮಾಡಿದ್ದಾರೆ.

ಚಿತ್ರವು ಪಾರಂಪರಿಕ ಸ್ಥಳಗಳ ರಕ್ಷಣೆಯನ್ನು ಪ್ರತಿಪಾದಿಸುವ ಕಥಾವಸ್ತುವನ್ನು ಒಳಗೊಂಡಿದೆ. ಒಂದು ಹಳ್ಳಿಯಲ್ಲಿ ರಾಜನೊಬ್ಬ ನಿರ್ಮಿಸಿದ ಸ್ವಪ್ನಮಂಟಪವನ್ನು ಕೆಡವಿ ಹಾಕುವ ಪ್ರಯತ್ನವನ್ನು ಕೆಲವರು ಮಾಡಿದಾಗ, ಕಥಾನಾಯಕ ಮತ್ತು ನಾಯಕಿ ಜನರನ್ನು ಸಂಘಟಿಸಿ ಸ್ವಪ್ನಮಂಟಪವನ್ನು ಉಳಿಸಿ ಸರ್ಕಾರದ ಅಧಿಕೃತ ಸ್ಮಾರಕದ ಪಟ್ಟಿಗೆ ಸೇರಿಸುವ ಮೂಲಕ ಚಾರಿತ್ರಿಕ ಸ್ಮಾರಕಗಳ ಪರಂಪರೆಯನ್ನು ಎತ್ತಿ ಹಿಡಿಯುತ್ತಾರೆ. ಸಿನಿಮಾದಲ್ಲಿ ಸ್ವಪ್ನಮಂಟಪವನ್ನು ನಿರ್ಮಾಣ ಮಾಡಿದ್ದ ರಾಜ-ರಾಣಿಯರ ಕಥನವೂ ಹಿನ್ನೋಟದಲ್ಲಿದೆ.

'ಮಿಡ್ ನೈಟ್ ರಸ್ತೆಯಲ್ಲಿ' ಖುಷಿ ರವಿ, ಪ್ರಣಂ ದೇವರಾಜ್

ಖುಷಿ ರವಿ

ನಟ ದೇವರಾಜ್ ಅವರ ಕಿರಿಯ ಪುತ್ರ ಪ್ರಣಂ ದೇವರಾಜ್ ನಟನೆಯ 'ಸನ್ ಆಫ್ ಮುತ್ತಣ್ಣ' ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಶ್ರೀಕಾಂತ್ ಹುಣಸೂರು ನಿರ್ದೇಶನದ ಈ ಸಿನಿಮಾದ ಹೊಸ ಹಾಡೊಂದು ಬಿಡುಗಡೆಯಾಗಿದೆ. ಸಿನಿಮಾ ಆ.22ರಂದು ತೆರೆಕಾಣುತ್ತಿದೆ. ಈ ಸಿನಿಮಾದಲ್ಲಿ ಪ್ರಣಂಗೆ ಜೋಡಿಯಾಗಿ 'ದಿಯಾ' ಖ್ಯಾತಿಯ ಖುಷಿ ರವಿ ನಟಿಸಿದ್ದಾರೆ. 'ಮಿಡ್ ನೈಟ್ ರಸ್ತೆಯಲ್ಲಿ...' ಹಾಡಿಗೆ ಯೋಗರಾಜ್ ಭಟ್ ಸಾಹಿತ್ಯವಿದ್ದು, ಸಂಜಿತ್ ಹೆಗಡೆ ದನಿಯಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಹಾಡಿಗಿದೆ. 'ನಮ್ಮ ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಇದು ಎರಡನೇ ಹಾಡು. ಉಳಿದ ಎರಡು ಹಾಡುಗಳು ಸದ್ಯದಲ್ಲೇ ಬಿಡುಗಡೆಯಾಗಲಿವೆ' ಎಂದಿದ್ದಾರೆ ಸಚಿನ್ ಬಸ್ರೂರ್.

'ಈ ಚಿತ್ರ ಅಪ್ಪ-ಮಗನ ಬಾಂಧವ್ಯ ಕುರಿತಾದ ಕಥಾಹಂದರ ಹೊಂದಿದೆ. ರಂಗಾಯಣ ರಘು ಹಾಗೂ ಪ್ರಣಂ ದೇವರಾಜ್ ಅಪ್ಪ–ಮಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣ ವಾರಾಣಸಿಯಲ್ಲಿ ನಡೆದಿದೆ' ಎಂದಿದ್ದಾರೆ ಶ್ರೀಕಾಂತ್ ಹುಣಸೂರು.

'ಚಿತ್ರದಲ್ಲಿ ಸಾಹಸ ಸನ್ನಿವೇಶಗಳಿಲ್ಲ. ಬಾಂಧವ್ಯದ ಕಥೆಯ ಜೊತೆಗೆ ಪ್ರೇಮಕಥೆಯೂ ಇದೆ. ರಂಗಾಯಣ ರಘು ಅವರಿಂದ ಸಾಕಷ್ಟು ವಿಷಯಗಳನ್ನು ಕಲಿತಿದ್ದೇನೆ. ಏಳೂವರೆ ವರ್ಷಗಳ ನಂತರ ನನ್ನ ಸಿನಿಮಾ ಬಿಡುಗಡೆಯಾಗುತ್ತಿದೆ' ಎಂದರು ಪ್ರಣಂ. ಚಿತ್ರದಲ್ಲಿ ವೈದ್ಯೆಯಾಗಿ ಖುಷಿ ರವಿ ನಟಿಸಿದ್ದಾರೆ. ❖

'ಓ ಮೈ ಇಂಡಿಯಾ' ಟ್ರೇಲರ್ ಬಿಡುಗಡೆ

ಹೊಸಬರೇ ಸೇರಿಕೊಂಡು ಸಿದ್ಧಪಡಿಸಿರುವ 'ಓ ಮೈ ಇಂಡಿಯಾ' ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಗೊಂಡಿದೆ.

ಸಾನ್ವಿಶ್ರೀಯಾ ಪ್ರೊಡಕ್ಷನ್ಸ್‌ನಡಿ ಹಾಸನದ ರಮ್ಯಾ ಲೋಕೇಶ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಪತ್ರಕರ್ತ ಜಿ.ಎನ್.ಕೃಷ್ಣಮೂರ್ತಿ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ರತನ್‌ದೇವ್ ಹಾಗೂ ಧರಣಿಶ್ರೀ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಶಿಕ್ಷಕಿ ಪಾತ್ರಕ್ಕೆ ಧರಣಿಶ್ರೀ ಬಣ್ಣಹಚ್ಚಿದ್ದಾರೆ. ವಿಶೇಷ ಪಾತ್ರದಲ್ಲಿ ನಟ ಸಾಯಿಕುಮಾರ್ ನಟಿಸಿದ್ದು, ಅವಿನಾಶ್, ಸುಚೇಂದ್ರ ಪ್ರಸಾದ್, ಚಿತ್ರಾ ಶೆಣೈ, ಇರ್ಷಾದ್ ಅಹ್ಮದ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಜಿಲ್ಲಾಧಿಕಾರಿ ಪಾತ್ರದಲ್ಲಿ ರತನ್‌ದೇವ್ ನಟಿಸಿದ್ದು, ಸರ್ಕಾರಿ ಅಧಿಕಾರಿಯೊಬ್ಬ ಹೇಗೆ ಸಮಾಜವನ್ನು ಸರಿಪಡಿಸಬಹುದು ಎಂಬುವುದು ಚಿತ್ರದ ಕಥಾಹಂದರ. 'ದೇಶದ ಶೇಕಡ 95ರಷ್ಟು ಪ್ರಜೆಗಳನ್ನು ಶೇಕಡ 5ರಷ್ಟು ರಾಜಕಾರಣಿಗಳು ಆಳುತ್ತಿದ್ದಾರೆ. ಪ್ರಜೆಗಳೇ ಪ್ರಭುಗಳು ಆಗಬೇಕಾದವರು, ಇಂದು ಚುನಾಯಿತ ಪ್ರತಿನಿಧಿಗಳ ಗುಲಾಮರಾಗುತ್ತಿದ್ದೇವೆ. ಇದರ ವಿರುದ್ಧ ಒಬ್ಬ ಹೋರಾಡಲು ಮುಂದೆ ಬಂದರೆ ಇತರರು ಕೈಜೋಡಿಸುತ್ತಾರೆ. ಆಗ ದೇಶ ಸರಿಯಾದ ಹಾದಿಗೆ ಬರುತ್ತದೆ. ಇಂತಹ ಅರ್ಥಪೂರ್ಣ ವಿಷಯ ಚಿತ್ರದಲ್ಲಿದೆ' ಎಂದರು ಜಿ.ಎನ್.ಕೃಷ್ಣಮೂರ್ತಿ. ಆಗಸ್ಟ್‌ನಲ್ಲಿ ಸಿನಿಮಾ ತೆರೆಗೆ ಬರಲಿದೆ ಎಂದು ಚಿತ್ರತಂಡ ತಿಳಿಸಿದೆ. ❖



ನರ್ತಕಿ 3D 4K DOLBY DIGITAL 7.1 bookmyshow
ವೀರೇಶ್ ಸಿನಿಮಾಸ್
ಜೆ.ಪಿ.ನಗರ ಸಿದ್ಧೇಶ್ವರ
ಪೀಣ್ಯ ಭಾರತಿ
ಕಮಲಾನಗರ ವೀರಭದ್ರೇಶ್ವರ
ಕತ್ರಿಗುಪ್ಪೆ ಕಾಮಾಕ್ಯ
ಆವಲಹಳ್ಳಿ ವೆಂಕಟೇಶ್ವರ
ಸಂಜಯನಗರ ವೈಭವ್
ಉಲ್ಲಾಳ ವಜ್ರೇಶ್ವರಿ
ಕೆಂಗೇರಿ ರಾಬಿನ್
ಗೌಡನಪಾಳ್ಯ ಶ್ರೀನಿವಾಸ
ವಿದ್ಯಾಪೀಠ ಸರ್ಕಲ್ ಚಂದ್ರೋದಯ
ಮಲ್ಲತ್ತಹಳ್ಳಿ ವಿ.ಆರ್.ಸಿನಿಮಾಸ್
PVR INOX: MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE CINEMAS JALAHALLI
MIRAJ SUNKADAKATTE
CINEPHILE HSR LAYOUT
INNOVATIVE MULTIPLEX MARATHHALLI
KINO CINEMAS SEEGEHALLI
NEW FANGLED M.G.ROAD
MOVIETIME R.R.NAGAR
VAISHNAVI VAIBHAVI UTHARAHALLI
Balaji Cinemas : Multiplex CHIKKALASANDRA
V CINEMAS RAMMURTHYNAGAR
ತುಮಕೂರು ಮಾರುತಿ, PVR INOX
ಕನಕಪುರ ಅರ್ಕಾವತಿ
ಕುಣಿಗಲ್ ಆಕಾಶ್
ಮೈಸೂರು ಸಂಗಮ್, PVR INOX GARUDA | FORUM | SATYAM, DRC CINEMAS, VISION CINEMAS
ಮಂಡ್ಯ ಮಹಾವೀರ
ಹಾಸನ ಶ್ರೀಗುರು
ದಾವಣಗೆರೆ ತ್ರಿಶೂಲ್, MOVIETIME
ಬಳ್ಳಾರಿ ನಟರಾಜಕಾಂಪ್ಲೆಕ್ಸ್, MOVIETIME
ಹುಬ್ಬಳ್ಳಿ ಸುಧಾ, LAXMI CITY PRIDE MULTIPLEX, cinépolis
ಧಾರವಾಡ PVR INOX
ಬೆಳಗಾವಿ PVR INOX, KAPEEL
ನಿಪ್ಪಾಣಿ MAGNUM CINEMAS
ಗುಲ್ಬರ್ಗ PVR INOX, MIRAJ, SHETTY'S MULTIPLEX
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ ಮೊಯಿದ್ದೀನ್
ಶಿವಮೊಗ್ಗ ವೀರಭದ್ರೇಶ್ವರ, Bharath Cinemas
ಭದ್ರಾವತಿ ವೀರಭದ್ರೇಶ್ವರ
ತೀರ್ಥಹಳ್ಳಿ ವಿನಾಯಕ
ಕೊಪ್ಪ ಜೆ.ಎಂ.ಜೆ
ಮಂಗಳೂರು SP CINEMAS, PVR INOX, cinépolis, Bharath Cinemas
ಉಡುಪಿ ಕಲ್ಪನಾ, Bharath Cinemas
ಬೆಳ್ತಂಗಡಿ ಭಾರತ್
ಕಾರ್ಕಳ ರಾಧಿಕಾ
ಮಣಿಪಾಲ PVR INOX, Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas

PVR INOX
ORION 7:30PM
SWAGATH 11:40AM
MANTHRI 11:20AM
GT WORLD 2:05 PM
VEGA CITY 4:20 PM
GOPALAN CINEMAS LEGACY 7:30 PM
ತುಮಕೂರು PVR INOX 7:30 pm
ಮೈಸೂರು centro
PVR INOX 7:30 pm
ಹುಬ್ಬಳ್ಳಿ LAXMI CITY PRIDE MULTIPLEX
ಬೆಳಗಾಂ PVR INOX
ದಾರವಾಡ PVR INOX 11am
ಗುಲ್ಬರ್ಗಾ SHETTY CINEMAS 4 pm
ಬಿಜಾಪುರ ಅಮೀರ್ 2ಆಟ
ಮಂಗಳೂರು PVR INOX 1:20 pm
ಹಾಗೂ ರಾಜ್ಯಾದ್ಯಂತ

ಅಡಪಗೆ ‘ಜೀವಮಾನ ಸಾಧನೆ’ ಪ್ರಶಸ್ತಿ

ಕರ್ನಾಟಕ ನಾಟಕ ಅಕಾಡೆಮಿಯಿಂದ 2025–26ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು 2025–26ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದ್ದು, ‘ಜೀವಮಾನ ಸಾಧನೆ ಗೌರವ ಪ್ರಶಸ್ತಿ’ಗೆ ಕಲಾ ನಿರ್ದೇಶಕ ಶಶಿಧರ ಅಡಪ ಬಿ. ಆಯ್ಕೆಯಾಗಿದ್ದಾರೆ.


ಶಶಿಧರ ಅಡಪ

ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಅವರು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ 34 ಮಂದಿ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಿದರು. ಈ ಸಾಲಿನ ವಾರ್ಷಿಕ ಪ್ರಶಸ್ತಿಗೆ 25 ಮಂದಿ ಭಾಜನರಾಗಿದ್ದಾರೆ. 2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದವರಲ್ಲಿ ನಟ ಪ್ರಕಾಶ್ ರಾಜ್ ಅವರು ಪ್ರಶಸ್ತಿ ನಿರಾಕರಿಸಿದ್ದರು. ಇದರಿಂದಾಗಿ ಬಾಕಿ ಉಳಿದಿದ್ದ ಕಳೆದ ಸಾಲಿನ ಒಂದು ವಾರ್ಷಿಕ ಪ್ರಶಸ್ತಿಗೆ ಕಲಾವಿದ ಶಂಕರ್ ಭಟ್ (ಉತ್ತರ ಕನ್ನಡ) ಅವರನ್ನು ಆಯ್ಕೆ ಮಾಡಲಾಗಿದೆ.

‘ಜೀವಮಾನ ಸಾಧನೆ ಪ್ರಶಸ್ತಿಯು ತಲಾ ₹50 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿದೆ. ವಾರ್ಷಿಕ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಹೊಂದಿದೆ. ದತ್ತಿ ಪ್ರಶಸ್ತಿಗಳ ನಗದು ಬಹುಮಾನವನ್ನು ಈ ವರ್ಷದಿಂದ ₹5 ಸಾವಿರ ಹೆಚ್ಚಿಸಿದ್ದು, ಈ ಪ್ರಶಸ್ತಿಗಳು ತಲಾ ₹15 ಸಾವಿರ ನಗದು ಒಳಗೊಂಡಿವೆ’ ಎಂದು ನಾಗರಾಜ ಮೂರ್ತಿ ತಿಳಿಸಿದರು.

‘ಸೆಪ್ಟೆಂಬರ್ ತಿಂಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುತ್ತದೆ. ಸ್ಥಳ ಹಾಗೂ ದಿನಾಂಕ ನಿಗದಿಯಾಗಿಲ್ಲ’ ಎಂದು ಹೇಳಿದರು.

ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತ, ಸದಸ್ಯರಾದ ಎ.ಎಸ್. ಚಂದ್ರಶೇಖರ್ (ಜೆಪಿಜಿ ಚಂದ್ರು), ರವೀಂದ್ರನಾಥ ಸಿರಿವರ ಹಾಗೂ ಟಿ.ಎಚ್. ಲವಕುಮಾರ ಉಪಸ್ಥಿತರಿದ್ದರು.

ಉತ್ಸವಗಳಿಗೆ ಮೆರುಗು ತುಂಬಿದ ಕಲಾವಿದ

ಮಂಗಳೂರು: ಕನ್ನಡ ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರದ ಎಲ್ಲ ಪ್ರಮುಖ ನಿರ್ದೇಶಕರ ಜೊತೆ ಕೆಲಸ ಮಾಡಿದ ಅನುಭವ ಇರುವ ಶಶಿಧರ ಅಡಪ, ನಾಡಿನ ಪ್ರಮುಖ ಸಾಂಸ್ಕೃತಿಕ ಉತ್ಸವಗಳಲ್ಲಿ ರಂಗವಿನ್ಯಾಸ ಮಾಡಿ ಗಮನ ಸೆಳೆದಿದ್ದಾರೆ.

ತಾಲ್ಲೂಕಿನ ಮುತ್ತೂರು ‘ಬಾಳಿಕೆ ಮನೆ’ಯಲ್ಲಿ 1955ರ ಸೆ. 1ರಂದು ಜನಿಸಿದ ಅವರು, ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬಿಎಸ್‌ಸಿ ಪದವಿ ಗಳಿಸಿದ್ದಾರೆ.

ನಾಟಕ ಅಕಾಡೆಮಿಯ ‘ಜೀವಮಾನ ಸಾಧನೆ’ ಪ್ರಶಸ್ತಿ ಪುರಸ್ಕೃತರಾಗಿರುವ ಅಡಪ, ಕಲಾ ನಿರ್ದೇಶನ, ರಂಗಸಜ್ಜಿಕೆ ಹಾಗೂ ವಸ್ತ್ರವಿನ್ಯಾಸದಲ್ಲಿ ಪರಿಣತರು. ರಂಗಭೂಮಿ, ಚಲನಚಿತ್ರ, ಕಿರುತೆರೆ ಧಾರಾವಾಹಿಗಳು ಮತ್ತು ವಸ್ತುಪ್ರದರ್ಶನಗಳಿಗೆ ಸಂಬಂಧಿಸಿ ಕೆಲಸ ಮಾಡಿದ್ದಾರೆ.

‘ಪ್ರಶಸ್ತಿ ಸಹಜವಾಗಿ ಖುಷಿ ತಂದಿದೆ. ಸದ್ಯ ಬೇರೇನೂ ಹೇಳಲು ತೋಚುತ್ತಿಲ್ಲ’ ಎಂದು ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು ಹೇಳಿದರು.

ವಿಶ್ವಕನ್ನಡ ಸಮ್ಮೇಳನ, ಹಂಪಿ ಉತ್ಸವ, ಮೈಸೂರು ದಸರಾ, ಸೇರಿದಂತೆ ಹಲವು ರಂಗ ವಿನ್ಯಾಸ ಮತ್ತು ನಿರ್ಮಾಣಗಳನ್ನು ಅವರು ಮಾಡಿದ್ದಾರೆ.

ವಾರ್ಷಿಕ ಪ್ರಶಸ್ತಿ ಪುರಸ್ಕೃತರು

ಜಿ.ಎನ್. ಮೋಹನ್ (ಬೆಂಗಳೂರು), ಮಾಲತೇಶ ಬಡಿಗೇರ (ಗದಗ), ಟಿ. ರಘು (ಬೆಂಗಳೂರು), ವೆಂಕಟಾಚಲ (ಬೆಂಗಳೂರು), ಮುರ್ತುಜಸಾಬ ಘಟ್ಟಿಗನೂರ (ಬಾಗಲಕೋಟೆ), ಚೆನ್ನಕೇಶವಮೂರ್ತಿ ಎಂ. (ಬೆಂಗಳೂರು), ಗೋಪಾಲ ಯಲ್ಲಪ್ಪ ಉಣಕಲ್ (ಹುಬ್ಬಳ್ಳಿ-ಧಾರವಾಡ), ಚಿಕ್ಕಪ್ಪಯ್ಯ (ತುಮಕೂರು), ದೇವರಾಜ ಹಲಗೇರಿ (ಕೊಪ್ಪಳ), ವೈ.ಎಸ್. ಸಿದ್ದರಾಮೇಗೌಡ (ಬೆಂಗಳೂರು ದಕ್ಷಿಣ), ಅರುಣ್‌ಕುಮಾರ್ ಆರ್.ಟಿ. (ದಾವಣಗೆರೆ), ರೋಹಿಣಿ ರಘುನಂದನ್ (ಬೆಂಗಳೂರು), ರತ್ನ ಸಕಲೇಶಪುರ (ಹಾಸನ), ವಿ.ಎನ್. ಅಶ್ವಥ್ (ಬೆಂಗಳೂರು) ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಶಿವಯ್ಯ ಸ್ವಾಮಿ ಬಿಬ್ಬಳ್ಳಿ (ಕಲಬುರಗಿ), ಕೆ.ಆರ್. ಪೂರ್ಣೇಂದ್ರ ಶೇಖರ್ (ಬೆಂಗಳೂರು), ಭೀಮನಗೌಡ ಬಿ. ಕಟಾವಿ (ಬೆಳಗಾವಿ), ಕೆ. ಮುರಳಿ (ಕೋಲಾರ), ಮುತ್ತುರಾಜ್ (ಬೆಂಗಳೂರು ಗ್ರಾಮಾಂತರ), ಮಲ್ಲೇಶ್ ಬಿ. ಕೋನಾಳ (ಯಾದಗಿರಿ), ಸುಗಂಧಿ ಉಮೇಶ್ ಕಲ್ಮಾಡಿ (ಉಡುಪಿ), ಮಹೇಶ ವಿ. ಪಾಟೀಲ (ಬೀದರ್), ಶಿವಪುತ್ರಪ್ಪ ಶಿವಸಿಂಪಿ (ಕೊಪ್ಪಳ), ಸದ್ಯೋಜಾತ ಶಾಸ್ತ್ರಿ ಹಿರೇಮಠ (ವಿಜಯನಗರ) ಹಾಗೂ ಉದಯ್ ಎಸ್.ಆರ್. (ಮೈಸೂರು) ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಏಳು ಮಂದಿಗೆ ದತ್ತಿನಿಧಿ ಪ್ರಶಸ್ತಿ

ಅಕಾಡೆಮಿಯ ದತ್ತಿನಿಧಿ ಪ್ರಶಸ್ತಿಗೆ ಏಳು ಮಂದಿ ಆಯ್ಕೆಯಾಗಿದ್ದಾರೆ. ‘ಎಚ್.ವಿ. ವೆಂಕಟಸುಬ್ಬಯ್ಯ ದತ್ತಿ ಪುರಸ್ಕಾರ’ಕ್ಕೆ ಮಂಜಪ್ಪ ಪಿ.ಎ. (ಕೊಡಗು), ‘ಬಿ.ಆರ್. ಅರಿಶಿಣಗೋಡಿ ದತ್ತಿ ಪುರಸ್ಕಾರ’ಕ್ಕೆ ಕಿರಣ್ ರತ್ನಾಕರ ನಾಯ್ಕ (ಉತ್ತರ ಕನ್ನಡ), ‘ಕೆ. ರಾಮಚಂದ್ರಯ್ಯ ದತ್ತಿ ಪುರಸ್ಕಾರ’ಕ್ಕೆ ಸಿ.ವಿ. ಲೋಕೇಶ್ (ದೊಡ್ಡಬಳ್ಳಾಪುರ), ‘ಶ್ರೀಮತಿ ಮಾಲತಿಶ್ರೀ ಮೈಸೂರು ದತ್ತಿ ಪುರಸ್ಕಾರ’ಕ್ಕೆ ಎಚ್.ಪಿ. ಈಶ್ವರಾಚಾರಿ (ಮಂಡ್ಯ), ‘ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ’ಕ್ಕೆ ದೊಡ್ಡಮನೆ ವೆಂಕಟೇಶ್ (ಬೆಂಗಳೂರು), ‘ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ’ಕ್ಕೆ ಪಿ.ವಿ. ಕೃಷ್ಣಪ್ಪ (ಬೆಂಗಳೂರು) ಹಾಗೂ ‘ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರ’ಕ್ಕೆ ನಾಗೇಂದ್ರ ಪ್ರಸಾದ್ (ಬೆಂಗಳೂರು) ಆಯ್ಕೆಯಾಗಿದ್ದಾರೆ.

ಒಳ ಮೀಸಲಾತಿ: ಅಹೋರಾತ್ರಿ ಧರಣಿ

ಬೆಂಗಳೂರು: ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ನೀಡುವ ಬಗ್ಗೆ ಅಧಿವೇಶನದಲ್ಲಿ ನಿರ್ಣಯ ಅಂಗೀಕರಿಸಿ, ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ಆಗಸ್ಟ್ 11ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಬಸವರಾಜ ಕೌತಾಳ್, ‘ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದಲ್ಲಿ ನೇಮಕವಾಗಿರುವ ಏಕಸದಸ್ಯ ಆಯೋಗವು, ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯ ವಸ್ತುನಿಷ್ಠ ವರದಿಯನ್ನು ಜುಲೈ 30ರೊಳಗೆ ಸರ್ಕಾರಕ್ಕೆ ಸಲ್ಲಿಸಬೇಕು’ ಎಂದು ಒತ್ತಾಯಿಸಿದರು.

‘ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸುವ ಬಗ್ಗೆ ತನ್ನ ಪ್ರಣಾಳಿಕೆಯಲ್ಲಿಯೇ ಭರವಸೆ ನೀಡಿತ್ತು. ಈಗಾಗಲೇ ಎರಡು ವರ್ಷ ವಿಳಂಬವಾಗಿದೆ. ಒಳ ಮೀಸಲಾತಿ ಜಾರಿಯಾದರೆ ವಿವಿಧ ಇಲಾಖೆಗಳ 30 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಕೂಲವಾಗಲಿದೆ. ಆದ್ದರಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ಆಯೋಜಿಸಲಾಗಿದೆ. ಈ ಧರಣಿಯಲ್ಲಿ ಎಲ್ಲ ಸಂಘ–ಸಂಸ್ಥೆಗಳ ಮುಖಂಡರು ಹಾಗೂ ರಾಜಕೀಯ ಪಕ್ಷಗಳ ನಾಯಕರು ಪಕ್ಷಾತೀತವಾಗಿ ಭಾಗವಹಿಸಬೇಕು’ ಎಂದು ಕರೆ ನೀಡಿದರು.

ಸಮಿತಿಯ ಸದಸ್ಯರಾದ ಅಂಬಣ್ಣ ಅರೋಲಿಕರ್, ಕರಿಯಪ್ಪ ಗುಡಿಮನಿ, ಸಣ್ಣಮಾರೆಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

ಬಿಜೆಪಿಯ ಒಳಮೀಸಲಾತಿ ಹೋರಾಟ ಅರ್ಥಹೀನ: ಸಚಿವ ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿ ಮಾಡಬೇಕು ಎಂದು ಬಿಜೆಪಿಯವರು ಆ.13ರಿಂದ ನಡೆಸಲು ಉದ್ದೇಶಿಸಿರುವ ಪ್ರತಿಭಟನೆ ಮತ್ತು ಕರ್ನಾಟಕ ಬಂದ್ ಅರ್ಥಹೀನ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಟೀಕಿಸಿದ್ದಾರೆ.

‘ನ್ಯಾಯಮೂರ್ತಿ ನಾಗಮೋಹನ ದಾಸ್ ಅವರು ಪರಿಶಿಷ್ಟ ಜಾತಿಗಳ ಗಣತಿ ವರದಿ ಸಲ್ಲಿಸಿದ ತಕ್ಷಣವೇ ಒಳಮೀಸಲಾತಿ ಕಲ್ಪಿಸುತ್ತೇವೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿಜೆಪಿ ನಾಯಕರು ‘ಇದರಲ್ಲಿ ರಾಜಕೀಯ ಬೆರೆಸುವುದು ಬೇಡ. 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲು ಸಿದ್ದರಾಮಯ್ಯ ಸರ್ಕಾರ ಬದ್ಧವಾಗಿದೆ. ಇದರಲ್ಲಿ ಯಾವುದೇ ಸಂಶಯ ಬೇಡ. ಸಮುದಾಯದ ಜನರನ್ನು ದಾರಿ ತಪ್ಪಿಸುವುದು ಬೇಡ ಎಂದು ಹೇಳಿದರು.

ಕೇಂದ್ರದ ಮಾಜಿ ಸಚಿವ ನಾರಾಯಣಸ್ವಾಮಿ ಅವರು ಸಚಿವರಾಗಿದ್ದಾಗ ರಾಜ್ಯಸಭೆಯಲ್ಲಿ ಒಳಮೀಸಲಾತಿ ಜಾರಿ ಮಾಡುವ ಪ್ರಸ್ತಾವ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದರು ಎಂದು ಟೀಕಿಸಿದರು.

ಒಳಮೀಸಲಾತಿಯನ್ನು ಶೇ 15 ಅಥವಾ ಶೇ 17ರಲ್ಲಿ ಎಷ್ಟು ಪ್ರಮಾಣ ನಿಗದಿ ಮಾಡಲಾಗುತ್ತದೆ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ‘ಆ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ’ ಎಂದು ಮುನಿಯಪ್ಪ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರೂ ಇದ್ದರು.

ಒಡಕು ಮೂಡಿಸಲು ಜಾತಿಗಣತಿ: ಆರ್.ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ಸಮುದಾಯಗಳ ನಡುವೆ ಒಡಕು ಮೂಡಿಸಿ, ತಾವು ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೆ ಜಾತಿವಾರು ಸಮೀಕ್ಷೆ ನಡೆಸಲು ಹೊರಟಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.


ಆರ್. ಅಶೋಕ್

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಜಾತಿಗಳ ನಡುವೆ ಕಂದಕ ಮೂಡಿಸಲು ಸಿದ್ದರಾಮಯ್ಯ ಅವರು ಈ ಹಿಂದೆ ಜಾತಿಗಣತಿ ಮಾಡಿಸಿದ್ದರು. ಅದನ್ನು ಅವರ ಹೈಕಮಾಂಡ್ ತಿರಸ್ಕರಿಸಿದೆ. ಹೀಗಾಗಿ ಮತ್ತೆ ಸಮೀಕ್ಷೆ ಮಾಡಿಸಲು ಮುಂದಾಗಿದ್ದಾರೆ. ಅಂದರೆ, ಈ ಹಿಂದಿನ ಜಾತಿಗಣತಿ ವರದಿ ಬೋಗಸ್ ಎಂದು ಅರ್ಥವಲ್ಲವೇ’ ಎಂದು ಪ್ರಶ್ನಿಸಿದರು.

‘ಒಳಮೀಸಲಾತಿ ನೀಡುವ ಉದ್ದೇಶದಿಂದ ಪರಿಶಿಷ್ಟ ಜಾತಿಗಳ ಸಮೀಕ್ಷೆಯನ್ನು ಈ ಸರ್ಕಾರ ಕೇವಲ 15 ದಿನಗಳಲ್ಲಿ ಮುಗಿಸಿದೆ. ಅಷ್ಟು ಕಡಿಮೆ ಅವಧಿಯಲ್ಲಿ ಕರಾರುವಾಕ್ಕಾದ ಸಮೀಕ್ಷೆ ಸಾಧ್ಯವೇ? ಕೇಂದ್ರ ಸರ್ಕಾರವೇ ಜಾತಿಗಣತಿ ನಡೆಸಲಿದೆ. ರಾಜ್ಯ ಸರ್ಕಾರವು ಅದಕ್ಕೆ ಸಹಕಾರ ನೀಡಿದರೆ ಸಾಕು. ಪ್ರತ್ಯೇಕ ಗಣತಿ ನಡೆಸಿ, ಜನರ ತೆರಿಗೆ ಹಣ ಪೋಲು ಮಾಡುವುದು ಬೇಕಿಲ್ಲ’ ಎಂದು ಆಗ್ರಹಿಸಿದರು.

‘ಡಿಜೆ ಹಳ್ಳಿ–ಕೆಜಿ ಹಳ್ಳಿ ಗಲಭೆ ಪ್ರಕರಣದಲ್ಲಿ ಶಿಕ್ಷೆ ಪ್ರಕಟವಾಗಿರುವುದು ಸ್ವಾಗತಾರ್ಹ. ಶಾಸಕರ ಮನೆ ಸುಟ್ಟಿರುವ ಘಟನೆ ಇನ್ನೂ ಕಣ್ಣ ಮುಂದಿದೆ. ಪಿಎಫ್‌ಐ ಸೇರಿ ಪಾಕಿಸ್ತಾನದ ಪರವಾಗಿರುವವರು ಅನೇಕರು ಇದರಲ್ಲಿ ಭಾಗಿಯಾಗಿದ್ದರು. ಅವರೆಲ್ಲರಿಗೂ ಕಠಿಣ ಶಿಕ್ಷೆಯಾಗಬೇಕು’ ಎಂದರು.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2025–26/30027–32 ದಿನಾಂಕ:24.07.2025

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::

ಈ ಕೆಳ ಕಾಣಿಸಿದ ಇನ್ಸುಲೇಟರ್‌ಗಳನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರಿಸಿ ಮತ್ತು ಪೂರೈಕೆ ಮಾಡುವುದು.

ಪಿಸಿ–1437 (ಕರೆ–2): 11 ಕೆವಿ 5 ಕೆಎನ್ ಪಾಲಿಮರೀಕ್/ ಕಾಂಪೋಸಿಟ್ ಪಿನ್ ಇನ್ಸುಲೇಟರ್ (**ಟೆಂಡರ್ ಮೊತ್ತ: ರೂ. 249.90 ಲಕ್ಷ**) ಮತ್ತು ಪಿಸಿ–1438 (ಕರೆ–2): 11 ಕೆವಿ 45 ಕೆಎನ್ ಪಾಲಿಮರೀಕ್ ಇನ್ಸುಲೇಟರ್ (**ಟೆಂಡರ್ ಮೊತ್ತ: ರೂ. 226.74 ಲಕ್ಷ**)

ದಿನಾಂಕ: ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **25.07.2025 ರಂದು** ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91 - 8046010000 / 8068948777 / 9240214000 / 9240214001 ಗೆ ಇಮೇಲ್ ವಿಳಾಸ: support@eprochelpdesk.comಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/323/ಕೆ.ಎಸ್.ಎಂ.ಸಿ.&ಎ/2025–26

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.

(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂ ಸಂ:08192–251168 e-mail: ka.davanagere.dudc@gmail.com

ಸಂ:ಜಿ.ನ.ಕೋ.ದಾ(2)/ಸಿಆರ್/1142/2021–22 ದಿನಾಂಕ: 21–07–2025

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆಯ 2021–22ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ಯೋಜನೆಯ ಅನುದಾನದಡಿ ಪೌರಾಡಳಿತ ನಿರ್ದೇಶನಾಲಯದಿಂದ ಅನುಮೋದನೆ ಪಡೆದುಕೊಂಡಿರುವ ಕ್ರಿಯಾ ಯೋಜನೆಯಂತೆ ಹೊನ್ನಾಳಿ ಪುರಸಭೆ ವ್ಯಾಪ್ತಿಯಲ್ಲಿ ಸ್ವಾಗತ ಕಮಾನು ನಿರ್ಮಿಸುವುದು ಮತ್ತು ಕಛೇರಿ ಉನ್ನತೀಕರಣ ಕಾಮಗಾರಿಗಳಿಗೆ ಈ ಕೆಳಗಿನಂತೆ ಇಂಡೆಂಟ್ ನಂಬರ್‌ಗಳಂತೆ ಐಟಂವಾರು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. **ಇಂಡೆಂಟ್‌ಗಳು:–** (1) ಹೊನ್ನಾಳಿ ಪುರಸಭೆ ವ್ಯಾಪ್ತಿಯಲ್ಲಿ ಸ್ವಾಗತ ಕಮಾನು ನಿರ್ಮಿಸುವುದು ಮತ್ತು ಕಛೇರಿ ಉನ್ನತೀಕರಣ (DMA/2025-26/OW/Work indent/45544) **ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ:– 54.41 ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:–06.08.2025 , ತಾಂತ್ರಿಕ ಬಿಡ್ ತೆರೆಯುವ ದಿನಾಂಕ:– 08.08.2025 ಆರ್ಥಿಕ ಬಿಡ್ ತೆರೆಯುವ ದಿನಾಂಕ:– 11.08.2025 * ಗುತ್ತಿಗೆ ಅವಧಿ:– 9 ತಿಂಗಳು**

ಸದರಿ ಕಾಮಗಾರಿಗಳ ವಿವರ, ಹಾಗೂ ಇತರೆ ಷರತ್ತುಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಬದಲಾವಣೆ ಇದ್ದಲ್ಲಿ ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.

ವಾಸಾಇ/ದಾವಣಗೆರೆ/208/ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಜಿಲ್ಲೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928

ಸಂಖ್ಯೆ:ಆರ್‌ಜಿಯುಹೆಚ್‌ಎಸ್‌ಬಿ/ಆರ್‌ಆರ್‌ಎಸಿ/ಪ್ರೊಕ್(ಎಸ್‌ಐ)/2/2024 ದಿನಾಂಕ: 24.07.2025

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಲೇಖನ ಮತ್ತು ಮುದ್ರಣ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

(Tender No: RGUHSK/2025-26/IND0018)

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	24/07/2025 11:06 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	30/07/2025 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	07/08/2025 5:29 ಗಂಟೆಗೆ
ಮಾದರಿ ಸಲ್ಲಿಕೆಯ ದಿನಾಂಕ	07/08/2025 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	11/08/2025 11:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	13/08/2025 11:30 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಡಿಐಪಿಆರ್/2003/2025–26

ಸಹಿ/–
ಕುಲಸಚಿವರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರವರ ವಿಭಾಗ ಕಚೇರಿ, ಎಂ.ಜಿ ರಸ್ತೆ, ಕಾರವಾರ–581301
Email: eekuwsdbkwr@gmail.com ದೂ. ಸಂಖ್ಯೆ: 08382201080

ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 667, ದಿನಾಂಕ: 24/07/2025.

2025–26 ನೇ ಸಾಲಿನ ಕಾರವಾರ–ಅಂಕೋಲಾ ನಗರ ನೀರು ಸರಬರಾಜು ಯೋಜನೆಯ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಯಡಿಯಲ್ಲಿ ಹೊನ್ನಳ್ಳಿ ಮೂಲಸ್ಥಾವರದಿಂದ ಹೈಚರ್ಚ್‌ನವರೆಗೆ ಇರುವ 711 ಮಿ.ಮೀ. ಮತ್ತು 508 ಮಿ.ಮೀ ವ್ಯಾಸದ ಎಂ.ಎಸ್.ಏರು / ಗುರುತ್ವಾಕರ್ಷಣ ಕೊಳವೆ ಮಾರ್ಗಗಳ ಸೋರಿಕೆ ದುರಸ್ಥಿ ಕಾಮಗಾರಿ ಮತ್ತು 8 ಸಂಖ್ಯೆ ಆರ್.ಸಿ.ಸಿ ವಾಲ್ವ ಚೇಂಬರ್‌ಗಳನ್ನು ವಿವಿಧ ಜಾಗದಲ್ಲಿ ಹೊಸದಾಗಿ ನಿರ್ಮಿಸುವ ಕಾಮಗಾರಿ (ಐಟಂ ದರದ ಟೆಂಡರ್). **KUWSDB/2025-26/WS/WORK_INDENT359.** ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕಾರವಾರ ಕಚೇರಿಯನ್ನು ಸಂಪರ್ಕಿಸಬಹುದು.

DIPR/ADK/KSMCA/316/25-26 dt. 24.07.2025

ಸಹಿ/– ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಕಾರವಾರ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
“ಸಂಪರ್ಕ ಸೌಧ”, ನಂ.8, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇಮೇಲ್ : cekrdcl@gmail.com

ಸಂ. ಕರಅನಿನಿ/ಐಎಫ್‌ಬಿ/2025–26/10 ದಿನಾಂಕ : 23–07–2025

ಟೆಂಡರ್ ಆಹ್ವಾನ ಪ್ರಕಟಣೆ

(1) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆಆರ್‌ಡಿಸಿಎಲ್), **ಕಲಬುರಗಿ ಜಿಲ್ಲೆಯಲ್ಲಿ ಆಲಂದ – ಕಲಬುರಗಿ – ಮಾಲಖೇಡ – ಸೇಡಂ ರಿಬ್ಬನಪಲ್ಲಿ (ವಾಗಧಾರಿ – ರಿಬ್ಬನಪಲ್ಲಿ ರಸ್ತೆ) ಮಾರ್ಗವಾಗಿ ಮಹಾರಾಷ್ಟ್ರ ಗಡಿಯಿಂದ ಆಂಧ್ರ ಪ್ರದೇಶ ಗಡಿಯವರೆಗೆ ರಾಹೆ–10ರ ಸುಧಾರಣೆಗಳಿಗಾಗಿ** ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳನ್ನು ಒದಗಿಸಲು ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆಯ (ಕ್ಯುಸಿಬಿಎಸ್) ಆಧಾರದ ಮೇಲೆ ಹೆಸರಾಂತ ಸಮಾಲೋಚಕರಿಂದ ಬಿಡ್‌ಗಳನ್ನು ಆಹ್ವಾನಿಸಿದೆ. **ಅಂದಾಜು ಉದ್ದ :** 128.00 ಕಿ.ಮೀ. **ಇಎಂಡಿ ಮೊತ್ತ :** ರೂ.30,000/–
(2) ಆಸಕ್ತ ಅರ್ಜಿದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) **https://kppp.karnataka.gov.in** ನಿಂದ ಸಂಪೂರ್ಣ ಪ್ರಸ್ತಾವನೆ ದಾಖಲೆಗಳನ್ನು ವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಬಹುದು ಹಾಗೂ ಇದೇ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಬಹುದು.(3) ಪ್ರಸ್ತಾವನೆಗಾಗಿ ಕೋರಿಕೆ ದಾಖಲೆಯಲ್ಲಿನ ಸೂಚನೆಗಳಿಗೆ ಅನುಸಾರವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಪ್ರಸ್ತಾವನೆಯೊಂದಿಗೆ ಇಎಂಡಿ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಬೇಕು. (4) ಬಿಡ್–ಪೂರ್ವ ಸಭೆಯನ್ನು **06–08–2025 ರಂದು 15.30 ಗಂಟೆಗೆ** ಕರಅನಿನಿ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ನಡೆಸಲಾಗುವುದು. ಬಿಡ್–ಪೂರ್ವ ವಿಚಾರಣೆಗಳು ಇದ್ದಲ್ಲಿ, ಕೆಪಿಪಿ ಪೋರ್ಟಲ್ / ಇ–ಮೇಲ್ : **cekrdcl@gmail.com.** ಮೂಲಕ **04–08–2025 ರಂದು 17.30 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು.(5) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **20–08–2025 ರಂದು 17:30 ಗಂಟೆಯವರೆಗೆ.** (6) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **22–08–2025 ರಂದು 11:30 ಗಂಟೆಗೆ** (7) ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಬಿಡ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದುಕೊಳ್ಳುತ್ತದೆ ಎಂಬುದನ್ನು ದಯವಿಟ್ಟು ಗಮನಿಸಬೇಕು.
ಮುಂದೆ, ಬಿಡ್ ದಾಖಲೆಗಳಿಗೆ ಸಂಬಂಧಿಸಿದಂತೆ ಯಾವುದೇ ಸೇರ್ಪಡೆಗಳು / ಸ್ಪಷ್ಟೀಕರಣಗಳು / ವೇಳಾಪಟ್ಟಿಯನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು / ಅಪ್‌ಡೇಟ್ ಮಾಡಲಾಗುವುದು.

ವಾಸಾಸಂಇ/ವಾ.ಪ್ರ/2013/ಶ್ರೇಷ್ಠ/2025–26

ಸಹಿ/– ಮುಖ್ಯ ಅಭಿಯಂತರರು,
ಕರಅನಿನಿ, ಬೆಂಗಳೂರು.

ಬೀ ಈ ಎಮ ಎಲ BEML LIMITED

(CIN: L35202KA1964GOI001530)
(A Govt. of India Mini Ratna Company under Ministry of Defence)
BANGALORE COMPLEX, POST BOX: 7501,
NEW THIPPASANDRA POST, BANGALORE-560075

NOTICE INVITING TENDER
e tender through BEML SRM Portal

BEML LIMITED, BANGALORE COMPLEX invites Public Tender-E mode (TWO Bid System)

Civil works tender ref: **6300039777**

Work Description : Design & Construction of Pre-Engineered Hangar for storage of materials of High Speed Trains and future Metro items to carry a load of 10 Ton overhead crane capacity at a given point, area adjacent to Cylinder stores in BEML Limited, Bangalore complex, Bangalore-75

Approx. estimated value : Rs. 9,35,00,000 /- inclusive of GST

EMD amount : Rs. 28,05,000/-

Period of contract: 08 Months

Last date & time for submission of bids : 18.08.2025 at 15.00 Hrs

Further details of tender can be obtained from following website:
https://bemlepci.bemlindia.in:50001/irj/portal & https://eprocure.gov.in/epublish/app

Bidders are advised to visit above websites frequently for any corrigendum, extension, etc.

The management has the right to accept or reject any or all the tenders without assigning any reasons thereon.

Sd/- Deputy General Manager

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India,
New Delhi vide No:MCI-57(3)/79-Med/1912, Dtd.16-04-1979
e-mail-ids:directorbmcrcbellary@gmail.com,
website : https://vims.karnataka.gov.in

ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ–1/02/2025–26 ದಿನಾಂಕ:21.07.2025

ಇ–ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸ್ವಚ್ಛತಾ ಮತ್ತು ನೈರ್ಮಲ್ಯ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ದ್ವಿ–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ **https://kppp.karnataka.gov.in** ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ: 21.07.2025 ರಿಂದ ದಿನಾಂಕ: 04.08.2025ರ ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.185.00 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ **www.bmcrc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಡೀನ್ ಹಾಗು ನಿರ್ದೇಶಕರು,
ಬಿಎಂಸಿ ಆರ್ ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/297/ಕೆಎಸ್‌ಎಂಸಿಎ/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ' ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65.

ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/5/2025–26 ದಿನಾಂಕ: 22–07–2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣವನ್ನು ಸರಬರಾಜು ಮಾಡಲು ಕೆ.ಜಿ.–1, ಟೆಂಡರ್ ನಿಬಂದನೆಗೊಳಪಟ್ಟಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 05.08.2025 ರಂದು ಸಂಜೆ 4:00 ಗಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07.08.2025 ಸಮಯ ಬೆಳಿಗ್ಗೆ 10:30 ಕ್ಕೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.08.2025ರ ಸಮಯ ಬೆಳಿಗ್ಗೆ 10:30 ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **91-8046010000, +91-8068948777, 09240214000 / 09240214001, support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಅನ್ನು ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/RO2014/AAPL/2025-26

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಕಾರ್ಯದರ್ಶಿಯವರ ಕಛೇರಿ, ಮೈಸೂರು

ಸಂಖ್ಯೆ: ಮೈನ.ಪ್ರಾ/ಆಆಸಶಾ/ಪ.ಪ್ರ–4/ತು.ಜಾ/2025–26 ದಿನಾಂಕ: 23.07.2025

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾದ ಬಡಾವಣೆಗಳಲ್ಲಿ ತುಂಡು ಭೂಮಿ ಅಥವಾ ಉಳಿದಿರುವ ಭೂಮಿಯನ್ನು ವಿಲೇವಾರಿ ಮಾಡುವ ಸಂಬಂಧ ಮಾನ್ಯ ಸರ್ಕಾರವು ಸಂಖ್ಯೆ **ನಅಇ 2 ಎಸಿಬಿ 2022, ದಿನಾಂಕ: 22.11.2024** ರಂದು ಮಾರ್ಗಸೂಚಿಗಳನ್ನು ತಿಳಿಸಿ ತುಂಡುಭೂಮಿ ಅಥವಾ ಉಳಿದ ಭೂಮಿಯನ್ನು ಒಂದು ವರ್ಷದೊಳಗೆ ತುಂಡು ಭೂಮಿ ಹಂಚಿಕೆಯ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿರುತ್ತದೆ. ಅದರಂತೆ ಪ್ರಾಧಿಕಾರದಿಂದ ರಚಿತವಾದ ಬಡಾವಣೆಗಳಲ್ಲಿ ಮಂಜೂರಾತಿ ಪಡೆದಿರುವ ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಮಂಜೂರು ಮಾಡುವ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಎರಡು ಬಾರಿ ಕಾಲಾವಕಾಶವನ್ನು ನೀಡಲಾಗಿತ್ತು. ಮುಂದುವರೆದು, ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಕೋರಿ ಅರ್ಜಿ ಸಲ್ಲಿಸಲು ಅಂತಿಮವಾಗಿ **ದಿನಾಂಕ:23.07.2025 ರಿಂದ 30.09.2025** ರವರೆಗೆ ಕಾಲಾವಕಾಶವನ್ನು ವಿಸ್ತರಿಸಿದೆ. ನಿಗಧಿತ ಕಾಲಾವಕಾಶ ನಂತರ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಆದುದರಿಂದ ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದೆ. ತದನಂತರ ಸರ್ಕಾರದ ಮಾರ್ಗಸೂಚಿಯಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/–
ಕಾರ್ಯದರ್ಶಿ,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/KAVITA/03/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹಾಲಕ್ಷ್ಮೀಪುರಂ ವಿಭಾಗ,
12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು.

ಸಂಖ್ಯೆ:ಕಾಪಾಅ/ಮಪು/ಟೆಂಡರ್/ಇ–ಪ್ರೊಕ್/06/2025–26 ದಿನಾಂಕ:24.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ದತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ–1, ಕೆಡಬ್ಲ್ಯೂ2, ಕೆಡಬ್ಲ್ಯೂ3 & ಕೆಡಬ್ಲ್ಯೂ4)

ಕ್ರ ಸಂ.	ಕಾಮಗಾರಿಗಳ ಹೆಸರು
1.	ವಾರ್ಡ್ ಸಂಖ್ಯೆ–53 ವೃಷಭಾವತಿ ನಗರದ ವಿನಾಯಕನಗರ, ಮಾರುತಿನಗರ, ಸಣ್ಣಕ್ಕಿಬಯಲು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2ನೇ ಕರೆ) ಅಂದಾಜು ಮೊತ್ತ: ₹.250.00 ಲಕ್ಷಗಳು, ಇಎಂಡಿ: ₹.3,75,000/–
2.	ವಾರ್ಡ್ ಸಂಖ್ಯೆ–49 ನಾಗಪುರದ ಕಲಾಕೇಸರಿ ಉದಯಕುಮಾರ್ ಉದ್ಯಾನವನದ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಅಭಿವೃದ್ಧಿ ಮತ್ತು ಸುಧಾರಣೆಗಳನ್ನು ಮಾಡುವುದು. ಅಂದಾಜು ಮೊತ್ತ: ₹.300.00 ಲಕ್ಷಗಳು, ಇಎಂಡಿ: ₹.4,50,000/–

ಟೆಂಡರ್ ವೇಳಾಪಟ್ಟಿ: (1) ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **30.07.2025**ರ ಮಧ್ಯಾಹ್ನ **3:00** ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು **30.07.2025**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **08.08.2025**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **11.08.2025**ರ ಬೆಳಗ್ಗೆ **11:30** ಗಂಟೆಯ ನಂತರ ಕೆಪಿಪಿ ಪೋರ್ಟಲ್ ಮೂಲಕ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ

ಜಿಲ್ಲಾ ಶಸ್ತ್ರಚಿಕಿತ್ಸಕರ ಕಚೇರಿ, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ

ದೂರವಾಣಿ ಸಂ: 08152–222035 ಇ–ಮೇಲ್: dskolar@gmail.com
ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/51/2024–25
ದಿನಾಂಕ: 21.07.2025

ಮರು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (3ನೇ ಕರೆ)

2025–26ನೇ ಸಾಲಿಗೆ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿಗೆ ಔಷಧಿಗಳು, ರಾಸಾಯಿನಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ಐಟಂಗಳ ಸರಬರಾಜಿಗೆ ದರ ನಿಗಧಿಪಡಿಸಲು ಆಸಕ್ತ ಮೂಲ ತಯಾರಿಕರು/ಸರಬರಾಜುದಾರರಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ನಮೂನೆಗಳು ಹಾಗೂ ಷರತ್ತು ನಿಬಂಧನೆಗಳನ್ನು **http://kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್‌ಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮಗಳು ಹಾಗೂ ಟೆಂಡರ್ ಸಮಿತಿಯ ಇತರೆ ಷರತ್ತಿಗೆ ಒಳಪಟ್ಟಿರುತ್ತದೆ.

(1) ಔಷಧಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ಐಟಂಗಳ ಸರಬರಾಜಿಗೆ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/51/2024–25, ದಿನಾಂಕ: 21.07.2025. **ಟೆಂಡರ್ ಮೊತ್ತ ರೂ: 1 ಕೋಟಿ, ಇ.ಎಂ.ಡಿ ರೂ. 2,00,000/–, ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 31.07.2025 ಸಂಜೆ 5.00 ರವರೆಗೆ.**

(2) ಪ್ರಯೋಗಶಾಲಾ ರಾಸಾಯಿನಿಕಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ಐಟಂಗಳ ಸರಬರಾಜಿಗೆ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/52/2024–25, ದಿನಾಂಕ: 21.07.2025. **ಟೆಂಡರ್ ಮೊತ್ತ ರೂ: 80 ಲಕ್ಷ, ಇ.ಎಂ.ಡಿ. ರೂ. 1,60,000/–, ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 31.07.2025 ಸಂಜೆ 5.00 ರವರೆಗೆ.**

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಜಿಲ್ಲಾ ಶಸ್ತ್ರಚಿಕಿತ್ಸಕರು
ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:204/ಕೆಎಸ್‌ಎಂಸಿಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು– 560001.
ಪೋನ್ ಸಂ. 080–22267905 ವೆಬ್‌ಸೈಟ್: www.kiadb.in

ಟೆಂಡರ್ ಪ್ರಕಟಣೆ ಸಂಖ್ಯೆ: ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಸಿ–04/236/2025–26 ದಿನಾಂಕ: 24–07–2025

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಅಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಪಟ್ಟಿಯಲ್ಲಿ 7(c) ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಅರ್ಹ ಸಂಸ್ಥೆಗಳು NABET & NABL Accredited Consultant/ NABET consultancy MoU with NABL Accredited Consultant ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕೆಲಸದ ಹೆಸರು: (1) ರಾಯಚೂರು ಜಿಲ್ಲೆ, ರಾಯಚೂರು ಹೋಬಳಿ ಚಂದ್ರಬಂಡ, ಸಿಂಗನೋಡಿ ಹಾಗೂ ಕುರುಬದೊಡ್ಡಿ ಗ್ರಾಮಗಳ ವಿವಿಧ ಸರ್ವೆ ನಂ. ಗಳ ಒಟ್ಟು ವಿಸ್ತೀರ್ಣ 672.82 ಎಕರೆ ಪ್ರದೇಶದಲ್ಲಿ ಚಂದ್ರಬಂಡ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA)/ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF&CC) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. (2ನೇ ಕರೆ). ಇ.ಎಂ.ಡಿ ರೂ. 2.00 ಲಕ್ಷಗಳು.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **https://kppp.Karnataka.gov.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

- ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: **04–08–2025** ರಂದು ಸಂಜೆ **4.00 ಘಂಟೆಯವರೆಗೆ.**

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/2019/ಆಕಾರ್/2025–26

ಶುಲ್ಕ ವಿಧಿಸಲು ಬಿಬಿಎಂಪಿಗೆ ಅವಕಾಶ

ಬಿಬಿಎಂಪಿ ಮೇಲ್ಮನವಿ • ವಿಭಾಗೀಯ ನ್ಯಾಯಪೀಠದ ಮಧ್ಯಂತರ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಗಸೂಚಿ ದರ ಆಧರಿಸಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ, ಪ್ರಾರಂಭಿಕ ಪ್ರಮಾಣ ಪತ್ರ (ಸಿ.ಸಿ), ಸ್ವಾಧೀನಾನುಭವ ಪ್ರಮಾಣ ಪತ್ರ(ಒ.ಸಿ), ನಿರ್ಮಾಣ ಹಂತದಲ್ಲಿ ಬಳಸುವ ಸಾರ್ವಜನಿಕ ರಸ್ತೆ ಬಳಕೆಗೆ ನೆಲ ಬಾಡಿಗೆ ಶುಲ್ಕ ಸೇರಿದಂತೆ ಇತರೆ ಶುಲ್ಕ ಸಂಗ್ರಹಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ಅವಕಾಶ ಕಲ್ಪಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಬಿಬಿಎಂಪಿ ಆಯುಕ್ತ ಮತ್ತು ಮಹದೇವಪುರ ನಗರ ಯೋಜನೆ ವಿಭಾಗದ ಸಹಾಯಕ ನಿರ್ದೇಶಕರು ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ. 'ಶುಲ್ಕ ಸಂಗ್ರಹಿಸಲು ಬಿಬಿಎಂಪಿಗೆ ಅಧಿಕಾರವಿಲ್ಲ' ಎಂದು ನಿರ್ಣಯಿಸಿ ಏಕಸದಸ್ಯ ನ್ಯಾಯಪೀಠ ಕಳೆದ ತಿಂಗಳಷ್ಟೇ ನೀಡಿದ್ದ ಆದೇಶಕ್ಕೆ ಮಧ್ಯಂತರ ತಡೆ ನೀಡಿದೆ.

'ಒಂದೊಮ್ಮೆ ಬಿಬಿಎಂಪಿ ಈ ಮೇಲ್ಮನವಿಯಲ್ಲಿ ವಿಫಲವಾದರೆ, ನಾನಾ ಶುಲ್ಕಗಳ ರೂಪದಲ್ಲಿ ಈಗಾಗಲೇ ಸಂಗ್ರಹಿಸಲಾದ ಮೊತ್ತವನ್ನು ಮರು ಪಾವತಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಆದೇಶದ ವೇಳೆ ಸ್ಪಷ್ಟಪಡಿಸಿದೆ.

ರಿಟ್ ಅರ್ಜಿಗಳು: ಕರ್ನಾಟಕ ಪಟ್ಟಣ ಮತ್ತು ನಗರ ಯೋಜನೆ ತಿದ್ದುಪಡಿ ಕಾಯ್ದೆ ಪ್ರಶ್ನಿಸಿ ಮೆಸರ್ಸ್ ಸಪ್ತಗಿರಿ ಶೆಲ್ಟರ್ಸ್, ಕೆಲವು ಖಾಸಗಿ ಆಸ್ತಿ ಮಾಲೀಕರು ಮತ್ತು ಡೆವಲಪರ್‌ಗಳು ರಿಟ್ ಅರ್ಜಿ ಸಲ್ಲಿಸಿದ್ದರು.

ಇವುಗಳ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಬೆಂಗಳೂರಿನ ನಾಗರಿಕರು ಮತ್ತು ಬಿಲ್ಡರ್‌ಗಳಿಂದ ನೆಲ ಬಾಡಿಗೆ ಸೇರಿದಂತೆ ಹಲವು ಶುಲ್ಕಗಳನ್ನು ವಿಧಿಸಲು ಅವಕಾಶ ಮಾಡಿಕೊಟ್ಟಿದ್ದ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ (ಕೆಎಂಸಿ) ಮತ್ತು ಇತರೆ ಕೆಲವು ಕಾನೂನುಗಳಿಗೆ ತಿದ್ದುಪಡಿ ಕಾಯ್ದೆ–2021 ಹಾಗೂ 2023ಕ್ಕೆ ತರಲಾಗಿದ್ದ ತಿದ್ದುಪಡಿಗಳನ್ನು 2025ರ ಜೂನ್ 5ರಂದು ರದ್ದುಗೊಳಿಸಿ ಆದೇಶಿಸಿತ್ತು.

'ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು–1965ರ ನಿಯಮ 37–ಅ ಅಡಿಯಲ್ಲಿ ವಿಧಿಸಬಹುದಾದ ಶುಲ್ಕವನ್ನು ಕಟ್ಟಡ ಅಥವಾ ಭೂಮಿಯ ಅಭಿವೃದ್ಧಿಗಾಗಿ ಮಾರುಕಟ್ಟೆ ಅಥವಾ ಮಾರ್ಗಸೂಚಿ ದರಕ್ಕೆ ಸಂಯೋಜನೆ ಮಾಡುವುದು ಅಥವಾ ಕರ್ನಾಟಕ ಪಟ್ಟಣ ಮತ್ತು ನಗರ ಯೋಜನಾ ಪ್ರಾಧಿಕಾರ ಕಾಯ್ದೆಯ ಅಡಿಯಲ್ಲಿ ಖಾಸಗಿ ಬೀದಿಯ ಫ್ಲ್ಯಾಟ್ ಅಥವಾ ವಿನ್ಯಾಸದ ಅನುಮೋದನೆಗೆ ಅನುಮೋದನೆ ನೀಡುವುದು ಕಾನೂನುಬಾಹಿರ' ಎಂದು ಘೋಷಿಸಿತ್ತು.

ಕಾನೂನು ಬಾಹಿರ: 'ನಾನಾ ಶುಲ್ಕಗಳನ್ನು ಮಾರ್ಗಸೂಚಿ ದರದ (ಗೈಡೆನ್ಸ್ ವ್ಯಾಲ್ಯೂ) ಜತೆ ಸಂಯೋಜಿಸಿ ನೆಲ ಬಾಡಿಗೆ ಸೇರಿದಂತೆ ವಿವಿಧ ಶುಲ್ಕಗಳನ್ನು ವಿಧಿಸುವುದು ಕಾನೂನು ಬಾಹಿರ' ಎಂದು ಹೈಕೋರ್ಟ್ 2021ರಲ್ಲಿ ಸುಂದರಂ ಶೆಟ್ಟಿ ಪ್ರಕರಣದಲ್ಲಿ ಸಾರಿತ್ತು.

ಈ ತೀರ್ಪಿನಿಂದ ಹೊರಬರಲು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ, ಕೆಎಂಸಿ ಕಾಯ್ದೆಯ ಕೆಲವು ಕಲಂಗಳಿಗೆ 2021 ಹಾಗೂ 2023ರಲ್ಲಿ ತಿದ್ದುಪಡಿ ಮಾಡಿತ್ತು. ಈ ತಿದ್ದುಪಡಿಯಲ್ಲಿ ನೆಲದ ಬಾಡಿಗೆ, ಮಾರ್ಗಸೂಚಿ ದರ ಮತ್ತು ಪರಿಶೀಲನಾ ಶುಲ್ಕಗಳನ್ನು ಹೊಸದಾಗಿ ವ್ಯಾಖ್ಯಾನಿಸಲಾಗಿತ್ತು.

ಇದನ್ನು ಪ್ರಶ್ನಿಸಿದ್ದ ಅರ್ಜಿದಾರರ ಮನವಿಯನ್ನು ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಬಿಬಿಎಂಪಿ ಈ ಮೇಲ್ಮನವಿ ಯನ್ನು ಹೈಕೋರ್ಟ್‌ನಲ್ಲಿ ಸಲ್ಲಿಸಿತ್ತು.

ಪ್ರಮಾಣ ಪತ್ರ ಸಲ್ಲಿಕೆಗೆ ಗಡುವು

'ಬೆಂಗಳೂರು ಮಹಾನಗರದ ರಸ್ತೆ ಗುಂಡಿಗಳನ್ನು ಮುಚ್ಚುವ ವಿಧಾನಗಳನ್ನು ಪಾಲಿಸಲಾಗುತ್ತಿದೆ ಎಂಬುದು ಸೇರಿದಂತೆ ಈ ಹಿಂದೆ ನ್ಯಾಯಾಲಯ ನೀಡಿರುವ ಎಲ್ಲಾ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಒಂದು ತಿಂಗಳಲ್ಲಿ ಅನುಪಾಲನಾ ಪ್ರಮಾಣ ಪತ್ರ ಸಲ್ಲಿಸಿ' ಎಂದು ಹೈಕೋರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಕೊನೆಯ ಅವಕಾಶ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ ಸಂಬಂಧಿಸಿದಂತೆ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ಉಸ್ತುವಾರಿಯಲ್ಲಿದ್ದ ಅಧಿಕಾರಿಗಳು ವರ್ಗಾವಣೆಯಾಗಿ ಹೊಸ ಅಧಿಕಾರಿಗಳು ಬಂದಿದ್ದಾರೆ. ಒಂದು ವಾರದಲ್ಲಿ ವರದಿ ಸಲ್ಲಿಸಲಾಗುವುದು. 2022ರ ಸೆಪ್ಟೆಂಬರ್‌ನಲ್ಲಿ ನೀಡಿರುವ ನಿರ್ದೇಶನಕ್ಕೆ ಅನುಗುಣವಾಗಿ ಸೂಕ್ತ ಅನುಪಾಲನಾ ವರದಿ ಸಲ್ಲಿಸಲಾಗುವುದು' ಎಂದರು. ಇದಕ್ಕೆ ನ್ಯಾಯಪೀಠ, 'ಈ ವಿಚಾರಗಳನ್ನು ಬಿಬಿಎಂಪಿ ಸ್ವಯಂ ಪ್ರೇರಿತವಾಗಿ ಕೈಗೆತ್ತಿಕೊಳ್ಳಬೇಕಿತ್ತು.

ಆದರೆ, ಇದಿನ್ನೂ ಮುಂದುವರಿಯುತ್ತಲೇ ಇದೆಯಲ್ಲಾ? ದಿನನಿತ್ಯ ಎಷ್ಟು ವರದಿ ಬಂದಿವೆ ಎಂದು ನಾವು ಮಾಧ್ಯಮಗಳಿಂದ ತಿಳಿದುಕೊಳ್ಳುವಂತಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿತು. 'ಹಿಂದಿನ ನಿರ್ದೇಶನಗಳನ್ನು ಪಾಲಿಸಲು ಬಿಬಿಎಂಪಿಗೆ ಕೊನೆಯ ಅವಕಾಶ ನೀಡಲಾಗುತ್ತಿದೆ. ಮುಂದಿನ ವಿಚಾರಣೆ ವೇಳೆಗೆ ಎಲ್ಲಾ ನಿರ್ದೇಶನಗಳಿಗೂ ಅನುಪಾಲನಾ ಪ್ರಮಾಣಪತ್ರ ಸಲ್ಲಿಸಬೇಕು' ಎಂದು ಆದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 9ಕ್ಕೆ ಮುಂದೂಡಿತು.

ಮೆಟ್ರೊ ನಿಲ್ದಾಣ: ಪಿಐಎಲ್ ವಿಲೇವಾರಿ

'ಬೆಟ್ಟಹಲಸೂರು ಕ್ರಾಸ್‌ನಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಸ್ಥಳೀಯರು ನೀಡಿರುವ ಮನವಿಯನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಿ' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್‌ಗೆ (ಬಿಎಂಆರ್‌ಸಿಎಲ್) ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಬೆಟ್ಟಹಲಸೂರು ನಿವಾಸಿಗಳಾದ ಬಿ.ಜಿ.ನಂಜುಂಡಪ್ಪ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮೆಟ್ರೊ ನಿಲ್ದಾಣ ನಿರ್ಮಾಣದ ವಿಷಯವು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಯಾವುದೇ ನಿರ್ದಿಷ್ಟ ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ 2ನೇ ಬಿ ಹಂತದ ನಿರ್ಮಾಣ ಸಂದರ್ಭದಲ್ಲಿ ಬೆಟ್ಟಹಲಸೂರು ಕ್ರಾಸ್ ಬಳಿ ಮೆಟ್ರೊ ನಿಲ್ದಾಣ ನಿರ್ಮಿಸುವ ಸಂಬಂಧ ಅರ್ಜಿದಾರರ ಮನವಿಯನ್ನು ಪರಿಗಣಿಸುವಂತೆ ಸೂಚಿಸಿ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿತು.

ಅರ್ಜಿಯಲ್ಲಿ ಏನಿತ್ತು?: 'ಬೆಟ್ಟಹಲಸೂರು ಕ್ರಾಸ್‌ನಲ್ಲಿ ಮೆಟ್ರೊ ನಿಲ್ದಾಣ ನಿರ್ಮಿಸಲು ಬಿಎಂಆರ್‌ಸಿಎಲ್ 2019 ರಲ್ಲಿ ಉದ್ದೇಶಿಸಿತ್ತು. ಇದಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ ಮತ್ತು ಪರಿಹಾರವನ್ನು ನೀಡಿದೆ. ಆದರೆ, ನಂತರ ನಿಲ್ದಾಣ ನಿರ್ಮಾಣ ವಿಚಾರವನ್ನು ಕೈ ಬಿಟ್ಟಿದೆ. ಉದ್ದೇಶಿತ ಮಾರ್ಗದಲ್ಲಿ ಬೆಟ್ಟಹಲಸೂರು ಕ್ರಾಸ್, ಬಾಗಲೂರು ಕ್ರಾಸ್ ಮತ್ತು ದೊಡ್ಡಜಾಲ ನಿಲ್ದಾಣಗಳ ನಡುವೆ ಸಾಕಷ್ಟು ಅಂತರ ಇರುವ ಕಾರಣ ಪ್ರಯಾಣಿಕರಿಗೆ ಇಲ್ಲಿ ನಿಲ್ದಾಣ ನಿರ್ಮಿಸುವುದು ಅತ್ಯಗತ್ಯ' ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ನ್ಯಾಯಮೂರ್ತಿ ಮೈಕಲ್ ಕುನ್ಹ ಆಯೋಗದ ವರದಿ ರದ್ದು ಕೋರಿ ಅರ್ಜಿ

'ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ವಿಚಾರಣಾ ಆಯೋಗವು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ, ಆರ್‌ಸಿಬಿ ವಿಜಯೋತ್ಸವದ ಆಯೋಜನೆಯ ಹೊಣೆ ಹೊತ್ತಿದ್ದ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿರುವ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

'ನ್ಯಾ.ಕುನ್ಹ ವರದಿ ರದ್ದುಪಡಿಸಬೇಕು. ವರದಿಯ ಪ್ರತಿಯನ್ನು ನಮಗೆ ನೀಡಲು ಆಯೋಗ ಮತ್ತು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರಾದ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನಿರ್ದೇಶಕ ಸುನಿಲ್ ಮ್ಯಾಥ್ಯೂ ಕೋರಿದ್ದಾರೆ.

29ಕ್ಕೆ ವಿಚಾರಣೆ: ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಪಿಐಎಲ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠದಲ್ಲಿ ಗುರುವಾರ ವಿಚಾರಣೆಗೆ ನಿಗದಿಯಾಗಿತ್ತು. ವಿಚಾರಣೆ ವೇಳೆ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ), ಡಿಎನ್‌ಎ ಹಾಗೂ ಆರ್‌ಸಿಬಿ ಪರ ವಕೀಲರು, 'ನ್ಯಾಯಮೂರ್ತಿ ಕುನ್ಹ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ವರದಿಯ ಪ್ರತಿಯನ್ನು ನಮಗಿನ್ನೂ ನೀಡಿಲ್ಲ. ಹಾಗಾಗಿ, ವರದಿ ನೀಡಲು ನಿರ್ದೇಶಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಲಾಗಿದೆ.

ಆಂಧ್ರಪ್ರದೇಶದಲ್ಲಿ ನಗರದ ಉದ್ಯಮಿ, ಪುತ್ರನ ಹತ್ಯೆ

ಹೈದರಾಬಾದ್ (ಪಿಟಿಐ): ಬೆಂಗಳೂರು ಮೂಲದ ಉದ್ಯಮಿ ಕೆ. ವೀರಾಸ್ವಾಮಿ ರೆಡ್ಡಿ ಹಾಗೂ ಅವರ ಮಗ ಕೆ.ವಿ. ಪ್ರಶಾಂತ್ ರೆಡ್ಡಿ ಅವರನ್ನು ಆಂಧ್ರ ಪ್ರದೇಶದ ಪಲ್ನಾಡು ಜಿಲ್ಲೆಯಲ್ಲಿ ಬುಧವಾರ ಹತ್ಯೆ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅನಿಲ್ ಕುಮಾರ್ ರೆಡ್ಡಿ ಎಂಬುವವರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದ ವ್ಯಾಜ್ಯದಿಂದಾಗಿ ಇಬ್ಬರನ್ನೂ ಕೊಲೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ. ಅನಿಲ್ ಕುಮಾರ್ ರೆಡ್ಡಿಯನ್ನು ಕೊಲೆಯ ಪ್ರಮುಖ ಸಂಚುಕೋರ ಎಂದು ಗುರುತಿಸಲಾಗಿದ್ದು, ಅವರ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಕೊಲೆಯಾದ ವೀರಾಸ್ವಾಮಿ ಹಾಗೂ ಪ್ರಶಾಂತ್ ಬೆಂಗಳೂರಿನ ಕಾಡುಗೋಡಿಯ ಚನ್ನಸಂದ್ರದಲ್ಲಿ ವಾಸವಿದ್ದರು. ಚೆಕ್‌ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಲು ನರಸರಾವ್‌ಪೇಟ ನ್ಯಾಯಾಲಯಕ್ಕೆ ತೆರಳಿದ್ದರು. ಈ ವೇಳೆ ನ್ಯಾಯಾಲಯದ ಆವರಣದಿಂದ ಇಬ್ಬರನ್ನೂ ಕಾರಿನಲ್ಲಿ ಅಪಹರಿಸಿಕೊಂಡು ಹೋಗಲಾಗಿತ್ತು. ಇದನ್ನು ನೋಡಿದ ಸ್ಥಳೀಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಹಾಗೂ ಕಾರನ್ನು ಹಿಂಬಾಲಿಸಿಕೊಂಡು ಹೋಗಿದ್ದಾರೆ.

ಬಾಪಟ್ಲ ಜಿಲ್ಲೆಯ ಸಂತಮಾಗಲೂರಿನಲ್ಲಿ ಅಭಿವೃದ್ಧಿಪಡಿಸುತ್ತಿದ್ದ ಡಾವಣೆಯೊಂದರ ಸ್ಥಳಕ್ಕೆ ಕಾರಿನಲ್ಲಿ ತೆರಳಿದ ಆರೋಪಿಗಳು ಅಲ್ಲಿ ತಂದೆ ಮಗ ಇಬ್ಬರನ್ನೂ ಕತ್ತು ಸೀಳಿ ಹತ್ಯೆ ಮಾಡಿ ಪರಾರಿಯಾಗಿದ್ದರು.

ತಂದೆ, ಮಗ ಇಬ್ಬರೂ ರಿಯಲ್ ಎಸ್ಟೇಟ್ ಉದ್ಯಮಿಗಳಾಗಿದ್ದರು. ವ್ಯವಹಾರ ಪಾಲುದಾರರಾದ ಗದ್ದಂ ಅನಿಲ್ ಕುಮಾರ್ ರೆಡ್ಡಿ ಹಾಗೂ ರಘುರಾಮಿ ರೆಡ್ಡಿ ಅವರೊಂದಿಗೆ ಮೃತರಿಗೆ ಹಣಕಾಸಿನ ವ್ಯಾಜ್ಯವಿತ್ತು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ.

ಸ್ಫೋಟಕ ವಸ್ತುಗಳ ಪತ್ತೆ ಪ್ರಕರಣ: ತನಿಖೆಗೆ ಆರು ತಂಡ

ಬೆಂಗಳೂರು: ಕಲಾಸಿಪಾಳ್ಯದ ಬಿಎಂಟಿಸಿ ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ಬಳಿ ಸ್ಫೋಟಕ ವಸ್ತುಗಳು ಪತ್ತೆಯಾಗಿದ್ದ ಪ್ರಕರಣದ ತನಿಖೆಗೆ ಆರು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ವಿಭಾಗದ ಕಲಾಸಿಪಾಳ್ಯ ಪೊಲೀಸ್ ಠಾಣೆಯಲ್ಲಿ ಅನಾಮಧೇಯ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಾಗಿತ್ತು. ನಿಲ್ದಾಣದ ಎಟಿಎಸ್ ಮಲ್ಲಪ್ಪ ಅವರು ದೂರು ನೀಡಿದ್ದರು.

ಚೀಲದಲ್ಲಿ ಆರು ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್ ಪತ್ತೆ ಆಗಿದ್ದವು. ಬುಧವಾರ ಮಧ್ಯಾಹ್ನ ಸ್ಥಳಕ್ಕೆ ಕಲಾಸಿಪಾಳ್ಯ ಠಾಣೆಯ ಪೊಲೀಸರು, ಬಾಂಬ್ ತಪಾಸಣೆ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತಪಾಸಣೆ ನಡೆಸಿ, ಅವುಗಳನ್ನು ವಶಕ್ಕೆ ಪಡೆದುಕೊಂಡಿದ್ದರು. 'ಕ್ವಾರಿಗಳಿಗೆ ಬಳಸಲು ಜಿಲೆಟಿನ್ ಕಡ್ಡಿಗಳನ್ನು ಕೊಂಡೊಯ್ಯುತ್ತಿರುವಂತೆ ಮೇಲ್ನೋಟಕ್ಕೆ ಕಂಡುಬಂದಿದೆ. ಆರೋಪಿಯ ಪತ್ತೆಗಾಗಿ ತನಿಖೆ ನಡೆಸಲಾಗುತ್ತಿದೆ. ಬಿಎಂಟಿಸಿ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲ ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ. ವ್ಯಕ್ತಿಯೊಬ್ಬ ಬಂದು ಶೌಚಾಲಯದ ಹೊರಭಾಗದಲ್ಲಿ ಚೀಲವನ್ನು ಇಟ್ಟು ಹೋಗಿರುವುದು ಕಂಡುಬಂದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೋದಿ ವಿರುದ್ಧ ಪೋಸ್ಟ್: ತಡೆ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಂಚಿಕೊಂಡ ಆರೋಪದಡಿ ಮಳವಳ್ಳಿ ತಾಲ್ಲೂಕಿನ ಮೆಹದಿ ನಗರದ ಜಾವೀದ್ ಪಾಷ ವಿರುದ್ಧದ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧ ಮಂಡ್ಯ ಜಿಲ್ಲೆಯ ಕಿರುಗಾವಲು ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು ಹಾಗೂ ನನ್ನ ಬಂಧನವನ್ನು ಅಕ್ರಮ ಎಂದು ಘೋಷಿಸಬೇಕು' ಎಂದು ಕೋರಿ ಜಾವೀದ್ ಪಾಷ (34) ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: 'ಎಐ ತಂತ್ರಜ್ಞಾನದ ಮೂಲಕ ವಿರೂಪಗೊಳಿಸಲಾದ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರ ಮತ್ತು ಕೆಲವು ಪದಗಳನ್ನು ಬಳಸಲಾದ ಅವಹೇಳನಕಾರಿ ಪೋಸ್ಟ್ ಅನ್ನು ಜಾವೀದ್ ಪಾಷ 2025ರ ಮೇ 8ರಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ' ಎಂಬ ಆರೋಪದಡಿ ಕಿರುಗಾವಲಿನ ಮಹೇಶ್ ಕಿರುಗಾವಲು ಪೊಲೀಸ್ ಠಾಣೆಗೆ ಮೇ 9ರಂದು ದೂರು ನೀಡಿದ್ದರು. ಈ ದೂರು ಆಧರಿಸಿ ಭಾರತೀಯ ದಂಡ ಸಂಹಿತೆ–1860ರ ಕಲಂ 152, 192 ಮತ್ತು 340ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ನಂತರ ಜಾವೀದ್ ಪಾಷ ಅವರನ್ನು ಬಂಧಿಸಲಾಗಿತ್ತು.

ಘಾಟಿ ಸುಬ್ರಹ್ಮಣ್ಯ 26ರಿಂದ ಪ್ಯಾಕೇಜ್ ಪ್ರವಾಸ

ಬೆಂಗಳೂರು: ಕೆಎಸ್‌ಆರ್‌ಟಿಸಿ ಕೇಂದ್ರೀಯ ವಿಭಾಗದಿಂದ ಬೆಂಗಳೂರು–ಘಾಟಿ ಸುಬ್ರಹ್ಮಣ್ಯ ಮಾರ್ಗದಲ್ಲಿ ಪ್ಯಾಕೇಜ್ ಪ್ರವಾಸವು ಜುಲೈ 26ರಂದು ಆರಂಭಗೊಳ್ಳಲಿದೆ.

ವಾರಾಂತ್ಯದ ದಿನಗಳಲ್ಲಿ ಅಂದರೆ ಶನಿವಾರ ಮತ್ತು ಭಾನುವಾರ ಈ ಪ್ರವಾಸ ಇರಲಿದೆ. ಬೆಳಿಗ್ಗೆ 6.30ಕ್ಕೆ ಬೆಂಗಳೂರಿನಿಂದ ಹೊರಡಲಿದೆ. ಶಿವಗಂಗೆಯಲ್ಲಿ ಗಂಗಾಧರೇಶ್ವರ ದೇವಸ್ಥಾನ, ಹೊನ್ನಮ್ಮ ದೇವಿ ದೇವಸ್ಥಾನ ವೀಕ್ಷಣೆ ಮಾಡಿ ಅಲ್ಲಿಂದ ಸಿದ್ಧಗಂಗಾ ಮಠ, ದೇವರಾಯನ ದುರ್ಗ ಭೋಗ ನರಸಿಂಹ ದೇವಸ್ಥಾನ, ಗೊರವನಹಳ್ಳಿ ಮಹಾಲಕ್ಷ್ಮೀ ದೇವಸ್ಥಾನ, ವಿಧುರಾಶ್ವಥದ ಅಶ್ವತ್ಥ ನಾರಾಯಣ ಸ್ವಾಮಿ ದೇವಸ್ಥಾನಗಳನ್ನು ವೀಕ್ಷಣೆ ಮಾಡಿ ಘಾಟಿ ಸುಬ್ರಹ್ಮಣ್ಯಕ್ಕೆ ಬಸ್ ತೆರಳಲಿದೆ. ಅಲ್ಲಿ ಸುಬ್ರಹ್ಮಣ್ಯ ಮತ್ತು ಲಕ್ಷ್ಮೀ ನರಸಿಂಹ ದೇವಸ್ಥಾನ ವೀಕ್ಷಣೆ ಮಾಡಿ ಬೆಂಗಳೂರಿಗೆ ವಾಪಸ್ ಹೊರಡಲಿದೆ. ರಾತ್ರಿ 8ಕ್ಕೆ ಬೆಂಗಳೂರು ತಲುಪಲಿದೆ.

ಅಶ್ವಮೇಧ ಕ್ಲಾಸಿಕ್ ಸಾರಿಗೆ ಬಸ್‌ನಲ್ಲಿ ಪ್ರವಾಸ ಇರಲಿದ್ದು, ವಯಸ್ಕರಿಗೆ ₹ 650 ಮತ್ತು 6ರಿಂದ 12 ವರ್ಷದವರಿಗೆ ₹ 500 ದರ ನಿಗದಿ ಮಾಡಲಾಗಿದೆ. ವೆಬ್ ಸೈಟ್: www.ksrtc.in & www.ksrtc.karnataka.gov.in ಮೂಲಕ ಟಿಕೆಟ್ ಪಡೆಯಬಹುದು. ಮಾಹಿತಿಗಾಗಿ 080-26252625, 7760990100/560/287

ಪತ್ನಿ ಕೊಂದ ಪತಿ ಬಂಧನ: ಹೆಣ್ಣೂರು ಠಾಣೆಯಲ್ಲಿ ಪ್ರಕರಣ ದಾಖಲು

ಮೃತದೇಹದೊಂದಿಗೆ 3 ದಿನ ಕಳೆದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ಪತ್ನಿಯನ್ನು ಕೊಲೆ ಮಾಡಿ ಮೃತದೇಹದ ಜತೆಗೆ ಮೂರು ದಿನವಿದ್ದ ಆರೋಪಿಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ಶಿವಂ(20) ಬಂಧಿತ. ಪತ್ನಿ ಸುಮನಾ ಅವರನ್ನು ಜುಲೈ 21ರಂದು ಆರೋಪಿ ಕೊಲೆ ಮಾಡಿ ಜುಲೈ 23ರ ವರೆಗೆ ಶವದ ಜತೆಯೇ ಕಾಲ ಕಳೆದಿದ್ದ ಎಂದು ಪೊಲೀಸರು ಹೇಳಿದರು.

ಉತ್ತರ ಪ್ರದೇಶದ ದಂಪತಿ ಆರು ತಿಂಗಳ ಹಿಂದೆ ನಗರಕ್ಕೆ ಬಂದಿದ್ದರು. ಥಣಿಸಂದ್ರ ಬಳಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಶಿವಂ ಬಣ್ಣ ಬಳಿಯುವ ಕೆಲಸ ಮಾಡುತ್ತಿದ್ದ. ಸುಮನಾ ಗೃಹಿಣಿ. ಆರು ತಿಂಗಳ ಹಿಂದೆ ವಿವಾಹವಾಗಿದ್ದರು.

ಸೋಮವಾರ ರಾತ್ರಿ ಕೌಟುಂಬಿಕ ವಿಚಾರಕ್ಕಾಗಿ ಇಬ್ಬರ ನಡುವೆ ಜಗಳ ನಡೆದಿತ್ತು. ಮದ್ಯದ ನಶೆಯಲ್ಲಿದ್ದ ಶಿವಂ, ಪತ್ನಿಯ ಮುಖ ಹಾಗೂ ಮೂಗಿಗೆ ಬಲವಾಗಿ ಕೈಯಿಂದ ಹೊಡೆದಿದ್ದ. ಆಗ, ಪ್ರಜ್ಞೆತಪ್ಪಿ ಸುಮನಾ ಅವರು ಕುಸಿದು ಬಿದ್ದಿದ್ದರು. ಬಳಿಕ ಎಚ್ಚರಗೊಂಡು ಹೋಗಿ ಮಲಗಿದ್ದರು. ಮಲಗಿದ ಸ್ಥಳದಲ್ಲೇ ಸುಮನಾ ಅವರು ಮೃತಪಟ್ಟಿದ್ದರು. ಅದನ್ನು ಅರಿಯದ ಆರೋಪಿ ಪತ್ನಿ ಮಲಗಿದ್ದಾಳೆ ಎಂದು ಭಾವಿಸಿ ಮರುದಿನ ಕೆಲಸಕ್ಕೆ ಹೋಗಿದ್ದ ಎಂದು ಪೊಲೀಸರು ತಿಳಿಸಿದರು.

ಮಂಗಳವಾರ ಸಂಜೆ ಕೆಲಸದಿಂದ ಮನೆಗೆ ಬಂದು ಪತ್ನಿಯನ್ನು ಕಂಡು ಎಚ್ಚರಿಸಲು ಹೋಗಿದ್ದ. ಆಗ ಆಕೆ ಮೃತಪಟ್ಟಿರುವುದು ಗೊತ್ತಾಗಿತ್ತು. ಆತಂಕಗೊಂಡ ಶಿವಂ, ಯಾರಿಗೂ ವಿಷಯ ತಿಳಿಸದೇ ಸುಮ್ಮನಾಗಿದ್ದ. ಎಂದಿನಂತೆ ದಿನನಿತ್ಯದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ. ಶವದ ಪಕ್ಕದಲ್ಲೇ ಅಡುಗೆ ಮಾಡಿ ಮದ್ಯ ಸೇವಿಸಿದ್ದ. ಕೊಳೆತ ವಾಸನೆ ಬರುತ್ತಿದ್ದಂತೆ ಸ್ಥಳೀಯರು ಸಂಶಯ ವ್ಯಕ್ತಪಡಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಮೃತದೇಹ ಪರಿಶೀಲಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದರು. ಮೃತದೇಹವನ್ನು ಅಂಬೇಡ್ಕರ್ ಆಸ್ಪತ್ರೆಗೆ ರವಾನಿಸಿದ್ದರು. ಪ್ರಕರಣ ದಾಖಲಿಸಿಕೊಂಡು ಉತ್ತರ ಪ್ರದೇಶಕ್ಕೆ ಪರಾರಿಯಾಗಲು ಹೊರಟಿದ್ದ ಆರೋಪಿಯನ್ನು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಯುವತಿಯರ ಫೋಟೊ ಅಪ್‌ಲೋಡ್: ಆರೋಪಿ ಬಂಧನ

ಬೆಂಗಳೂರು: ಯುವತಿಯರ ಫೋಟೊ, ವಿಡಿಯೊ ತೆಗೆದು ಅಸಭ್ಯ ರೀತಿಯಲ್ಲಿ ಕಾಣುವಂತೆ ಸಾಮಾಜಿಕ ಜಾಲತಾಣದಲ್ಲಿ ಹಾಕುತ್ತಿದ್ದ ಆರೋಪಿಯನ್ನು ಅಶೋಕ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದಿಲವರ್ ಹುಸೇನ್ (19) ಬಂಧಿತ ಆರೋಪಿ.

ದಿಲವರ್ ಹುಸೇನ್

ನಗರದ ಎಂ.ಜಿ ರಸ್ತೆ ಮತ್ತು ಬ್ರಿಗೇಡ್ ರಸ್ತೆಯಲ್ಲಿ ಯುವತಿಯರ ಅನುಮತಿ ಇಲ್ಲದೆ ಅವರಿಗೆ ಗೊತ್ತಾಗದಂತೆ ಫೋಟೊ, ವಿಡಿಯೊ ಸೆರೆ ಹಿಡಿದು, ತನಗೆ ಬೇಕಾದಂತೆ ಎಡಿಟ್ ಮಾಡಿ ಹೆಚ್ಚು ಲೈಕ್‌ಗಳಿಸಲು ಆ ಫೋಟೊಗಳನ್ನು 'ಬೆಂಗಳೂರು ನೈಟ್‌ಲೈಫ್' ಎಂದು ಬರೆದು ಬಂಗಾಳಿ ಹಾಡುಗಳನ್ನು ಸೇರಿಸಿ ದಿಲ್ಬರ್ ಜಾನಿ ಎಂಬ ಇನ್‌ಸ್ಟಾಗ್ರಾಂ ಪೇಜ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ಅಶೋಕನಗರ ಠಾಣೆ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸಿ, ಖಚಿತ ಮಾಹಿತಿ ಕಲೆ ಹಾಕಿ ಆರೋಪಿಯನ್ನು ಬಂಧಿಸಿದ್ದಾರೆ. ಆತನ ಮೊಬೈಲ್ ವಶಪಡಿಸಿಕೊಂಡು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಯುವತಿಯ ತುಟಿ ಕಚ್ಚಿದ ಆರೋಪಿ ಸೆರೆ

ಮರೂಫ್ ಷರೀಫ್

ಬೆಂಗಳೂರು: ಮನೆಗೆ ದಿನಸಿ ತರಲು ಹೋಗಿದ್ದ ಯುವತಿಯ ತುಟಿ ಕಚ್ಚಿ ವಿಕೃತಿ ಮೆರೆದ ಆರೋಪಿಯನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ

ಸಂತ್ರಸ್ತೆ ನೀಡಿದ ದೂರು ಆಧರಿಸಿ, ಬರ್ಡ್ ಶಾಪ್ ಮಾಲೀಕ ಮರೂಫ್ ಷರೀಫ್ (28) ನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಗೋವಿಂದಪುರದಲ್ಲಿ ವಾಸವಾಗಿರುವ ಯುವತಿ ಮನೆಗೆ ದಿನಸಿ ತರಲು ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಈ ವೇಳೆ ಹಿಂಬಾಲಿಸಿದ ಆರೋಪಿ ನಡುರಸ್ತೆಯಲ್ಲಿ ಆಕೆಯ ತುಟಿ ಕಚ್ಚಿ ಪರಾರಿಯಾಗಿದ್ದ. 'ಯುವತಿ ದ್ವಿಚಕ್ರ ವಾಹನದಲ್ಲಿ ಚಲಾಯಿಸಿದ್ದರಿಂದ ರಸ್ತೆಯಲ್ಲಿನ ನೀರು ತನ್ನ ಮೇಲೆ ಬಿದ್ದಿತ್ತು. ಹೀಗಾಗಿ ಕೃತ್ಯವೆಸಗಿದೆ' ಎಂದು ವಿಚಾರಣೆ ವೇಳೆ ಆರೋಪಿ ಹೇಳಿಕೆ ನೀಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಕಾಲ್ತುಳಿತ: ಮೃತ ಬಾಲಕಿಯ ಚಿನ್ನ ಕದ್ದ ಕಳ್ಳರು

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ದುರಂತದಲ್ಲಿ ಮೃತಪಟ್ಟ ಬಾಲಕಿ ದಿವ್ಯಾಂಶಿ (13) ಧರಿಸಿದ್ದ ಚಿನ್ನಾಭರಣ ಕಳ್ಳತನವಾಗಿದ್ದು, ಈ ಸಂಬಂಧ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದಿವ್ಯಾಂಶಿ ಅವರ ತಾಯಿ ಅಶ್ವಿನಿ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮರಣೋತ್ತರ ಪರೀಕ್ಷೆ ಬಳಿಕ ಮಗಳ ಮೃತದೇಹವನ್ನು ಹಸ್ತಾಂತರಿಸಿದ್ದರು. ಮಗಳು ಧರಿಸಿದ್ದ 6 ಗ್ರಾಂ ತೂಕದ ಕಿವಿಯೋಲೆ ಹಾಗೂ 5ರಿಂದ 6 ಗ್ರಾಂ ತೂಕದ ಚಿನ್ನದ ಸರ ನೀಡಿರಲಿಲ್ಲ. ಮರಣೋತ್ತರ ಪರೀಕ್ಷೆ ನಡೆಸಿದ ಆಸ್ಪತ್ರೆಗೆ ತೆರಳಿ ಪ್ರಶ್ನಿಸಿದಾಗ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹೀಗಾಗಿ, ಶವ ಪರೀಕ್ಷೆ ವೇಳೆ ಯಾರೋ ಚಿನ್ನಾಭರಣ ಕಳ್ಳತನ ಮಾಡಿದ್ದಾರೆ ಎಂದು ಅಶ್ವಿನಿ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರ್‌ಸಿಬಿ ಐಪಿಎಲ್ ಟ್ರೋಫಿ ಜಯಿಸಿದ್ದ ಅಂಗವಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಆಯೋಜಿಸಲಾಗಿತ್ತು. ಯಲಹಂಕದ ಕಟ್ಟಿಗೇನಹಳ್ಳಿ ನಿವಾಸಿ ದಿವ್ಯಾಂಶಿ ಸಂಭ್ರಮಾಚರಣೆ ನೋಡಲು ಬಂದಿದ್ದಳು. ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟಿದ್ದಳು.

'ಬೌರಿಂಗ್ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆದಿತ್ತು. ಶವಪರೀಕ್ಷೆ ನಡೆಯುವಾಗ ಚಿನ್ನಾಭರಣ ಇರಲಿಲ್ಲ. ಪ್ರಕ್ರಿಯೆಗಳನ್ನು ಪೂರೈಸಿದ ಬಳಿಕ ಯಾರೋ ಕಳವು ಮಾಡಿದ್ದಾರೆ' ಎಂದು ಅಶ್ವಿನಿ ಆರೋಪಿಸಿದ್ದಾರೆ.

ನಗರದಲ್ಲಿ ಇಂದು



ಚಂದ್ರಶೇಖರ ಕಂಬಾರ

ಪುಸ್ತಕ ಮಳಿಗೆ ಉದ್ಘಾಟನೆ ಸಮಾರಂಭ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಉಪಸ್ಥಿತಿ: ಕೆ. ಶ್ರೀನಿವಾಸರಾವ್, ಬಸವರಾಜ ಕಲ್ಗುಡಿ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕಚೇರಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಉದ್ಯೋಗ ಮೇಳ: ಚಾಲನೆ: ಕೆ.ಆರ್. ಜಲಜಾ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ನೂತನ ಅಕಾಡೆಮಿಕ್ ಬ್ಲಾಕ್, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 9

ಕೃಷ್ಣನ್ ರಂಗರಾಜು ಅವರ 'ಡಿಜಿಟಲ್ ಕಲಾಕೃತಿಗಳ' ಪ್ರದರ್ಶನ: ಉದ್ಘಾಟನೆ: ಎಂ.ಎಸ್. ಮೂರ್ತಿ, ಅಧ್ಯಕ್ಷತೆ: ಎನ್. ಮನು ಚಕ್ರವರ್ತಿ, ಸ್ಥಳ: ದೇವರಾಜ್ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಭೂವಿಜ್ಞಾನ ಯುವ ಚಳವಳಿ ಕಾರ್ಯಾಗಾರ: ಅತಿಥಿಗಳು: ಶೈಲೇಶ್ ನಾಯಕ್, ನಿರ್ ಓರಿಯನ್, ಜಗ್ವೀರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಪ್ರಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ, ಕನಕಪುರ ರಸ್ತೆ, ಬೆಳಿಗ್ಗೆ 10

ಪ್ರಥಮ ವರ್ಷದ ತರಗತಿಗಳ ಉದ್ಘಾಟನೆ: ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಅತಿಥಿಗಳು: ಅಶ್ವತ್ಥ ನಾರಾಯಣ್, ಟಿ.ವಿ. ರಾಜು, ಚಿಕ್ಕಯ್ಯ, ಆಯೋಜನೆ ಮತ್ತು ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ಸ್ಟಡೀಸ್, ನಟಭೈರವ ವಿ. ವಜ್ರಮುನಿ ರಸ್ತೆ, ಒಂಬತ್ತನೇ ಮುಖ್ಯರಸ್ತೆ, ಎರಡನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶನ: ತಂಡ: ಕಲಾ ಗಂಗೋತ್ರಿ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ ಮತ್ತು ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜು, ವಸಂತನಗರ, ಮಧ್ಯಾಹ್ನ 1.30

'ನೃತ್ಯ ರೂಪಕ ಉತ್ಸವ–2025, ಪ್ರಶಸ್ತಿ ಪ್ರದಾನ' ಸಮಾರಂಭ: ಅತಿಥಿಗಳು: ಎಂ.ಆರ್. ಗೋವಿಂದಸ್ವಾಮಿ, ಮಹೇಂದ್ರ ಮುನ್ನೋತ್, ವೈ.ಕೆ. ಸಂಧ್ಯಾ ಶರ್ಮಾ, ಉಷಾ ಬಸಪ್ಪ, ರಮಾ ಎಸ್., ಸಂತಾನಲಕ್ಷ್ಮಿ, ಕೆ.ಸಿ. ಸಿಂಗ್, ಪ್ರಶಸ್ತಿ ಪುರಸ್ಕೃತರು: ವರ್ಧಮಾನ ಕಳಸೂರು, ಶ್ರೀಮತಿ ವರ್ಧಮಾನ್, ಮಂದಾರ ಸಂಪತ್ ಕುಮಾರ್, ಐಶ್ವರ್ಯ, ನಾ. ವೆಂಕಟಾಚಲಪತಿ, ಇರ್ಷಾದ್ ಅಹಮದ್ ಶೇಖ್, ಶ್ವೇತಾ, ಸುದರ್ಶನ್, ಬಿ.ಜಿ. ಪ್ರಕಾಶ್, ಆಯೋಜನೆ: ನಾಟ್ಯ ಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ, ಸ್ಥಳ: ರವೀಂದ್ರ ಕಲಾ ಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಬೆಂಗಳೂರು ಹಬ್ಬ: ಅತಿಥಿ: ಜಮೀರ್ ಅಹಮದ್ ಖಾನ್, ಆಯೋಜನೆ: ಬಿಬಿಎಂಪಿ, ಸ್ಥಳ: ಮಕ್ಕಳ ಕೂಟ, ಚಾಮರಾಜಪೇಟೆ, ಸಂಜೆ 4

ವಚನ ಶ್ರಾವಣ–2025 ಸಮಾರಂಭ: ಉದ್ಘಾಟನೆ: ಎಸ್. ಷಡಕ್ಷರಿ, ಅಧ್ಯಕ್ಷತೆ: ಮಹೇಶ ಬೆಲ್ಲದ, ಆಶಯ ನುಡಿ: ಎಸ್. ಪಿನಾಕಪಾಣಿ, ಅತಿಥಿಗಳು: ಎಸ್.ರಾಜು, ಚಂದ್ರಶೇಖರ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಗಂಗಾಂಬಿಕೆ–ಮುನಿರಾಜಪ್ಪ ಅವರ ಸ್ವಗೃಹ, ಹೊಂಬೆಳಕು, ಎರಡನೇ ಮುಖ್ಯರಸ್ತೆ, ಬಿನ್ನಿ ಬಡಾವಣೆ, ವಿಜಯನಗರ, ಸಂಜೆ 5

ವಾದ್ಯ ಸಂಗೀತ ಕಛೇರಿ: ಕೊಳಲು: ಸುಮನಾ ಶಿವರಾಂ, ಮ್ಯಾಂಡೋಲಿನ್: ಶಿವರಾಮ್, ಮೃದಂಗ: ಅನಿರುದ್ಧ್ ವಾಸುದೇವ, ಆಯೋಜನೆ: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಮಲ್ಟಿ ಮೀಡಿಯಾ ಹಾಲ್, ನ್ಯಾಷನಲ್ ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 5

'ಐ ಆ್ಯಮ್ ಆನ್ ದ ಹಿಟ್ ಲೀಸ್ಟ್', 'ಗೌರಿ ಫೈಲ್ಸ್' ಪತ್ರಕರ್ತೆಯೊಬ್ಬರ ಹತ್ಯೆ ಮತ್ತು ಅದರ ಪರಿಣಾಮಗಳ ಕುರಿತು ಸಂವಾದ: ರೋಲೋ ರೋಮಿಗ್, ಪುಷ್ಪಮಾಲಾ, ಶಿವಸುಂದರ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ನಾಲ್ಕನೇ ಮುಖ್ಯರಸ್ತೆ, ಎರಡನೇ ಹಂತ, ದೊಮ್ಮಲೂರು, ಸಂಜೆ 6.30ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪುತ್ರಿ ಕೊಂದು ಆತ್ಮಹತ್ಯೆಗೆ ಯತ್ನಿಸಿದ ತಾಯಿ

ನೆಲಮಂಗಲ: ಕೌಟುಂಬಿಕ ಕಲಹದಿಂದ ಬೇಸತ್ತ ಮಹಿಳೆಯೊಬ್ಬರು ಐದು ವರ್ಷದ ಮಗಳನ್ನು ಕೊಂದು ತಾನೂ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಂಗಳೂರು ಉತ್ತರ ತಾಲ್ಲೂಕಿನ ಕೆ.ಜಿ.ಲಕ್ಕೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಜಯರಾಮ್(34) ಮತ್ತು ಮಚೋಹಳ್ಳಿಯ ಮಹಾಲಕ್ಷ್ಮಿ(27) ಎಂಟು ವರ್ಷಗಳ ಹಿಂದೆ ಪ್ರೀತಿಸಿ ಮದುವೆ ಆಗಿದ್ದರು. ಕಳೆದ ಎರಡು ವರ್ಷದಿಂದ ಜಯರಾಮ್‌ಗೆ ಉದ್ಯೋಗವಿರಲಿಲ್ಲ, ವಿಪರೀತ ಮದ್ಯ ಸೇವನೆ ಮಾಡುತ್ತಿದ್ದರು ಎನ್ನಲಾಗಿದೆ.

ಮನೆಯಲ್ಲಿ ನಿತ್ಯವೂ ಜಗಳ ನಡೆಯುತ್ತಿತ್ತು. ಬುಧವಾರ ಜಗಳ ತಾರಕಕ್ಕೇರಿ, ಮಹಾಲಕ್ಷ್ಮಿ ಅವರು ಪುತ್ರಿ ಸಿರಿ(5) ಜೊತೆಗೆ ಕೋಣೆಗೆ ತೆರಳಿ ಬಾಗಿಲು ಹಾಕಿಕೊಂಡು ಮಗಳ ಕತ್ತು ಹಿಸುಕಿ ಕೊಂದು, ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಮನೆಯವರು ಕೂಡಲೇ ಬಾಗಿಲು ಒಡೆದು ಮಹಾಲಕ್ಷ್ಮಿ ಅವರನ್ನು ರಕ್ಷಿಸಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದರು.

ಬೆಂಗಳೂರು ಗ್ರಾಮಾಂತರ ಎಸ್‌ಪಿ ವೆಂಕಟೇಶ್ ಪ್ರಸನ್ನ ಮತ್ತು ಇನ್‌ಸ್ಪೆಕ್ಟರ್ ಮುರಳೀಧರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಾದನಾಯಕನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಪತಿ ಜಯರಾಮ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮೋದಿ ಪ್ರವಾಸ: ₹67 ಕೋಟಿ ವೆಚ್ಚ

ನವದೆಹಲಿ(ಪಿಟಿಐ): ಅಮೆರಿಕ ಹಾಗೂ ಫ್ರಾನ್ಸ್‌ಗೆ ನೀಡಿದ ಭೇಟಿಯೂ ಸೇರಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಸಕ್ತ ವರ್ಷ ವಿವಿಧ ದೇಶಗಳಿಗೆ ಕೈಗೊಂಡಿರುವ ಪ್ರವಾಸಕ್ಕೆ ಈ ವರೆಗೆ ₹67 ಕೋಟಿ ವೆಚ್ಚವಾಗಿದೆ.

2021ರಿಂದ 2024ರ ವರೆಗಿನ ಅವಧಿಯಲ್ಲಿ ಅವರು ಕೈಗೊಂಡಿದ್ದ ವಿದೇಶ ಪ್ರವಾಸಗಳಿಗೆ ತಗುಲಿದ ಒಟ್ಟು ವೆಚ್ಚ ₹295 ಕೋಟಿ ಎಂದು ಕೇಂದ್ರ ಸರ್ಕಾರ ನೀಡಿರುವ ದತ್ತಾಂಶ ಹೇಳುತ್ತವೆ.

ಟಿಎಂಸಿ ಸಂಸದ ಡೆರೆಕ್ ಒಬ್ರಯಾನ್ ಅವರ ಪ್ರಶ್ನೆಗೆ ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ ಸಿಂಗ್ ಅವರು ರಾಜ್ಯಸಭೆಯಲ್ಲಿ ಈ ಮಾಹಿತಿ ನೀಡಿದ್ದಾರೆ.

ಆದರೆ, ಮಾರಿಷಸ್, ಸೈಪ್ರಸ್, ಕೆನಡಾ, ಕ್ರೊಯೇಷಿಯಾ, ಘಾನಾ, ಟ್ರಿನಿಡಾಡ್ ಮತ್ತು ಟೊಬ್ಯಾಗೊ, ಅರ್ಜೆಂಟಿನಾ, ಬ್ರೆಜಿಲ್ ಹಾಗೂ ನಮೀಬಿಯಾಕ್ಕೆ ಈ ವರ್ಷ ನೀಡಿರುವ ಭೇಟಿಗೆ ಸಂಬಂಧಿಸಿದ ವೆಚ್ಚದ ಮಾಹಿತಿ ಲಭ್ಯವಿಲ್ಲ.

ಈ ವರ್ಷ ಕೈಗೊಂಡಿದ್ದ ಫ್ರಾನ್ಸ್ ಪ್ರವಾಸಕ್ಕೆ ₹25 ಕೋಟಿ ಖರ್ಚಾಗಿದೆ. ಇದು ಈ ವರ್ಷ ಮಾಡಲಾದ ಗರಿಷ್ಠ ವೆಚ್ಚವಾಗಿದೆ. 2023ರಲ್ಲಿ ಕೈಗೊಂಡಿದ್ದ ಅಮೆರಿಕ ಪ್ರವಾಸಕ್ಕೆ ₹22 ಕೋಟಿ ವೆಚ್ಚವಾಗಿತ್ತು ಎಂದು ಸಚಿವ ಸಿಂಗ್ ಮಾಹಿತಿ ನೀಡಿದ್ದಾರೆ.

ಚಿತ್ರಾವಳಿ

ದಕ್ಷಿಣ ವಲಯ ಬಿಬಿಎಂಪಿ ಅಧಿಕಾರಿಗಳು ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಚಿಕ್ಕಪೇಟೆ ಶಾಸಕ ಉದಯ್ ಬಿ. ಗರುಡಾಚಾರ್ ಅವರನ್ನು ಸನ್ಮಾನಿಸಲಾಯಿತು. ಬಿಬಿಎಂಪಿ ವಲಯ ಆಯುಕ್ತ ದಿಗ್ವಿಜಯ್ ಬೊಡ್ಕೆ, ಜಂಟಿ ಆಯುಕ್ತೆ ಮಧು ಪಾಟೀಲ, ಕಾರ್ಯಪಾಲಕ ಎಂಜಿನಿಯರ್ ಪ್ರದೀಪ್ ಕುಮಾರ್ ಎನ್., ಬಿಬಿಎಂಪಿ ಮಾಜಿ ಸದಸ್ಯ ಧನರಾಜ್, ಉದಯಭಾನು ಕಲಾ ಸಂಘದ ನರಸಿಂಹ, ರಂಗ ಸಂಘಟಕ ಕೆ.ಎಚ್. ಕುಮಾರ್ ಉಪಸ್ಥಿತರಿದ್ದರು

ಆಟಿದ ಅಮಾವಾಸ್ಯೆ ಪ್ರಯುಕ್ತ ತುಳುಕೂಟ ಬೆಂಗಳೂರು ವತಿಯಿಂದ ತುಳುನಾಡಿನ ಆಚರಣಾ ಪದ್ಧತಿಯಂತೆ ಗುರುವಾರ ಹಾಲೆಮರದ ಕಷಾಯ ವಿತರಿಸಲಾಯಿತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸುಳ್ಳು ಆರೋಪ: ಕ್ರಮಕ್ಕೆ ಆಗ್ರಹಿಸಿ ಪೊಲೀಸರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರಾಮೇಶ್ವರ ಕೆಫೆಯ ಔಟ್‌ಲೆಟ್‌ನಲ್ಲಿ ನೀಡಲಾದ ಆಹಾರದಲ್ಲಿ ಹುಳುವೊಂದು ಪತ್ತೆಯಾಗಿದೆ ಎಂದು ಸುಳ್ಳು ಆರೋಪ ಹೊರಿಸಿ, ಹಣ ಸುಲಿಗೆಗೆ ಯತ್ನಿಸಿದ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಶಾಖೆಯ ಮುಖ್ಯಸ್ಥ ಸುಮಂತ್ ಅವರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದಾರೆ.

ಕೆಫೆಗೆ ಬಂದ ಕರೆಗಳ ವಿವರ, ವಾಟ್ಸ್‌ಆ್ಯಪ್‌ನಲ್ಲಿ ಬಂದ ಸಂದೇಶದ ಸ್ಕ್ರೀನ್‌ಶಾಟ್‌ಗಳು ಮತ್ತು ಇತರೆ ದಾಖಲೆಗಳನ್ನು ಪೊಲೀಸರಿಗೆ ಸಲ್ಲಿಸಿ, ಬ್ಲ್ಯಾಕ್‌ಮೇಲ್ ಪ್ರಯತ್ನದ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಸುಮಂತ್ ಅವರು ಕೋರಿದ್ದಾರೆ.

'ಗುರುವಾರ ಬೆಳಿಗ್ಗೆ ಏಳು ವ್ಯಕ್ತಿಗಳ ಗುಂಪು ಬಂದು, ಕೆಫೆಯಲ್ಲಿ ಗೊಂದಲ ಸೃಷ್ಟಿಸಿತು. ಬಡಿಸಿದ ಆಹಾರದಲ್ಲಿ ಹುಳವಿದೆ ಎಂದು ಸುಳ್ಳು ಆರೋಪ ಹೊರಿಸಿ, ನಂತರ ವ್ಯಕ್ತಿಗಳು ಪರಿಹಾರ ನೀಡದಿದ್ದರೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕುವುದಾಗಿ ಬೆದರಿಕೆ ಹಾಕಿದ್ದರು. ಕೆಲ ಹೊತ್ತಿನ ಬಳಿಕ ಅಪರಿಚಿತ ಸಂಖ್ಯೆಯಿಂದ ಕರೆಯೊಂದು ಬಂತು. ಕರೆ ಮಾಡಿದ್ದ ವ್ಯಕ್ತಿ ₹25 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದಿ ರಾಮೇಶ್ವರ ಕೆಫೆಯ ಸಂಸ್ಥಾಪಕಿ ದಿವ್ಯಾ ರಾಘವ್ ಅವರು ಘಟನೆಯ ಸಂಬಂಧ ಮಾಹಿತಿ ನೀಡಿದ್ದು, 'ಆಹಾರ ತಯಾರಿಕೆಯ ಸುರಕ್ಷತೆ ಮತ್ತು ನೈರ್ಮಲ್ಯದ ಬಗ್ಗೆ ಹೆಚ್ಚಿನ ಗಮನ ವಹಿಸುತ್ತೇವೆ. ವಿಶೇಷವಾಗಿ ವಿಮಾನ ನಿಲ್ದಾಣಗಳಂತಹ ಸೂಕ್ಷ್ಮ ಸ್ಥಳಗಳಲ್ಲಿ ನೈರ್ಮಲ್ಯ ತಪಾಸಣೆಗಳು ಕಡ್ಡಾಯವಾಗಿರುತ್ತವೆ. ಹಣವನ್ನು ಸುಲಿಗೆ ಮಾಡಲು ಮತ್ತು ನಮ್ಮ ಬ್ರ್ಯಾಂಡ್‌ಗೆ ಕಳಂಕ ತರುವ ಉದ್ದೇಶದಿಂದ ಕಿಡಿಗೇಡಿಗಳು ಈ ಪ್ರಯತ್ನ ನಡೆಸಿದ್ದಾರೆ. ಅವರ ವಿರುದ್ಧ ಪೊಲೀಸರಿಗೆ ದೂರು ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

ರಷ್ಯನ್ ಕುಟುಂಬ ಗಡಿಪಾರು ಪ್ರಕ್ರಿಯೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಸಮುದ್ರ ತೀರದ ರಾಮತೀರ್ಥ ಗುಡ್ಡದ ಗುಹೆಯೊಂದರಲ್ಲಿ ವಾಸವಿದ್ದ ರಷ್ಯನ್ ಮಹಿಳೆ ನಿನಾ ಕುಟಿನಾ ಮತ್ತು ಆಕೆಯ ಇಬ್ಬರು ಮಕ್ಕಳ ಗಡಿಪಾರು ಪ್ರಕ್ರಿಯೆಗೆ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿದೆ.

ಈ ಸಂಬಂಧ ಇಸ್ರೇಲ್‌ನ ಟೆಲ್ ಅವಿವ್ ನಿವಾಸಿ ಡ್ರೊರ್ ಶ್ಲೊಮೊ ಗೋಲ್ಡ್‌ಸ್ಟೇನ್ (38) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಯಾವುದೇ ಗಡಿಪಾರು ಪ್ರಕ್ರಿಯೆಯನ್ನು ಪೂರ್ವಾಪರ ಯೋಚಿಸದೆ ಕಾರ್ಯಗತಗೊಳಿಸಲು ಆಗುವುದಿಲ್ಲ. ಪ್ರಕರಣದ ಕೂಲಂಕಷ ಪರಿಶೀಲನೆಗೆ ಸಮಗ್ರ ವಿಚಾರಣೆಯ ಅಗತ್ಯವಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಪ್ರತಿವಾದಿಗಳು ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಆಗಸ್ಟ್ 18ಕ್ಕೆ ಮುಂದೂಡಿದೆ.

ಕೋರಿಕೆ ಏನು?: 'ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳಾದ ಪ್ರೇಮಾ ಸಾಲ್ ಕುಟಿನಾ (6) ಮತ್ತು ಅಮಾ ಕುಟಿನಾ (4) ಅವರನ್ನು ದಿಢೀರ್ ಎಂದು ಭಾರತದಿಂದ ಗಡಿಪಾರು ಮಾಡದಂತೆ ಭಾರತದ ವಿದೇಶಾಂಗ ಸಚಿವಾಲಯ, ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಬೆಂಗಳೂರಿನ ವಲಸೆ ಬ್ಯುರೊ ಕಚೇರಿಗೆ ನಿರ್ದೇಶಿಸಬೇಕು ಮತ್ತು ಮಕ್ಕಳನ್ನು ಅಕ್ರಮ ಬಂಧನದಿಂದ ತಕ್ಷಣವೇ ಬಿಡುಗಡೆಗೊಳಿಸಿ ನನಗೆ ಹಸ್ತಾಂತರಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ. 'ಡ್ರೊರ್ ಶ್ಲೊಮೊ ಗೋಲ್ಡ್‌ಸ್ಟೇನ್ ನಿನಾ ಕುಟಿನಾ ಜೊತೆ ಸಹಜೀವನದ ಸಾಥಿ ಆಗಿದ್ದಾರೆ' ಎನ್ನಲಾಗಿದೆ.

ಗೋಕರ್ಣ ಸಮುದ್ರ ತೀರದ ರಾಮತೀರ್ಥದ ಹತ್ತಿರದ ಗುಡ್ಡದ ಗುಹೆಯಲ್ಲಿ ವಾಸವಿದ್ದ ನಿನಾ ಕುಟಿನಾ (40) ಮತ್ತು ಆಕೆಯ ಇಬ್ಬರು ಪುತ್ರಿಯರನ್ನು ಗೋಕರ್ಣ ಠಾಣೆ ಪೊಲೀಸರು ಇದೇ 9ರಂದು ಸಂಜೆ ಪತ್ತೆ ಹಚ್ಚಿ ನಾಡಿಗೆ ಕರೆತಂದಿದ್ದರು ಸದ್ಯ ಇವರನ್ನು ತುಮಕೂರು ಜಿಲ್ಲೆಯ ದಿಬ್ಬೂರ್ ಕಾಲೊನಿಯಲ್ಲಿರುವ ವಿದೇಶಿ ಮಹಿಳಾ ಪ್ರಜೆಗಳಿಗಾಗಿಯೇ ತೆರೆಯಲಾಗಿರುವ ಸುರಕ್ಷಾ ಬಂಧನ ಕೇಂದ್ರದಲ್ಲಿ ಇರಿಸಲಾಗಿದೆ.

ಕಿದ್ವಾಯಿ: ಅವಿನಾಶ್ ಮೆನನ್ ಆಡಳಿತಾಧಿಕಾರಿ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಆಡಳಿತಾಧಿಕಾರಿ ಹುದ್ದೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರನ್ನು ನೇಮಿಸಲಾಗಿದೆ.

ಡಾ. ಅವಿನಾಶ್

ಸಂಸ್ಥೆಯ ಆಡಳಿತ ಸುಧಾರಣೆ ಹಾಗೂ ಕಾರ್ಯಚಟುವಟಿಕೆಗಳ ನಿರ್ವಹಣೆಯ ದೃಷ್ಟಿಯಿಂದ ಅವರಿಗೆ ಈ ಹೆಚ್ಚುವರಿ ಹೊಣೆ ನೀಡಲಾಗಿದೆ. ಈ ಹಿಂದೆ ಆಡಳಿತಾಧಿಕಾರಿಯಾಗಿ ಐಎಎಸ್ ಅಧಿಕಾರಿ ಡಾ. ನವೀನ್ ಭಟ್ ಕಾರ್ಯನಿರ್ವಹಿಸಿದ್ದರು.

ಎನ್‌ಎಚ್‌ಎಂ ನಿರ್ದೇಶಕರೂ ಆಗಿದ್ದ ಡಾ. ನವೀನ್ ಭಟ್ ಅವರನ್ನು ಚಿಕ್ಕಬಳ್ಳಾಪುರದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ವರ್ಗಾಯಿಸಿದ್ದರಿಂದ, ಆಡಳಿತಾಧಿಕಾರಿ ಅವಧಿ ಮುಕ್ತಾಯಗೊಂಡಿದ್ದರಿಂದ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರನ್ನು ಖಾಲಿಯಿದ್ದ ಹುದ್ದೆಗೆ ನೇಮಿಸಲಾಗಿದೆ.



ಚಟಿಕೆ ಸುದ್ದಿ

ಗೋವಾ: ‘ಕ್ರೂರ’ ಪ್ರಾಣಿಗಳ ಸಾಕಾಣಿಕೆ ನಿಷೇಧ

ಪಣಜಿ (ಪಿಟಿಐ): ಕ್ರೂರ ಎಂದು ಘೋಷಿಸಿರುವ ಪ್ರಾಣಿಗಳನ್ನು ಸಾಕುವುದು, ಆಮದು ಮಾಡಿಕೊಳ್ಳುವುದು ಹಾಗೂ ಅವುಗಳ ಸಂತಾನಾಭಿವೃದ್ಧಿ ಮಾಡಿಸುವುದನ್ನು ನಿಷೇಧಿಸುವ ಮಸೂದೆಯನ್ನು ಗೋವಾ ವಿಧಾನಸಭೆಯು ಬುಧವಾರ ಅಂಗೀಕರಿಸಿತು.

ಈ ಮಸೂದೆಯು, ಯಾವುದೇ ವರ್ಗದ ಅಥವಾ ತಳಿಯ ಪ್ರಾಣಿಗಳನ್ನು ‘ಕ್ರೂರ’ ಎಂದು ಘೋಷಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುತ್ತದೆ.

‘ಪಿಟ್‌ಬುಲ್ ಹಾಗೂ ರಾಟ್‌ವೀಲರ್ ತಳಿಯ ನಾಯಿಗಳು ಮಕ್ಕಳಿಗೆ ಕಚ್ಚುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾದ ಕಾರಣ ಸರ್ಕಾರವು ‘ಪ್ರಾಣಿ ಸಂತಾನೋತ್ಪತ್ತಿ ಹಾಗೂ ಸಾಕಾಣಿಕೆ ಮಸೂದೆ- 2025’ಯನ್ನು ತಂದಿದೆ’ ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದರು.

ಛತ್ತೀಸಗಢ: 66 ನಕ್ಸಲರು ಶರಣಾಗತಿ

ಬಸ್ತಾರ್ (ಪಿಟಿಐ): ಛತ್ತೀಸಗಢದ ಐದು ಜಿಲ್ಲೆಗಳಲ್ಲಿ ಸಕ್ರಿಯರಾಗಿದ್ದ ಒಟ್ಟು 66 ನಕ್ಸಲರು ಗುರುವಾರ ಶರಣಾಗಿದ್ದಾರೆ. ಈ ಪೈಕಿ 49 ನಕ್ಸಲರನ್ನು ಹುಡುಕಿಕೊಟ್ಟವರಿಗೆ ಒಟ್ಟು ₹2.27 ಕೋಟಿ ಬಹುಮಾನ ನೀಡುವುದಾಗಿ ಘೋಷಿಸಲಾಗಿತ್ತು. 66 ಮಂದಿಯ ಪೈಕಿ 27 ಮಹಿಳಾ ನಕ್ಸಲರೂ ಇದ್ದಾರೆ.

‘ಮುಗ್ಧ ಬುಡಕಟ್ಟು ಜನರ ಮೇಲೆ ನಕ್ಸಲರು ದೌರ್ಜನ್ಯ ಎಸಗುತ್ತಿದ್ದಾರೆ. ನಕ್ಸಲರು ನಂಬಿಕೊಂಡಿರುವ ಸಿದ್ಧಾಂತವು ಟೊಳ್ಳಾಗಿದೆ. ಜೊತೆಗೆ ನಕ್ಸಲರ ವಿವಿಧ ಗುಂಪುಗಳ ಮಧ್ಯೆ ಭಿನ್ನಾಭಿಪ್ರಾಯ ಮೂಡಿದೆ. ಆದ್ದರಿಂದ ನಾವು ಶರಣಾಗುತ್ತಿದ್ದೇವೆ ಎಂಬುದಾಗಿ ನಕ್ಸಲರು ಹೇಳಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಶರಣಾದ ನಕ್ಸಲರಿಗೆ ಸರ್ಕಾರವು ನೀಡುತ್ತಿರುವ ಪುನರ್ವಸತಿ ಯೋಜನೆಗಳಿಂದಲೂ ಆಕರ್ಷಿತರಾಗಿದ್ದಾರೆ’ ಎಂದೂ ಪೊಲೀಸರು ತಿಳಿಸಿದರು.

ವಿಮಾನಗಳಿಗೆ 94 ಹುಸಿ ಬಾಂಬ್ ಕರೆ

ನವದೆಹಲಿ: ಕರ್ನಾಟಕದಲ್ಲಿ 2021ರಿಂದ 2025ರ ಜುಲೈ 20ರ ವರೆಗೆ ವಿಮಾನಗಳಿಗೆ 94 ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ ಎಂದು ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವ ಮುರಳೀಧರ ಮೊಹೋಲ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಈ ಪ್ರಕರಣಗಳಲ್ಲಿ ಈ ವರೆಗೆ ಯಾವುದೇ ಆರೋಪಿಯನ್ನು ಬಂಧಿಸಿಲ್ಲ ಎಂದು ತಿಳಿಸಿದ್ದಾರೆ.

ದೇಶದಲ್ಲಿ 2022ರಿಂದ ಈವರೆಗೆ ವಿಮಾನಗಳಿಗೆ 881 ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ. ಈ ಪೈಕಿ, 2024ರಲ್ಲೇ 728 ಕರೆಗಳನ್ನು ಸ್ವೀಕರಿಸಲಾಗಿದೆ. ಈ ವರ್ಷ 69 ಪ್ರಕರಣಗಳು ದಾಖಲಾಗಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

₹3 ಕೋಟಿ ಮೌಲ್ಯದ ಮೆಥಂಫೆಟಮೈನ್ ವಶ

ಐಜ್ವಾಲ್ (ಪಿಟಿಐ) : ಅಸ್ಸಾಂ ರೈಫಲ್ಸ್‌ನ ಸಿಬ್ಬಂದಿ ಮಿಜೋರಾಂನ ಚಂಫಾಯಿ ಜಿಲ್ಲೆಯಲ್ಲಿ ಮ್ಯಾನ್ಮಾರ್ ದೇಶದ ಪ್ರಜೆಯನ್ನು ಬಂಧಿಸಿ, ಆತನಿಂದ ₹3 ಕೋಟಿ ಮೌಲ್ಯದ ಮೆಥಂಫೆಟಮೈನ್ ಗುಳಿಗೆಗಳನ್ನು ಗುರುವಾರ ವಶಪಡಿಸಿಕೊಂಡಿದ್ದಾರೆ.

ಮ್ಯಾನ್ಮಾರ್‌ಗೆ ಹತ್ತಿರವಿರುವ ಜೋಟ್ ಹಳ್ಳಿಯಲ್ಲಿ ಬುಧವಾರ ಶೋಧ ಕಾರ್ಯಾಚರಣೆಯ ನಂತರ 1.11 ಕೆ.ಜಿ ಮೆಥಂಫೆಟಮೈನ್ ವಶ ಪಡಿಸಿಕೊಳ್ಳಲಾಯಿತು. ಮೆಥಂಫೆಟಮೈನ್ ಅನ್ನು ಚಾಂಪೈನಲ್ಲಿರುವ ಮಾದಕ ವಸ್ತು ನಿಯಂತ್ರಣ ಇಲಾಖೆಯ ವಶಕ್ಕೆ ಒಪ್ಪಿಸಲಾಗಿದೆ.

ಚುನಾವಣೆ ಬಹಿಷ್ಕಾರ: ಆಯ್ಕೆ ಮುಕ್ತ

ಮತದಾರರ ಪಟ್ಟಿ ಪರಿಷ್ಕರಣೆ ವಿವಾದ: ತೇಜಸ್ವಿ ಯಾದವ್ ಹೇಳಿಕೆ

ಪಟ್ನಾ (ಪಿಟಿಐ): ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿವಾದದ ಕಾರಣದಿಂದ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವ ‘ಆಯ್ಕೆಯನ್ನು ಮುಕ್ತವಾಗಿಟ್ಟುಕೊಂಡಿದ್ದೇವೆ’ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಗುರುವಾರ ಹೇಳಿದ್ದಾರೆ.

ವಿಧಾನಮಂಡಲದ ಮುಂಗಾರು ಅಧಿವೇಶನದ ಕೊನೆಯ ದಿನದ ಕಲಾಪದ ಬಳಿಕ ವರದಿಗಾರರೊಂದಿಗೆ ಮಾತನಾಡಿದ ಅವರು, ‘ಮುಂಬರುವ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವ ಆಯ್ಕೆಯನ್ನು ಮುಕ್ತವಾಗಿರಿಸಿದ್ದೇವೆ. ಮೈತ್ರಿಕೂಟದ ಪಾಲುದಾರ ಪಕ್ಷಗಳೊಂದಿಗೆ ಚರ್ಚಿಸಿದ ಬಳಿಕ ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ. ಎಸ್‌ಐಆರ್ ಹೆಸರಿನಲ್ಲಿ ನಡೆಯುತ್ತಿರುವುದು ಮೋಸ ಅಲ್ಲದೆ, ಬೇರೇನೂ ಅಲ್ಲ’ ಎಂದು ಹೇಳಿದರು.

‘ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ವೇಳೆ ಮತದಾರರ ಪರವಾಗಿ ಮತಗಟ್ಟೆ ಅಧಿಕಾರಿಗಳೇ ತಮ್ಮ ಸಹಿ ಮತ್ತು ಹೆಬ್ಬೆರಳಿನ ಗುರುತು ಹಾಕುತ್ತಿದ್ದಾರೆ. ಖಾಲಿ ಅರ್ಜಿ ನಮೂನೆಗಳನ್ನು ರದ್ದಿ ಕಾಗದದಂತೆ ಬಳಸಲಾಗುತ್ತಿದೆ. ಈ ಲೋಪಗಳನ್ನು ಬಹಿರಂಗಪಡಿಸುವ ಪತ್ರಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಚುನಾವಣಾ ಆಯೋಗವು ಆಡಳಿತ ಪಕ್ಷದ ಏಜೆಂಟ್ ರೀತಿಯಲ್ಲಿ ವರ್ತಿಸುತ್ತಿರುವ ಕಾರಣ ಸರ್ಕಾರ ಸುಮ್ಮನೆ ಕುಳಿತುಕೊಂಡಿದೆ’ ಎಂದು ಆರೋಪಿಸಿದರು.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ವೇಳೆ ಯಾವನೇ ಒಬ್ಬ ನೈಜ ಮತದಾರನ ಹೆಸರು ಕೈಬಿಡಬಾರದೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ

ತೇಜಸ್ವಿ ಯಾದವ್, ಬಿಹಾರ ವಿರೋಧ ಪಕ್ಷದ ನಾಯಕ

ವಿಪಕ್ಷ ಸದಸ್ಯರಿಂದ ಪ್ರತಿಭಟನೆ: ಬಿಹಾರ ವಿಧಾನಸಭೆಯಲ್ಲಿ ಮುಂಗಾರು ಅಧಿವೇಶನದ ಕೊನೆಯ ದಿನ ಸ್ಪೀಕರ್ ನಂದಕಿಶೋರ್ ಯಾದವ್ ಅವರು ವಿರೋಧ ಪಕ್ಷಗಳ ಸದಸ್ಯರಿಗೆ ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿದರು.

ಎಸ್‌ಐಆರ್ ಅನೇಕ ಅರ್ಹ ಮತದಾರರನ್ನು ಮತದಾನದ ಅವಕಾಶದಿಂದ ವಂಚಿತರನ್ನಾಗಿ ಮಾಡಬಹುದು ಎಂದು ವಿಪಕ್ಷಗಳ ಸದಸ್ಯರು ಕಳವಳ ವ್ಯಕ್ತಪಡಿಸಿದರು. ಗುರುವಾರ ಪ್ರತಿಭಟನೆಯ ಸಂಕೇತವಾಗಿ ಹಲವು ಸದಸ್ಯರು ಕಪ್ಪು ಬಟ್ಟೆ ಧರಿಸಿ ಕಲಾಪದಲ್ಲಿ ಭಾಗವಹಿಸಿದರು.

‘ಮೃತರ ಹೆಸರು ಉಳಿಸಲು ಸಾಧ್ಯವಿಲ್ಲ’

ನವದೆಹಲಿ (ಪಿಟಿಐ): ಮೃತಪಟ್ಟವರು ಮತ್ತು ಶಾಶ್ವತವಾಗಿ ವಲಸೆ ಬಂದವರು ಅಥವಾ ಹಲವು ಕಡೆಗಳಲ್ಲಿ ಮತದಾರರಾಗಿ ಹೆಸರು ನೋಂದಾಯಿಸಿದವರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಉಳಿಸಲು ಸಾಧ್ಯವೇ ಎಂದು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಪ್ರಶ್ನಿಸಿದ್ದಾರೆ.

ಬಿಹಾರದಲ್ಲಿ ಕೈಗೊಂಡಿರುವ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ಚುನಾವಣಾ ಆಯೋಗದ ವಿರುದ್ಧ ತಮ್ಮ ದಾಳಿಯನ್ನು ತೀವ್ರಗೊಳಿಸಿರುವ ಸಂದರ್ಭದಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ.

‘ಚುನಾವಣಾ ಆಯೋಗವು ಪಾರದರ್ಶಕ ಪ್ರಕ್ರಿಯೆಯ ಮೂಲಕ ಸಿದ್ಧಪಡಿಸುವ ಮತದಾರರ ಪಟ್ಟಿ, ನ್ಯಾಯಯುತ ಚುನಾವಣೆಗಳು ಮತ್ತು ಬಲವಾದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡಿಪಾಯವಲ್ಲವೇ?’ ಎಂದು ಕೇಳಿದ್ದಾರೆ.

ಬಿಹಾರದಲ್ಲಿ ಅಥವಾ ದೇಶದ ಯಾವುದೇ ಭಾಗದಲ್ಲಾದರೂ ಅನರ್ಹರಿಗೆ ಮತ ಚಲಾಯಿಸಲು ಅವಕಾಶ ನೀಡುವುದು ಸಂವಿಧಾನಕ್ಕೆ ವಿರುದ್ಧವಾಗಿದೆ

ಜ್ಞಾನೇಶ್ ಕುಮಾರ್, ಮುಖ್ಯ ಚುನಾವಣಾ ಆಯುಕ್ತ

61 ಲಕ್ಷ ಮಂದಿ ಹೊರಕ್ಕೆ?

ಮೃತಪಟ್ಟವರು, ಶಾಶ್ವತವಾಗಿ ವಲಸೆ ಹೋದವರು ಮತ್ತು ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ನೋದಾಯಿಸಿದ್ದವರು ಸೇರಿದಂತೆ 61 ಲಕ್ಷ ಮಂದಿಯ ಹೆಸರನ್ನು ಬಿಹಾರದ ಮತದಾರರ ಪಟ್ಟಿಯಿಂದ ಹೊರಗಿಡುವ ಸಾಧ್ಯತೆ ಇದೆ. ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆಯಲ್ಲಿ (ಎಸ್‌ಐಆರ್) 21 ಲಕ್ಷ ಮಂದಿ ಮೃತಪಟ್ಟವರು, 31.5 ಲಕ್ಷ ಮಂದಿ ಶಾಶ್ವತವಾಗಿ ವಲಸೆ ಹೋದವರು ಮತ್ತು ಒಂದಕ್ಕಿಂತ ಹೆಚ್ಚು ಕಡೆ ಹೆಸರು ನೋಂದಾಯಿಸಿದ 7 ಲಕ್ಷ ಮಂದಿ ಪತ್ತೆಯಾಗಿದ್ದಾರೆ. ಒಂದು ಲಕ್ಷ ಮಂದಿ ಪತ್ತೆಯೇ ಆಗಿಲ್ಲ ಎಂದು ಆಯೋಗ ಹೇಳಿದೆ.

ಸುದ್ದಿ 2 ನಿಮಿಷ

ಸಾಲ ವಂಚನೆ: ಅನಿಲ್ ಅಂಬಾನಿ ಸಂಸ್ಥೆಗಳ ಮೇಲೆ ಇ.ಡಿ ದಾಳಿ

ಮುಂಬೈ (ಪಿಟಿಐ): ₹3 ಸಾವಿರ ಕೋಟಿ ಮೊತ್ತದ ಬ್ಯಾಂಕ್ ಸಾಲ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಅನಿಲ್ ಅಂಬಾನಿ ಒಡೆತನದ 50ಕ್ಕೂ ಹೆಚ್ಚು ಕಂಪನಿಗಳ ಮುಂಬೈ ಮತ್ತು ದೆಹಲಿಯಲ್ಲಿನ ಕಚೇರಿಗಳ ಮೇಲೆ ಗುರುವಾರ ಏಕಕಾಲದಲ್ಲಿ ದಾಳಿ ನಡೆಸಿದೆ.

ಅನಿಲ್ ಅಂಬಾನಿ ಸಮೂಹ ಸಂಸ್ಥೆಗಳಿಗೆ ನಿಯಮ ಉಲ್ಲಂಘಿಸಿ, ಅಕ್ರಮವಾಗಿ ಸಾಲ ಮಂಜೂರು ಮಾಡಿದ ಆರೋಪದಲ್ಲಿ ಯೆಸ್ ಬ್ಯಾಂಕ್ ಮೇಲೂ ಇ.ಡಿ ದಾಳಿ ನಡೆದಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ದಾಳಿ ನಡೆದಿದ್ದು, ಮುಂಬೈ ಮತ್ತು ದೆಹಲಿಯಲ್ಲಿ 25ಕ್ಕೂ ಹೆಚ್ಚು ವ್ಯಕ್ತಿಗಳು ಮತ್ತು 35ಕ್ಕೂ ಹೆಚ್ಚು ಸ್ಥಳಗಳನ್ನು ಗುರಿಯಾಗಿಸಿ ಕಾರ್ಯಾಚರಣೆ ನಡೆಯಿತು.

ಅನಿಲ್ ಅಂಬಾನಿ ಸಮೂಹ ಸಂಸ್ಥೆಗಳಿಗೆ 2017-19ರ ಅವಧಿಯಲ್ಲಿ ಯೆಸ್ ಬ್ಯಾಂಕ್ ಮೂಲಕ ಅಕ್ರಮವಾಗಿ ₹ 3 ಸಾವಿರ ಕೋಟಿಯಷ್ಟು ಸಾಲ ವಿತರಿಸಲಾಗಿದೆ. ಈ ಸಾಲ ಮಂಜೂರಾದ ಕೂಡಲೇ, ಬ್ಯಾಂಕ್‌ನ ಪ್ರವರ್ತಕರ ಖಾತೆಗೂ ಹಣ ಸಂದಾಯ ಆಗಿರುವುದನ್ನು ಇ.ಡಿ ಪತ್ತೆ ಹಚ್ಚಿದೆ. ಅಕ್ರಮವಾಗಿ ಸಾಲ ಮಂಜೂರು ಮಾಡಿರುವುದು ಮತ್ತು ಇದಕ್ಕಾಗಿ ಲಂಚ ಪಡೆದಿರುವ ಬಗ್ಗೆಯೂ ತನಿಖೆ ಮುಂದುವರಿದಿದೆ. ಸಾಲ ಮಂಜೂರಾತಿ ಸಂದರ್ಭದಲ್ಲಿ ಯೆಸ್ ಬ್ಯಾಂಕ್ ‘ಗಂಭೀರ ನಿಯಮ ಉಲ್ಲಂಘನೆ’ ಮಾಡಿರುವುದು ಕಂಡು ಬಂದಿದೆ ಎಂದು ಇ.ಡಿ. ಹೇಳಿದೆ.

ಧನಕರ್‌ಗೆ ಬೀಳ್ಕೊಡುಗೆ ನೀಡಿ– ಕಾಂಗ್ರೆಸ್: ಪ್ರತಿಕ್ರಿಯಿಸದ ಕೇಂದ್ರ

ನವದೆಹಲಿ (ಪಿಟಿಐ): ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರಿಗಾಗಿ ಬೀಳ್ಕೊಡುಗೆ ಸಮಾರಂಭ ಆಯೋಜಿಸಬೇಕು ಎಂದು ಬುಧವಾರ ಸಂಜೆ ನಡೆದಿದ್ದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಒತ್ತಾಯಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ತಿಳಿದುಬಂದಿದೆ.

‘ಸಭೆಯಲ್ಲಿ ಕೇಂದ್ರ ಸಚಿವ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಸಚಿವ ಕಿರಣ್ ರಿಜಿಜು ಹಾಜರಿದ್ದರು. ಆದರೆ, ರಮೇಶ್ ಅವರು ಪ್ರಸ್ತಾಪಿಸಿದ ವಿಚಾರಕ್ಕೆ ಸಂಬಂಧಿಸಿ ಈ ಇಬ್ಬರೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ’ ಎಂದು ಮೂಲಗಳು ಹೇಳಿವೆ. ‘ಜೊತೆಗೆ, ವಿರೋಧ ಪಕ್ಷಗಳ ಇತರೆ ಯಾವ ನಾಯಕರೂ ರಮೇಶ್ ಅವರ ಪ್ರಸ್ತಾವವನ್ನು ಬೆಂಬಲಿಸಲಿಲ್ಲ’ ಎಂದೂ ತಿಳಿಸಿವೆ.

ರಾಜ್ಯಸಭೆಯ ಒಟ್ಟು ಆರು ಸದಸ್ಯರಿಗೆ ಗುರುವಾರ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಗಿತ್ತು.

ಪೈಲಟ್‌ಗಳ ‘ಅನಾರೋಗ್ಯ ರಜೆ’ ಹೆಚ್ಚಳ

ನವದೆಹಲಿ (ಪಿಟಿಐ): ಅಹಮದಾಬಾದ್ ವಿಮಾನ ದುರಂತದ ನಂತರ ‘ಅನಾರೋಗ್ಯ’ದ ಕಾರಣ ನೀಡಿ, ಏರ್ ಇಂಡಿಯಾದ ಹಲವು ಪೈಲಟ್‌ಗಳು ರಜೆ ಹಾಕುತ್ತಿದ್ದಾರೆ ಎಂದು ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಲೋಕಸಭೆಗೆ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಮೊಹೋಲ್, ‘ಅಹಮದಾಬಾದ್ ಘಟನೆಯ ನಂತರ ಏರ್ ಇಂಡಿಯಾ ಪೈಲಟ್‌ಗಳು ‘ಅನಾರೋಗ್ಯ ರಜೆ’ ಪಡೆಯುತ್ತಿರುವುದು ಸ್ವಲ್ಪ ಏರಿಕೆಯಾಗಿದೆ. ಜೂನ್ 16ರಂದು ಒಟ್ಟು 112 ಮಂದಿ ‘ಅನಾರೋಗ್ಯ ರಜೆ’ ಹಾಕಿದ್ದರು. ಇವರಲ್ಲಿ 51 ಮಂದಿ ಮುಖ್ಯ ಪೈಲಟ್‌ಗಳು (ಪಿ1) ಮತ್ತು 61 ಮಂದಿ ಸಹ ಪೈಲಟ್‌ಗಳು (ಪಿ2) ಸೇರಿದ್ದಾರೆ’ ಎಂದು ಮಾಹಿತಿ ನೀಡಿದರು.

‘ವಿಮಾನ ಸಿಬ್ಬಂದಿ, ಪೈಲಟ್‌ಗಳು, ‘ಎಟಿಸಿ’ ಮೇಲಿನ ಕಾರ್ಯದೊತ್ತಡ ಕಡಿಮೆ ಮಾಡಲು ಮತ್ತು ಮಾನಸಿಕ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರದಂತೆ ಕೆಲಸದ ಅವಧಿಯನ್ನು ನಿರ್ವಹಣೆ ಮಾಡುವಂತೆ ಡಿಜಿಸಿಎ 2023ರಲ್ಲಿ ವೈದ್ಯಕೀಯ ಸುತ್ತೋಲೆ ಹೊರಡಿಸಿತ್ತು. ಇದರ ಅನ್ವಯ ಸಿಬ್ಬಂದಿಗೆ ಸಲಹೆ, ಮಾರ್ಗದರ್ಶನ ನೀಡಲಾಗುತ್ತಿದೆ’ ಎಂದು ಹೇಳಿದ್ದಾರೆ.

ಏರ್ ಇಂಡಿಯಾ ಬೋಯಿಂಗ್ 787-8 ವಿಮಾನವು ಜೂನ್ 12ರಂದು ಅಹಮದಾಬಾದ್‌ನಲ್ಲಿ ಪತನಗೊಂಡು 241 ಮಂದಿ ಪ್ರಯಾಣಿಕರು ಮೃತಪಟ್ಟಿದ್ದರು. ವಿಮಾನವು ವೈದ್ಯಕೀಯ ಕಾಲೇಜಿನ ವಸತಿ ನಿಲಯದ ಕಟ್ಟಡಕ್ಕೆ ಅಪ್ಪಳಿಸಿದ್ದರಿಂದ, ಆ ಕಟ್ಟಡಲ್ಲಿದ್ದ 19 ಮಂದಿ ಮೃತಪಟ್ಟಿದ್ದರು.

ಸುರಕ್ಷಾ ವ್ಯವಸ್ಥಾಪಕನಿಗೆ ₹30 ಲಕ್ಷ ದಂಡ: ‘ಏರ್‌ಬಸ್ ಎ320’ ವಿಮಾನದಲ್ಲಿ ಅಳವಡಿಸಲಾದ ಎಂಜಿನ್‌ಗೆ ಸಂಬಂಧಿಸಿದಂತೆ ಏರ್ ಇಂಡಿಯಾ, ಯುರೋಪಿಯನ್ ಯೂನಿಯನ್ ಏವಿಯೇಷನ್ ಸೇಫ್ಟಿ ಏಜೆನ್ಸಿಯ (ಇಎಎಸ್‌ಎ) ನಿರ್ದೇಶನಗಳನ್ನು ಪಾಲಿಸಿಲ್ಲ ಎಂಬ ಕಾರಣಕ್ಕೆ ‘ಡಿಜಿಸಿಎ’ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ನಾಲ್ವರು ಅಧಿಕಾರಿಗಳಿಗೆ ಭಾರಿ ಮೊತ್ತದ ದಂಡ ವಿಧಿಸಿದೆ ಎಂದು ಸಚಿವ ಮುರಳೀಧರ್ ಮೊಹೋಲ್ ಹೇಳಿದ್ದಾರೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಗುಣಮಟ್ಟ ವ್ಯವಸ್ಥಾಪಕನ್ನು ಕೆಲಸದಿಂದ ವಜಾಗೊಳಿಸಲಾಗಿದೆ. ನಿರ್ವಹಣಾ ವ್ಯವಸ್ಥಾಪಕನಿಗೆ ನೋಟಿಸ್ ನೀಡಲಾಗಿದ್ದು, ₹1.5 ಲಕ್ಷ ದಂಡ ವಿಧಿಸಲಾಗಿದೆ. ಸುರಕ್ಷಾ ವ್ಯವಸ್ಥಾಪಕನಿಗೆ ₹30 ಲಕ್ಷ ದಂಡ ವಿಧಿಸಲಾಗಿದೆ ಎಂದು ವಿವರಿಸಿದರು.

ವಿಮಾನ ದುರಂತದಿಂದ ನೆಲದ ಮೇಲೆ ಸಾರ್ವಜನಿಕರಿಗೆ ಆಗಿರುವ ಹಾನಿಗೆ ಪರಿಹಾರ ನೀಡುವ ಯಾವುದೇ ನೀತಿ ಸದ್ಯ ನಾಗರಿಕ ವಿಮಾನಯಾನ ಸಚಿವಾಲಯದ ಮುಂದಿಲ್ಲ

ಮುರಳೀಧರ್ ಮೊಹೋಲ್, ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವ

4 ಷೋಕಾಸ್ ನೋಟಿಸ್

ವಿಮಾನದ ಕ್ಯಾಬಿನ್ ಸಿಬ್ಬಂದಿ ಕೆಲಸದ ಸಮಯ ಮತ್ತು ವಿಶ್ರಾಂತಿ, ತರಬೇತಿ, ಕಾರ್ಯನಿರ್ವಹಣೆ ಹಂತದಲ್ಲಿನ ವಿವಿಧ ನಿಯಮಗಳ ಉಲ್ಲಂಘನೆಗಾಗಿ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ), ಏರ್ ಇಂಡಿಯಾ ಸಂಸ್ಥೆಗೆ ನಾಲ್ಕು ಷೋಕಾಸ್ ನೋಟಿಸ್‌ಗಳನ್ನು ಜಾರಿಗೊಳಿಸಿದೆ.

‘ನೋಟಿಸ್‌ಗೆ ನಿಗದಿತ ಸಮಯದಲ್ಲಿ ಉತ್ತರಿಸಲಾಗುವುದು. ನಮ್ಮ ಸಿಬ್ಬಂದಿ ಮತ್ತು ಪ್ರಯಾಣಿಕರ ಸುರಕ್ಷತೆಗೆ ನಾವು ಬದ್ಧರಾಗಿದ್ದೇವೆ’ ಎಂದು ಏರ್ ಇಂಡಿಯಾ ಹೇಳಿದೆ.

ತಾಂತ್ರಿಕ ಸಮಸ್ಯೆ– ದೂರು: ಐದು ಭಾರತೀಯ ವಿಮಾನಯಾನ ಸಂಸ್ಥೆಗಳು ಈ ವರ್ಷದಲ್ಲಿ ಇದುವರೆಗೆ (ಜುಲೈ 21ರವರೆಗೆ) ತಮ್ಮ ವಿಮಾನದಲ್ಲಿನ ತಾಂತ್ರಿಕ ಲೋಪಗಳಿಗೆ ಸಂಬಂಧಿಸಿದಂತೆ 183 ದೂರುಗಳನ್ನು ‘ಡಿಜಿಸಿಎ’ಗೆ ಸಲ್ಲಿಸಿವೆ. ಇದರಲ್ಲಿ ಏರ್ ಇಂಡಿಯಾ ಕಂಪನಿಯದ್ದೇ 85 ದೂರುಗಳಿವೆ.



‘ಬ್ರಿಟನ್ ಕುಟುಂಬಗಳಿಗೆ ಬೇರೆ ಮೃತದೇಹ ಹಸ್ತಾಂತರ’

ಲಂಡನ್ (ನ್ಯೂಯಾರ್ಕ್ ಟೈಮ್ಸ್): ಬ್ರಿಟನ್‌ನ ಎರಡು ಕುಟುಂಬಗಳಿಗೆ ಬೇರೆ ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ ಎಂದು ಆ ಕುಟುಂಬಗಳ ವಕೀಲರು ಆರೋಪಿಸಿದ್ದಾರೆ. ಮೃತದೇಹಗಳನ್ನು ಕಳೆದ ತಿಂಗಳು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿತ್ತು.

ಒಂದು ಪ್ರಕರಣದಲ್ಲಿ, ಶವ ಪೆಟ್ಟಿಗೆಯಿಂದ ಸಂಗ್ರಹಿಸಿದ ಡಿಎನ್‌ಎ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ವಿಭಿನ್ನ ಆನುವಂಶಿಕ ಲಕ್ಷಣಗಳು ಕಂಡುಬಂದಿವೆ. ಇನ್ನೊಂದು ಪ್ರಕರಣದಲ್ಲಿ ಮೃತಪಟ್ಟ ವ್ಯಕ್ತಿಗೂ, ಪೆಟ್ಟಿಗೆಯಲ್ಲಿದ್ದ ಮೃತದೇಹಕ್ಕೂ ಡಿಎನ್‌ಎ ಹೊಂದಾಣಿಕೆ ಆಗಿಲ್ಲ. ‘ಮೃತದೇಹವನ್ನು ಹಸ್ತಾಂತರಿಸುವಾಗ ಅಧಿಕಾರಿಗಳು ಶಿಷ್ಟಾಚಾರ ಪಾಲಿಸಿದ್ದಾರೆ’ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಸಾವರ್ಕರ್ ವಿರುದ್ಧ ಹೇಳಿಕೆ: ರಾಹುಲ್ ಗಾಂಧಿಗೆ ಜಾಮೀನು

ಮುಂಬೈ(ಪಿಟಿಐ): ವಿ.ಡಿ. ಸಾವರ್ಕರ್ ವಿರುದ್ಧ ಹೇಳಿಕೆ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಮಹಾರಾಷ್ಟ್ರದ ನಾಸಿಕ್‌ನ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ.

2022ರ ಭಾರತ್ ಜೋಡೊ ಯಾತ್ರೆ ವೇಳೆ ಅವರು ಆರ್‌ಎಸ್‌ಎಸ್ ನಾಯಕ ಸಾವರ್ಕರ್ ವಿರುದ್ಧ ಮಾನಹಾನಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಲಾಗಿತ್ತು. ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಮುಂದೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾದ ರಾಹುಲ್ ಗಾಂಧಿ, ತಾನು ತಪ್ಪೆಸಗಿಲ್ಲ ಎಂದು ಹೇಳಿದರು.

‘ಕೈ’ ಹಿನ್ನಡೆಯ ಸತ್ಯ ಬಹಿರಂಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ ಲೋಕಸಭಾ ಚುನಾವಣೆಯಲ್ಲಿ ಚುನಾವಣಾ ಆಯೋಗವನ್ನು ಬಿಜೆಪಿ ದುರ್ಬಳಕೆ ಮಾಡಿಕೊಂಡು ನಡೆಸಿರುವ ಅಕ್ರಮವೇ ಕಾಂಗ್ರೆಸ್ ಪಕ್ಷದ ಹಿನ್ನಡೆಗೆ ಕಾರಣ ಎನ್ನುವ ಸತ್ಯ ಈಗ ಬಯಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಕರ್ನಾಟಕದ ಲೋಕಸಭಾ ಚುನಾವಣೆಯ ಫಲಿತಾಂಶ ನಮಗೆ ಆಶ್ಚರ್ಯ ಉಂಟುಮಾಡಿತ್ತು. ಅಲ್ಲದೆ, ಹಲವು ಅನುಮಾನಗಳನ್ನೂ ಹುಟ್ಟುಹಾಕಿತ್ತು’ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

‘ನರೇಂದ್ರ ಮೋದಿ ಅವರ ಚುನಾವಣಾ ಗೆಲುವುಗಳಿಗೆ ಅವರ ಜನಪ್ರಿಯತೆಯಾಗಲಿ, ಬಿಜೆಪಿ ಸರ್ಕಾರದ ಸಾಧನೆಗಳಾಗಲಿ ಕಾರಣ ಅಲ್ಲ. ಅದು ಚುನಾವಣಾ ಆಯೋಗದ ಮೂಲಕ ನಡೆಸಿದ ‘ಮತಗಳ್ಳತನ’ ಕಾರಣ ಎನ್ನುವ ಸತ್ಯ ಈಗ ಬಯಲಾಗುತ್ತಿದೆ’ ಎಂದಿರುವ ಅವರು, ‘ಕರ್ನಾಟಕದಲ್ಲಿ ನಡೆದಿರುವ ಚುನಾವಣಾ ಅಕ್ರಮಗಳ ಬಗ್ಗೆ ಏನು ಕ್ರಮಕೈಗೊಳ್ಳಬೇಕೆಂಬ ಬಗ್ಗೆ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದೂ ಹೇಳಿದ್ದಾರೆ.

‘ಚುನಾವಣಾ ಆಯೋಗ ನಡೆಸಿರುವ ಅಕ್ರಮಗಳ ದಾಸ್ತಾನನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಒಂದೊಂದಾಗಿ ಬಯಲಿಗೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ಚುನಾವಣಾ ಆಯೋಗ ಅಕ್ರಮಗಳನ್ನು ನಡೆಸಿರುವುದಕ್ಕೆ ನೂರಕ್ಕೆ ನೂರರಷ್ಟು ಸಾಕ್ಷ್ಯಗಳಿವೆ ಎಂದು ರಾಹುಲ್ ಗಾಂಧಿ ಹೇಳಿರುವುದನ್ನು ನಾನು ಅನುಮೋದಿಸುತ್ತೇನೆ ’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

‘ಬೆಂಗಳೂರು ಗ್ರಾಮಾಂತರದಲ್ಲಿ ಗೋಲ್‌ಮಾಲ್’

‘ಲೋಕಸಭೆ ಚುನಾವಣೆ ವಿಚಾರವಾಗಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ನಾನು ತನಿಖೆ ಮಾಡಿಸಿದ್ದೇನೆ. ಇಲ್ಲಿ ಅನೇಕ ಗೋಲ್‌ಮಾಲ್‌ಗಳು ನಡೆದಿವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕರ್ನಾಟಕದ ಲೋಕಸಭಾ ಕ್ಷೇತ್ರವೊಂದರಲ್ಲಿ ದೊಡ್ಡ ಪ್ರಮಾಣದಲ್ಲಿ ಚುನಾವಣಾ ಅಕ್ರಮ ನಡೆದಿದೆ ಎಂಬ ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ನಾನೂ ಒಪ್ಪುತ್ತೇನೆ. ಈ ವಿಚಾರವಾಗಿ ಸದ್ಯ ನಾನು ಹೆಚ್ಚು ವಿಷಯ ಪ್ರಸ್ತಾಪ ಮಾಡುವುದಿಲ್ಲ. ಮುಂದೆ ಮಾತನಾಡುತ್ತೇನೆ’ ಎಂದೂ ಹೇಳಿದರು.

ಶೇ 100ರಷ್ಟು ಸಾಕ್ಷ್ಯ ಇದೆ: ರಾಹುಲ್

ಒಂದನೇ ಪುಟದಿಂದ...

‘ಕರ್ನಾಟಕದ ಒಂದು ಕ್ಷೇತ್ರವನ್ನು ಆಯ್ಕೆಮಾಡಿಕೊಂಡು, ಇಡೀ ಕ್ಷೇತ್ರದ ಮತದಾರರ ಪಟ್ಟಿಯನ್ನು ಪರಿಶೀಲಿಸಿ ಈ ಅಕ್ರಮವನ್ನು ಪತ್ತೆ ಹಚ್ಚಿದ್ದೇವೆ. ಒಂದರ ನಂತರ ಮತ್ತೊಂದು ಕ್ಷೇತ್ರದಲ್ಲಿ ಇದೇ ರೀತಿಯ ವಂಚನೆ ನಡೆಯುತ್ತಿದೆ ಎಂಬುದು ನಮಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಸಾವಿರಾರು ಹೊಸ ಮತದಾರರನ್ನು ಸೇರ್ಪಡೆಗೊಳಿಸಲಾಗಿದೆ. ಅವರ ವಯಸ್ಸು ಎಷ್ಟು? ಒಂದು ಕ್ಷೇತ್ರದಲ್ಲಿ 45, 50, 60, 65 ವರ್ಷ ವಯಸ್ಸಿನ ಸಾವಿರಾರು ಮತದಾರರನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. ಇದಲ್ಲದೆ, ಹಲವು ಮತದಾರರ ಹೆಸರನ್ನು ಅಳಿಸಿಹಾಕಲಾಗಿದೆ. ಈ ಎಲ್ಲ ವಂಚನೆಗಳನ್ನು ಪತ್ತೆಹಚ್ಚಿದ್ದೇವೆ’ ಎಂದಿದ್ದಾರೆ.

‘ನಾನು ಚುನಾವಣಾ ಆಯೋಗಕ್ಕೆ ಒಂದು ಸಂದೇಶ ನೀಡಲು ಬಯಸುತ್ತೇನೆ. ನೀವು ಅಥವಾ ನಿಮ್ಮ ಅಧಿಕಾರಿಗಳು ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ಈ ಅಕ್ರಮದ ಕುರಿತ ಪುರಾವೆಯೊಂದಿಗೆ ನಿಮ್ಮ ಬಳಿ ಬರುತ್ತೇವೆ’ ಎಂದು ವಾಗ್ದಾಳಿ ನಡೆಸಿದರು.

‘ಹಿಂದೂ–ಮುಸ್ಲಿಮರ ಮಧ್ಯೆ ಸಂವಾದ ಅಗತ್ಯ’

ನವದೆಹಲಿ (ಪಿಟಿಐ): ‘ರಾಷ್ಟ್ರದ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ಸಂವಾದ, ಮಾತುಕತೆ ನಡೆಸುವುದಕ್ಕೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹಾಗೂ ಸಮಾಜದ ಧರ್ಮ ಗುರುಗಳು ಸಮ್ಮತಿಸಿದರು’ ಎಂದು ಅಖಿಲ ಭಾರತ ಇಮಾಮ್ ಸಂಘಟನೆ ಮುಖ್ಯಸ್ಥ ಉಮರ್ ಅಹ್ಮದ್ ಇಲಿಯಾಸಿ ಗುರುವಾರ ಹೇಳಿದ್ದಾರೆ.

ಇಲ್ಲಿನ ಹರಿಯಾಣ ಭವನದಲ್ಲಿ ಸಂಘಟನೆಯು ಆಯೋಜಿಸಿದ್ದ ಸಭೆಯಲ್ಲಿ ಇಮಾಮರು, ಮುಫ್ತಿ ಹಾಗೂ ಮದರಸಾಗಳ ಮುಖ್ಯಸ್ಥರು (ಮೊಹ್ತಮಿಮ್) ಸೇರಿ ಮುಸ್ಲಿಂ ಸಮಾಜದ 60 ಪ್ರಮುಖರು ಪಾಲ್ಗೊಂಡಿದ್ದರು. ಮೂರೂವರೆ ತಾಸು ನಡೆದ ಸಭೆಯಲ್ಲಿ, ಸಮಾಜದ ಮುಖಂಡರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು ಎಂದು ಇಲಿಯಾಸಿ ತಿಳಿಸಿದ್ದಾರೆ.

ಅಖಿಲ ಭಾರತ ಇಮಾಮ್ ಸಂಘಟನೆಯ ಆಹ್ವಾನದ ಮೇರೆಗೆ ಭಾಗವತ್ ಸಭೆಯಲ್ಲಿ ಪಾಲ್ಗೊಂಡಿದ್ದರು. ಆರ್‌ಎಸ್‌ಎಸ್ ಮುಖಂಡರಾದ ಕೃಷ್ಣ ಗೋಪಾಲ್ ಹಾಗೂ ಇಂದ್ರೇಶ್ ಕುಮಾರ್ ಕೂಡ ಹಾಜರಿದ್ದರು.

‘ಇಂದಿನ ಸಭೆ ಸಕಾರಾತ್ಮಕವಾಗಿ ಇತ್ತು ಎಂಬುದಾಗಿ ಆರ್‌ಎಸ್‌ಎಸ್ ಹೇಳಿತು. ದೇಶದ ಹಿತಾಸಕ್ತಿ ಕಾಪಾಡಲು ಪ್ರತಿಯೊಬ್ಬರೂ ಶ್ರಮಿಸಬೇಕು. ಈ ಉದ್ದೇಶ ಈಡೇರಿಕೆಗಾಗಿ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸಮಾಜದ ಎಲ್ಲ ವರ್ಗಗಳ ನಡುವೆ ವ್ಯಾಪಕ ಸಂವಾದಗಳು ನಡೆಯಬೇಕು. ಇದು ನಿರಂತರ ಪ್ರಕ್ರಿಯೆ ಎಂಬ ತನ್ನ ನಿಲುವನ್ನು ಕೂಡ ಆರ್‌ಎಸ್‌ಎಸ್ ಸಭೆಗೆ ವಿವರಿಸಿತು’ ಎಂದು ಆರ್‌ಎಸ್‌ಎಸ್‌ನ ಮಾಧ್ಯಮ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಸುನಿಲ್ ಅಂಬೇಕರ್ ಹೇಳಿದರು.

ಮಾತುಕತೆಯಿಂದ ಪ್ರತಿಯೊಂದು ಸಮಸ್ಯೆಯನ್ನು ಬಗೆಹರಿಸಬಹುದು. ತಪ್ಪುಕಲ್ಪನೆಗಳನ್ನು ಹೋಗಲಾಡಿಸಲು, ಪರಸ್ಪರರಲ್ಲಿ ನಂಬಿಕೆ ವೃದ್ಧಿಸಲು ಕೂಡ ಮಾತುಕತೆಯೇ ಸಾಧನ

ಉಮರ್ ಅಹ್ಮದ್ ಇಲಿಯಾಸಿ, ಅಖಿಲ ಭಾರತ ಇಮಾಮ್ ಸಂಘಟನೆ ಮುಖ್ಯಸ್ಥ

ನವದೆಹಲಿಯಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರೊಂದಿಗೆ ಗುರುವಾರ ಆಯೋಜಿಸಿದ್ದ ಸಭೆಗೂ ಮುನ್ನ ಅಖಿಲ ಭಾರತ ಇಮಾಮ್ ಸಂಘಟನೆ ಸದಸ್ಯರು ಚರ್ಚೆಯಲ್ಲಿ ತೊಡಗಿದ್ದರು – ಪಿಟಿಐ ಚಿತ್ರ

‘ಸಮ್ಮತಿ ವಯಸ್ಸು ಇಳಿಕೆ ಅಪಾಯಕಾರಿ’

ನವದೆಹಲಿ: ಲೈಂಗಿಕ ಸಂಪರ್ಕಕ್ಕೆ ಸಮ್ಮತಿ ಸೂಚಿಸಲು ಹೆಣ್ಣುಮಕ್ಕಳಿಗಿರುವ ಕನಿಷ್ಠ ವಯಸ್ಸಿನ ಮಿತಿಯಲ್ಲಿ ವಿನಾಯಿತಿ ನೀಡುವಂಥ ತಿದ್ದುಪಡಿಗಳನ್ನು ತರುವುದರಿಂದ ಕಾನೂನಿನ ಮೂಲ ಉದ್ದೇಶಕ್ಕೆ ಧಕ್ಕೆಯಾಗುವುದಲ್ಲದೇ, ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಆಸ್ಪದ ನೀಡಿದಂತಾಗುತ್ತದೆ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಅಸ್ತಿತ್ವದಲ್ಲಿರುವ ಸಮ್ಮತಿ ವಯಸ್ಸಿನ ಮಿತಿಯು ಹದಿಹರೆಯದ ವಯಸ್ಸಿನವರ ಪ್ರಬುದ್ಧತೆ, ಸಾಮರ್ಥ್ಯವನ್ನು ನಿರ್ಲಕ್ಷ್ಯಿಸಿ ಅವರ ನಡುವಿನ ಒಮ್ಮತದ ಸಂಬಂಧವನ್ನೂ ತಪ್ಪಾಗಿ ನಿರೂಪಿಸುತ್ತಿದೆ. ಹೀಗಾಗಿ ಸಮ್ಮತಿ ವಯಸ್ಸಿನ ಮಿತಿಯನ್ನು 18 ರಿಂದ 16 ವರ್ಷಕ್ಕೆ ಇಳಿಸಬೇಕು ಎಂದು ಕೋರಿ ಅರ್ಜಿಯೊಂದು ಸಲ್ಲಿಕೆಯಾಗಿತ್ತು.

‘ಮಕ್ಕಳು ದೈಹಿಕವಾಗಿ ಪ್ರಬುದ್ಧರಾಗಿದ್ದರೂ ಸಾಮಾಜಿಕ ರೂಢಿಗಳು ಅಥವಾ ಆರ್ಥಿಕ ದುರ್ಬಲತೆಯ ಕಾರಣದಿಂದ ಎದುರಾಗುವ ಸವಾಲುಗಳನ್ನು ನಿಭಾಯಿಸುವಲ್ಲಿ ಅಸಮರ್ಥರಾಗಿರುತ್ತಾರೆ ಹೀಗಾಗಿ ಸಮ್ಮತಿ ವಯಸ್ಸಿನ ಮಿತಿಯನ್ನು ಇಳಿಸುವುದು ಸೂಕ್ತವಲ್ಲ. ಅಲ್ಲದೇ, ಮಿತಿಯ ತಿದ್ದುಪಡಿಯು ಪೋಕ್ಸೊ ಕಾಯ್ದೆ –2012 ಅನ್ನೂ ದುರ್ಬಲಗೊಳಿಸುತ್ತದೆ’ ಎಂದು ಕೇಂದ್ರ ಸರ್ಕಾರ ಹೇಳಿದೆ.

ನ್ಯಾ. ವರ್ಮಾ ವಿರುದ್ಧ ತನಿಖೆಗೆ ಸಮಿತಿ: ಶೀಘ್ರ ಘೋಷಣೆ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸುವುದಕ್ಕಾಗಿ ಸಮಿತಿಯೊಂದನ್ನು ರಚಿಸುವ ಕುರಿತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಗುರುವಾರ ಹೇಳಿವೆ.

ಸಂಸತ್‌ನ ಉಭಯ ಸದನಗಳಲ್ಲಿ ದಿನವಿಡೀ ಹಿರಿಯ ಸಚಿವರೊಂದಿಗೆ ಸರಣಿ ಸಭೆಗಳು ನಡೆದಿದ್ದು, ಸಮಿತಿ ರಚಿಸುವ ಕುರಿತು ಶೀಘ್ರವೇ ಘೋಷಣೆ ಹೊರಬೀಳುವ ಸಾಧ್ಯತೆ ಇದೆ ಎಂದಿವೆ.

ನ್ಯಾಯಮೂರ್ತಿ ಅವರು, ತಮ್ಮ ನಿವಾಸದಲ್ಲಿ ನಗದು ಪತ್ತೆಯಾಗಿರುವ ಕುರಿತು ಆರೋಪ ಎದುರಿಸುತ್ತಿದ್ದಾರೆ. ಅವರ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸುವುದಕ್ಕಾಗಿ ಸಮಿತಿ ರಚಿಸುವಂತೆ ಕೋರಿ 152 ಸಂಸದರು ಬಿರ್ಲಾ ಅವರಿಗೆ ಜುಲೈ 21ರಂದು ನೋಟಿಸ್ ಸಲ್ಲಿಸಿದ್ದರು. ಇದರ ಬೆನ್ನಲ್ಲೇ, ಮೂವರು ಸದಸ್ಯರಿರುವ ಸಮಿತಿ ರಚನೆ ಸಂಬಂಧ ವ್ಯಾಪಕ ಸಮಾಲೋಚನೆಗಳು ನಡೆದಿವೆ ಎನ್ನಲಾಗಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಥವಾ ನ್ಯಾಯಮೂರ್ತಿ, ಹೈಕೋರ್ಟ್‌ವೊಂದರ ಮುಖ್ಯ ನ್ಯಾಯಮೂರ್ತಿ ಹಾಗೂ ಕಾನೂನು ತಜ್ಞರೊಬ್ಬರನ್ನು ಈ ಸಮಿತಿ ಒಳಗೊಂಡಿರಲಿದೆ ಎಂದು ಮೂಲಗಳು ಹೇಳಿವೆ.

ಜಗದೀಪ್ ಧನಕರ್ ಅವರು ಉಪರಾಷ್ಟ್ರಪತಿ ಆಗಿದ್ದ ವೇಳೆ, ರಾಜ್ಯಸಭೆಯ 63 ಸದಸ್ಯರು ಸಹ ಜುಲೈ 21ರಂದೇ ಇದೇ ವಿಚಾರವಾಗಿ ನೋಟಿಸ್ ನೀಡಿದ್ದರು.

ನ್ಯಾಯಮೂರ್ತಿಗಳ (ತನಿಖೆ) ಕಾಯ್ದೆಯಡಿ, ಮೂವರು ಸದಸ್ಯರ ಸಮಿತಿ ತನಿಖೆ ನಡೆಸಲಿದೆ. ‘ಆರೋಪ ಹೊತ್ತ ನ್ಯಾಯಮೂರ್ತಿಗಳನ್ನು ಯಾವ ಆಧಾರದ ಮೇಲೆ ಹುದ್ದೆಯಿಂದ ಪದಚ್ಯುತಗೊಳಿಸಬೇಕು’ ಎಂಬ ಬಗ್ಗೆ ಸಮಿತಿಯು ಶಿಫಾರಸು ಮಾಡಲಿದೆ.

ಈ ಸಂಬಂಧ ನಡೆದ ಸರಣಿ ಸಭೆಗಳಲ್ಲಿ ಸ್ಪೀಕರ್ ಓಂ ಬಿರ್ಲಾ, ಗೃಹ ಸಚಿವ ಅಮಿತ್ ಶಾ, ರಾಜ್ಯಸಭೆಯಲ್ಲಿ ಸಭಾನಾಯಕ ಜೆ.ಪಿ.ನಡ್ಡಾ, ರಾಜ್ಯಸಭೆಯ ಹಂಗಾಮಿ ಸಭಾಪತಿ ಹರಿವಂಶ್ ಪಾಲ್ಗೊಂಡಿದ್ದರು ಎಂದು ಮೂಲಗಳು ಹೇಳಿವೆ.

ಸಿಜೆಐಗೆ ಪತ್ರ

ಸಮಿತಿ ರಚನೆಗೆ ಸಂಬಂಧಿಸಿ, ಲೋಕಸಭಾ ಸ್ಪೀಕರ್ ಬಿರ್ಲಾ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದು, ಇಬ್ಬರು ನ್ಯಾಯಮೂರ್ತಿಗಳ ಹೆಸರು ಶಿಫಾರಸು ಮಾಡುವಂತೆ ಕೋರಲಿದ್ದಾರೆ. ಕಾನೂನು ವಿದ್ವಾಂಸರೊಬ್ಬರನ್ನು ಆಯ್ಕೆ ಮಾಡುವುದು ಬಿರ್ಲಾ ಅವರ ವಿವೇಚನಾಧಿಕಾರವಾಗಿದೆ.

‘ಸುಪ್ರೀಂ’ ಸುದ್ದಿಗಳು

ಮುಂಬೈ ಸರಣಿ ಸ್ಫೋಟ: 12 ಅಪರಾಧಿಗಳನ್ನು ಖುಲಾಸೆಗೊಳಿಸಿದ್ದ ಬಾಂಬೆ ಹೈಕೋರ್ಟ್

ಅಪರಾಧಿಗಳ ಖುಲಾಸೆ ತೀರ್ಪಿಗೆ ತಡೆ

ನವದೆಹಲಿ (ಪಿಟಿಐ): 2006ರಲ್ಲಿ ಮುಂಬೈ ಲೋಕಲ್ ರೈಲಿನಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದ ಎಲ್ಲ 12 ಅಪರಾಧಿಗಳನ್ನು ಖುಲಾಸೆಗೊಳಿಸಿ ಬಾಂಬೆ ಹೈಕೋರ್ಟ್ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ಗುರುವಾರ ತಡೆಯಾಜ್ಞೆ ನೀಡಿದೆ.

ನ್ಯಾಯಮೂರ್ತಿ ಎಂ.ಎಂ. ಸುಂದ್ರೇಶ್ ಮತ್ತು ಎನ್.ಕೋಟೀಶ್ವರ ಸಿಂಗ್ ಅವರನ್ನು ಒಳಗೊಂಡ ನ್ಯಾಯಪೀಠವು, ಪ್ರಕರಣದ ಎಲ್ಲ ಅಪರಾಧಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ರಾಜ್ಯ ಸರ್ಕಾರದ ಮೇಲ್ಮನವಿ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ಪ್ರತಿವಾದಿಗಳಿಗೆ ಸೂಚಿಸಿದೆ.

ಹೈಕೋರ್ಟ್ ತೀರ್ಪನ್ನು ಪೂರ್ವ ನಿದರ್ಶನವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ಅನಿಲ್ ಕಿಲೋರ್ ಮತ್ತು ಶ್ಯಾಮ್ ಚಂದಕ್ ನೇತೃತ್ವದ ನ್ಯಾಯಪೀಠವು, ‘ಆರೋಪಿಗಳೆಲ್ಲರೂ, ಅಪರಾಧ ಎಸಗಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ’ ಎಂದು ತೀರ್ಮಾನಿಸಿ, ವಿಚಾರಣಾ ನ್ಯಾಯಾಲಯವು 12 ಮಂದಿಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿತ್ತು.

ಬಿಎಸ್ –6 ವಾಹನ: ಅರ್ಜಿ ವಿಚಾರಣೆಗೆ ಸಮ್ಮತಿ: ದೆಹಲಿಯಲ್ಲಿ ಬಿಎಸ್ –6 ಸರಣಿಯ ವಾಹನಗಳ ಜೀವಿತಾವಧಿ ಕುರಿತ ಸರ್ಕಾರದ ಆದೇಶ ಪ್ರಶ್ನಿಸಿರುವ ಅರ್ಜಿಯನ್ನು ಜುಲೈ 28ಕ್ಕೆ ವಿಚಾರಣೆ ಮಾಡುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ಮಾಲಿನ್ಯ ನಿಯಂತ್ರಣಕ್ಕಾಗಿ ದೆಹಲಿ ಸರ್ಕಾರವು ‘ಬಿಎಸ್ –6 ಸರಣಿಯ ಪೆಟ್ರೋಲ್, ಡೀಸೆಲ್ ವಾಹನಗಳನ್ನು ಕ್ರಮವಾಗಿ 15 ಮತ್ತು 10 ವರ್ಷ ಮಾತ್ರವೇ ಬಳಸಬೇಕು’ ಎಂದಿದೆ.

‘ಪಾಶ್ ಸಮಿತಿ ರಚಿಸುವಂತೆ ಪಕ್ಷಗಳಿಗೆ ನಿರ್ದೇಶನ ನೀಡಿ’

‘ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆ (ಪಾಶ್ ಕಾಯ್ದೆ– 2013) ಅನ್ವಯ ‘ದೂರು ಮೇಲ್ವಿಚಾರಣಾ ಸಮಿತಿ’ ರಚಿಸುವಂತೆ ರಾಜಕೀಯ ಪಕ್ಷಗಳಿಗೆ ನಿರ್ದೇಶನ ನೀಡಿ’ ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ.

‘ಚುನಾವಣಾ ಪ್ರಚಾರ, ತಳಮಟ್ಟದಲ್ಲಿನ ಪಕ್ಷದ ಕಾರ್ಯಚಟುವಟಿಕೆಗಳ ಸಂದರ್ಭದಲ್ಲಿ ಪಕ್ಷಗಳ ಮಹಿಳಾ ಕಾರ್ಯಕರ್ತರು ಲೈಂಗಿಕ ದೌರ್ಜನ್ಯ ಅನುಭವಿಸುತ್ತಿದ್ದಾರೆ. ಪಕ್ಷಗಳ ಕಾರ್ಯಕರ್ತೆಯರ ಮೇಲೆ ನಡೆಯುವ ದೌರ್ಜನ್ಯ ತಡೆಗಟ್ಟಲು ಯಾವುದೇ ಪ್ರತ್ಯೇಕ ಕಾನೂನು ಇಲ್ಲ’ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಯೋಗಮಯ ಎಂ.ಜಿ ಎಂಬುವರು 2024ರಲ್ಲಿ ಇಂಥದ್ದೇ ಅರ್ಜಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದರು. ‘ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವ ಸಂಸ್ಥೆ ಬಳಿ ನಿಮ್ಮ ಮನವಿ ನೀಡಿ’ ಎಂದು ಆಗ ನ್ಯಾಯಾಲಯ ಹೇಳಿತ್ತು.

ಈ ಬಳಿಕ ಅರ್ಜಿದಾರರು, ಚುನಾವಣಾ ಆಯೋಗದ ಮೊರೆ ಹೋಗಿದ್ದರು. ‘ಮನವಿ ಸಲ್ಲಿಸಿದರೂ ಇಲ್ಲಿಯವರೆಗೆ ಆಯೋಗದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

6 ಏರ್‌ಬ್ಯಾಗ್ ಅರ್ಜಿ ವಜಾ

ಪ್ರಯಾಣಿಕ ವಾಹನಗಳಲ್ಲಿ ಆರು ಏರ್‌ಬ್ಯಾಗ್ ಅಳವಡಿಸುವುದನ್ನು ಕಡ್ಡಾಯಗೊಳಿಸಬೇಕು ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಅವರ ನೇತೃತ್ವದ ನ್ಯಾಯಪೀಠವು, ಸರ್ಕಾರಕ್ಕೆ ಈ ಸಂಬಂಧ ಮನವಿ ಮಾಡುವಂತೆ ಅರ್ಜಿದಾರರಿಗೆ ತಿಳಿಸಿತು. ಮೇ 17ರಂದೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರು ತಿಳಿಸಿದರು.

ಬಳಿಕ ನ್ಯಾಯಪೀಠವು, ‘ಅರ್ಜಿಯಲ್ಲಿರುವ ಅಂಶಗಳು ಕಾರ್ಯಾಂಗ ರೂಪಿಸಿರುವ ನೀತಿಗಳಡಿ ಬರುತ್ತವೆ. ಇದರಲ್ಲಿ ನ್ಯಾಯಾಂಗವು ಮಧ್ಯಪ್ರವೇಶ ಮಾಡಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿತು.

ಟಿ.ಸಿಗಾಗಿ ಪೋಷಕರ ದುಂಬಾಲು

ಮಂಡ್ಯ ತಾಲ್ಲೂಕಿನ ಆಲಕೆರೆ ಸರ್ಕಾರಿ ಶಾಲೆಯಲ್ಲಿ 'ಮೊಟ್ಟೆ ವಿವಾದ'

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಆಲಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮೊಟ್ಟೆ ನೀಡುವ ವಿಚಾರಕ್ಕೆ ಗ್ರಾಮದ ಪರಿಶಿಷ್ಟರು ಮತ್ತು ಪ್ರಬಲ ಜಾತಿಗಳ ಜನರ ನಡುವೆ ವೈಮನಸ್ಸು ಮೂಡಿದೆ. ಮೊಟ್ಟೆ ಬೇಡ ಎನ್ನುವ ಪೋಷಕರು ಮಕ್ಕಳನ್ನು ಬೇರೆ ಶಾಲೆಗೆ ಸೇರಿಸಲು 'ವರ್ಗಾವಣೆ ಪತ್ರ' ಕೊಡಿ ಎಂದು ದುಂಬಾಲು ಬಿದ್ದಿದ್ದಾರೆ.

ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗೆ 124 ಮಕ್ಕಳು ಹಾಗೂ ಎಲ್‌ಕೆಜಿ ಮತ್ತು ಯುಕೆಜಿಯಲ್ಲಿ 20 ಮಕ್ಕಳು ಇದ್ದಾರೆ. ಶಾಲಾ ಕಟ್ಟಡದ ಬಳಿ ವೀರಭದ್ರೇಶ್ವರಸ್ವಾಮಿ ದೇವಾಲಯವಿದೆ ಎನ್ನುವ ಕಾರಣಕ್ಕೆ ಪೋಷಕರ ಮನವಿ ಮೇರೆಗೆ ಇದುವರೆಗೆ ಮೊಟ್ಟೆ ಬದಲಿಗೆ ಮಕ್ಕಳಿಗೆ ಬಾಳೆಹಣ್ಣು ನೀಡಲಾಗುತ್ತಿತ್ತು.

'ಪರಿಶಿಷ್ಟ ಜಾತಿಯ 20 ಮಕ್ಕಳು ಶಾಲೆಯಲ್ಲಿದ್ದಾರೆ. ಇವರಿಗೆ ಮೊಟ್ಟೆ ಕೊಡದೆ ಪೌಷ್ಟಿಕ ಆಹಾರದಿಂದ ವಂಚಿಸಲಾಗುತ್ತಿದೆ' ಎಂದು ಕರ್ನಾಟಕ ಸ್ವಾಭಿಮಾನಿ ಸಮ ಸಮಾಜ ಸಂಘಟನೆ ಮತ್ತು ಪೋಷಕರು ಜಿಲ್ಲಾಧಿಕಾರಿ ಕಚೇರಿಗೆ ವಾರದ ಹಿಂದೆ ದೂರು ನೀಡಿದ್ದರು.

ಮೊಟ್ಟೆ ಕೊಡಲೇಬೇಕು ಎಂದು ಪರಿಶಿಷ್ಟ ಮಕ್ಕಳ ಪೋಷಕರ ಒತ್ತಡದ ಕಾರಣ ಪ್ರಬಲ ಜಾತಿಗಳಿಗೆ ಸೇರಿದ ಪೋಷಕರು 40ಕ್ಕೂ ಹೆಚ್ಚು ಮಕ್ಕಳನ್ನು ಸಮೀಪದ, ಮಂಡ್ಯ ತಾಲ್ಲೂಕಿನ ಕೀಲಾರ, ಹನಕೆರೆ ಮತ್ತು ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿ ಶಾಲೆಗೆ ಸೇರಿಸಲು ಮುಂದಾಗಿದ್ದಾರೆ.

ಮೊಟ್ಟೆ ತಿನ್ನಲು ವಿರೋಧವಿಲ್ಲ: 'ಮೊಟ್ಟೆ ನೀಡಲು ನಮ್ಮ ವಿರೋಧವಿಲ್ಲ. ಶಾಲೆ ಪಕ್ಕದಲ್ಲೇ ದೇಗುಲವಿದ್ದು, ಇಲ್ಲಿ ಮೊಟ್ಟೆ ಬೇಯಿಸುವುದು ಬೇಡ. ಮನೆಗಳಿಗೆ ಕಳುಹಿಸಿಕೊಡಲಿ ಎಂದು ತಿಳಿಸಿದ್ದೇವೆ. ಶಾಲೆಯಲ್ಲೇ ಕೊಡಬೇಕು ಎಂಬ ಒತ್ತಡ ಹೆಚ್ಚಾದ್ದರಿಂದ ನನ್ನ ಮಗ, ಮಗಳನ್ನು ಈಗ ಕೀಲಾರದ ಶಾಲೆಗೆ ದಾಖಲು ಮಾಡಿದ್ದೇನೆ' ಎಂದು ಎಸ್‌ಡಿಎಂಸಿ ಸದಸ್ಯ ಚಂದ್ರು ಆಲಕೆರೆ ಹೇಳಿದರು.

'ಪೋಷಕರ ಮನವೊಲಿಸುತ್ತಿದ್ದೇವೆ. ಗ್ರಾಮಸ್ಥರು ಒಮ್ಮತದ ತೀರ್ಮಾನ ತೆಗೆದುಕೊಂಡರೆ ವಿವಾದ ಬಗೆಹರಿಯುತ್ತದೆ. ಎಲ್ಲ ಮಕ್ಕಳನ್ನು ಆಲಕೆರೆ ಶಾಲೆಯಲ್ಲೇ ಉಳಿಸಿಕೊಳ್ಳಲು ಇದುವರೆಗೆ 3 ಸಭೆಗಳನ್ನು ಮಾಡಿದ್ದೇವೆ' ಎಂದು ಬಿಇಒ ಸೌಭಾಗ್ಯ ಕೆ.ಟಿ. ಹೇಳಿದರು.

ಮಂಡ್ಯ ತಾಲ್ಲೂಕಿನ ಆಲಕೆರೆ ಸರ್ಕಾರಿ ಶಾಲೆಯಲ್ಲಿ ಮೊಟ್ಟೆ ವಿತರಣೆ ಸಂಬಂಧ ವಿದ್ಯಾರ್ಥಿಗಳ ಪೋಷಕರು ಶಿಕ್ಷಕರೊಂದಿಗೆ ವಾಗ್ವಾದ ನಡೆಸಿದರು

> **ಆಲಕೆರೆ ಶಾಲೆಯಿಂದ ಯಾವ ವಿದ್ಯಾರ್ಥಿಗೂ ಟಿ.ಸಿ ಕೊಟ್ಟಿಲ್ಲ, ಮೊಟ್ಟೆ ಕೊಡುವುದು ಸರ್ಕಾರದ ಆದೇಶ. ಅದನ್ನು ನಿಲ್ಲಿಸುವುದಿಲ್ಲ, ಪೋಷಕರ ಮನವೊಲಿಸುತ್ತಿದ್ದೇವೆ**
> **ಶಿವರಾಮೇಗೌಡ,** ಡಿಡಿಪಿಐ, ಮಂಡ್ಯ

> **ಶಾಲೆ ಬಳಿ ದೇವಾಲಯಗಳಿದ್ದರೆ, ಅಲ್ಲಿ ಮೊಟ್ಟೆಯ ಬದಲು ಹಣ್ಣುಗಳ ವಿತರಣೆ ಆಗುವಂತೆ ಸರ್ಕಾರ ಆದೇಶಿಸಬೇಕು ಎಂಬುದು ನಮ್ಮ ಒತ್ತಾಯ**
> **ಮಹೇಶ್, ರುದ್ರೇಶ್**
> ಗ್ರಾಮದ ಮುಖಂಡರು

'ನಿಗಮ ಮಂಡಳಿ ಹೆಸರು ಅಂತಿಮ'

ನವದೆಹಲಿ: ಕರ್ನಾಟಕದ 20 ನಿಗಮ ಮಂಡಳಿಗಳಿಗೆ ಅಧ್ಯಕ್ಷರ ಹೆಸರನ್ನು ಕಾಂಗ್ರೆಸ್ ಬಹುತೇಕ ಅಂತಿಮಗೊಳಿಸಿದೆ. ಈ ಪಟ್ಟಿ ಮುಂದಿನ ವಾರ ಬಿಡುಗಡೆಯಾಗುವ ಸಂಭವ ಇದೆ.

ನಿಗಮ ಮಂಡಳಿಗಳಿಗೆ ಅಧ್ಯಕ್ಷರ ಹೆಸರನ್ನು ಅಂತಿಮಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಗುರುವಾರ ರಾತ್ರಿ ಸಭೆ ನಡೆಸಿ ಕಸರತ್ತು ನಡೆಸಿದರು.

ಡಿಸಿಇಟಿ: 2ನೇ ಸುತ್ತಿನ ಸೀಟು ಹಂಚಿಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎರಡನೇ ವರ್ಷದ ಎಂಜಿನಿಯರಿಂಗ್ ಕೋರ್ಸ್ ಅಥವಾ ಮೂರನೇ ಸೆಮಿಸ್ಟರ್‌ಗೆ ನೇರ ಪ್ರವೇಶ ಕಲ್ಪಿಸುವ ಡಿಸಿಇಟಿ-25 ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಗುರುವಾರ (ಜುಲೈ 24) ಆರಂಭವಾಗಿದೆ. ಕಾಲೇಜಿಗೆ ವರದಿ ಮಾಡಿಕೊಳ್ಳಲು ಇದೇ 30 ಕೊನೆ ದಿನ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಅಭ್ಯರ್ಥಿಗಳು ಅವಶ್ಯವಿದ್ದಲ್ಲಿ ತಮ್ಮ ಆಯ್ಕೆಗಳನ್ನು (ಇಚ್ಛೆ) ಬದಲಿಸಿಕೊಳ್ಳಲು 26ರ ಬೆಳಿಗ್ಗೆ 11ಗಂಟೆವರೆಗೆ ಅವಕಾಶ ನೀಡಲಾಗಿದೆ. ಅಂದು ರಾತ್ರಿ 8 ಗಂಟೆಗೆ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುವುದು. ಶುಲ್ಕ ಪಾವತಿ ಮತ್ತು ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಲು 28ರಂದು ಮಧ್ಯಾಹ್ನ 1ರಿಂದ 30ರ ಸಂಜೆ 4ಗಂಟೆವರೆಗೆ ಅವಕಾಶ ನೀಡಲಾಗಿದೆ. 30ರಂದು 6ಗಂಟೆಯ ಒಳಗೆ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಎಂ.ಇ, ಎಂ.ಟೆಕ್: ಪ್ರಸಕ್ತ ಸಾಲಿನಲ್ಲಿ ಎಂ.ಇ, ಎಂ.ಟೆಕ್ ಆಯ್ದ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಜುಲೈ 28ರಂದು ದಾಖಲೆ ಪರಿಶೀಲನೆಗೆ ಪದವಿ ಪರೀಕ್ಷೆಯ ಎಲ್ಲ ಸೆಮಿಸ್ಟರ್ (ವರ್ಷಗಳ) ಅಂಕಪಟ್ಟಿಗಳು ಮತ್ತು ಇತರೆ ಮೂಲ ದಾಖಲೆಗಳೊಂದಿಗೆ ಕೆಇಎ ಕಚೇರಿಗೆ ಹಾಜರಾಗಬೇಕು.

ಜೈವಿಕ ತಂತ್ರಜ್ಞಾನ, ಕೆಮಿಕಲ್ ಎಂಜಿನಿಯರಿಂಗ್, ಪರಿಸರ ಎಂಜಿನಿಯರಿಂಗ್, ಪಾಲಿಮರ್ ವಿಜ್ಞಾನ ಮತ್ತು ಜವಳಿ ತಂತ್ರಜ್ಞಾನ ಮತ್ತು ವಾಸ್ತುಶಿಲ್ಪ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆಯು ಅಂದು ಬೆಳಿಗ್ಗೆ 11.30ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ ಎಂದು ಪ್ರಸನ್ನ ತಿಳಿಸಿದ್ದಾರೆ.

ಎಂ.ಆರ್ಕಿಟೆಕ್ಚರ್ ಕೋರ್ಸ್‌ಗೆ ಅರ್ಜಿ ಹಾಕಿರುವ ಅಭ್ಯರ್ಥಿಗಳು ಪಿಜಿಸಿಇಟಿ-2025ರಲ್ಲಿ ಪಡೆದಿರುವ ಅಂಕಪಟ್ಟಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ತಿದ್ದುಪಡಿ ಅವಕಾಶ: ಪಿಜಿಸಿಇಟಿ-2025ಕ್ಕೆ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿನ ಮಾಹಿತಿಯನ್ನು ಅರ್ಹತೆಗೆ ಅನುಗುಣವಾಗಿ ಬದಲಿಸಲು ಇದೇ 27ರವರೆಗೆ ಅವಕಾಶ ನೀಡಲಾಗುವುದು. ಮಾಹಿತಿಗಳನ್ನು ಬದಲಿಸಲು ಮುಂದಾಗುವ ಮೊದಲು ಅರ್ಜಿಯಲ್ಲಿ ಮುದ್ರಿತವಾಗಿರುವ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ದಕ್ಷಿಣ ಕನ್ನಡ, ಕೊಡಗು ಜಿಲ್ಲೆಯಲ್ಲಿ ಇಂದು ಶಾಲೆ, ಪಿಯು ಕಾಲೇಜಿಗೆ ರಜೆ

ಕರಾವಳಿ, ಚಿಕ್ಕಮಗಳೂರಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದ್ದು, ಗುರುವಾರವೂ ದಿನವಿಡೀ ಬಿಟ್ಟು ಬಿಟ್ಟು ಧಾರಾಕಾರ ಮಳೆಯಾಗಿದೆ.

ಉಡುಪಿ ಜಿಲ್ಲೆ ಮತ್ತು ದಕ್ಷಿಣಕನ್ನಡದ ಮಂಗಳೂರು, ಉಳ್ಳಾಲ, ಬಂಟ್ವಾಳ, ಕಡಬ, ಮೂಲ್ಕಿ, ಮೂಡುಬಿದಿರೆ ವ್ಯಾಪ್ತಿಯಲ್ಲಿ ಶಾಲೆ, ಪಿಯು ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ದಕ್ಷಿಣ ಕನ್ನಡ, ಕೊಡಗು ಜಿಲ್ಲೆಯಲ್ಲಿ 25ರಂದೂ ರಜೆ ಘೋಷಿಸಲಾಗಿದೆ.

ಉಳ್ಳಾಲ ತಾಲ್ಲೂಕು ಪಜೀರು ಗ್ರಾಮದ ಅರ್ಕಾಣದಲ್ಲಿ ರಸ್ತೆಗೆ ಗುಡ್ಡ ಕುಸಿದುಬಿದ್ದಿದೆ. ಅರ್ಧ ಭಾಗದಷ್ಟು ರಸ್ತೆ ಮಣ್ಣಿನಿಂದ ಆವೃತವಾಗಿದ್ದು, ಸಂಚಾರ ವ್ಯಸ್ತವಾಗಿದೆ.

ಕಾರ್ಕಳ ತಾಲ್ಲೂಕಿನ ಮಾಳ - ಕುದುರೆಮುಖ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲವೆಡೆ ಗುಡ್ಡ ಜರಿದಿದೆ. ಬ್ರಹ್ಮಾವರ ವ್ಯಾಪ್ತಿಯಲ್ಲಿ ತಗ್ಗು ಪ್ರದೇಶಗಳು ಜಲಾವೃತವಾಗಿವೆ.

'26ರವರೆಗೆ ಅರಬ್ಬಿಸಮುದ್ರ ಪ್ರಕ್ಷುಬ್ಧವಾಗಿರಲಿದೆ. ಮೀನುಗಾರರು ಸಮುದ್ರಕ್ಕೆ ತೆರಳಬಾರದು' ಎಂದು ಹವಾಮಾನ ಇಲಾಖೆ, ಮೀನುಗಾರಿಕೆ ಇಲಾಖೆಯು ಸಲಹೆ ಮಾಡಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯಿಂದಾಗಿ ನದಿಗಳ ಹರಿವು ಹೆಚ್ಚಾಗಿದೆ. ಶೃಂಗೇರಿ, ಕಳಸ, ಮೂಡಿಗೆರೆ, ಕೊಟ್ಟಿಗೆಹಾರ, ಬಾಳೆಹೊನ್ನೂರು, ಕೊಪ್ಪ, ಎನ್.ಆರ್.ಪುರ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಯಿತು. ಚಿಕ್ಕಮಗಳೂರಿನಲ್ಲಿ ಜಿಟಿಜಿಟಿ ಮಳೆ ಸುರಿಯಿತು.

ಶಿವಮೊಗ್ಗ ವರದಿ: ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಮತ್ತು ಸಾಗರ ತಾಲ್ಲೂಕಿನ ಹಲವೆಡೆ ಗುರುವಾರ ಬೆಳಿಗ್ಗೆಯಿಂದಲೂ ಮಳೆ ಅಬ್ಬರಿಸುತ್ತಿದೆ. ಜಿಲ್ಲೆಯ ಹೊಸನಗರ, ಭದ್ರಾವತಿ, ತಾಲ್ಲೂಕಿನಲ್ಲೂ ನಿರಂತರ ಮಳೆಯಾಗುತ್ತಿದೆ.

ತೀರ್ಥಹಳ್ಳಿ ತಾಲ್ಲೂಕಿನ ಅರೇಹಳ್ಳಿ, ಮೇಗರವಳ್ಳಿ, ಹೊಸಹಳ್ಳಿ, ಹೊನ್ನೇತಾಳು, ತೀರ್ಥಮತ್ತೂರು, ಸಾಲ್ಗಡಿ, ನೆರಟೂರು, ಆರಗ, ತೂದೂರು, ಬೆಜ್ಜವಳ್ಳಿ, ಬಾಂಡ್ಯ ಕುಕ್ಕೆ, ತ್ರಯಂಬಕಪುರ, ಹಾದಿಗಲ್ಲು ಸುತ್ತಮುತ್ತಲೂ ಉತ್ತಮ ರೀತಿಯಲ್ಲಿ ಸುರಿದಿದೆ.

ಕಾರವಾರ ವರದಿ: ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಳೆ ಅಬ್ಬರ ಮುಂದುವರಿದಿದೆ. ಹತ್ತಾರು ಮನೆಗಳಿಗೆ ಹಾನಿಯಾಗಿದೆ.

ಮಲೆನಾಡು ಭಾಗದ ಶಿರಸಿ, ಸಿದ್ದಾಪುರದಲ್ಲೂ ಆಗಾಗ ರಭಸದ ಮಳೆಯಾಗುತ್ತಿದೆ. ನಿರಂತರ ಮಳೆಯಿಂದ ಕುಮಟಾ, ಭಟ್ಕಳದಲ್ಲಿ 10ಕ್ಕೂ ಹೆಚ್ಚು ಮನೆಗಳ ಗೋಡೆ ಕುಸಿದಿದೆ.

ಮಡಿಕೇರಿ ವರದಿ: ಜಿಲ್ಲೆಯಲ್ಲಿ ಬುಧವಾರ ರಾತ್ರಿಯಿಂದ ನಿರಂತರ ಮಳೆ ಆಗುತ್ತಿದೆ. ಭಾಗಮಂಡಲದಲ್ಲಿ ಜೋರು, ಸೋಮವಾರಪೇಟೆಯಲ್ಲಿ ಸಾಧಾರಣ ಮಳೆಯಾಗಿದೆ.

ಮೈಸೂರು ನಗರದಲ್ಲೂ ಆಗಾಗ ತುಂತುರು ಮಳೆಯಾಯಿತು.

ಮಳೆ: ಎಲ್ಲಿ, ಎಷ್ಟು?

(ಸೆಂಟಿ ಮೀಟರ್‌ಗಳಲ್ಲಿ)

ಸ್ಥಳ	ಮಳೆ
ಶಿವಮೊಗ್ಗ ಜಿಲ್ಲೆ	
ಹುಲಿಕಲ್	20.1
ಮಾಸ್ತಿಕಟ್ಟೆ	17.8
ಮಾಣಿ	16
ಚಕ್ರಾ	13.5
ಯಡೂರು	12.7
ಸಾವೆಹಕ್ಲು	11.2
ಆಗುಂಬೆ	16
ಕೊಡಗು ಜಿಲ್ಲೆ	
ಶಾಂತಳ್ಳಿ	07
ಸಂಪಾಜೆ	05
ಮಡಿಕೇರಿ, ಭಾಗಮಂಡಲ	04

(*ಕಳೆದ 24 ಗಂಟೆಗಳಲ್ಲಿ)

ದಕ್ಷಿಣ ಕನ್ನಡ ಜಿಲ್ಲೆಯ ಅರ್ಕಾಣದಲ್ಲಿ ಗುಡ್ಡ ರಸ್ತೆಗೆ ಕುಸಿಯಿತು

'ಸೆಪ್ಟೆಂಬರ್ ಕ್ರಾಂತಿ ಮಾತಿಗೆ ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ರಾಜಕೀಯದಲ್ಲಿ ಸೆಪ್ಟೆಂಬರ್‌ನಲ್ಲಿ ಕ್ರಾಂತಿ ಆಗಲಿದೆ ಎಂದು ಈ ಹಿಂದೆ ನೀಡಿದ್ದ ಹೇಳಿಕೆಗೆ ನಾನು ಈಗಲೂ ಬದ್ಧ' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪೂರ್ವನಿಗದಿತ ಕಾರ್ಯಕ್ರಮದ ಕಾರಣ ನಾನು ಕುಟುಂಬ ಸಮೇತ ವಿದೇಶಕ್ಕೆ ಹೋಗಿದ್ದೆ. ಹೀಗಾಗಿ ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಲು ಸಾಧ್ಯವಾಗಲಿಲ್ಲ' ಎಂದರು.

'ಸುರ್ಜೇವಾಲಾ ಅವರನ್ನು ಭೇಟಿ ಮಾಡಲು ದೆಹಲಿಗೆ ಹೋಗಬೇಕೆಂದು ಇದ್ದೇನೆ. ಅವರ ಜೊತೆ ಕೆಲವು ವಿಚಾರಗಳನ್ನು ಮಾತನಾಡಬೇಕಿದೆ' ಎಂದರು. 'ಸುರ್ಜೇವಾಲಾ ಅವರನ್ನು ಸಚಿವರು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ನಿಮ್ಮನ್ನೂ ಆಹ್ವಾನಿಸಿರಲಿಲ್ಲವೇ' ಎಂಬ ಪ್ರಶ್ನೆಗೆ, 'ನನ್ನನ್ನು ಕರೆದಿರಲಿಲ್ಲ. ಇಲ್ಲೇ ಇರುತ್ತಿದ್ದರೆ ಭೇಟಿ ಮಾಡುತ್ತಿದ್ದೆ' ಎಂದೂ ಹೇಳಿದರು.

ಐದು ಹುಲಿಗಳ ಸಾವು: ರಾಜ್ಯದ ಲೋಪ–ಕೇಂದ್ರ ಬೊಟ್ಟು

ಒಂದನೇ ಪುಟದಿಂದ...

'ಈ ಹುಲಿಗಳ ಸಾವಿಗೆ ವಿಷಪ್ರಾಶನ ಕಾರಣವೆಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವಿಶೇಷ ತನಿಖಾ ತಂಡ ವರದಿ ಸಲ್ಲಿಸಿದೆ' ಎಂದು ತಿಳಿಸಿದ್ದಾರೆ.

'ಮಲೆ ಮಹದೇಶ್ವರ ವನ್ಯಜೀವಿ ವಲಯವನ್ನು ಹುಲಿ ಸಂರಕ್ಷಣಾ ವಲಯವನ್ನಾಗಿ ಘೋಷಿಸುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಈ ಹಿಂದೆ ಸಲಹೆ ನೀಡಿತ್ತು. ಒಂದು ವೇಳೆ, ಈ ಕೆಲಸ ಮಾಡಿದ್ದರೆ ಹುಲಿಗಳಿಗಾಗಿ ಮೇಲ್ವಿಚಾರಣಾ ವ್ಯವಸ್ಥೆಯಂತಹ ಡಿಜಿಟಲ್ ಪರಿಕರಗಳನ್ನು ಬಳಸಿ ಹುಲಿಗಳ ನೈಜ ಸಮಯದ ಮೇಲ್ವಿಚಾರಣೆ ನಡೆಸಲು ಸಾಧ್ಯವಾಗುತ್ತಿತ್ತು. ಈ ಬಗ್ಗೆ ವಿಶೇಷ ತನಿಖಾ ತಂಡವು ತನ್ನ ವರದಿಯಲ್ಲಿ ಉಲ್ಲೇಖಿಸಿದೆ' ಎಂದು ಅವರು ತಿಳಿಸಿದ್ದಾರೆ.

ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳ ಅಸಹಜ ಸಾವಿನ ಪ್ರಕರಣದಲ್ಲಿ ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯ ಎಸಗಿದ ಮೂವರು ಅಧಿಕಾರಿಗಳನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.80	12,843	10,755
ಹಾರಂಗಿ	2,859	2,856.50	6,343	6,162
ಕಬಿನಿ	2,284.00	2,283.62	12,122	12,000
ಹೇಮಾವತಿ	2,922	2,921.03	6,761	6,700
ಲಿಂಗನಮಕ್ಕಿ	1,819	1,805	31,45	4,868
ಸೂಪಾ (ಮೀ)	564	547.64	12,103.77	5,185.06
ಮಾಣಿ	595	588.26	5,087	762
ತುಂಗಭದ್ರಾ	1,633	1,625.23	26,291	30,262
ಮಲಪ್ರಭಾ	2,079.5	2,073.22	2,216	1,244
ಘಟಪ್ರಭಾ	2175	169.06	5,491	4,272
ಭದ್ರಾ *	186	179.8	10,731	8,451
ಆಲಮಟ್ಟಿ (ಮೀ)	519.6	518.13	46,056	35,848
ನಾರಾಯಣಪುರ (ಮೀ)	492.25	491.98	45,000	65,200

* ನೆಲಮಟ್ಟದಿಂದ

ಕಾಡುಪ್ರಾಣಿ ದಾಳಿ: 44 ಮಂದಿ ಸಾವು

ನವದೆಹಲಿ: ಕರ್ನಾಟಕದಲ್ಲಿ ಮಾನವ–ವನ್ಯಜೀವಿ ಸಂಘರ್ಷದಿಂದ 2024–25ನೇ ಸಾಲಿನಲ್ಲಿ 44 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಅರಣ್ಯ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ತಿಳಿಸಿದ್ದಾರೆ. ರಾಜ್ಯಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಕಾಡು ಪ್ರಾಣಿಗಳ ದಾಳಿಯಿಂದಾಗಿ 10 ಮಂದಿ ಶಾಶ್ವತ ಅಂಗವೈಕಲ್ಯ, 278 ಮಂದಿ ಗಾಯಗೊಂಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

'ಮಹದಾಯಿ: ತಡೆಯಲಿ ನೋಡೋಣ'

ಒಂದನೇ ಪುಟದಿಂದ...

'ಸರ್ವಪಕ್ಷ ಸಭೆ ಕರೆಯುತ್ತೀರಾ' ಎಂಬ ಪ್ರಶ್ನೆಗೆ, 'ಎಲ್ಲ ಪಕ್ಷಗಳ ಸಂಸದರ ಸಭೆ ಕರೆಯುವುದಾಗಿ ಈಗಾಗಲೇ ಹೇಳಿದ್ದೇನೆ' ಎಂದೂ ಹೇಳಿದರು.

'ಕೇಂದ್ರ ಸಚಿವರು ರಾಜಕೀಯ ಮಾಡುವುದಿಲ್ಲ': 'ಮಹದಾಯಿ ಯೋಜನೆಯ ವಿಚಾರದಲ್ಲಿ ಕೇಂದ್ರ ಜಲಶಕ್ತಿ ಮತ್ತು ಅರಣ್ಯ ಸಚಿವರು ರಾಜಕೀಯ ಮಾಡುವುದಿಲ್ಲ. ಅಭಿವೃದ್ಧಿ ಕೆಲಸಕ್ಕೆ ಬೆಂಬಲವಾಗಿದ್ದಾರೆ' ಎಂದು ಶಿವಕುಮಾರ್ ತಿಳಿಸಿದರು. 'ಮಹದಾಯಿ ಯೋಜನೆ ವಿಚಾರದಲ್ಲಿ ಕೇಂದ್ರದ ಸಚಿವರು ದಾರಿ ತಪ್ಪಿಸುತ್ತಿದ್ದಾರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಈ ವಿಚಾರವಾಗಿ ಕೇಂದ್ರ ಜಲಶಕ್ತಿ ಸಚಿವರನ್ನು ನಾನು ಐದಾರು ಬಾರಿ ಭೇಟಿ ಮಾಡಿದ್ದೇನೆ. ಅವರು ನಿಷ್ಪಕ್ಷಪಾತವಾಗಿದ್ದಾರೆ. ಅರಣ್ಯ ಸಚಿವರು ಕೂಡಾ ರಾಜಕೀಯ ಮಾಡುವುದಿಲ್ಲ. ಸಮಸ್ಯೆ ಇರುವುದು ಗೋವಾದಲ್ಲಿ' ಎಂದರು.

'ಗೋವಾದ ಒಬ್ಬ ಸಂಸದರಿಗಾಗಿ ರಾಜ್ಯ ಮಾರಿಕೊಳ್ಳಲಾಗದು'

'ಗೋವಾದ ಕೇವಲ ಒಬ್ಬ ಸಂಸದರಿಗಾಗಿ ಕರ್ನಾಟಕವನ್ನು ಮಾರಿಕೊಳ್ಳಲು ಸಾಧ್ಯವಿಲ್ಲ. ಈ ವಿಚಾರವಾಗಿ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರದ ಸಚಿವರು ಮತ್ತು ಪ್ರಧಾನಿ ಮೇಲೆ ಬಿಜೆಪಿ ಸಂಸದರು ಒತ್ತಡ ಹಾಕಬೇಕು' ಎಂದು ಶಿವಕುಮಾರ್ ಹೇಳಿದರು.

'ಮಹದಾಯಿ ಯೋಜನೆ ನಮ್ಮ ರಾಜ್ಯದ ಸ್ವಾಭಿಮಾನದ ಪ್ರಶ್ನೆ. ಈ ವಿಚಾರದಲ್ಲಿ ರಾಜ್ಯದ ಸಂಸದರು ಬಾಯಿ ಮುಚ್ಚಿಕೊಂಡಿರುವುದೇ ದೊಡ್ಡ ತಪ್ಪು. ನಮ್ಮ ರಾಜ್ಯದ 28 ಲೋಕಸಭಾ ಸದಸ್ಯರು, 12 ರಾಜ್ಯಸಭಾ ಸದಸ್ಯರು ಒಗ್ಗಟ್ಟಿನಿಂದ ಹೋರಾಡಿ ರಾಜ್ಯದ ಗೌರವ ಕಾಪಾಡಬೇಕು' ಎಂದು ಮನವಿ ಮಾಡಿದರು. 'ನಾನು ಕೂಡ ಕೇಂದ್ರ ಜಲಶಕ್ತಿ ಸಚಿವರು ಮತ್ತು ಪ್ರಧಾನಿಯವರನ್ನು ಭೇಟಿ ಮಾಡಲು ಸಮಯಾವಕಾಶ ಕೇಳುತ್ತೇನೆ' ಎಂದರು.

'ಗೋವಾ ಸಿ.ಎಂ ಹೇಳಿಕೆ ವೈಯಕ್ತಿಕ'

ನವದೆಹಲಿ: ಮಹದಾಯಿಗೆ ಸಂಬಂಧಪಟ್ಟಂತೆ ಗೋವಾ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ನೀಡಿರುವ ಹೇಳಿಕೆ ಕೇಂದ್ರ ಸರ್ಕಾರದ ಹೇಳಿಕೆಯಲ್ಲ. ಅದು ಅವರ ವೈಯುಕ್ತಿಕ ಹೇಳಿಕೆ. ಈ ವಿಚಾರದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

'ಕೇಂದ್ರ ಅರಣ್ಯ ಸಚಿವರನ್ನು ಭೇಟಿ ಮಾಡಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನನ್ನನ್ನೂ ಭೇಟಿ ಮಾಡಿದ್ದರು. ಈ ವಿಷಯದಲ್ಲಿ ರಾಜಕೀಯ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಅಭಿವೃದ್ಧಿ ಕೆಲಸಕ್ಕೆ ಕೇಂದ್ರ ಸರ್ಕಾರದ ಸಹಕಾರ ಸಹ ಇರುತ್ತದೆ' ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಗದಗ, ಬಾಗಲಕೋಟೆ ಪ್ರದೇಶದ ಜನತೆಯ ಕುಡಿಯುವ ನೀರಿಗಾಗಿ 40 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳುವ ಕಳಸಾ-ಬಂಡೂರಿ ಯೋಜನೆ ಅನುಷ್ಠಾನಕ್ಕೆ ಸಿದ್ಧವಾಗಿದೆ. ಈ ವಿಚಾರದಲ್ಲಿ ನಾನೂ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಮನವರಿಕೆ ಮಾಡುತ್ತೇನೆ. ಕರ್ನಾಟಕದ ಹಿತಾಸಕ್ತಿ ಕಾಪಾಡುತ್ತೇವೆ' ಎಂದು ಹೇಳಿದ್ದಾರೆ.

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560001

ದೂರವಾಣಿ ಸಂಖ್ಯೆ: 080–29604556, 29566556, 29565353 ಇ–ಮೇಲ್: splocaima21@gmail.com

ಸಂಖ್ಯೆ: SPLOCA/ADM/CLM/06/2025-26 ದಿನಾಂಕ: 17–06–2025

ಸಾರ್ವಜನಿಕ ಪ್ರಕಟಣೆ M/S. SRI SRISHAILAGIRI SOUHARDA CREDIT CO-OPERATIVE LIMITED, BENGALURU

M/s. Sri Srishailagiri Souharda Credit Co-Operative Limited, Bengaluru ದೂಷಿತ ಸಂಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ, 2004 ರ ಕಲಂ 7(2) ರ ಅನ್ವಯ **ಭದ್ರತೆ ಸಾಲ ಕೊಟ್ಟವರಿಂದ ಮತ್ತು ಠೇವಣಿದಾರರಿಂದ** ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳುವಳಿಕೆ.

ಕ್ಲೇಮು ಅರ್ಜಿಗಳನ್ನು **ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು), ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, 4ನೇ ಮಹಡಿ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560001** ರವರ ಕಛೇರಿಯಲ್ಲಿ ಠೇವಣಿದಾರರು / ಅಧಿಕೃತ ಪ್ರತಿನಿಧಿ / ನಾಮಿನಿದಾರರಿಗೆ ವಿತರಿಸಲಾಗುವುದು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್ / ಎ.ಓಯು) ಮತ್ತು ಅಧಿಕೃತ ಪತ್ರ / ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ.

ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ	30-07-2025	10.00 AM
ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ	29-08-2025	5.30 PM

ಹಾಜರುಪಡಿಸಬೇಕಾದ ದಾಖಲೆಗಳು:

1) ಮೂಲ ಐಡಿ–ಆಧಾರ್, ಪ್ಯಾನ್ / ಎಪಿಕ್ ದೃಢೀಕರಣಕ್ಕಾಗಿ ಜೆರಾಕ್ಸ್‌ನೊಂದಿಗೆ.
2) ಬ್ಯಾಂಕ್ ಮ್ಯಾನೇಜರ್‌ನಿಂದ ದೃಢೀಕರಿಸಲಾದ ಬ್ಯಾಂಕ್ ಪಾಸ್ ಶೀಟ್ – M/s. Sri Srishailagiri Souharda Credit Co-Operative Limited, Bengaluru ಕಂಪನಿಯಲ್ಲಿ ಹೂಡಿಕೆಯ ದಿನಾಂಕಕ್ಕೆ 2 ತಿಂಗಳ ಮುಂಚಿತವಾಗಿ ಇಲ್ಲಿಯವರೆಗೆ.
3) KYC ತೋರಿಸುವ ಪುಟಗಳ ಪ್ರತಿಯೊಂದಿಗೆ ಪಾಸ್‌ಬುಕ್‌ನ ಪ್ರತಿ.
4) ಮೂಲ ಬಾಂಡ್‌ಗಳು / ಒಪ್ಪಂದಗಳು / ನೋಟರೈಸ್ಡ್ ಅಫಿಡವಿಟ್‌ಗಳು / ಕಂಪನಿಯಿಂದ ಪಡೆದ ಇತರೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.
5) ಅಧಿಕೃತ ಪ್ರತಿನಿಧಿಯಾಗಿದ್ದಲ್ಲಿ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಶಾಸನಾತ್ಮಕ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.
6) ದೃಢೀಕರಿಸಿದ ಸ್ವಷ್ಟವಾದ ಜೆರಾಕ್ಸ್ ಪ್ರತಿಯನ್ನು ಒದಗಿಸಬೇಕು ಅಥವಾ ಸಂಬಂಧಪಟ್ಟ ಅಧಿಕಾರಿಯಿಂದ ದೃಢೀಕರಣಕ್ಕಾಗಿ ಮೂಲವನ್ನು ಜೆರಾಕ್ಸ್ ಪ್ರತಿಯೊಂದಿಗೆ ಒದಗಿಸಬೇಕು. ಸ್ಕ್ಯಾನ್‌ಗಳು / WhatsApp ನಕಲುಗಳು ಸ್ವೀಕರಿಸುವುದಿಲ್ಲ.
7) ಎಫ್.ಇ ನೀಡಿದ ಪಾಸ್‌ಬುಕ್.
8) ಕಾಯ್ದೆಯ ಸೆಕ್ಷನ್ 7(4) ಮತ್ತು 7(5) ರ ಪ್ರಕಾರ, ಭದ್ರತೆ ಸಾಲ ನೀಡಿದವರು ಒಂದು ತಿಂಗಳ ಅವಧಿ ಮುಗಿಯುವ ಮೊದಲು ಭದ್ರತಾ ಪತ್ರದ ಮೌಲ್ಯಮಾಪನ ಮಾಡಿಸಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸಕ್ಷಮ ಪ್ರಾಧಿಕಾರವೇ ಸ್ವತ ಮೌಲ್ಯ ಮಾಪನ ಮಾಡುತ್ತಾರೆ. ಇದಕ್ಕೆ ಭದ್ರತೆ ಸಾಲ ಕೊಟ್ಟವರು ಬದ್ಧರಾಗಿರತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು / ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

ಕ್ರ.ಸಂ	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು (Depositors)	ಠೇವಣಿದಾರರು ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿ / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು (Nominee)	1) ಠೇವಣಿದಾರರ ಮರಣ ಪ್ರಮಾಣ ಪತ್ರ. 2) ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು). 3) ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ವಾರಸುದಾರರು (Legal heirs)	1) ಠೇವಣಿದಾರರ ಮರಣ ಪ್ರಮಾಣ ಪತ್ರ. 2) ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು). 3) ನಿರ್ದಿಷ್ಟನಾಮಿನಿ (Nominee) ರವರ ಮರಣ ಪ್ರಮಾಣ ಪತ್ರ. 4) ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ. 5) ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. 6) ಉಳಿದ ವಾರಸುದಾರರ ಒಪ್ಪಿಗೆ (Consent from other legal heirs).
4	PoA - (Power of Attorney)	1) ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2) ಹೊರದೇಶದಲ್ಲಿ ವಾಸಿಸುತ್ತಿರುವವರು Apostilled copy citizen card + Passport. 3) ಮೇಲಿನ ಕ್ರ.ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney Certificate ಸಲ್ಲಿಸತಕ್ಕದ್ದು. 4) PoA ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.
5	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1) ಠೇವಣಿದಾರರ ಮರಣ ಪತ್ರ. 2) ಗಾರ್ಡಿಯನ್ ನೇಮಕದ ದಾಖಲೆ. 3) ಸ್ವಯಂ ದೃಢೀಕೃತ ದಾಖಲೆ.

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಸಹಕಾರಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಕ್ರ.ಸಂ	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಉಳಿತಾಯ ಠೇವಣಿ (Savings Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಉಳಿತಾಯ ಠೇವಣಿ ಪಾಸ್ ಪುಸ್ತಕ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿಶ್ಚಿತ ಠೇವಣಿ (Fixed Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಬಾಂಡ್ ಪ್ರಮಾಣ ಪತ್ರ / ನಿಶ್ಚಿತ ಠೇವಣಿ ಪ್ರಮಾಣ ಪತ್ರ / ಇತರೆ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.
3	ಸಂಚಿತ ಠೇವಣಿ (Cumulative Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಸಂಚಿತ ಠೇವಣಿ ಪ್ರಮಾಣ ಪತ್ರ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.
4	ಆವರ್ತ ಠೇವಣಿ (Recurring Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಹಣಕಾಸು ಸಂಸ್ಥೆಯಿಂದ ನೀಡಲಾದ ಆವರ್ತ ಠೇವಣಿ ಪಾಸ್ ಪುಸ್ತಕ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.
5	MES Deposit	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) MES Deposit ಠೇವಣಿ ಪಾಸ್ ಪುಸ್ತಕ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.

- ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3) ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
- ಸುಳ್ಳು ದಾಖಲೆಗಳ ಆಧಾರದ ಅರ್ಜಿ ಅಥವಾ ಸ್ವಯಂ–ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲಾಗುವುದು.
- ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು **ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು), ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, 4ನೇ ಮಹಡಿ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು** ಇವರ ಕಛೇರಿಯಲ್ಲಿ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ.
- ಅರ್ಜಿದಾರರು **M/s. Sri Srishailagiri Souharda Credit Co-Operative Limited, Bengaluru,** ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಹಿ/–
ಸಹಾಯಕ ಆಯುಕ್ತರು–01 ಹಾಗೂ ಸಕ್ಷಮ ಪ್ರಾಧಿಕಾರಿಗಳು
M/s. Sri Srishailagiri Souharda Credit Co-Operative Limited, Bengaluru.

ವಾಸಾಸಂಇ/ವಾ.ಪ್ರ/2010/ಅಡ್ವರ್ಟೋರ್/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ

ಸುಭಾಷಿತ

ನಿಮ್ಮನ್ನು ನೀವು ಸರಿಪಡಿಸಿಕೊಂಡರೆ ಜಗತ್ತಿನಲ್ಲಿ ಒಬ್ಬ ಮೂರ್ಖ ಕಡಿಮೆಯಾದಂತೆ.

-ಕನ್‌ಫ್ಯೂಷಿಯಸ್

ಸಂಪಾದಕೀಯ

ಧನಕರ್ ದಿಢೀರ್ ರಾಜೀನಾಮೆ ಪ್ರಶ್ನೆಗಳು ಹಲವು, ಕಾರಣ ನಿಗೂಢ

ಉಪ ರಾಷ್ಟ್ರಪತಿ ಸ್ಥಾನಕ್ಕೆ ಜಗದೀಪ್ ಧನಕರ್ ಅವರು ದಿಢೀರನೆ ರಾಜೀನಾಮೆ ಸಲ್ಲಿಸಿರುವುದು ಹಲವು ಪ್ರಶ್ನೆಗಳನ್ನು ಮೂಡಿಸಿದೆ. ಆದರೆ, ಯಾವ ಪ್ರಶ್ನೆಗೂ ಈವರೆಗೆ ಉತ್ತರ ಸಿಕ್ಕಿಲ್ಲ. ಧನಕರ್ ಅವರ ರಾಜೀನಾಮೆ ನಂತರದ ಊಹಾಪೋಹಗಳು ದೇಶದ ಎರಡನೆಯ ಅತ್ಯಂತ ಎತ್ತರದ ಸಾಂವಿಧಾನಿಕ ಹುದ್ದೆಯ ವರ್ಚಸ್ಸನ್ನು ಹೆಚ್ಚಿಸುವಂತೇನೂ ಇಲ್ಲ. ಧನಕರ್ ಅವರ ಅನಿರೀಕ್ಷಿತ ರಾಜೀನಾಮೆಗೆ ಕಾರಣಗಳು ಏನಿರಬಹುದು ಎಂಬ ಬಗ್ಗೆ, ಸರ್ಕಾರ ಮತ್ತು ಉಪ ರಾಷ್ಟ್ರಪತಿಯ ಕಚೇರಿ ನಡುವಣ ಸಂಬಂಧ ಹಾಗೂ ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಈ ಸ್ಥಾನಕ್ಕೆ ಇರುವ ಸ್ವಾಯತ್ತತೆಯ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಉಪ ರಾಷ್ಟ್ರಪತಿಯವರು ರಾಜ್ಯಸಭೆಯ ಸಭಾಪತಿ ಕೂಡ ಆಗಿರುತ್ತಾರೆ. ಆರೋಗ್ಯದ ಕಾಳಜಿಗೆ ಆದ್ಯತೆ ನೀಡಬೇಕಿದೆ, ವೈದ್ಯಕೀಯ ಸಲಹೆಯ ಪ್ರಕಾರ ನಡೆದುಕೊಳ್ಳಬೇಕಿದೆ ಎಂದು ಧನಕರ್ ಅವರು ಹೇಳಿದ್ದಾರೆ. ಆದರೆ, ಮುಂಗಾರು ಅಧಿವೇಶನದ ಮೊದಲ ದಿನವೇ ಅವರು ರಾಜೀನಾಮೆ ನೀಡಿರುವುದು, ತೆರೆಯ ಹಿಂದೆ ಇನ್ನಷ್ಟು ಸಂಗತಿಗಳು ಇದ್ದಿರಬಹುದು ಎಂಬುದನ್ನು ಹೇಳುತ್ತಿದೆ. ಉಪ ರಾಷ್ಟ್ರಪತಿ ಆಗಿ ಧನಕರ್ ಅವರ ಅಧಿಕಾರದ ಅವಧಿ ಇನ್ನೂ ಎರಡು ವರ್ಷ ಇತ್ತು. 2027ರ ಆಗಸ್ಟ್‌ನಲ್ಲಿ 'ಸರಿಯಾದ ಸಮಯದಲ್ಲಿ' ನಿವೃತ್ತರಾಗುವುದಾಗಿ ಧನಕರ್ ಅವರು ಈಚೆಗೆ ಹೇಳಿದ್ದರು. ಅವರು ರಾಜೀನಾಮೆ ನೀಡುವ ಸಂದರ್ಭದಲ್ಲಿ, ಕೆಲವು ದಿನಗಳವರೆಗಿನ ಅವರ ಸಾರ್ವಜನಿಕ ಕಾರ್ಯಕ್ರಮಗಳ ಮತ್ತು ಸದನದಲ್ಲಿನ ಕಾರ್ಯಗಳ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು ಎನ್ನುವುದು ಗಮನಾರ್ಹ.

ಉಪ ರಾಷ್ಟ್ರಪತಿ ಸ್ಥಾನಕ್ಕೆ ಜಗದೀಪ್ ಧನಕರ್ ಅವರು ರಾಜೀನಾಮೆ ನೀಡಿರುವ ಹಿಂದಿನ ಕಾರಣಗಳು ನಿಗೂಢವಾಗಿವೆ. ಆ ಕಾರಣಗಳನ್ನು ತಿಳಿಯುವ ಹಕ್ಕು ದೇಶವಾಸಿಗಳಿಗೆ ಇದೆ.

ವಿಶ್ವಾಸಾರ್ಹವಾದ ವಿವರಣೆ ಇಲ್ಲದಿರುವ ಈ ಹೊತ್ತಿನಲ್ಲಿ ಧನಕರ್ ರಾಜೀನಾಮೆ ಕುರಿತಾಗಿ ಹಲವು ಊಹಾಪೋಹಗಳು ಹರಿದಾಡುತ್ತಿವೆ. ನ್ಯಾಯಮೂರ್ತಿಗಳಾದ ಯಶವಂತ ವರ್ಮಾ ಮತ್ತು ಶೇಖರ್ ಕುಮಾರ್ ಯಾದವ್ ಅವರ ಪದಚ್ಯುತಿಗೆ ಸಂಬಂಧಿಸಿದ ವಿಷಯವನ್ನು ಧನಕರ್ ಅವರು ನಿಭಾಯಿಸಿದ ಬಗೆಯು ಕೇಂದ್ರ ಸರ್ಕಾರಕ್ಕೆ ಸಮಾಧಾನ ತಂದಿರಲಿಲ್ಲ ಎಂಬ ಮಾತುಗಳಿವೆ. ಅಲ್ಲದೆ, ಧನಕರ್ ಅವರು ಸಾರ್ವಜನಿಕವಾಗಿ ಆಡಿದ ಕೆಲವು ಮಾತುಗಳು ಕೂಡ ಸರ್ಕಾರಕ್ಕೆ ಸರಿಕಂಡಿರಲಿಲ್ಲ ಎಂಬ ವಾದ ಇದೆ. ಧನಕರ್ ಅವರ ಆರೋಗ್ಯ ಚೆನ್ನಾಗಿರಲಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹಾರೈಸಿದ್ದಾರೆ. ಇದನ್ನು ಹೊರತುಪಡಿಸಿದರೆ, ಸರ್ಕಾರದ ಕಡೆಯಿಂದಾಗಲೀ ಆಡಳಿತಾರೂಢ ಪಕ್ಷದ ಕಡೆಯಿಂದಾಗಲೀ ಯಾವುದೇ ವಿವರಣೆ ಈವರೆಗೆ ಬಂದಿಲ್ಲ.

ಪಶ್ಚಿಮ ಬಂಗಾಳದ ರಾಜ್ಯಪಾಲ ಆಗಿದ್ದಾಗ ಧನಕರ್ ಅವರು ಹಲವು ವಿವಾದಗಳನ್ನು ಸೃಷ್ಟಿಸಿದ್ದರು. ರಾಜ್ಯಸಭೆಯ ಸಭಾಪತಿಯಾಗಿ ಅವರು ಇರಿಸಿದ ಕೆಲವು ನಡೆಗಳು ವಿವಾದಕ್ಕೆ ಕಾರಣವಾಗಿದ್ದವು. ಈ ಹುದ್ದೆಗಳಲ್ಲಿ ಇದ್ದಾಗ ಧನಕರ್ ಅವರು ಆಳುವ ಪಕ್ಷದ ಪರವಾಗಿ ನಡೆದುಕೊಂಡಿದ್ದರು ಹಾಗೂ ತಾವು ಹೊಂದಿದ್ದ ಹುದ್ದೆಗಳ ಹಿರಿಮೆಗೆ ತಕ್ಕಂತೆ ಅವರು ವರ್ತಿಸಿರಲಿಲ್ಲ. ವಿರೋಧ ಪಕ್ಷಗಳು ಸಭಾಪತಿಯ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿರುವುದು ಧನಕರ್ ವಿರುದ್ಧ ಮಾತ್ರ. ನ್ಯಾಯಾಂಗವನ್ನು ಗುರಿಯಾಗಿಸಿಕೊಂಡು ಅವರು ನಡೆಸುತ್ತಿದ್ದ ಮಾತಿನ ಆಕ್ರಮಣ, ಪ್ರಮುಖ ತೀರ್ಪುಗಳನ್ನು ಅವರು ಟೀಕಿಸುತ್ತಿದ್ದುದು, ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆಯನ್ನು ಅವರು ಪ್ರಶ್ನೆ ಮಾಡುತ್ತಿದ್ದ ಬಗೆಯು ಸಾಂವಿಧಾನಿಕವಾಗಿ ಬಹಳ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗೆ ಸರಿಹೊಂದುವ ರೀತಿಯಲ್ಲಿ ಇರುತ್ತಿರಲಿಲ್ಲ. ಧನಕರ್ ಅವರ ಕೆಲವು ಹೇಳಿಕೆಗಳು ಆಡಳಿತಾರೂಢ ಪಕ್ಷದ ಕಟ್ಟರ್‌ವಾದಿಗಳು ಆಡುವ ಮಾತುಗಳಿಗಿಂತ ಹೆಚ್ಚು ಕಟುವಾಗಿದ್ದವು. ಸರ್ಕಾರ ಮತ್ತು ಧನಕರ್ ಅವರ ನಡುವಿನ ಸಂಬಂಧವು ಕೆಲವು ತಿಂಗಳುಗಳ ಹಿಂದೆಯೇ ಹಾಳಾಗಲು ಆರಂಭಿಸಿತು ಎಂಬ ವರದಿಗಳು ಇವೆ. ಈ ಎಲ್ಲ ಸಂಗತಿಗಳು ನಿಗೂಢವಾಗಿ ಉಳಿದಿರುವುದು ವಿಷಾದಕರ. ಉಪ ರಾಷ್ಟ್ರಪತಿ ರಾಜೀನಾಮೆ ನೀಡಿದ್ದರ ಹಿಂದಿನ ಕಾರಣಗಳನ್ನು ಹಾಗೂ ರಾಜೀನಾಮೆ ನೀಡಿದ ಸಂದರ್ಭವನ್ನು ಅರಿಯುವ ಹಕ್ಕು ದೇಶಕ್ಕೆ ಇದೆ. ಆ ಕಾರಣಗಳು ವೈಯಕ್ತಿಕವೇ, ರಾಜಕಾರಣಕ್ಕೆ ಸಂಬಂಧಿಸಿದವೇ ಅಥವಾ ಅವರ ಮೇಲಿದ್ದ ಹೊಣೆಗೆ ಸಂಬಂಧಿಸಿದವೇ ಎಂಬುದನ್ನು ದೇಶವಾಸಿಗಳು ತಿಳಿದುಕೊಳ್ಳಬೇಕಿದೆ.

ಪ್ರೇಮ್‌ಜಿ ದೂರದರ್ಶಿತ್ವ ಅನನ್ಯ

1947ರ ಸಮಯ. ಪಾಕಿಸ್ತಾನ ಸರ್ಕಾರದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವರಾಗುವಂತೆ ಉದ್ಯಮಿ ಮುಹಮ್ಮದ್ ಹಶೀಂ ಅವರಿಗೆ ಜಿನ್ನಾ ಆಮಂತ್ರಣ ನೀಡಿದ್ದರು. ಆಹ್ವಾನ ತಿರಸ್ಕರಿಸಿದ ಹಶೀಂ ಭಾರತದಲ್ಲಿಯೇ ಉಳಿದರು. ಅವರ ಪುತ್ರ ಅಜೀಂ ಪ್ರೇಮ್‌ಜಿ, ತಮ್ಮ ಕುಟುಂಬದ ಸಸ್ಯಜನ್ಯ ಎಣ್ಣೆ ವ್ಯಾಪಾರವನ್ನು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಜಾಗತಿಕ ಉದ್ಯಮವಾಗಿ ರೂಪಾಂತರಗೊಳಿಸಿದರು. ಅವರ ಉದ್ಯಮವೀಗ, ನೈತಿಕ ಹಾಗೂ ಜನಹಿತ ಮೌಲ್ಯಗಳನ್ನುಳ್ಳ ದೇಶದ ಕಾರ್ಪೊರೇಟ್ ಸಂಸ್ಥೆಗಳಲ್ಲೊಂದು.

ಜಾಯ್ ಭಟ್ಟಾಚಾರ್ಯ, ಲೇಖಕ, 'ಎಕ್ಸ್'ನಿಂದ

ಕಿಡಿನುಡಿ

ಕೂಡಲಸಂಗಮದ ಪಂಚಮಸಾಲಿ ಮಠಕ್ಕೆ ಗೇಟ್ ವ್ಯವಸ್ಥೆ ಮಾಡಿದ್ದೇನೆಯೇ ಹೊರತು ಬೀಗ ಹಾಕಿಸಿಲ್ಲ. ಇದರಿಂದ ನಾನು ಯಾರನ್ನೂ ಮೆಚ್ಚಿಸಬೇಕಿಲ್ಲ.

ವಿಜಯಾನಂದ ಕಾಶಪ್ಪನವರ
ಅಧ್ಯಕ್ಷ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್

25 ವರ್ಷಗಳ ಹಿಂದೆ

ಮಂಗಳವಾರ, 25-7-2000

● **ಹೈಕೋರ್ಟ್ ಪೀಠ ಬೇಡಿಕೆಗೆ ಸುಪ್ರೀಂ ಕೋರ್ಟ್ ತಿರಸ್ಕಾರ**

ನವದೆಹಲಿ, ಜುಲೈ 24– ಉತ್ತರ ಕರ್ನಾಟಕದ ಯಾವುದಾದರೂ ಸೂಕ್ತ ಸ್ಥಳದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಇಂದು ವಜಾ ಮಾಡಿತು.

ಈ ರೀತಿಯ ಪೀಠ ಸ್ಥಾಪಿಸುವುದರಿಂದ ಹೈಕೋರ್ಟಿನ ಕಾರ್ಯಗಳಿಗೆ ಅನಗತ್ಯವಾಗಿ ತೊಂದರೆ ಆಗಬಹುದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಪ್ರಕರಣದ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳಲು ಹೈಕೋರ್ಟ್ ಅತ್ಯಂತ ಸೂಕ್ತ ವೇದಿಕೆ ಎಂದಿದೆ.

● **ಆರು ಜಿಲ್ಲೆಗಳಲ್ಲಿ ಮಳೆಯ ಅಭಾವ**

ಬೆಂಗಳೂರು, ಜುಲೈ 24– ರಾಜ್ಯದ ಆರು ಜಿಲ್ಲೆಗಳಲ್ಲಿ ಕಳೆದ ವಾರ (ಜುಲೈ 16ರಿಂದ 22) ಮಳೆಯಾಗಿಲ್ಲ. ಉಳಿದ ಜಿಲ್ಲೆಗಳಲ್ಲಿ ಅಲ್ಪ ಅಥವಾ ಸಾಧಾರಣ ಪ್ರಮಾಣದ ಮಳೆಯಾಗಿದ್ದು, ಮುಂಗಾರು ದುರ್ಬಲವಾಗಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಮಂಡ್ಯ, ಕಲ್ಬುರ್ಗಿ ಮತ್ತು ಕೊಪ್ಪಳ ಜಿಲ್ಲೆಗಳು ಮಳೆಯಾಗದ ಜಿಲ್ಲೆಗಳಾಗಿವೆ.

75 ವರ್ಷಗಳ ಹಿಂದೆ

ಮಂಗಳವಾರ, 25-7-1950

● **ಕಾಶ್ಮೀರ ಬಗ್ಗೆ ದೆಹಲಿ ಮಾತುಕತೆ ಮುಕ್ತಾಯ**

ದೆಹಲಿ, ಜುಲೈ 24– ಕಾಶ್ಮೀರ ಸಮಸ್ಯೆಯ ಕಡುಬಿಕ್ಕಟ್ಟಿನ ಪರಿಹಾರ ಸಮಾಲೋಚನಾರ್ಥವಾಗಿ ವಿಶ್ವಸಂಸ್ಥೆಯ ಮಧ್ಯಸ್ಥಿಕೆದಾರರಾದ ಸರ್ ಓವೆನ್‌ಡಿಕ್ಸನ್ ಅವರೂ, ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ, ಪಾಕಿಸ್ತಾನದ ಪ್ರಧಾನಿ ಲಿಯಾಕತಾಲಿ ಅವರೂ ಐದು ದಿವಸಗಳಿಂದಲೂ ದೆಹಲಿಯಲ್ಲಿ ಸೇರಿ ಇಂದು ತಮ್ಮ ಮಾತುಕತೆಗಳನ್ನು ಮುಗಿಸಿದ್ದಾರೆ.

ಉಭಯ ಪ್ರಧಾನಿಗಳ ಮುಂದಿನ ಸಭೆಯು ಕರಾಚಿಯಲ್ಲಿ ನಡೆಯಲಿದೆ.

● **ಅಚಿಸನ್‌ರಿಗೆ ನೆಹರೂ ರಹಸ್ಯ ಪತ್ರ?**

ನವದೆಹಲಿ, ಜುಲೈ 24– ವಿಶ್ವಸಂಸ್ಥೆಯಲ್ಲಿ ಕಮ್ಯುನಿಸ್ಟ್ ಚೀನಾಕ್ಕೆ ಪ್ರಾತಿನಿಧ್ಯ ದೊರಕಿಸುವ ಪ್ರಯತ್ನದಲ್ಲಿ, ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ಅಮೆರಿಕದ ಸ್ಟೇಟ್ ಕಾರ್ಯದರ್ಶಿ ಅಚಿಸನ್ ಅವರಿಗೆ ರಹಸ್ಯವಾಗಿ, ವೈಯಕ್ತಿಕ ಮನವಿ ಪತ್ರವೊಂದನ್ನು ಕಳುಹಿಸಿರುವುದಾಗಿ ವರದಿಯಾಗಿದೆ.

ಎಸ್‌ಐಟಿ: ಮಾನ ಮರಳುವುದೇ?

ಅನುರಣನ
ನಾರಾಯಣ ಎ.

ರಾಷ್ಟ್ರದ ಗಮನ ಸೆಳೆದಿರುವ ಸೌಜನ್ಯಾ ಎನ್ನುವ ಯುವತಿಯ ಅತ್ಯಾಚಾರ ಮತ್ತು ಕೊಲೆಯ ಪ್ರಕರಣದಲ್ಲಿ ಕರ್ನಾಟಕ ರಾಜ್ಯದ ಗೃಹ ಇಲಾಖೆಯ ಅರ್ಥಾತ್ ಪೊಲೀಸ್ ವ್ಯವಸ್ಥೆಯ ಮಾನ ಅಕ್ಷರಶಃ ಹರಾಜಾಗಿತ್ತು. ಸೌಜನ್ಯಾ ಪ್ರಕರಣದ ಮುಂದುವರಿದ ಭಾಗವೋ ಎಂಬಂತೆ ಅದೇ ಪ್ರದೇಶದಲ್ಲಿ ಹಲವಾರು ಜನರನ್ನು, ಮುಖ್ಯವಾಗಿ ಮಹಿಳೆಯರನ್ನು ಮತ್ತು ಮಕ್ಕಳನ್ನು, ಕೊಲೆ ಮಾಡಿ ರಹಸ್ಯವಾಗಿ ಹೂತು ಹಾಕಲಾಗಿದೆ ಎನ್ನುವ ಬೆಚ್ಚಿಬೀಳಿಸುವ ಆಪಾದನೆಯೊಂದರ ಸುತ್ತ ಈಗ ಏನೇನೋ ಬೆಳವಣಿಗೆಗಳು ಆಗುತ್ತಿವೆ. ಈ ಆಪಾದನೆಯನ್ನು ನಿಭಾಯಿಸುವಲ್ಲಿ ಕೂಡ, ಗೃಹ ಇಲಾಖೆ ಅರ್ಥಾತ್ ಪೊಲೀಸ್ ವ್ಯವಸ್ಥೆ ಆರಂಭದಲ್ಲಿ ಎಡವಿತು.

ಆಪಾದನೆಯನ್ನು ಮಾಡಿದ ವ್ಯಕ್ತಿ ಹೂತ ಶವಗಳ ಅವಶೇಷಗಳನ್ನು ಅಗೆದು ತೋರಿಸುತ್ತೇನೆ ಎಂದು ಅಧಿಕೃತವಾಗಿ ನಿವೇದಿಸಿಕೊಂಡು ಬರೋಬ್ಬರಿ ಮೂರು ವಾರಗಳಾದ ನಂತರ, ಸರ್ಕಾರ 'ವಿಶೇಷ ತನಿಖಾ ತಂಡ' (ಸ್ಪೆಷಲ್ ಇನ್ವೆಸ್ಟಿಗೇಷನ್ ಟೀಮ್ – ಎಸ್‌ಐಟಿ) ರಚಿಸಿದೆ. ಆಪಾದನೆಯ ಕುರಿತು ಗಂಭೀರವಾಗಿ ತನಿಖೆ ನಡೆಸುವ ಕನಿಷ್ಠ ಇರಾದೆ ಮತ್ತು ಪ್ರಾಮಾಣಿಕತೆಯನ್ನು ಪೊಲೀಸ್ ಇಲಾಖೆ ತೋರುತ್ತಿಲ್ಲವಲ್ಲ ಎಂದು ಜನ ಬೀದಿ ಬೀದಿಗಳಲ್ಲಿ ಮಾತಿಗಿಳಿದ ನಂತರವೇ– ಈ ವಿಷಯ ನೆರೆ ರಾಜ್ಯಗಳಲ್ಲೂ ಅನುರಣಿಸಿದ ನಂತರವೇ– ಸರ್ಕಾರ ಎಚ್ಚೆತ್ತುಕೊಂಡದ್ದು.

ದೂರು ಸಲ್ಲಿಕೆಯಾದ ಮರು ನಿಮಿಷದಿಂದಲೇ ಕಾರ್ಯಾಚರಣೆ ನಡೆಸಬೇಕಿರುವಷ್ಟು ಗಂಭೀರವಾದ ಪ್ರಕರಣವೊಂದರಲ್ಲಿ ಈ ವಿಳಂಬ ಗತಿಯನ್ನು ಗೃಹ ಇಲಾಖೆ ತೋರಿಸಿದ್ದೇಕೆ ಎನ್ನುವ ಪ್ರಶ್ನೆ ಈಗಲೂ ಇದೆ. ದೂರು ಸಲ್ಲಿಕೆ ಮತ್ತು ಎಸ್‌ಐಟಿ ರಚನೆಯ ನಡುವಣ ಸುದೀರ್ಘ ಅವಧಿಯುದ್ದಕ್ಕೂ ನೇತ್ರಾವತಿ ನದಿಯಲ್ಲಿ ಬಹಳಷ್ಟು ನೀರು ಹರಿದಿದೆ. ಹರಿದ ಆ ನೀರಲ್ಲಿ ಏನೇನು ಕೊಚ್ಚಿಕೊಂಡು ಹೋಗಿದೆಯೋ ನೋಡಿದವರು ಯಾರು?

ಸೌಜನ್ಯಾ ಪ್ರಕರಣದ ತನಿಖೆಯಲ್ಲಿ ನಿಜವಾದ ಅಪರಾಧಿಗಳು ಸಿಗದೇ ಹೋಗಲು ಕಾರಣ, ಆರಂಭದ ಅಮೂಲ್ಯ ಕ್ಷಣಗಳಲ್ಲಿ (ಗೋಲ್ಡನ್ ಅವರ್) ಏನೇನು ಮಾಡಬೇಕಿತ್ತೋ ಅವುಗಳನ್ನೆಲ್ಲಾ ಪೊಲೀಸರು ಉದ್ದೇಶಪೂರ್ವಕವಾಗಿಯೇ ಮಾಡದೇ ಹೋಗಿದ್ದು ಎನ್ನುವುದು ಜಗಜ್ಜಾಹೀರು ಆಗಿರುವ ಸತ್ಯ. ಸೌಜನ್ಯಾ ಪ್ರಕರಣದಲ್ಲಿ ತೀರ್ಪು ನೀಡಿದ ನ್ಯಾಯಾಲಯ ಇದನ್ನು ಒತ್ತಿ ಹೇಳಿದೆ, ಎತ್ತಿ ತೋರಿಸಿದೆ. ಈಗ ಈ ತನಿಖೆಯಲ್ಲೂ ಅದೇ ತಾನೇ ಆಗಿರುವುದು. ಅವಶೇಷಗಳನ್ನು ಹುಡುಕಿ ತೆಗೆಯುವ ಕೆಲಸವನ್ನು ಕಾಯ್ದಿರಿಸುವ ಮೂಲಕ 'ಗೋಲ್ಡನ್ ಅವರ್'ನಲ್ಲಿ ಮಾಡಬೇಕಾಗಿದ್ದುದನ್ನು ಉದ್ದೇಶಪೂರ್ವಕವಾಗಿ ವಿಳಂಬಗೊಳಿಸುವ ಕೆಲಸ ನಡೆದೇ ಹೋಯಿತಲ್ಲ. ಪ್ರಕರಣದ ಸತ್ಯಾಸತ್ಯ ಏನೆಂದು ಪ್ರಪಂಚಕ್ಕೆ ತಿಳಿಸಿಯೇ ತೀರಬೇಕೆಂದು ಅದರ ಹಿಂದೆ ಬಿದ್ದಿರುವ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಕೆ.ವಿ. ಧನಂಜಯ ಅವರು, ಈ ವಿಳಂಬದ ಕುರಿತು ಮಾಧ್ಯಮಗಳಿಗೆ ನೀಡಿದ ಸಂದರ್ಶನಗಳನ್ನೊಮ್ಮೆ ಕಣ್ಣಾರೆ ಕಾಣಬೇಕು, ಕಿವಿಯಾರೆ ಆಲಿಸಬೇಕು. ಆ ಮಾತುಗಳು ಇಡೀ ಪೊಲೀಸ್ ಇಲಾಖೆಗೆ ಮತ್ತು ಮುಂದೆ ಆ ಇಲಾಖೆಗೆ ಆಯ್ಕೆ ಆಗಲಿರುವವರಿಗೆ ಬೋಧಿಸಬೇಕಿರುವ ಅಗತ್ಯ ಪಠ್ಯದಂತಿದೆ.

ನ್ಯಾಯದ ನಿರೀಕ್ಷೆಯಲ್ಲಿರುವ ರಾಜ್ಯದ ಜನರಿಗೆ ಈ ವಿಳಂಬದ ಹೊರತಾಗಿಯೂ ಏನೋ ಒಂದು ಭರವಸೆ ಉಳಿದಿದೆ. ಆ ಭರವಸೆಗೆ ಕಾರಣ ಸರ್ಕಾರವಲ್ಲ, ಗೃಹ ಮಂತ್ರಿಗಳಲ್ಲ, ಗೃಹ ಕಾರ್ಯದರ್ಶಿಗಳಲ್ಲ. ಯಾವ ಅಲೌಕಿಕ ಶಕ್ತಿಯೂ ಅಲ್ಲ. ಆ ಭರವಸೆಗೆ ಕಾರಣ ಎಸ್‌ಐಟಿಗೆ ಸರ್ಕಾರ ನೇಮಿಸಿರುವ ಭಾರತೀಯ ಪೊಲೀಸ್ ಸೇವೆಗೆ ಸೇರಿದ ನಾಲ್ಕು ಮುಖಗಳು– ವಿಶೇಷವಾಗಿ, ಎಸ್‌ಐಟಿ ಮುಖ್ಯಸ್ಥರಾಗಿ ನೇಮಕಗೊಂಡಿರುವ ಒಡಿಶಾ ಮೂಲದ ಅಧಿಕಾರಿಯ ಚಾರಿತ್ರ್ಯ. ಹಾಗೆ ನೋಡಿದರೆ, ಎಸ್‌ಐಟಿಯಲ್ಲಿ ಇರುವ ನಾಲ್ವರೂ ರಾಜ್ಯದ ಹೊರಗಿನವರೇ ಆಗಿದ್ದರೆ ಭರವಸೆ ಇನ್ನೂ ಹೆಚ್ಚುತ್ತಿತ್ತು. ಇರಲಿ. ಈಗೊಂದು ಪ್ರಶ್ನೆ. ಇಷ್ಟೆಲ್ಲಾ ಆಗಿ, ಆಪಾದನೆ ಮಾಡಿದ ವ್ಯಕ್ತಿಯನ್ನು ಮುಂದಿಟ್ಟುಕೊಂಡು ಅಲ್ಲಿ ಹುಡುಕಿದಾಗ ಎಲುಬುಗಳು ಸಿಗದೇ ಹೋದರೆ ಏನಾಗುತ್ತದೆ?

ರಾಜ್ಯದ ಮುಂದೆ ಇರುವ ಪ್ರಶ್ನೆ, ಅನಾಮಿಕ ವ್ಯಕ್ತಿ ಹೇಳಿದಂತೆ ಅಲ್ಲಿ ಅಕ್ರಮವಾಗಿ ಹೂತು ಹಾಕಿದ ಮಾನವ ದೇಹಗಳ ಅವಶೇಷಗಳು ಸಿಗುತ್ತವೆಯೋ ಇಲ್ಲವೋ ಎನ್ನುವುದಷ್ಟೇ ಅಲ್ಲ. ಆ ಪ್ರದೇಶಗಳಲ್ಲಿ ಬೆಳಕಿಗೆ ಬಂದ ಮತ್ತು ಬಾರದ ಅಷ್ಟೂ ಕೊಲೆಗಳಲ್ಲಿ ಈ ತನಕ ಒಂದೇ ಒಂದು ಪ್ರಕರಣದಲ್ಲಿಯೂ ಅಪರಾಧಿಗಳು ಯಾರು ಎಂದು ಕಂಡುಕೊಳ್ಳಲು ಪೊಲೀಸರು ವಿಫಲರಾಗಿರುವ ಮಹಾಒಗಟನ್ನು ಎಸ್‌ಐಟಿ ಭೇದಿಸುವುದೇ? ಇದು ರಾಜ್ಯದ ಮುಂದಿರುವ ನಿಜವಾದ ಪ್ರಶ್ನೆ.

ಸೌಜನ್ಯಾಳ ಅಪಹರಣ ನಡೆದದ್ದು ಹಾಡಹಗಲಲ್ಲಿ. ಜನಸಂಚಾರ, ವಾಹನ ಸಂಚಾರ, ಸಿ.ಸಿ.ಟಿ.ವಿ. ಕ್ಯಾಮೆರಾ ಇತ್ಯಾದಿಗಳೆಲ್ಲಾ ಇದ್ದ ಪ್ರದೇಶದಲ್ಲಿ. ಆದರೂ ಅದು ನಿಗೂಢ ಪ್ರಕರಣವಾಗಿ ಉಳಿದಿದೆ ಎನ್ನುವುದೇ ಕರ್ನಾಟಕ ಗೃಹ ಇಲಾಖೆಗೆ ಒಂದು ಶಾಶ್ವತ ಕಳಂಕ. ಸೌಜನ್ಯಾ ಪ್ರಕರಣವನ್ನು ಎಸ್‌ಐಟಿ ತನಿಖೆಯ ವ್ಯಾಪ್ತಿಗೆ ಸೇರಿಸಿಲ್ಲ ಎಂದು ಗೃಹ ಸಚಿವರು ಹೇಳಿದ್ದಾರೆ. ಅದು ಕಾನೂನಾತ್ಮಕವಾಗಿ ಮುಗಿದ ಅಧ್ಯಾಯವೆಂದೂ, ಅದು ಜನಮನದಲ್ಲಿ ಮಾತ್ರ ಮುಂದುವರಿಯುತ್ತಿರುವ ಪ್ರಕರಣವೆಂದೂ ಅವರು ಹಿಂದೊಮ್ಮೆ ಹೇಳಿದ್ದುಂಟು. ಕಾನೂನಾತ್ಮಕವಾಗಿ ಮುಗಿದುಹೋದ ನಂತರವೂ ಜನಮಾನಸವನ್ನು ಒಂದು ಕೊಲೆ ಪ್ರಕರಣ ಒಗಟಾಗಿ ಕಾಡುತ್ತಿದೆ ಎಂದಾದರೆ, ಅದಕ್ಕೆ ಪರಿಹಾರ ಒದಗಿಸುವುದು ಚುನಾಯಿತ ಸರ್ಕಾರಗಳ ಹೊಣೆ. ಕಾನೂನಾತ್ಮಕವಾಗಿ ಮುಗಿದುಹೋದ ಪ್ರಕರಣಗಳಿಗೂ ನಮಗೂ ಸಂಬಂಧ ಇಲ್ಲ ಎಂದು ಪೊಲೀಸ್ ಇಲಾಖೆಯವರೋ ನ್ಯಾಯಾಂಗ ಇಲಾಖೆಯವರೋ ಹೇಳಿದರೆ ಅದನ್ನು ಒಪ್ಪಿಕೊಳ್ಳಬಹುದು. ರಾಜಕೀಯ ನಾಯಕರು ಅಂತಹ ಮಾತುಗಳನ್ನು ಹೇಳಬಾರದು.

> ಸಾರ್ವಜನಿಕ ಆಗ್ರಹಕ್ಕೆ ಮಣಿದು ಸರ್ಕಾರ ವಿಳಂಬವಾಗಿಯಾದರೂ 'ಎಸ್‌ಐಟಿ' ರಚಿಸಿದೆ. ತನಿಖಾ ತಂಡದಲ್ಲಿರುವ ಸದಸ್ಯರು ಭರವಸೆ ಮೂಡಿಸುವಂತಿದ್ದಾರೆ. ಸೌಜನ್ಯಾ ಪ್ರಕರಣದಲ್ಲಿ ಕಳೆದುಕೊಂಡ ಮಾನವನ್ನು ಮರಳಿ ಗಳಿಸಲು ಸರ್ಕಾರ ಹಾಗೂ ಪೊಲೀಸ್ ಇಲಾಖೆಗೆ ಮತ್ತೊಂದು ಅವಕಾಶ ದೊರೆತಿದೆ.

ಅಷ್ಟೇ ಅಲ್ಲ. ಸೌಜನ್ಯಾ ಪ್ರಕರಣ ಕಾನೂನಾತ್ಮಕವಾಗಿ ಮುಗಿದೇ ಹೋಗಿದೆ ಎನ್ನುವ ಹಾಗೂ ಇಲ್ಲ. ಯಾಕೆಂದರೆ, ಆ ಪ್ರಕರಣದ ತನಿಖೆ ನಡೆಸಿದ ಪೊಲೀಸರು ನಿಜವಾದ ಅಪರಾಧಿ ತಪ್ಪಿಸಿಕೊಳ್ಳುವಂತೆ ಸಾಕ್ಷ್ಯ ನಾಶ ಮಾಡಿ, ಪ್ರಕರಣಕ್ಕೆ ಸಂಬಂಧವೇ ಇಲ್ಲದ ಅಮಾಯಕನೊಬ್ಬನನ್ನು ಹಿಡಿದು ಚಿತ್ರಹಿಂಸೆ ನೀಡಿ ಆರು ವರ್ಷ ಜೈಲಿಗಟ್ಟಿ ಘೋರ ತಪ್ಪೆಸಗಿದ್ದರು. ವಿಚಾರಣೆ ನಡೆಸಿದ ಸಿಬಿಐ ನ್ಯಾಯಾಲಯ ಇದನ್ನು ಎತ್ತಿತೋರಿಸಿದೆ ಹಾಗೂ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ತನ್ನ ತೀರ್ಪಿನಲ್ಲಿ ಹೇಳಿದೆ. ನ್ಯಾಯಾಲಯದ ಆ ಆದೇಶದನ್ವಯ ತಪ್ಪಿತಸ್ಥ ಪೊಲೀಸರ ವಿರುದ್ಧ 'ಘನ' ಕರ್ನಾಟಕ ಸರ್ಕಾರದ ಗೃಹ ಇಲಾಖೆ ಯಾಕೆ ಕ್ರಮ ಕೈಗೊಂಡಿಲ್ಲ? ಇದೇನೂ ಕಾನೂನಾತ್ಮಕವಾಗಿ ಮುಗಿದುಹೋದ ಅಧ್ಯಾಯ ಅಲ್ಲವಲ್ಲ?

ವಿನಾಕಾರಣ ಪ್ರಕರಣದಲ್ಲಿ ಸಿಲುಕಿಸಿ, ಜೈಲುವಾಸ ಅನುಭವಿಸಿ, ಬದುಕನ್ನೇ ಕಳೆದುಕೊಂಡ ಆ ಅಮಾಯಕ ವ್ಯಕ್ತಿಯ ಬಗ್ಗೆ ನ್ಯಾಯಾಲಯದ ತೀರ್ಪಿನಲ್ಲಿ ಹೇಳಲಾದ ಒಂದು ವಾಕ್ಯವನ್ನು ಫಲಕವೊಂದರಲ್ಲಿ ಬರೆದು ರಾಜ್ಯದ ಪ್ರತಿ ಪೊಲೀಸ್ ಠಾಣೆಯಲ್ಲಿ ತೂಗು ಹಾಕಬೇಕು. ಆ ವಾಕ್ಯ ಹೀಗಿದೆ: 'ಆ ವ್ಯಕ್ತಿಯನ್ನು ಆಪಾದಿತ ಎಂಬುದಾಗಿ ಪರಿಗಣಿಸುವುದು ಬಿಡಿ, ಅವರಿಗೂ ಈ ಪ್ರಕರಣಕ್ಕೂ ಒಂದು ದೂರದ ಅಸ್ಪಷ್ಟ ಸಂಬಂಧವೂ ಇಲ್ಲ. ಹಾಗಾಗಿ ಅವರನ್ನು ಗೌರವಪೂರ್ವಕವಾಗಿ ಖುಲಾಸೆಗೊಳಿಸಲಾಗಿದೆ.'

ಸೌಜನ್ಯಾ ಪ್ರಕರಣದಲ್ಲಿ ಪೊಲೀಸರು ಹೀಗೇಕೆ ಮಾಡಿದರು? ಈ ಪ್ರಶ್ನೆಯನ್ನು ಎತ್ತಿಕೊಂಡರೆ ಸ್ಪಷ್ಟವಾಗಿ ಹೇಳಬಹುದಾದುದು ಇಷ್ಟು: ಒಂದೋ, ಪೊಲೀಸರು ಹಾಗೆ ಮಾಡಲು ಕಾರಣ ಅವರ ಅದಕ್ಷತೆ. ಇಲ್ಲವೇ ಅವರು ಯಾರದೋ ಒತ್ತಡಕ್ಕೋ ಆಮಿಷಕ್ಕೋ ಬಲಿಯಾಗಿ ಉದ್ದೇಶಪೂರ್ವಕವಾಗಿ ಹಾಗೆ ಮಾಡಿದ್ದಾರೆ. ಇವೆರಡರ ಹೊರತಾಗಿ, ಮೂರನೆಯ ಒಂದು ಕಾರಣ ಇರಲು ಸಾಧ್ಯವೇ ಇಲ್ಲ. ಇವೆರಡರಲ್ಲಿ ನಿಜವಾದ ಕಾರಣ ಏನೇ ಇರಲಿ, ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮಕ್ಕೆ ಮುಂದಾಗಬೇಕಿತ್ತು.

ಪೊಲೀಸರು ಯಾರದೋ ಒತ್ತಡದಿಂದ ತನಿಖೆ ಹಳ್ಳ ಹಿಡಿಯುವಂತೆ ಮಾಡಿದ್ದರು ಎನ್ನುವುದಾಗಿದ್ದರೆ, ಯಾರ ಒತ್ತಡದಿಂದ ಅವರು ಹಾಗೆ ಮಾಡಿದ್ದು ಎಂಬ ಒಂದು ಪ್ರಶ್ನೆಗೆ ಉತ್ತರ ಕಂಡುಕೊಂಡಿದ್ದರೆ, ಈ ವೇಳೆಗೆ ರಹಸ್ಯ ಬಯಲಾಗುತ್ತಿತ್ತು. 'ಸೌಜನ್ಯಾಳಿಗೆ ನ್ಯಾಯ ಒದಗಿಸಿ' ಎಂಬ ಹೋರಾಟ ದಶಕವನ್ನು ಮೀರಿ ಮುಂದುವರಿದಿದೆ. ಒಂದು ಕೊಲೆ ಪ್ರಕರಣದ ಸುತ್ತ ಇಷ್ಟೊಂದು ಸುದೀರ್ಘವಾದ ಇನ್ನೊಂದು ಹೋರಾಟ ನಡೆದದ್ದಿಲ್ಲ. ಆ ಹೋರಾಟಗಾರರು ಮತ್ತೆ ಮತ್ತೆ ಮುಂದಿಡುತ್ತಿದ್ದ ಒಂದು ಬೇಡಿಕೆ ವಿಲಕ್ಷಣವಾಗಿದ್ದರೂ, ಅದು ಇಡೀ ಪ್ರಕರಣದ ದಾರುಣತೆಯನ್ನು ಸಾರುತ್ತದೆ. ಆ ಅಮಾಯಕನಿಗೆ ಉದ್ದೇಶಪೂರ್ವಕಾಗಿಯೇ ಪೊಲೀಸರು ಹಿಂಸಿಸಿದ್ದರಲ್ಲ, ಅದೇ ರೀತಿಯಲ್ಲಿ ತಪ್ಪಿತಸ್ಥ ಪೊಲೀಸರನ್ನೂ ಬಾಯಿ ಬಿಡಿಸಿ, ಅವರ ಮೇಲೆ ಯಾರು ಒತ್ತಡ ತಂದರು ಎಂದು ತಿಳಿದುಕೊಳ್ಳಬೇಕು ಎನ್ನುವ ಆಗ್ರಹವದು. ಇಂಥ ಆಗ್ರಹಗಳು ಪ್ರಾಯೋಗಿಕವೂ ಅಲ್ಲ, ಕಾನೂನಾತ್ಮಕವೂ ಅಲ್ಲ ಎಂದು ನಿರ್ಲಕ್ಷಿಸಿ ಬಿಡಬಹುದು. ಆದರೆ, ಪೊಲೀಸ್ ವ್ಯವಸ್ಥೆಯ ವಿಚಾರದಲ್ಲಿ ಸಾರ್ವಜನಿಕರ ತಾಳ್ಮೆ ಕುಸಿಯುತ್ತಿದೆ ಎನ್ನುವುದಕ್ಕೆ ಇದೊಂದು ಸಂಕೇತವಾಗುತ್ತದೆ.

ಸೌಜನ್ಯಾ ಕೊಲೆ ನಡೆದದ್ದು ಮತ್ತು ಪೊಲೀಸರು ತನಿಖೆಯನ್ನು ಹಳ್ಳ ಹಿಡಿಸಿದ್ದು ಬಿಜೆಪಿ ಅಧಿಕಾರದಲ್ಲಿದ್ದಾಗ. ಆ ಪಾಪವನ್ನು ಬಿಜೆಪಿ ಹೊತ್ತುಕೊಳ್ಳಬೇಕು. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮಕ್ಕೆ ನ್ಯಾಯಾಲಯ ಆದೇಶಿಸಿದ್ದು, 2023ರಲ್ಲಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ. ಬಿಜೆಪಿಯ ಕಾಲದ ಪಾಪವನ್ನು ಮುಚ್ಚಿಡುವ ಇರಾದೆ ಕಾಂಗ್ರೆಸ್ಸಿಗೆ ಇಲ್ಲದೆ ಹೋಗಿದ್ದರೆ, ತಪ್ಪಿತಸ್ಥ ಪೊಲೀಸರ ವಿಚಾರಣೆ ನಡೆಯಬೇಕಿತ್ತು. ಇಡೀ ರಾಜ್ಯಕ್ಕೆ ರಾಜ್ಯವೇ ಕಂಬನಿ ಮಿಡಿದ ಪ್ರಕರಣವೊಂದರಲ್ಲೂ ಕನಿಷ್ಠ ಸಂವೇದನೆಯಿಂದ ನಡೆದುಕೊಳ್ಳದ ಪಕ್ಷಾತೀತ ರಾಜಕೀಯ ಮನೋಧರ್ಮವನ್ನು ವಿವರಿಸುವ ಪದಗಳನ್ನು ನಾವೀಗ ಆವಿಷ್ಕರಿಸಿಕೊಳ್ಳಬೇಕಿದೆ.

ಕೊನೆಗೂ, ಸಾರ್ವಜನಿಕ ಒತ್ತಡಕ್ಕೆ ಮಣಿದು ಎಸ್‌ಐಟಿ ರಚನೆಯಾಗಿದೆ. ಸೌಜನ್ಯಾ ಪ್ರಕರಣವನ್ನೂ ಒಳಗೊಂಡು ತನಿಖೆ ನಡೆಯಬೇಕೆಂಬ ಆಗ್ರಹ ರೂಪುಗೊಂಡಿದೆ. ಆ ಆಗ್ರಹ ಸಮರ್ಪಕವಾಗಿದೆ. ಏನೇ ಇರಲಿ, ಈ ಎಸ್‌ಐಟಿ ಸತ್ಯವನ್ನು ಸ್ವಲ್ಪ ಮಟ್ಟಿಗಾದರೂ ಬಯಲಿಗೆ ಎಳೆದದ್ದೇ ಆದರೆ, ಅನ್ಯಾಯವಾಗಿ ಅಳಿದುಹೋದ ಜೀವಗಳಿಗೆ ನ್ಯಾಯ ಒದಗಿದಂತಾಗುವುದಷ್ಟೇ ಅಲ್ಲ, ಸೌಜನ್ಯಾ ಪ್ರಕರಣದಲ್ಲಿ ಕರ್ನಾಟಕ ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆ ಕಳೆದುಕೊಂಡ ಮಾನವನ್ನು ಸ್ವಲ್ಪ ಮಟ್ಟಿಗೆ ಮರಳಿ ಗಳಿಸಿದಂತೆಯೂ ಆಗುತ್ತದೆ.

ಎಲ್ಲದಕ್ಕಿಂತಲೂ ಮುಖ್ಯವಾಗಿ ಆ ಸ್ಥಳದಿಂದ ವರದಿಯಾದ ಪ್ರಕರಣಗಳಲ್ಲಿ ಕೊಲೆಗಾರರ ಕ್ರೌರ್ಯಕ್ಕಿಂತ ಹೆಚ್ಚಾಗಿ ಬೆಚ್ಚಿಬೀಳಿಸುವುದು ಪೊಲೀಸರ ರಾಕ್ಷಸೀ ಪ್ರವೃತ್ತಿ. ವಿಧಾನಸಭೆ ನಡಾವಳಿಯೂ ಸೇರಿದಂತೆ ಅಧಿಕೃತವಾಗಿಯೇ ದಾಖಲಾಗಿರುವ ಅಲ್ಲಿನ ಪೊಲೀಸರ ಪೈಶಾಚಿಕ ನಡವಳಿಕೆಗಳ ಕುರಿತ ವಿವರಗಳು ಹೊರಬರುತ್ತಿವೆ. ಆದುದರಿಂದ ಪೊಲೀಸರ ನಡುವೆ ಮನುಷ್ಯರಿದ್ದಾರೆ ಎಂದು ಸಾಧಿಸಿ ತೋರಿಸುವ ರೀತಿಯಲ್ಲಿ ಕೆಲಸ ಮಾಡಬೇಕಿರುವ ಜವಾಬ್ದಾರಿಯೂ ಎಸ್‌ಐಟಿ ಮೇಲಿದೆ.

ವಾಚಕರ ವಾಣಿ

ವಿನಾಶಕಾರಿ ಯೋಜನೆ: ಎಚ್ಚರ ಬೇಕು

'ಶರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್' ಅವೈಜ್ಞಾನಿಕವಾದುದು. ಲಕ್ಷೋಪಲಕ್ಷ ಮರಗಳು ಹನನವಾಗುವಂಥದ್ದು. ಅಪರೂಪದ ಸಿಂಹಬಾಲದ ಸಿಂಗಳೀಕಗಳು ಇರುವ ಅಭಯಾರಣ್ಯವನ್ನು ಮುಳುಗಿಸುವಂಥದ್ದು. ಇದೆಲ್ಲ ಗೊತ್ತಿದ್ದರೂ ಅದಕ್ಕೆ 'ರಾಷ್ಟ್ರೀಯ ವನ್ಯಜೀವಿ ಮಂಡಳಿ'ಯು ಷರತ್ತುಬದ್ಧ ಒಪ್ಪಿಗೆಯನ್ನು ಸೂಚಿಸಿರುವುದು ವಿಷಾದನೀಯ.

ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿ ಮುಗಿದು ನಾಲ್ಕೂವರೆ ವರ್ಷಗಳಾದವು. ಈಗ ಅಲ್ಲಿನ ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳೇ ಇಲ್ಲ. ಯೋಜನೆಯಿಂದ ಶರಾವತಿಯ ಕೆಳ ಹರಿವು ಇಲ್ಲದೇ ಅತಿಹೆಚ್ಚು ಬಾಧೆ ಅನುಭವಿಸುವವರು ಉತ್ತರ ಕನ್ನಡದ ಕರಾವಳಿ ಸಮೀಪದ ಹಳ್ಳಿಗರು. ಜನಾಭಿಪ್ರಾಯ ವ್ಯಕ್ತಪಡಿಸಬೇಕಾದ ಜನಪ್ರತಿನಿಧಿಗಳೇ ಎರಡೂ ಜಿಲ್ಲೆಗಳಲ್ಲಿ ಇಲ್ಲದಿರುವಾಗ ವಿನಾಶಕಾರಿ ಯೋಜನೆಯನ್ನು ಸರ್ಕಾರ ಕೈಗೊಳ್ಳುವುದು ಸರಿಯೇ?

ಶಾರದಾ ಗೋಪಾಲ, ಮಮತಾ ರೈ, ಸರೋಜಾ ಪ್ರಕಾಶ, ಡಿ.ಕೆ. ಮಹೇಶ ಕುಮಾರ, ಧಾರವಾಡ

ಭ್ರಷ್ಟಾಚಾರ: ಮಹಿಳೆಯರಿಗೂ ಕಳಂಕ

ಸಾಮಾನ್ಯವಾಗಿ ನಮ್ಮಲ್ಲಿ ಮಹಿಳೆಯರ ಬಗ್ಗೆ ಉದಾತ್ತ ಚಿತ್ರಣವಿದೆ. ಪ್ರಾಮಾಣಿಕರು, ಕರ್ತವ್ಯನಿಷ್ಠರು, ದಾಕ್ಷಿಣ್ಯಪರರು, ಅವರಿದ್ದಲ್ಲಿ ಭ್ರಷ್ಟಾಚಾರ ಇರುವುದಿಲ್ಲ... ಇತ್ಯಾದಿ.

ಇತ್ತೀಚಿನ ದಶಕಗಳಲ್ಲಿ ವಿದ್ಯಾಭ್ಯಾಸ, ಸಮಾನತೆ, ಮಹಿಳಾ ಸಬಲೀಕರಣದ ಉಪಕ್ರಮಗಳಿಂದಾಗಿ ಸರ್ಕಾರಿ ಕಚೇರಿಗಳಲ್ಲಿ ಮಹಿಳೆಯರು ಆಯಕಟ್ಟಿನ ಹುದ್ದೆಗಳಲ್ಲಿ ಇದ್ದಾರೆ. ಇದು ಸ್ವಾಗತಾರ್ಹವೇ. ಆದರೆ, ಹೀಗೆ ಬಂದ ಮಹಿಳೆಯರಲ್ಲಿ ಹೆಚ್ಚಿನವರದು 'ಬಕಾಸುರ ಹಸಿವು' ಎನ್ನುವುದಕ್ಕೆ ನಿದರ್ಶನಗಳಿವೆ. ಇದಕ್ಕೆ ಹೊಸ ನಿದರ್ಶನ, ಲೋಕಾಯುಕ್ತ ದಾಳಿ ಸಂದರ್ಭದಲ್ಲಿ ಕೆ-ರೈಡ್ ವಿಶೇಷ ಉಪ ಆಯುಕ್ತೆ ವಾಸಂತಿ ಅಮರ್ ಎಂಬಾಕೆ ₹9 ಕೋಟಿಗೂ ಹೆಚ್ಚಿನ ಕಿಮ್ಮತ್ತಿನ ಆಸ್ತಿ ಸಂಪಾದಿಸಿದ ಸಂಗತಿ ಬಯಲಾಗಿರುವುದು (ಪ್ರ.ವಾ., ಜುಲೈ 24). ಅಲ್ಲಿಗೆ, ಮಹಿಳೆಯರೆಲ್ಲ ಪ್ರಾಮಾಣಿಕರು ಎನ್ನುವ ಮಾತಿಗೆ ಅರ್ಥವೆಲ್ಲಿದೆ?

ಡಿವಿಜಿ ಹೇಳಿದಂತೆ, 'ಮನಸ್ಸೇ ಎಲ್ಲ ರೋಗಗಳ ಮೂಲ' (ಇದರಲ್ಲಿ ಭ್ರಷ್ಟಾಚಾರವೂ ಸೇರುತ್ತದೆಯಲ್ಲವೇ?). ಅದಕ್ಕೆ ಇಲಾಜು ಮಾಡದೆ ಯಾವ ವ್ರಣವೂ ವಾಸಿಯಾಗುವುದಿಲ್ಲ. ಭ್ರಷ್ಟರು ಮಹಿಳೆಯರೇ ಆಗಿರಲಿ, ಪುರುಷರೇ ಆಗಿರಲಿ, ಅವರಿಗೆಲ್ಲ ಬೀದಿಯಲ್ಲಿ ಛೀಮಾರಿ ಹಾಕುವ ಮಟ್ಟಕ್ಕೆ ಸಮಾಜ ಎದ್ದು ನಿಲ್ಲಬೇಕು. ಆದರೆ, ಅಕ್ಕಪಕ್ಕದ ಮನೆಯಲ್ಲಿರುವ ಭ್ರಷ್ಟರ ಬಗ್ಗೆ ಮಾತನಾಡಿ, ಮನೆಯೊಳಗೇ ಇರುವ ಭ್ರಷ್ಟರ ಬಗ್ಗೆ ಮೆಚ್ಚುಗೆ ಇಟ್ಟುಕೊಂಡಿರುವವರೇ ನಮ್ಮಲ್ಲಿ ಹೆಚ್ಚು.

ಬಿ.ಎಸ್. ಜಯಪ್ರಕಾಶ ನಾರಾಯಣ, ಬೆಂಗಳೂರು

ಒತ್ತಾಯ ಮಾಡುವುದು ಸರಿಯೇ?

ಕನ್ನಡ ಸಾಹಿತ್ಯ ಪರಿಷತ್ತು ವಾರ್ಷಿಕ ದತ್ತಿ ಪ್ರಶಸ್ತಿಗಳಿಗೆ ಪುಸ್ತಕಗಳನ್ನು ಆಹ್ವಾನಿಸಿದೆ. ಪ್ರಶಸ್ತಿಗಾಗಿ ಪುಸ್ತಕಗಳನ್ನು ಆಯ್ಕೆ ಮಾಡಲು ಕಳಿಸುವವರು ಪರಿಷತ್ತಿನ ಸದಸ್ಯರಾಗಿರಬೇಕು ಅಥವಾ ಸದಸ್ಯತ್ವ ಪಡೆದುಕೊಂಡು ನಂತರ ಸಲ್ಲಿಸಬೇಕು ಎಂದು ಹೇಳಿದೆ (ಪ್ರ.ವಾ., ಜುಲೈ 23). ದತ್ತಿ ಪ್ರಶಸ್ತಿಗೆ ಪುಸ್ತಕ ಸಲ್ಲಿಸುವವರು ಕಸಾಪ ಸದಸ್ಯರಾಗಿರಬೇಕೆಂದು ದತ್ತಿ ಇಟ್ಟಿರುವವರು ಅಥವಾ ಆ ಕಾಲದ ಕಸಾಪ ಕಾರ್ಯಕಾರಿ ಸಮಿತಿ ನಿರ್ಣಯ ಮಾಡಿದೆಯೆ?

ಒಂದು ಸಂಸ್ಥೆಗೆ ಸದಸ್ಯರಾಗುವವರು ಆ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಇಷ್ಟಪಟ್ಟು, ಒಪ್ಪಿಕೊಂಡು ಸದಸ್ಯರಾಗುತ್ತಾರೆ. ಆ ರೀತಿಯ ಪ್ರೀತಿ ಇದ್ದವರು ಈಗಾಗಲೇ ಕಸಾಪ ಸದಸ್ಯರಾಗಿದ್ದಾರೆ ಮತ್ತು ಮುಂದೆಯೂ ಆಗುತ್ತಾರೆ. ಆದರೆ, ಪುಸ್ತಕ ಸಲ್ಲಿಸುವಾಗಲೇ ಸದಸ್ಯರಾಗಿರಬೇಕೆಂಬ ನಿಯಮ ಹೇರುವುದು ಸರಿಯೇ?

ಈ. ಬಸವರಾಜು, ಬೆಂಗಳೂರು

ಉಪ ಪಂಗಡದ ನೋವು ಆಲಿಸುವಿರಾ?

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ವೀರಶೈವ– ಲಿಂಗಾಯತ ಉಪ ಪಂಗಡಗಳು ಏಕರೂಪದ ಹೆಸರು ಬರೆಸುವಂತೆ ಗಣ್ಯರು ಕರೆ ನೀಡಿದ್ದಾರೆ. ಬಲಾಢ್ಯ ಪಂಗಡಗಳ ರಾಜಕೀಯ ಅಸ್ತಿತ್ವಕ್ಕೆ ಧಕ್ಕೆಯಾದಾಗ ಅವರಿಗೆ ಉಪ ಪಂಗಡಗಳು ನೆನಪಾಗುತ್ತವೆ. ಈ ಗಣ್ಯರು ಯಾವಾಗಲಾದರೂ ಸಮುದಾಯದ ಕಷ್ಟ–ಸುಖ ವಿಚಾರಿಸಿದ್ದಾರೆಯೇ? ಲಿಂಗಾಯತ ಹೊಲೆಯರು, ಲಿಂಗಾಯತ ಕುರುಬ, ಲಿಂಗಾಯತ ಕ್ಷೌರಿಕ, ಲಿಂಗಾಯತ ಮಡಿವಾಳ, ಲಿಂಗಾಯತ ಬೋವಿ, ಲಿಂಗಾಯತ ಭಜಂತ್ರಿ, ಲಿಂಗಾಯತ ಸಮಗಾರ, ಲಿಂಗಾಯತ ಕುಂಬಾರ– ಹೀಗೆ ನೂರಕ್ಕೂ ಹೆಚ್ಚು ಉಪ ಪಂಗಡಗಳೊಂದಿಗೆ ಸಂಬಂಧವನ್ನು ಬೆಳೆಸಿದ್ದಾರೆಯೇ?

ಸಿ. ರುದ್ರಪ್ಪ, ಬೆಂಗಳೂರು

ಕಾಡು–ನಾಡಿನ ಅರಿವಿಲ್ಲದ ಆದೇಶ

'ಕಾಡಿಗೆ ಜಾನುವಾರು ಬಿಡುವಂತಿಲ್ಲ' (ಪ್ರ.ವಾ., ಜುಲೈ 23) ಎಂಬ ಅರಣ್ಯ ಸಚಿವರ ಆದೇಶ ಆಶ್ಚರ್ಯ ತರಿಸುವಂತಿದೆ. ಜಾನುವಾರು ಸಾಕುವವರು ಶ್ರೀಸಾಮಾನ್ಯರು. ಹಸಿವು ಮತ್ತು ಭೂಮಿಯ ಅಂತಃಸತ್ವ ಅರಿತ ಇವರು ಯಾವುದೇ ತಕ್ಷಣದ ಲಾಭವನ್ನು ನಿರೀಕ್ಷಿಸಿದವರಲ್ಲ. ದನ–ಕರುಗಳ ಉತ್ಪನ್ನಗಳಿಂದ ಜೀವನ ನಿರ್ವಹಣೆ ಮಾಡುವವರು. ಕಡಿಮೆ ಭೂಮಿ ಹೊಂದಿದ ಇವರು ಜಾನುವಾರುಗಳ ಮೇವಿಗೆ ಬಹುಪಾಲು ಕಾಡನ್ನು ನಂಬಿದವರು. ಕಾಡನ್ನು ನಾಶಮಾಡಿ ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುವ, ಕಳ್ಳದಂಧೆ ಮಾಡುವ, ಉಳ್ಳವರ ಮತ್ತು ಅಧಿಕಾರಶಾಹಿಗಳ ಜೊತೆ ಶಾಮೀಲಾಗಿ ಧ್ವಂಸ ಮಾಡುವಂತಹ ಯಾವುದೇ ಹೊಣೆಗೇಡಿತನ ಜಾನುವಾರು ಸಾಕುವವರಲ್ಲಿ ಇಲ್ಲ. ಸಚಿವರ ಆದೇಶವು ಕಾಡಿನ ಜೊತೆಗೆ ನಂಟನ್ನು ಹೊಂದಿದ ಸ್ಥಳೀಯರನ್ನು ಹೊರಗಿಡುವ ಹುನ್ನಾರವಷ್ಟೇ.

ಅಣ್ಣಪ್ಪ ಎನ್. ಮಳೀಮಠ್, ಶಿವಮೊಗ್ಗ

ಚುರುಮುರಿ



ಯಾರಿಗೆ ತಾಳ್ಮೆ ಹೆಚ್ಚು?

● ಬಿ.ಎನ್. ಮಲ್ಲೇಶ್

'ಮಂಜಮ್ಮ, ಈ ಜಗತ್ತಲ್ಲಿ ಯಾರಿಗೆ ತಾಳ್ಮೆ ಹೆಚ್ಚು?' ಹರಟೆಕಟ್ಟೆಯಲ್ಲಿ ಗುಡ್ಡೆ ಚಾ ಕುಡಿಯುತ್ತ ಕೇಳಿದ.

'ಇನ್ಯಾರಿಗೆ, ತಾಯಿಗೆ ಅಥ್ವ ಭೂಮಿ ತಾಯಿಗೆ...' ಮಂಜಮ್ಮ ಹೇಳಿದಳು.

'ಅಲ್ಲ...'

'ಗಂಡಿಗೆ ಹೆಚ್ಚು ತಾಳ್ಮೆ ಕಣಲೆ, ಐಮೀನ್ ಹೆಂಡ್ತಿ ಮುಂದೆ ಪಿಟಿಕ್ಕನ್ನದ ಗಂಡ ಅನ್ನೋ ಗಂಡಿಗೆ...' ದುಬ್ಬೀರ ಹೇಳಿದ.

'ಅದೂ ಅಲ್ಲ...'

'ನನ್ ಪ್ರಕಾರ ಈ ಮಂಜಮ್ಮನಂಥ ಹೆಣ್ಮಕ್ಕಳಿಗೆ ಸೀರೆ ತೋರಿಸ್ತಾನಲ್ಲ, ಸೀರೆ ಅಂಗಡಿ ಸೇಲ್ಸ್ ಮನ್... ಅವನಿಗೆ ತಾಳ್ಮೆ ಹೆಚ್ಚು...' ಕೊಟ್ರೇಶಿ ನಕ್ಕ.

'ನೋ ಚಾನ್ಸ್... ಅದ್ಯಾವುದೂ ಅಲ್ಲ. ಬಂಡೆಗೆ ತಾಳ್ಮೆ ಹೆಚ್ಚು...'

'ಬಂಡೆಗಾ? ಅದೆಂಗೆ?'

'ಹೆಂಗೆ ಅಂದ್ರೆ ಬಂಡೆ ತನ್ನ ಪಾಡಿಗೆ ತಾನು ಗುಡ್ಡದ ಮೇಲಿರುತ್ತೆ. ಹೊತ್ಕಂಡ್ ಬಂದು ಒಡೆದ್ರೆ ಚಪ್ಪಡಿ, ಸೈಜುಗಲ್ಲು, ಜಲ್ಲಿಕಲ್ಲು, ದೇವಸ್ಥಾನದ ಮೆಟ್ಟಿಲು ಆಗುತ್ತೆ. ತುಳಿದ್ರೆ ತುಳಿಸ್ಕಳುತ್ತೆ, ಕೆತ್ತಿದ್ರೆ ಕೆತ್ತಿಸ್ಕೊಳುತ್ತೆ. ಏನ್ ಮಾಡಿದ್ರೂ ಸಹಿಸ್ಕೊಳುತ್ತೆ...'

'ನಮ್ಮೂರ 'ಬಂಡೆ'ಗೆ ಅದಕ್ಕಿಂತ ತಾಳ್ಮೆ ಜಾಸ್ತಿ' ಎಂದ ತೆಪರೇಸಿ.

'ಹೌದಾ? ಅದೆಂಥದು?'

'ನಮ್ಮೂರ ಬಂಡೆ ಮಾತಾಡುತ್ತೆ, ನೋಡೋಕೆ ಒರಟೊರಟಾಗಿದ್ರು ಶ್ಲೋಕ ಹೇಳುತ್ತೆ. ಕಂಡ ಕಂಡ ದೇವರಿಗೆಲ್ಲ ಕೈ ಮುಗಿದು ಕಾಯಿ ಒಡೆಯುತ್ತೆ. ಕುರ್ಚಿ ಬಿಟ್ಕೊಡಲ್ಲ ಅಂದ್ರೂ ಇರೋ ಕುರ್ಚಿ ಕಿತ್ಕಂತೀವಿ ಅಂದ್ರೂ ಸಹಿಸ್ಕಳುತ್ತೆ. ಪ್ರಯತ್ನಕ್ಕಿಂತ ಪ್ರಾರ್ಥನೆ ಫಲ ಕೊಡುತ್ತೆ ಅನ್ನುತ್ತೆ. ಸಮಾರಂಭದಲ್ಲಿ ಸ್ವಾಗತ ಮಾಡದಿದ್ರೂ ಸುಮ್ನಿರುತ್ತೆ. ನಿಮಗೆ ಜಾಸ್ತಿ ಬೆಂಬಲ ಇಲ್ಲ ಅಂದ್ರೂ ನಗ್ತಿರುತ್ತೆ, ವಿರೋಧಿಸಿದವರಿಗೆಲ್ಲ ಒಳ್ಳೆದಾಗ್ಲಿ ಅನ್ನುತ್ತೆ...'

'ಗೊತ್ತಾತು ಬಿಡು, ಒಂದೊಂದ್ ಸಲ ಸಿಟ್ಟು ಬಂದ್ರೆ ನಟ್ಟು ಬೋಲ್ಟು ಟೈಟ್ ಮಾಡ್ತೀನಿ ಅನ್ನುತ್ತೆ ಅಲ್ವಾ?'

ಗುಡ್ಡೆಯ ಕಿಲಾಡಿ ಮಾತಿಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಕಾಲ್ತುಳಿತ: ದುರ್ಬಲ ತನಿಖಾ ವರದಿ

ಐಪಿಎಲ್ ಕ್ರಿಕೆಟ್ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ದುರ್ಘಟನೆಯ ಕುರಿತಾದ ತನಿಖಾ ವರದಿಯಲ್ಲಿ ಗುಪ್ತಚರ ಇಲಾಖೆಯ ಪ್ರಸ್ತಾಪವೇ ಇಲ್ಲ. ಏಕೆ?

● ಸಿ.ಎಚ್. ಹನುಮಂತರಾಯ

ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ತಂಡ 'ಐಪಿಎಲ್' ಕ್ರಿಕೆಟ್ ಪಂದ್ಯಾವಳಿಯಲ್ಲಿ ಗೆಲುವು ಸಾಧಿಸಿದ ಸಂಭ್ರಮವನ್ನು ಆಚರಿಸುವ ವಿಜಯೋತ್ಸವದ ವೇಳೆ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟರು. ಆ ದುರಂತಕ್ಕೆ ಸಂಬಂಧಿಸಿದಂತೆ ತನಿಖೆಗೆ ರಚಿಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ಆಯೋಗದ ವರದಿ ಈಗಾಗಲೇ ರಾಜ್ಯ ಸಚಿವ ಸಂಪುಟದ ಕೈಸೇರಿದೆ.

ವರದಿಯಲ್ಲಿ ಘಟನೆಗೆ ಆರ್‌ಸಿಬಿ, ಡಿಎನ್ ಎಂಟರ್‌ಟೈನ್‌ಮೆಂಟ್ ಸಂಸ್ಥೆ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಮತ್ತು ಪೊಲೀಸ್ ಅಧಿಕಾರಿಗಳು ಕಾರಣ ಎಂದು ಹೇಳಲಾಗಿದೆ.

ತನಿಖಾ ವರದಿಯಲ್ಲಿ ಪೊಲೀಸ್ ಇಲಾಖೆಯ ಕಾರ್ಯ ವಿಧಾನಗಳಲ್ಲಿ ಅಂತರ್ಗತವಾಗಿರುವ ಮುಖ್ಯ ವಿಚಾರವೊಂದನ್ನು ಆಯೋಗ ಪರಿಗಣಿಸದೇ ಇರುವುದು ಕಂಡುಬಂದಿದೆ. ಇದೊಂದು ದೊಡ್ಡ ಒಗಟಾಗಿ ಮತ್ತು ನಿಗೂಢವಾಗಿ ಕಾಣಿಸುವಷ್ಟು ದುರ್ಬಲವಾದ ವರದಿಯಾಗಿ ಕಾಣಿಸುತ್ತಿದೆ. 'ಕರ್ನಾಟಕ ಪೊಲೀಸ್ ಕೈಪಿಡಿ–2011'ರ ಹೊಸ ಆವೃತ್ತಿಗೆ ಮುನ್ನುಡಿ ಬರೆದಿದ್ದ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಕೆ.ಎಸ್. ಸುರೇಶ್ ಬಾಬು ಅವರು, ಪೊಲೀಸ್ ಇಲಾಖೆಯ ಕಾರ್ಯವ್ಯಾಪ್ತಿ ಕುರಿತು ಸೂಚ್ಯವಾಗಿ ವ್ಯಾಖ್ಯಾನಿಸಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.



'ಪೊಲೀಸ್ ಇಲಾಖೆಯ ಕರ್ತವ್ಯಗಳ ವ್ಯಾಪ್ತಿಯಲ್ಲಿ– ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಆಂತರಿಕ ಶಾಂತಿ ಮತ್ತು ಭದ್ರತೆಯನ್ನು ರಕ್ಷಿಸುವುದು, ಅಪರಾಧಗಳ ತಡೆಗಟ್ಟುವಿಕೆ ಮತ್ತು ಪತ್ತೆ ಹಚ್ಚುವುದು, ನಿಯಂತ್ರಣ ಮತ್ತು ಕಾನೂನುಗಳ ಜಾರಿ ಮಾಡುವ ಜವಾಬ್ದಾರಿಯಷ್ಟೇ ಇಲ್ಲ. ಆ ವ್ಯಾಪ್ತಿ ಇವೆಲ್ಲಕ್ಕಿಂತಲೂ ಹೆಚ್ಚು ವಿಸ್ತಾರವಾಗಿದ್ದು, ಅವರು ಏನು ಮಾಡಬೇಕು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ಸುರೇಶ್ ಬಾಬು ಅವರ ಮಾತುಗಳಲ್ಲಿ ಅಡಕವಾಗಿದೆ. ಈ ಮಾರ್ಮಿಕ ಮಾತುಗಳ ವಿಚಾರ ಗುಪ್ತಚರ ಇಲಾಖೆ ಮತ್ತು ಅದು ವ್ಯಾಪಕವಾಗಿ ಹೊಂದಿರುವ ಗುಪ್ತಚರರು ಹಾಗೂ ಬಾತ್ಮೀದಾರರಿಗೆ ಸಂಬಂಧಿಸಿದ್ದು ಎಂಬುದನ್ನು ನಾವು ಗಮನಿಸಬೇಕು.

ಕ್ರಿಕೆಟ್ ಸ್ಟೇಡಿಯಂನ ಆಗ್ನೇಯ ದಿಕ್ಕಿಗೆ ಕೇವಲ ಒಂದು ಫರ್ಲಾಂಗ್ ಅಂತರದಲ್ಲಿ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ, ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಎಸಿಪಿ ಕಚೇರಿಗಳಿವೆ. ಪಶ್ಚಿಮಕ್ಕೆ ಅರ್ಧ ಕಿ.ಮೀ ಅಂತರದಲ್ಲಿ ಹೈಗ್ರೌಂಡ್ಸ್ ಪೊಲೀಸ್ ಠಾಣೆ, ನೈರುತ್ಯ ಭಾಗದಲ್ಲಿ ವಿಧಾನಸೌಧ ಪೊಲೀಸ್ ಠಾಣೆ, ಸರ್ಕಲ್ ಇನ್‌ಸ್ಪೆಕ್ಟರ್ ಹಾಗೂ ಎಸಿಪಿಯವರ ಕಚೇರಿಗಳಿವೆ. ಉತ್ತರ ದಿಕ್ಕಿಗೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ ಇದೆ. ಇವಿಷ್ಟೂ ಪೊಲೀಸ್ ಠಾಣೆಗಳಿಗೆ ಸಂಬಂಧಿಸಿದಂತೆ ನೂರಾರು ಗುಪ್ತಚರರು ಮತ್ತು ಬಾತ್ಮೀದಾರರು ಇರುತ್ತಾರೆ.ವಿಪರ್ಯಾಸವೆಂದರೆ, ಗುಪ್ತಚರ ಇಲಾಖೆ ಗೃಹ ಸಚಿವರ ನಿರ್ವಹಣೆಯಲ್ಲಿ ಇರಬೇಕು. ಆದರೆ, ಅದು ಮುಖ್ಯಮಂತ್ರಿ ಬಳಿಯಿರುವ ಎಂಟು ಖಾತೆಗಳಲ್ಲಿ ಒಂದಾಗಿದೆ!

ಕಾಲ್ತುಳಿತ ಸಂಭವಿಸುವ ಕೆಲವೇ ಗಂಟೆಗಳ ಮೊದಲು ವಿಧಾನಸೌಧದ ಮುಂಭಾಗದಲ್ಲಿ ಸೇರಿದ್ದ ಭಾರೀ ಜನಸ್ತೋಮದ ಎದುರು ವಿಜಯೋತ್ಸವ ಆಚರಿಸಲಾಯಿತು. ಈ ಸಂದರ್ಭವನ್ನು ಗಮನಿಸಿದಾಗ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ.

ವಿಜಯೋತ್ಸವಕ್ಕೆ ಸಂಬಂಧಪಟ್ಟ ಪ್ರಕಟಣೆ ಪ್ರಾರಂಭವಾದ ಸಮಯದಿಂದ ಗುಪ್ತಚರರು ಮತ್ತು ಬಾತ್ಮೀದಾರರು ತಮ್ಮ ಕರ್ತವ್ಯದಲ್ಲಿ ನಿರತರಾಗಿರಲಿಲ್ಲವೇ? ಹಾಗಾಗಿದ್ದಲ್ಲಿ, ಗುಪ್ತಚರ ಇಲಾಖೆಯ ವರಿಷ್ಠ ಅಧಿಕಾರಿಗಳು ಕ್ಷಣ ಕ್ಷಣದಲ್ಲೂ ಪಡೆದುಕೊಂಡ ಮಾಹಿತಿಗೆ ಮಹತ್ವ ಇಲ್ಲವೇ? ಲಕ್ಷಾಂತರ ಮಂದಿ ವಿಧಾನಸೌಧದ ಮುಂದಿದ್ದಾಗ, ಅವರ ಮಧ್ಯೆ ಮಫ್ತಿಯಲ್ಲಿ ಗುಪ್ತಚರರು ಮತ್ತು ಮೂರೂ ಪೊಲೀಸ್ ಠಾಣೆಗಳಿಗೆ ಸೇರಿರುವ ನೂರಾರು ಬಾತ್ಮೀದಾರರು ಕಂಡದ್ದು ಹಾಗೂ ಕೇಳಿಸಿಕೊಂಡ ಸಂಗತಿಗಳು ಯಾವುದಾಗಿದ್ದವು? ವಿಧಾನಸೌಧದ ಮುಂದೆ ಕಾರ್ಯಕ್ರಮ ಮುಗಿದ ಕೂಡಲೇ ವಿಧಾನಸೌಧದ ಮುಂದೆ ಜಮಾಯಿಸಿದ್ದ ಜನಸ್ತೋಮ ಕ್ರೀಡಾಂಗಣದ ಕಡೆಗೆ ಧಾವಿಸಿದ್ದು ಎಲ್ಲರಿಗೂ ತಿಳಿದಿರುವ ಸತ್ಯ. ಹೀಗಿರುವಾಗ, ಸಾಮಾಜಿಕ ಜಾಲತಾಣಗಳಲ್ಲಿ ಕ್ರೀಡಾಂಗಣದಲ್ಲಿ ಜರುಗಲಿರುವ ಕಾರ್ಯಕ್ರಮದ ಕುರಿತು ಬರುತ್ತಿದ್ದ ಪ್ರಕಟಣೆಗಳು ಗುಪ್ತಚರರು ಮತ್ತು ಬಾತ್ಮೀದಾರರ ಗಮನಕ್ಕೆ ಬರಲಿಲ್ಲವೇ? ಅವರ ಮುಖಾಂತರ ಗುಪ್ತಚರ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಲಭ್ಯವಾಗಲಿಲ್ಲವೇ?

ಗುಪ್ತಚರರಿಗೆ ಈ ಮಾಹಿತಿಗಳು ಲಭ್ಯವಾಗಿದ್ದಲ್ಲಿ, ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಉನ್ನತ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಕಾರಣರಾಗಿರಬೇಕಾಗಿತ್ತು. ನಿಜವಾದ ದುರಂತ ಏನೆಂದರೆ, ಈ ಎಲ್ಲಾ ಗುಪ್ತಚರರು ಕಾರ್ಯೋನ್ಮುಖರಾಗಿದ್ದ ಬಗ್ಗೆ ಎಲ್ಲಿಯೂ ಯಾವ ಸುದ್ದಿಯೂ ಕಂಡುಬರದೇ ಇರುವುದು.

ಆಯೋಗ ನಡೆಸಿದ ತನಿಖಾ ವರದಿಯಲ್ಲಿ ಮೇಲಿನ ಪ್ರಶ್ನೆಗಳ ಕುರಿತಂತೆ ಎಳ್ಳಷ್ಟೂ ವಿವರ ಕಂಡುಬರುತ್ತಿಲ್ಲ. ಗುಪ್ತಚರ ಇಲಾಖೆಯು ಮುಖ್ಯಮಂತ್ರಿ ವ್ಯಾಪ್ತಿಗೆ ಬರುತ್ತದೆ ಎಂಬ ಕಾರಣಕ್ಕಾಗಿಯೇ ಇದನ್ನು ಮುಚ್ಚಿಡಲಾಗಿದೆಯೇ? ಒಂದು ವೇಳೆ ಈ ದಿಸೆಯಲ್ಲಿ ತನಿಖೆ ನಡೆದಿದ್ದರೂ ಮುಖ್ಯಮಂತ್ರಿ ಅವರಿಗೆ ಎದುರಿಸಲಾಗದ ಮುಜುಗರ ಉಂಟಾಗುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ಗೋಪ್ಯವಾಗಿ ಇರಿಸಲಾಗಿದೆಯೇ? ಈ ಅಂಶಗಳ ಹಿನ್ನೆಲೆಯಲ್ಲಿ ಆಯೋಗದ ವರದಿ ದೌರ್ಬಲ್ಯಪೂರಿತ ಎಂದೇ ಭಾವಿಸಬೇಕಾಗುತ್ತದೆ.

(ಲೇಖಕರು ಹೈಕೋರ್ಟ್‌ನ ಹಿರಿಯ ವಕೀಲ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಂತರ್ಜಲ ಬಳಕೆ ಮತ್ತು ನಿರ್ವಹಣೆ ಸಂಬಂಧದ ಕೇಂದ್ರ ಅಂತರ್ಜಲ ಪ್ರಾಧಿಕಾರದ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಕೊಳವೆಬಾವಿಗಳ ನೀರಿಗೆ ಡಿಜಿಟಲ್ ಟೆಲಿಮೆಟ್ರಿ ಅಳವಡಿಕೆ, ವಾಣಿಜ್ಯ, ಕೈಗಾರಿಕೆ, ಗಣಿಗಾರಿಕೆ, ಮೂಲಸೌಕರ್ಯ ಅಭಿವೃದ್ಧಿಗೆ ಬಳಸುವ ಕೊಳವೆಬಾವಿ ನೀರಿಗೆ ಮತ್ತು ಟ್ಯಾಂಕರ್‌ಗಳಿಗೆ ಶುಲ್ಕ ವಿಧಿಸಲು ತೀರ್ಮಾನಿಸಲಾಗಿದೆ. ಅಂತರ್ಜಲದ ಅತಿಬಳಕೆಯನ್ನು ತಡೆಗಟ್ಟಲು ತರಲಾಗುತ್ತಿರುವ ಈ ನಿಯಮಗಳಲ್ಲಿ ಕೆಲವು ಸ್ವಾಗತಾರ್ಹವೂ ಆಗಿವೆ. ಆದರೆ, ಕೇಂದ್ರ ಅಂತರ್ಜಲ ಪ್ರಾಧಿಕಾರದ ಕೆಲವು ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರ ತಿದ್ದುಪಡಿ ಮಾಡಲು ಮುಂದಾಗಿದೆ. ಇದರಿಂದ ಅಂತರ್ಜಲವು ಗಂಭೀರ ಸ್ಥಿತಿಯಲ್ಲಿರುವ ತಾಲ್ಲೂಕುಗಳಲ್ಲಿ ಪರಿಸ್ಥಿತಿ ಬಿಗಡಾಯಿಸುವ ಸಂಭವ ಇದೆ. ಜತೆಗೆ, ನಿಯಮ ಜಾರಿಯ ಹೊಣೆ ಹೊತ್ತವರ ಭ್ರಷ್ಟಾಚಾರವೂ ಸೇರಿದರೆ, ಅಂತರ್ಜಲ ಅಪಾಯಕಾರಿ ಮಟ್ಟಕ್ಕೆ ಕುಸಿಯಬಹುದು ಎನ್ನುವ ಆತಂಕ ವ್ಯಕ್ತವಾಗಿದೆ

ಅಂತರ್ಜಲ ಬಳಕೆಗೆ ಮಾರ್ಗಸೂಚಿ ತಿದ್ದುಪಡಿ ತಂದ ಆತಂಕ

ಪ್ರಜಾವಾಣಿ ವಾರ್ತೆ



ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸೂಚನೆಯಂತೆ ಕೇಂದ್ರ ಅಂತರ್ಜಲ ಪ್ರಾಧಿಕಾರವು ಅಂತರ್ಜಲ ಬಳಕೆಯ ನಿಯಂತ್ರಣ ಮತ್ತು ನಿರ್ವಹಣೆಗಾಗಿ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡುವ ಸಂಬಂಧದ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು. ಅದನ್ನು ಯಥಾವತ್ತಾಗಿ ಇಲ್ಲವೇ ಅಲ್ಪ ಬದಲಾವಣೆಗಳೊಂದಿಗೆ 15 ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳೇ ಜಾರಿಗೊಳಿಸುತ್ತಿವೆ. ಉಳಿದ ರಾಜ್ಯಗಳಲ್ಲಿ ಕೇಂದ್ರ ಅಂತರ್ಜಲ ಪ್ರಾಧಿಕಾರದಿಂದ ಮಾರ್ಗಸೂಚಿಯನ್ನು ಜಾರಿಗೊಳಿಸಲಾಗುತ್ತಿದೆ. ಆ ಮಾರ್ಗಸೂಚಿಗಳನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧದ ರಾಜ್ಯದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯು ರಾಜ್ಯ ಸಚಿವ ಸಂಪುಟದ ಮುಂದೆ ಇಟ್ಟಿದ್ದ ಪ್ರಸ್ತಾವನೆಗೆ ಇತ್ತೀಚೆಗೆ ಸಂಪುಟ ಅನುಮೋದನೆ ನೀಡಿದೆ. ಇದರೊಂದಿಗೆ ರಾಜ್ಯಕ್ಕೆ ಅನ್ವಯವಾಗುವಂತೆ ಕೆಲವು ಮಾರ್ಗಸೂಚಿಗಳಿಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೂ ಸಂಪುಟ ಒಪ್ಪಿಗೆ ನೀಡಿದೆ.

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ನಿರ್ವಹಣೆಯ ವಿನಿಮಯ ಹಾಗೂ ನಿಯಂತ್ರಣ) ಕಾಯ್ದೆ 2011ರ ಅನ್ವಯ ಇದುವರೆಗೆ ಅಂತರ್ಜಲ ಬಳಸಲು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದರೆ ಸಾಕಿತ್ತು; ಬಳಕೆ ಶುಲ್ಕ ಇರಲಿಲ್ಲ. ಮತ್ತು ಟ್ಯಾಂಕರ್ ನೀರು ಸರಬರಾಜಿಗೆ ಪರವಾನಗಿ ಅಗತ್ಯವೂ ಇರಲಿಲ್ಲ. ಯಾರು ಎಷ್ಟು ಅಂತರ್ಜಲವನ್ನು ಹೊರತೆಗೆದು ಬಳಸುತ್ತಿದ್ದಾರೆ ಎನ್ನುವ ವಿವರವೂ ಲಭ್ಯವಿರಲಿಲ್ಲ. ಆದರೆ, ಹೊಸ ಮಾರ್ಗಸೂಚಿಗಳ ಅನ್ವಯ, ಕೊಳವೆಬಾವಿಗಳಿಗೆ 'ಡಿಜಿಟಲ್ ಟೆಲಿಮೆಟ್ರಿ' ಮೂಲಕ ನೀರಿನ ಪ್ರಮಾಣವನ್ನು ಅಳೆಯಲಾಗುತ್ತದೆ. ಗೃಹೋಪಯೋಗಿ ಮತ್ತು ಕೃಷಿ ಕೆಲಸಗಳಿಗೆ ಕೊಳವೆಬಾವಿಗಳ ನೀರು ಬಳಸುವುದಕ್ಕೆ ಮತ್ತು ಇನ್ನಿತರ ಕೆಲವು ಉದ್ದೇಶಗಳಿಗೆ ನೀರು ಬಳಸಲು ಯಾವುದೇ ಶುಲ್ಕ ತೆರಬೇಕಿಲ್ಲ. ಆದರೆ, ವಾಣಿಜ್ಯ, ಕೈಗಾರಿಕೆ, ಗಣಿಗಾರಿಕೆ, ಮೂಲಸೌಕರ್ಯ ಅಭಿವೃದ್ಧಿಗೆ ಬಳಸುವ ಅಂತರ್ಜಲಕ್ಕೆ ಮತ್ತು ನೀರು ಪೂರೈಸುವ ಟ್ಯಾಂಕರ್‌ಗಳಿಗೆ ಶುಲ್ಕ ವಿಧಿಸಲು ತೀರ್ಮಾನಿಸಲಾಗಿದೆ. ಕಾಲಕಾಲಕ್ಕೆ ಹೊರಡಿಸುವ ಪರಿಷ್ಕೃತ ಮಾರ್ಗಸೂಚಿಗಳಂತೆ ಅಂತರ್ಜಲ ತೆಗೆಯಲು ಟ್ಯಾಂಕರ್‌ನವರು ಎನ್‌ಒಸಿ ಪಡೆಯಬೇಕಾಗುತ್ತದೆ.

ಕೈಗಾರಿಕೆಗಳಿಗೂ ಟ್ಯಾಂಕರ್ ನೀರು: ಟ್ಯಾಂಕರ್ ನೀರನ್ನು ಗೃಹ ಬಳಕೆ ಮತ್ತು ಕುಡಿಯುವುದಕ್ಕೆ ಮಾತ್ರ ಬಳಸಬಹುದಾಗಿದೆ ಎಂದು ಮಾರ್ಗಸೂಚಿಯಲ್ಲಿದೆ. ಈ ನಿಯಮ ಅಂತರ್ಜಲದ ನಿರ್ವಹಣೆಯ ದೃಷ್ಟಿಯಿಂದ ಸೂಕ್ತವಾಗಿಯೂ ಇದೆ. ಆದರೆ, ಕೈಗಾರಿಕಾ ಅಭಿವೃದ್ಧಿಯ ಹೆಸರಿನಲ್ಲಿ ರಾಜ್ಯದಲ್ಲಿ ಈ ನಿಯಮಕ್ಕೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಕೆಲವು ಪ್ರದೇಶಗಳಲ್ಲಿ ನೀರಿನ ಕೊರತೆ ಇದೆ. ಇನ್ನೂ ಕೆಲವು ಕಡೆಗಳಲ್ಲಿನ ಅಂತರ್ಜಲ ಹೆಚ್ಚು ಲವಣಾಂಶಗಳಿಂದ ಕೂಡಿದ್ದು, ಕೈಗಾರಿಕೆಗಳ ಬಳಕೆಗೆ ಅರ್ಹವಾಗಿರುವುದಿಲ್ಲ; 'ಇದರಿಂದ ಕೈಗಾರಿಕೆ ಆಧಾರಿತ ಆರ್ಥಿಕತೆಗೆ ಪೆಟ್ಟಾಗುವ ಸಾಧ್ಯತೆ ಇರುವುದರಿಂದ ಟ್ಯಾಂಕರ್ ನೀರನ್ನು ಕೈಗಾರಿಕೆ, ಗಣಿಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಬಳಸಲು ಅನುಮತಿ (ನಿರಾಕ್ಷೇಪಣಾ ಪತ್ರ) ನೀಡಬಹುದು' ಎಂದು ಮಾರ್ಗಸೂಚಿಯನ್ನು ರಾಜ್ಯದಲ್ಲಿ ಬದಲಾವಣೆ ಮಾಡಲು ನಿರ್ಧರಿಸಿದೆ.

ಅತಿ ಬಳಕೆ ತಾಲ್ಲೂಕುಗಳಲ್ಲೂ ಅನುಮತಿ: ರಾಜ್ಯದಲ್ಲಿ ಪ್ರಸ್ತುತ ಹಲವು ತಾಲ್ಲೂಕುಗಳಲ್ಲಿ ಅಂತರ್ಜಲವನ್ನು ಮಿತಿ ಮೀರಿ ಬಳಸಲಾಗುತ್ತಿದೆ. ಹಲವು ತಾಲ್ಲೂಕುಗಳಲ್ಲಿ ಅಂತರ್ಜಲ ಅಪಾಯಕಾರಿ ಮಟ್ಟದಲ್ಲಿದೆ. ಈ ತಾಲ್ಲೂಕುಗಳಲ್ಲಿ ಅಂತರ್ಜಲದ ಲಭ್ಯತೆಯ ಪ್ರಮಾಣ ಅತಿ ಕಡಿಮೆ ಇದ್ದು, ಈಗಾಗಲೇ ಅಪಾಯಕಾರಿ ಸ್ಥಿತಿ ಇದೆ. ಹೀಗಾಗಿ, ಇಂತಹ ತಾಲ್ಲೂಕುಗಳಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳನ್ನು ಹೊರತುಪಡಿಸಿ ಕೈಗಾರಿಕೆಗಳ ವಿಸ್ತರಣೆಗೆ ಮತ್ತು ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡಬಾರದು ಎಂದು ಕೇಂದ್ರದ ಮಾರ್ಗಸೂಚಿಯಲ್ಲಿದೆ. ಅದಕ್ಕೆ ರಾಜ್ಯದಲ್ಲಿ ತಿದ್ದುಪಡಿ ತರಲಾಗುತ್ತಿದ್ದು, ಕೈಗಾರಿಕೆಗಳ ಅಭಿವೃದ್ಧಿಯ ದೃಷ್ಟಿಯಿಂದ ಕೈಗಾರಿಕೆಗಳ ವಿಸ್ತರಣೆ ಮತ್ತು ಹೊಸ ಕೈಗಾರಿಕೆಗಳ ಸ್ಥಾಪನೆಗೆ (ನಿರ್ದಿಷ್ಟಪಡಿಸಿದ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು) ಅನುಮತಿ ನೀಡಬಹುದು ಎಂದು ನಿಯಮ ಬದಲಿಸಲಾಗಿದೆ. ಇದರಿಂದ ಮಾರ್ಗಸೂಚಿಗಳ ಆಶಯಕ್ಕೆ ವಿರುದ್ಧವಾಗಿ ಅಂತರ್ಜಲ ಬಳಕೆ ಹೆಚ್ಚಾಗಿ, ಭವಿಷ್ಯದಲ್ಲಿ ಕುಡಿಯುವ ನೀರಿಗೂ ಭಾರಿ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು ಎನ್ನುವ ಕಳವಳ ವ್ಯಕ್ತವಾಗಿದೆ.

ಭ್ರಷ್ಟಾಚಾರದಿಂದ ಗಂಭೀರ ಪರಿಸ್ಥಿತಿ ಸಾಧ್ಯತೆ: ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ನಿಯಮ ಜಾರಿಯ ಉಸ್ತುವಾರಿಗೆ ಕರ್ನಾಟಕ ಅಂತರ್ಜಲ ಪ್ರಾಧಿಕಾರ ರಚಿಸಲಾಗಿದೆ. ಅಂತರ್ಜಲ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಂತರ್ಜಲ ಸಮಿತಿಗಳು ಇರುತ್ತವೆ. ಅದೇ ರೀತಿ ಬೆಂಗಳೂರು ವ್ಯಾಪ್ತಿಯಲ್ಲಿ ಜಲಮಂಡಳಿಯ ಪ್ರಧಾನ ಮುಖ್ಯ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ಇರುತ್ತದೆ. ವಾಣಿಜ್ಯ, ಕೈಗಾರಿಕೆ, ಮನರಂಜನೆ ಮತ್ತು ಗಣಿಗಾರಿಕೆ ಮೂಲಸೌಕರ್ಯ ಅಭಿವೃದ್ಧಿ ವಿಚಾರದಲ್ಲಿ ಅಂತರ್ಜಲ ನಿರ್ವಹಣೆ ಮತ್ತು ನಿಯಂತ್ರಣ ಮಾಡಲು ನಿಯೋಜಿತ ಅಂತರ್ಜಲ ಸಮಿತಿ ಸದಸ್ಯರಿಗೆ ಅಧಿಕಾರ ನೀಡಲಾಗಿದೆ. ನಿಯಮ ಉಲ್ಲಂಘಿಸುವವರ ಮೇಲೆ ಕ್ರಮ ಜರುಗಿಸುವುದು ಇವರ ಜವಾಬ್ದಾರಿಯಾಗಿದೆ. ಈ ವಿಚಾರದಲ್ಲಿ ಭ್ರಷ್ಟಾಚಾರ ನಡೆಯಲು ಅವಕಾಶವಿದ್ದು, ಅಧಿಕಾರಿಗಳು ಅಂತರ್ಜಲದ ವಾಣಿಜ್ಯ ಬಳಕೆಗೆ, ಕೈಗಾರಿಕಾ ಬಳಕೆಗೆ ನಿಯಮ ಮೀರಿ ಅನುಮತಿ ನೀಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗೇನಾದರೂ ಆದರೆ, ಅಂತರ್ಜಲಕ್ಕೆ ಮತ್ತಷ್ಟು ಕುತ್ತು ಬರಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ. ಕೇಂದ್ರದ ಮಾರ್ಗಸೂಚಿಯಂತೆ ನಿಯಮ ಮೀರಿದವರಿಂದ ಸಂಗ್ರಹಿಸಬೇಕಾದ ದಂಡದ ಪ್ರಮಾಣವನ್ನೂ ರಾಜ್ಯದಲ್ಲಿ ಕಡಿಮೆ ಮಾಡಲಾಗಿದೆ.

ಅಂತರ್ಜಲದ ಅಧಿಕೃತ ಬಳಕೆಯಿಂದ ಸಂಗ್ರಹವಾಗುವ ಶುಲ್ಕವನ್ನು ಮತ್ತು ಅನಧಿಕೃತ ಬಳಕೆಯಿಂದ ಸಂಗ್ರಹವಾಗುವ ದಂಡವನ್ನು ಜಲ ಮರುಪೂರಣ, ಜಾಗೃತಿ ಮತ್ತಿತರ ಕಾರ್ಯಗಳಿಗೆ ಬಳಸುವುದು ಸರ್ಕಾರದ ಉದ್ದೇಶ. ನಿಯಮದಂತೆಯೇ ನಡೆದರೆ ಉತ್ತಮ ಪರಿಣಾಮ ಕಾಣಬಹುದಾಗಿದೆ. ಆದರೆ, ವಾಸ್ತವ ಸ್ಥಿತಿಗತಿ ಅವಲೋಕಿಸಿದರೆ, ಇವೆಲ್ಲಾ ಎಷ್ಟರಮಟ್ಟಿಗೆ ಕಾರ್ಯಗತವಾಗಲಿವೆ ಎನ್ನುವ ಪ್ರಶ್ನೆ ಮೂಡಿದೆ.

ವಾಸ್ತವದಲ್ಲಿ, ನೀರು ಮಾರಾಟ ಮತ್ತು ಅಂತರ್ಜಲ ಬಳಕೆ ವಿಚಾರದಲ್ಲಿ ನಿಯಮಗಳನ್ನು ಮೀರಿ ನಡೆದುಕೊಳ್ಳುತ್ತಿರುವುದು, ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವುದು ವರದಿಯಾಗುತ್ತಿದೆ. ಪ್ರಸ್ತುತ ಮಾರ್ಗಸೂಚಿಗಳ ವಿಚಾರದಲ್ಲಿಯೂ ಇದೇ ಪರಿಸ್ಥಿತಿ ಮುಂದುವರಿದರೆ, ಭಾರಿ ಅಪಾಯ ಕಟ್ಟಿಟ್ಟ ಬುತ್ತಿ ಎಂದು ವಿಶ್ಲೇಷಿಸಲಾಗುತ್ತಿದೆ.



ಮಿತಿ ಮೀರಿದ ಬಳಕೆ ಎಲ್ಲಿ?

2024ರ ಮಾರ್ಚ್‌ನ ಅಂಕಿಅಂಶಗಳ ಪ್ರಕಾರ, ರಾಜ್ಯದ 15 ಜಿಲ್ಲೆಗಳ 44 ತಾಲ್ಲೂಕುಗಳಲ್ಲಿ ಅಂತರ್ಜಲವನ್ನು ಮಿತಿ ಮೀರಿ ಬಳಸಲಾಗುತ್ತಿದೆ.

ಬೆಂಗಳೂರು ನಗರದ ಐದು ತಾಲ್ಲೂಕುಗಳು, ಬೆಂಗಳೂರು ಗ್ರಾಮಾಂತರದ ನಾಲ್ಕು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ತಲಾ ಆರು, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ತಲಾ ಐದು, ಬೆಳಗಾವಿ, ಚಾಮರಾಜನಗರ, ದಾವಣಗೆರೆ ಮತ್ತು ವಿಜಯಪುರ ಜಿಲ್ಲೆಗಳ ತಲಾ ಎರಡು ತಾಲ್ಲೂಕುಗಳು, ಬಾಗಲಕೋಟೆ, ಚಿಕ್ಕಮಗಳೂರು, ಗದಗ, ಹಾಸನ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ (ರಾಮನಗರ) ತಲಾ ಒಂದೊಂದು ತಾಲ್ಲೂಕು ಅಂತರ್ಜಲದ ಮಿತಿಮೀರಿ ಬಳಕೆ ಹೊಂದಿರುವ ತಾಲ್ಲೂಕುಗಳ ಪಟ್ಟಿಯಲ್ಲಿವೆ.

ಈ ತಾಲ್ಲೂಕುಗಳಲ್ಲಿ ವಾರ್ಷಿಕವಾಗಿ ಆಗುತ್ತಿರುವ ಜಲ ಮರುಪೂರಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಂತರ್ಜಲವನ್ನು ಬಳಸಲಾಗುತ್ತಿದೆ.

15 ತಾಲ್ಲೂಕುಗಳಲ್ಲಿ ಅಪಾಯಕಾರಿ ಸ್ಥಿತಿ: 12 ಜಿಲ್ಲೆಗಳ 15 ತಾಲ್ಲೂಕುಗಳಲ್ಲಿ ಅಂತರ್ಜಲದ ಸ್ಥಿತಿ ಅಪಾಯಕಾರಿ ಮಟ್ಟದಲ್ಲಿದೆ ಎಂದು ಹೇಳುತ್ತವೆ ಸರ್ಕಾರದ ಅಂಕಿ ಅಂಶಗಳು. ಬಾಗಲಕೋಟೆ, ಕೊಪ್ಪಳ, ಬೆಂಗಳೂರು ದಕ್ಷಿಣ ಜಿಲ್ಲೆಗಳ ತಲಾ ಎರಡು ತಾಲ್ಲೂಕುಗಳು, ಬೆಳಗಾವಿ, ಚಿಕ್ಕಮಗಳೂರು, ದಾವಣಗೆರೆ, ಗದಗ, ಕಲಬುರಗಿ, ಹಾಸನ, ಹಾವೇರಿ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳ ತಲಾ ಒಂದು ತಾಲ್ಲೂಕಿನಲ್ಲಿ ಈ ಸ್ಥಿತಿ ಇದೆ. ಇಲ್ಲಿ ವಾರ್ಷಿಕವಾಗಿ ಭೂಮಿಗೆ ಆಗುತ್ತಿರುವ ಜಲ ಮರುಪೂರಣದ ಪ್ರಮಾಣದಲ್ಲಿ ಶೇ 90ರಿಂದ ಶೇ 100ರಷ್ಟು ಅಂತರ್ಜಲವನ್ನು ಬಳಸಲಾಗುತ್ತಿದೆ.

'ಪರ್ಯಾಯ ಮಾರ್ಗ ಹುಡುಕಲಿ'

ಅಂತರ್ಜಲ ಮಿತಿ ಮೀರಿದ ಬಳಕೆ ಇರುವ ತಾಲ್ಲೂಕುಗಳಲ್ಲಿ ವಾರ್ಷಿಕ ಮಳೆ ಪ್ರಮಾಣ ತುಂಬಾ ಕಡಿಮೆ ಇದೆ. 45 ಸೆಂ.ಮೀನಿಂದ 60 ಸೆಂ.ಮೀನಷ್ಟು ಮಾತ್ರ ಮಳೆಯಾಗುತ್ತದೆ. ಈ ಪ್ರದೇಶದಲ್ಲಿ ಮೇಲ್ಮೈ ಮಣ್ಣು ಕಡಿಮೆ ಇದ್ದು, ಭೂಮಿಯ ಅಡಿಯಲ್ಲಿ ಶಿಲಾ ಪದರ ಹೆಚ್ಚಿದೆ. ಹಾಗಾಗಿ ಇಲ್ಲಿ ಅಂತರ್ಜಲದ ಮಟ್ಟ ಕಡಿಮೆ. ಜತೆಗೆ, ಈ ತಾಲ್ಲೂಕುಗಳಲ್ಲಿ ವಾರ್ಷಿಕವಾಗಿ ಭೂಮಿಗೆ ಆಗುವ ಮಳೆ ನೀರಿನ ಮರುಪೂರಣಕ್ಕೂ ಅಂತರ್ಜಲದ ಬಳಕೆಗೂ ಅಜಗಜಾಂತರವಿದೆ. ಪರಿಸ್ಥಿತಿ ಹೀಗಿರುವಾಗ ಕೈಗಾರಿಕೆಗಳಿಗೆ ಕೊಳವೆಬಾವಿಗಳ ನೀರು ಬಳಸುವುದರಿಂದ ಅಂತರ್ಜಲ ಇನ್ನಷ್ಟು ಕ್ಷೀಣಿಸಲಿದೆ.

ಈಗಾಗಲೇ ಈ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ, ಕೃಷಿ ಉದ್ದೇಶದ ಬಳಕೆಗೆ ತುಂಬಾ ಪೈಪೋಟಿ ಇದೆ. ಉದಾಹರಣೆಗೆ, ನಾವೀಗ ಜುಲೈ ಅಂತ್ಯದಲ್ಲಿದ್ದೇವೆ. ಕರಾವಳಿ, ಮಲೆನಾಡು ಹಾಗೂ ರಾಜ್ಯದ ಹಲವೆಡೆ ಮಳೆ ಅಬ್ಬರಿಸುತ್ತಿದೆ. ಆದರೆ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಐಮಂಗಲ ಹೋಬಳಿಯಲ್ಲಿ ಕೆಲವು ದಿನಗಳಿಂದ ಸುಮಾರು 25 ಬೋರ್‌ವೆಲ್ ಯಂತ್ರಗಳು ಎಗ್ಗಿಲ್ಲದೇ ಕೊಳವೆ ಬಾವಿಗಳನ್ನು ಕೊರೆಯುತ್ತಿವೆ. 1000 ಅಡಿಗೂ ಹೆಚ್ಚು ಆಳಕ್ಕೆ ಕೊರೆಯಲಾಗುತ್ತಿದೆ. ಇಲ್ಲಿ ಮಳೆ ಬಂದಿಲ್ಲ. ರೈತರು ಬಿತ್ತನೆ ಮಾಡಿರುವ ಈರುಳ್ಳಿ ಬೆಳೆ ಒಣಗುತ್ತಿದೆ. ಅವುಗಳಿಗೆ ನೀರುಣಿಸುವ ಏಕೈಕ ಉದ್ದೇಶದಿಂದ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ನಿಯಮಗಳನ್ನು ಸಡಿಲಿಸಿ, ಕೈಗಾರಿಕೆಗಳಿಗೆ ಕೊಳವೆಬಾವಿಗಳ ನೀರನ್ನು ಪೂರೈಸಲು ಅವಕಾಶ ಕಲ್ಪಿಸಿದರೆ ಅದು ವಾಣಿಜ್ಯೀಕರಣ ಮಾಡಿದಂತಾಗುತ್ತದೆ. ಅದಕ್ಕೆ ಪೈಪೋಟಿ ಶುರು ಆಗುತ್ತದೆ. ಇದರಿಂದ ಅಂತರ್ಜಲಕ್ಕೆ ಇನ್ನಷ್ಟು ಧಕ್ಕೆಯಾಗುತ್ತದೆ. ನೀತಿ ನಿಯಮಗಳಲ್ಲಿ ಬದಲಾವಣೆ ಮಾಡುವುದಕ್ಕಿಂತ ಸರ್ಕಾರ ಪರ್ಯಾಯ ದಾರಿಗಳ ಬಗ್ಗೆ ಗಮನಹರಿಸಬೇಕು. ಟ್ಯಾಂಕರ್‌ನಲ್ಲಿ ನೀರು ಪೂರೈಸುವವರು ಮಳೆಗಾಲದಲ್ಲಿ ಕೆರೆ, ಹೊಂಡ ಅಥವಾ ಇನ್ನಿತರ ವಿಧಾನಗಳಿಂದ ಮಳೆ ನೀರು ಸಂಗ್ರಹಿಸಲಿ. ಆ ನೀರನ್ನು ಕೈಗಾರಿಕೆಗೆ ಪೂರೈಸಲಿ.

ಇದು ಒಂದು ವಿಧಾನವಾದರೆ, ನಗರ ಪಟ್ಟಣಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸಿದರೆ ಖಂಡಿತವಾಗಿಯೂ ಆ ನೀರನ್ನು ಕೈಗಾರಿಕೆಗಳಿಗೆ ಬಳಸಬಹುದು. ಇದಲ್ಲದೇ ಶುದ್ಧ ನೀರು ಘಟಕಗಳಿಂದ ತ್ಯಾಜ್ಯವಾಗಿ ಹೊರಬರುವ ನೀರನ್ನೂ ಕೂಡ ಕೈಗಾರಿಕಾ ಉದ್ದೇಶಕ್ಕೆ ಬಳಸಬಹುದು. ಸರ್ಕಾರ ಇವುಗಳ ಬಗ್ಗೆ ಚಿಂತಿಸಬೇಕು.



ಎನ್.ಜೆ.ದೇವರಾಜ ರೆಡ್ಡಿ, ಜಲತಜ್ಞ



ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

'ಸಂವಿಧಾನ: 'ಜಾತ್ಯತೀತ, 'ಸಮಾಜವಾದಿ' ಪದಗಳನ್ನು ತೆಗೆಯುವ ಉದ್ದೇಶ ಇಲ್ಲ'

ನವದೆಹಲಿ (ಪಿಟಿಐ): 'ಸಂವಿಧಾನದ ಪ್ರಸ್ತಾವನೆಯಿಂದ 'ಜಾತ್ಯತೀತ' ಹಾಗೂ 'ಸಮಾಜವಾದಿ' ಪದಗಳನ್ನು ತೆಗೆಯುವ ಅಥವಾ ಮರುಪರಿಶೀಲಿಸುವ ಯಾವುದೇ ಯೋಜನೆ ಇಲ್ಲವೇ ಉದ್ದೇಶ ತಾನು ಹೊಂದಿಲ್ಲ' ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ.

ಪ್ರಶ್ನೆಯೊಂದಕ್ಕೆ ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿರುವ ಕಾನೂನು ಸಚಿವ ಅರ್ಜುನ ರಾಮ್ ಮೇಘವಾಲ್, 'ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಈ ಪದಗಳನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಲಾಗಿದೆ. ಆದರೆ, ಈ ಪದಗಳನ್ನು ಮರುಪರಿಶೀಲನೆ ಮಾಡುವ ಅಥವಾ ಪ್ರಸ್ತಾವನೆಯಿಂದ ತೆಗೆದು ಹಾಕುವ ವಿಚಾರ ಇಲ್ಲ' ಎಂದು ಹೇಳಿದ್ದಾರೆ.

'ಈ ಎರಡು ಪದಗಳನ್ನು ಸಂವಿಧಾನದ ಪ್ರಸ್ತಾವನೆಯಿಂದ ತೆಗೆದು ಹಾಕುವುದಕ್ಕೆ ಸಂಬಂಧಿಸಿ ಸರ್ಕಾರವು 'ಔಪಚಾರಿಕ'ವಾಗಿ ಯಾವುದೇ ಕಾನೂನು ಅಥವಾ ಸಾಂವಿಧಾನಿಕ ಪ್ರಕ್ರಿಯೆ ಆರಂಭಿಸಿಲ್ಲ' ಎಂದೂ ಹೇಳಿದ್ದಾರೆ.

'ಈ ವಿಚಾರ ಕುರಿತು ಸಾರ್ವಜನಿಕ ವಲಯ ಮತ್ತು ರಾಜಕೀಯ ಪಕ್ಷಗಳ ಮೊಗಸಾಲೆಗಳಲ್ಲಿ ಚರ್ಚೆಗಳು ಅಥವಾ ಸಂವಾದಗಳು ನಡೆದಿರಬಹುದು. ಆದರೆ, ಈ ಪದಗಳನ್ನು ಸಂವಿಧಾನದ ಪ್ರಸ್ತಾವನೆಯಿಂದ ತೆಗೆದು ಹಾಕುವ ಕುರಿತು ಪ್ರಸ್ತುತ ಯಾವುದೇ ಯೋಜನೆ ಅಥವಾ ಉದ್ದೇಶ ಇಲ್ಲ ಎಂಬುದೇ ಸರ್ಕಾರದ ನಿಲುವಾಗಿದೆ' ಎಂದು ಮೇಘವಾಲ್ ಹೇಳಿದ್ದಾರೆ.

ಪಂಜಾಬ್ ನಕಲಿ ಎನ್‌ಕೌಂಟರ್: ನಿವೃತ್ತ ಪೊಲೀಸ್ ಅಧಿಕಾರಿಗೆ 10 ವರ್ಷ ಜೈಲು

ಚಂಡೀಗಢ (ಪಿಟಿಐ): ಮೊಹಾಲಿಯ ಸಿಬಿಐ ನ್ಯಾಯಾಲಯವೊಂದು 1993ರ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಪಂಜಾಬ್‌ನ ನಿವೃತ್ತ ಪೊಲೀಸ್ ಅಧಿಕಾರಿಗೆ 10 ವರ್ಷಗಳ ಕಠಿಣ ಸೆರೆವಾಸ ಮತ್ತು ₹50 ಸಾವಿರ ದಂಡ ವಿಧಿಸಿದೆ. ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಗುಂಡಿಕ್ಕಿ ಕೊಂದು, ಅವರನ್ನು ಅಪರಿಚಿತ ಉಗ್ರಗಾಮಿಗಳು ಎಂದು ಉಲ್ಲೇಖಿಸಿ ಅಂತ್ಯಕ್ರಿಯೆ ನಡೆಸಲಾಗಿದ್ದ ಪ್ರಕರಣವಿದು.

ಶಿಕ್ಷೆಗೊಳಗಾದ ಅಪರಾಧಿ ಪರಂಜಿತ್ ಸಿಂಗ್ (67) ಘಟನೆ ವೇಳೆ ಅಮೃತಸರದ ಬಿಯಾಸ್ ಠಾಣಾಧಿಕಾರಿಯಾಗಿದ್ದರು ಮತ್ತು ಎಸ್‌ಪಿಯಾಗಿ ನಿವೃತ್ತಿ ಹೊಂದಿದ್ದರು.

ಬುಧವಾರದ ತನ್ನ ಆದೇಶದಲ್ಲಿ ನ್ಯಾಯಾಲಯವು ಇತರ ಮೂವರು ಆರೋಪಿಗಳಾದ, ಆಗಿನ ಇನ್‌ಸ್ಪೆಕ್ಟರ್ ಧರಂ ಸಿಂಗ್ (77), ಆಗಿನ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಕಾಶ್ಮೀರ್ ಸಿಂಗ್ (69) ಮತ್ತು ಆಗಿನ ಎಎಸ್‌ಐ ದರ್ಬಾರ ಸಿಂಗ್ (71) ಅವರನ್ನು ಪ್ರಕರಣದಿಂದ ಖುಲಾಸೆಗೊಳಿಸಿದೆ. ಮತ್ತೊಬ್ಬ ಆರೋಪಿ ಆಗಿನ ಎಸ್‌ಐ ರಾಮ್ ಮುಭಯಾ ಪ್ರಕರಣದ ವಿಚಾರಣೆ ಸಮಯದಲ್ಲಿ ಮೃತಪಟ್ಟಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜನರ ಗುಂಪೊಂದು ವ್ಯಾನ್‌ನಲ್ಲಿರುವ ಕ್ಯಾನ್‌ಗಳಿಂದ ಹಾಲನ್ನು ರಸ್ತೆಯ ಮೇಲೆ ಚೆಲ್ಲುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಾಲಿನ ವ್ಯಾಪಾರಿಯೊಂದಿಗೆ ಜಗಳವಾಗಿದ್ದರಿಂದ ರೊಚ್ಚಿಗೆದ್ದ ಕಾವಡ್ ಯಾತ್ರಾರ್ಥಿಗಳು ಹಾಲನ್ನು ರಸ್ತೆ ಮೇಲೆ ಚೆಲ್ಲಿದರು ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಅವನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ಮಾಡಿದಾಗ, ಈ ವಿಡಿಯೊ ಅನ್ನು ಹಲವರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಫೇಸ್‌ಬುಕ್‌ನ 'ಪಂಜಾಬ್ ಕೇಸರಿ ಹರಿಯಾಣ' ಎನ್ನುವ ಖಾತೆಯಲ್ಲಿ ಇದೇ ವಿಡಿಯೊ ಅಪ್‌ಲೋಡ್ ಮಾಡಿರುವುದು ಕಂಡಿತು. ಗುಜರಾತ್‌ನ ಸಬರಕಂಠ ಜಿಲ್ಲೆಯಲ್ಲಿ ಇದೇ ಜುಲೈ 20ರಂದು ಹೈನುಗಾರರು ಹಾಲಿನ ದರ ಹೆಚ್ಚಳಕ್ಕೆ ಒತ್ತಾಯಿಸಿದರು; ಈ ವೇಳೆ ಅವರು ಹಾಲನ್ನು ರಸ್ತೆ ಮೇಲೆ ಚೆಲ್ಲಿ ಆಕ್ರೋಶ ವ್ಯಕ್ತಪಡಿಸಿದರು ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ಗುಜರಾತ್‌ನ ಹೈನುಗಾರರ ವಿಡಿಯೊ ಅನ್ನು ಯಾತ್ರಾರ್ಥಿಗಳ ವಿಡಿಯೊ ಎಂದು ಸುಳ್ಳು ಪ್ರತಿಪಾದನೆಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಹಿಂಗಾದರೆ, ಹಂಗಾದರೆ...

ನುಡಿ ಬೆಳಗು

ದಯಾ ಗಂಗನಘಟ್ಟ

ಜಪಾನೀ ಜನಪದ ಕತೆಯೊಂದಿದೆ. ಅದರಂತೆ ಜ್ಯೋತಿಷಿಯೊಬ್ಬ ಒಮ್ಮೆ, 'ಈ ಊರಿನಲ್ಲಿ ಇನ್ನು ಹನ್ನೆರಡು ವರ್ಷ ಮಳೆಯೇ ಆಗುವುದಿಲ್ಲ' ಎಂದು ಭವಿಷ್ಯ ಹೇಳಿದ. ಒಬ್ಬ ರೈತ ಯೋಚಿಸಿದ. 'ಹನ್ನೆರಡು ವರ್ಷಗಳವರೆಗೆ ಮಳೆಯಾಗದಿದ್ದರೆ ನನಗೆ ನನ್ನ ಒಕ್ಕಲುತನದ ಕೆಲಸವೇ ಮರೆತು ಹೋದರೆ ಏನು ಗತಿ? ಅಯ್ಯೋ ಹಾಗೆ ಆಗಬಾರದು' ಎಂದುಕೊಂಡವನೇ ತನ್ನ ಗುದ್ದಲಿ ತೆಗೆದುಕೊಂಡು ಒಣಗಿದ ಭೂಮಿಯನ್ನೇ ಕಡಿಯತೊಡಗಿದ. ಅದೇ ಸಮಯದಲ್ಲಿ ಆಕಾಶ ಮಾರ್ಗದಲ್ಲಿ ತೇಲಿ ಹೋಗುತ್ತಿದ್ದ ಮೋಡಗಳಿಗೆ ರೈತ ಒಣಗಿದ ಹೊಲವನ್ನು ಕಡಿಯುವುದನ್ನು ಕಂಡು ವಿಚಿತ್ರವೆನಿಸಿತು. ಆಶ್ಚರ್ಯವಾಯಿತು. ಒಂದು ಮೋಡ ಅವನ ಬಳಿಗೆ ಬಂದು ಕಾರಣವನ್ನು ಕೇಳಿತು. ರೈತ ವಿಷಯ ಹೇಳಿದ. 'ನನಗೆ ಬರುವ ಏಕೈಕ ಕೃಷಿ ಕೆಲಸವನ್ನೂ ಮಾಡದೇ ಹೇಗಿರಲಿ' ಎಂದ. ರೈತನ ಮಾತು ಕೇಳಿ ಮೋಡ ಯೋಚಿಸತೊಡಗಿತು. 'ಹನ್ನೆರಡು ವರ್ಷ ನಾನು ಮಳೆಗೆರೆಯದಿದ್ದರೆ ನನಗೂ ಮಳೆಗರೆಯುವುದೇ ಮರೆತು ಹೋದೀತಲ್ಲ. ಹಾಗಾದರೆ ನನಗೆ ತಾನೇ ಬೇರೇನು ಕೆಲಸ ಉಳಿಯುತ್ತದೆ' ಎಂದುಕೊಂಡು ಎಲ್ಲ ಮೋಡಗಳ ಜೊತೆ ಸೇರಿ ಮಳೆ ಸುರಿಸುವ ಕೆಲಸ ಮಾಡತೊಡಗಿತು.

ಒಂದು ವೇಳೆ ರೈತ ಜ್ಯೋತಿಷ್ಯ ನಂಬಿ ಹತಾಶೆಯಿಂದ ತನ್ನ ಕಾಯಕದಿಂದ ದೂರ ಸರಿದಿದ್ದರೆ ಕತೆ ಬೇರೆಯೇ ಆಗುತ್ತಿತ್ತು. ಜೀವನದಲ್ಲಿ ಕಷ್ಟಗಳು ಬರುತ್ತವೆ. ಆದರೆ ಅವುಗಳನ್ನು ಎದುರಿಸಲು ಭರವಸೆ ಅವಶ್ಯಕ. ಹಂಗಾದರೆ, ಹಿಂಗಾದರೆ ಎಂದುಕೊಂಡು ಹತಾಶರಾಗಿ ಭರವಸೆ ಕಳೆದುಕೊಳ್ಳದೆ ಇರುವುದರಿಂದ ಕಷ್ಟದ ಸಮಯದಲ್ಲೂ ಆಶಾವಾದಿಗಳಾಗಿರಲು ಸಾಧ್ಯವಾಗುತ್ತದೆ ಮತ್ತು ಕಷ್ಟಗಳಿಂದ ಹೊರಬರಲು ಸಾಧ್ಯವಾಗುತ್ತದೆ. ಕೆಲವು ಬಾರಿ ನಾವು ಯೋಚಿಸುವುದಕ್ಕಿಂತಲೂ ಹೆಚ್ಚು ಭಿನ್ನವಾಗಿ ಘಟನೆಗಳು ಬದುಕಿನಲ್ಲಿ ಸಂಭವಿಸುತ್ತವೆ. ಅವು ಸಂಭವಿಸುವವರೆಗೆ ಅಥವಾ ನಾವು ಅವುಗಳನ್ನು ಮಾಡುವವರೆಗೆ ಭರವಸೆಯನ್ನು ಕಳೆದುಕೊಳ್ಳಬಾರದು. ಆ ಸಮಯ ನಮಗೆ ಚೇತರಿಸಿಕೊಳ್ಳಲು ಪ್ರೇರೇಪಿಸುತ್ತದೆ.

ಸವಾಲುಗಳು ಯಾವತ್ತಿಗೂ ಧನಾತ್ಮಕ ಫಲಿತಾಂಶಗಳಿಗೆ ಕಾರಣವಾಗುತ್ತವೆ. ಆಗ ನಮ್ಮ ಮೇಲೆ ನಾವಿಡುವ ಭರವಸೆ ಮತ್ತು ನಮ್ಮ ಪಾಡಿಗೆ ನಾವು ಮಾಡುವ ಕೆಲಸವಷ್ಟೇ ನಾವು ಬಲವಾಗಿ ಉಳಿಯಲು ಮತ್ತು ಪರಿಶ್ರಮಿಸಲು ನಮ್ಮನ್ನು ಪ್ರೋತ್ಸಾಹಿಸುತ್ತದೆ. ಮಾಡುವ ಕೆಲಸದಲ್ಲಿ ನೂರಕ್ಕೆ ನೂರು ಶ್ರದ್ಧೆ ಇಟ್ಟರೆ ಸಾಕು ಅರ್ಥ ಯಶಸ್ಸು ಬೆನ್ನು ಹತ್ತಿತು ಅಂತಲೇ ಅರ್ಥ. ಮುಂದಿನದು ತಾನಾಗೇ ಸಲೀಸಾಗುತ್ತದೆ.

ಗುಂಡಣ್ಣ

ಪದಬಂಧ 6114

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಮರ್ಯಾದೆಯಿರುವ ವಸ್ತುಸ್ಥಿತಿ (4)
3.ಮಧುರವಾಗಿರುವ ತುಟಿ (3)
4.ಬಿಡುವು ಈ ರೀತಿ ಬಂದಿದೆ (4)
6.ಒಗ್ಗಟ್ಟು ಇಲ್ಲಿ ಕಾಣುತ್ತಿದೆ (3)
8.ರಾತ್ರಿ ವೇಳೆ ಸಂಚರಿಸುವ ಕಳ್ಳ ಪಿಶಾಚಿ ಇತ್ಯಾದಿ (4)
9.ಪದ ಮತ್ತು ಅದರರ್ಥವನ್ನು ವಿವರಿಸುವ ಪುಸ್ತಕ (4)
11.ಗಂಡು ಕುರಿ ಇಲ್ಲಿದೆ (3)
14.ಶ್ರೀರಾಮನ ನೆಚ್ಚಿನ ಬಂಟ (4)
16.ವಿಷ್ಣುವಿನ ಮೂರನೆಯ ಅವತಾರ (3)
17.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ನೆತ್ತರು ಹರಿಸಿದಾಗಲೇ ವೈರಾಗ್ಯವುಳ್ಳವನು ಕಂಡಾನು! (3)
2.ವ್ಯಸನದಲ್ಲೇ ಹೊಸತನ್ನು ಹುಡುಕಿ! (2)
3.ಒಪ್ಪವಾಗಿ ಮರ್ಯಾದೆಯೊಡನಿರುವ ಶಂಕೆ! (4)
5.ನಾಸಿಕಕ್ಕೇರಿಸಿಕೊಳ್ಳುವ ತಂಬಾಕಿನ ಹುಡಿ (2)
6.ನಯನಾಜೂಕು ಇಲ್ಲದವನು (3)
7.ತಂದೆತಾಯಿ ಇರುವ ಊರು (3)
10.ಮಲಗುವ ಮನೆ (4)
12.ತೃಷೆ ಹೀಗೆ ಬಂದಿದೆ (2)
13ಕೊನೆಗಿದ್ದವರ ನೀಡಿದ ಅನವಶ್ಯಕ ವಿವರಣೆ (3)
15.ಕತ್ತಲು ಇಲ್ಲಿ ಆವರಿಸಿದೆ (2)

6113ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕೊರವಂಜಿ 3.ಹಲುಬೆ 5.ಗಣಪ 7.ಉಸಿರು 8.ವಿರಹತಾಪ 11.ಸಾರಣೆ 12.ಮಜ್ಜಿಗೆ 15.ಗಹ್ವರ 16.ನಡುಪ್ರಾಯ

ಮೇಲಿಂದ ಕೆಳಕ್ಕೆ: 1.ಕೊಳಗ 2.ಜಿಡ್ಡು 3.ಹಗರು 4.ಬೆನ್ನುತಟ್ಟು 6.ಪಲ್ಲವಿ 7.ಉದಾಹರಣೆ 9.ಪರಮ 10.ಕವಾಡಿಗ 11.ಸಾವಿರ 13.ಗೆಳೆಯ 14.ಜ್ಞಾನ

ಸುಡೊಕು 6498

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

6497 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಜುಲೈ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪ್ರತಿಪದ್ ಗಂ. 23-24 **ನಕ್ಷತ್ರ:** ಪುಷ್ಯ ಗಂ. 16-01 **ಯೋಗ:** ವಜ್ರ ಗಂ. 07-28 ಕರಣ: ಕಿಂಸ್ತುಘ್ನ ಗಂ.11-58, ಕರ್ಕಾಟಕ ಮಾಸದ 09 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00 **ಸೂರ್ಯೋದಯ:** 06-18 **ಸೂರ್ಯಾಸ್ತ:** 06-56 **ಮುಸ್ಲಿಂ ದಿನಾಂಕ:** 29 ಮೊಹರಮ್ **ಅದೃಷ್ಟ ಸಂಖ್ಯೆ:** 6, 11

ಮೇಷ: ಆಫೀಸಿನ ಕೆಲಸಗಳನ್ನು ಮಾಡಿ ಮುಗಿಸುವಲ್ಲಿ ಆತುರ ತೋರುವಿರಿ, ಅದರಿಂದಾಗಿ ವ್ಯಾತ್ಯಾಸಗಳಾಗಬಹುದು. ಉನ್ನತ ವ್ಯಾಸಂಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಬರುವುದು. ಅನಿವಾರ್ಯವಾಗಿ ಪ್ರಯಾಣ ಕಂಡು ಬರುವುದು.

ವೃಷಭ: ನಿಮ್ಮ ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಿಕೊಳ್ಳಲು ಪ್ರಾರಂಭಿಸಿ. ರಸ್ತೆ ಕಾಮಗಾರಿ ಟೆಂಡರ್‌ನಂತಹ ಉದ್ಯೋಗ ನಡೆಸುವವರಿಗೆ ಸರ್ಕಾರದಿಂದ ಗುತ್ತಿಗೆ, ಕೆಲಸಗಾರರಿಂದ ಅಸಹಕಾರವು ಕಂಡುಬರಲಿದೆ.

ಮಿಥುನ: ರಾಜಕೀಯ ವಲಯದಲ್ಲಿರುವವರು ನಿಮ್ಮ ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ಈ ದಿನವನ್ನು ಸಂತೋಷವಾಗಿ ಕಳೆಯುವಿರಿ.

ಕರ್ಕಾಟಕ: ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಸಹೋದರಿಯ ಮದುವೆಯಂತಹ ಸಂದರ್ಭಕ್ಕೆ ಆಪ್ತರೊಬ್ಬರು ನಿಮ್ಮ ನೆರವಿಗೆ ಬರಲಿದ್ದಾರೆ ಎಂಬುದು ಮಾನಸಿಕ ಧೈರ್ಯ ಹೆಚ್ಚಿಸಲಿದೆ.

ಸಿಂಹ: ನಿಮ್ಮ ವೃತ್ತಿಪರವಾದ ಸ್ಥಾನಮಾನದ ಬದಲಾವಣೆ ಬಯಸಿದಲ್ಲಿ ಕಾಯುವುದು ಅವಶ್ಯ. ನೆಚ್ಚಿನ ಉದ್ಯೋಗ ದೊರಕಿಸಿಕೊಳ್ಳಲು ತೀವ್ರ ಪ್ರಯತ್ನ ನಡೆಸುವಿರಿ. ಮಕ್ಕಳಿಂದ ಸಂತೋಷ ನೆಮ್ಮದಿಯನ್ನು ಕಾಣಲಿದ್ದೀರಿ.

ಕನ್ಯಾ: ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಹಣದ ಆಸೆ ತೋರಿಸಿ ತಪ್ಪು ಕೆಲಸವನ್ನು ಮಾಡುವಂತೆ ಪ್ರಚೋದಿಸುತ್ತಾರೆ. ಅಂತಹ ಕೆಲಸ ಮಾಡಿದಲ್ಲಿ, ಅಧಿಕಾರ ಹೋಗುವ ಪರಿಸ್ಥಿತಿ ಎದುರಾಗುವುದು.

ತುಲಾ: ಚಿತ್ರಕಲೆ ಮತ್ತು ಸಾಹಿತ್ಯಕಾರರಿಗೆ ಶುಭ. ಸಿವಿಲ್ ಎಂಜಿನಿಯರುಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ನೀವು ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಮನವರಿಕೆ ಮಾಡಿಕೊಡುವಿರಿ.

ವೃಶ್ಚಿಕ: ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು. ಸ್ನೇಹಿತನ ಹಣವನ್ನು ದಿನಾಂತ್ಯಕ್ಕೆ ಹಿಂದಿರುಗಿಸಿ. ತೆರೆಮರೆಯಲ್ಲಿ ನಡೆಸಿದ ಕೆಲಸದಿಂದ ಅಧಿಕಾರ ಪಡೆದುಕೊಳ್ಳುವಿರಿ.

ಧನು: ಚರ ಅಥವಾ ಸ್ಥಿರ ಸ್ವತ್ತುಗಳು ಸಿಗುವ ಸಂಭವವಿದೆ. ಮನೆ ಕೆಲಸದಲ್ಲಿ ನಿರ್ಲಕ್ಷ್ಯ ತೋರಬೇಡಿ. ಸಹೋದರನಲ್ಲಿ ಮತ್ತು ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸಿ, ಸಂಬಂಧಗಳು ಇನ್ನಷ್ಟು ಉತ್ತಮಗೊಳ್ಳುವುದು.

ಮಕರ: ನಿಮ್ಮ ಕ್ಷೇತ್ರದಲ್ಲಿ ಉಳಿದುಕೊಳ್ಳಲ್ಲೇಬೇಕಾದರೆ ಅವಿರತ ದುಡಿಮೆಯೊಂದೇ ಮಾರ್ಗ. ಕಂಟ್ರಾಕ್ಟ್ ಕೆಲಸಗಳು ಲಭಿಸುವವು. ನೀವು ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ.

ಕುಂಭ: ಬ್ಯಾಂಕಿನ ಸಾಲಗಳು ತೀರಿ ಮನೆಯಲ್ಲಿ ನೆಮ್ಮದಿ ಮೂಡಲಿದೆ. ವಾಹನ ಮಾರಾಟದ ಯೋಚನೆಯಲ್ಲಿರುವವರು ಆ ಯೋಚನೆಯನ್ನು ಕೈ ಬಿಡುವುದೇ ಸೂಕ್ತ. ಆಫೀಸಿನ ಕೆಲಸಗಳಿಗಾಗಿ ದೂರದ ಪ್ರಯಾಣ ಲಾಭದಾಯಕವಾಗಿದೆ.

ಮೀನ: ಮನೆಯವರ ಬೇಡಿಕೆಗಳನ್ನು ಸ್ವಲ್ಪ ಮಟ್ಟಿಗೆ ಪೂರೈಸುವಿರಿ. ಕಾರ್ಮಿಕ ಜನರಿಗೆ ಒಳ್ಳೆಯ ದಿನ. ಅನಗತ್ಯವಾದ ಮಾತುಗಳಿಂದ ದೂರವಿರಿ. ಅನಿವಾರ್ಯದ ಮಾತುಗಳನ್ನು ಎರಡು ಬಾರಿ ಯೋಚಿಸಿ ಮಾತನಾಡಿ.

ವಿನಿಮಯ ದರ | ಡಾಲರ್ 86.40 | ಪೌಂಡ್ 117.04 | ಯುರೊ 101.53 | ಯೆನ್ (100ಕ್ಕೆ) 59



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,219
ಇಂದಿನ ಅಂತ್ಯ:	25,062
ದಿನದ ಕನಿಷ್ಠ:	25,018
	157

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹525
	12 ಕ್ಕೆ	₹72
ಮೈಸೂರು:	100 ಕ್ಕೆ	₹525

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹279-595
ದ್ವಿತಳಿ (ಬಿ.ವಿ)	₹377-745

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹209
ಆರ್‌ಎಸ್‌ಎಸ್-5	₹203
ಗುಡ್ ಲಾಟ್	₹186.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1440 (1440)
ಸೋಯಾ (ರಿಫೈನ್ಡ್)	₹1230 (1225)
ಸೂರ್ಯಕಾಂತಿ (ರಿಫೈನ್ಡ್)	₹1375 (1370)
ಪಾಮೋಲಿನ್	₹1205 (1200)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28000-28000
ಬೆಂಗಳೂರು	₹20000-25000
ತಿಪಟೂರು	₹25000-28000
ತುರುವೇಕೆರೆ	₹24000-27050

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ಚುಟುಕೆ ಸುದ್ದಿ

ಸೆನ್ಸೆಕ್ಸ್ 542 ಅಂಶ ಇಳಿಕೆ

ಮುಂಬೈ (ಪಿಟಿಐ): ಲಾಭ ಗಳಿಕೆಗಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದು ಮತ್ತು ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 542 ಅಂಶ ಕಡಿಮೆಯಾಗಿ, 82,184ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 157 ಅಂಶ ಇಳಿಕೆಯಾಗಿ, 25,062ಕ್ಕೆ ಕೊನೆಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹4,209 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ವೇಳೆ ದೇಶೀ ಹೂಡಿಕೆದಾರರು ₹4,358 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.24ರಷ್ಟು ಹೆಚ್ಚಳವಾಗಿದೆ. ಪ್ರತೀ ಬ್ಯಾರೆಲ್ ದರವು 69.36 ಡಾಲರ್ ಆಗಿದೆ.

ಕೆನರಾ ಬ್ಯಾಂಕ್‌ಗೆ ₹4,752 ಕೋಟಿ ಲಾಭ

ಪ್ರಜಾವಾಣಿ ವಾರ್ತೆ / ಪಿಟಿಐ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಜೂನ್ ತ್ರೈಮಾಸಿಕದಲ್ಲಿ ₹4,752 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,905 ಕೋಟಿ ಲಾಭ ಆಗಿತ್ತು.

ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣ ಶೇ 22ರಷ್ಟು ಹೆಚ್ಚಳವಾಗಿದೆ. ಎನ್‌ಪಿಎ ಪ್ರಮಾಣ ಕಡಿಮೆ ಆಗಿರುವುದು ಲಾಭ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಬ್ಯಾಂಕ್ ಗುರುವಾರ ಷೇರುಪೇಟೆಗೆ ತಿಳಿಸಿದೆ.

ಈ ಬಾರಿ ಒಟ್ಟು ವರಮಾನವು ₹38,063 ಕೋಟಿಯಾಗಿದೆ. ಕಳೆದ ಬಾರಿ ಇದು ₹34,020 ಕೋಟಿಯಷ್ಟಿತ್ತು. ಬಡ್ಡಿ ಮೂಲಕ ಗಳಿಕೆಯು ₹31,003 ಕೋಟಿಯಾಗಿದೆ. ಕಾರ್ಯಾಚರಣೆ ಲಾಭವು ₹8,554 ಕೋಟಿಗೆ ಹೆಚ್ಚಳವಾಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 4.14ರಿಂದ ಶೇ 2.69ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 1.24ರಿಂದ ಶೇ 0.63ಕ್ಕೆ ತಗ್ಗಿದೆ.

'ಬ್ಯಾಂಕ್‌ನ ಒಟ್ಟು ಜಾಗತಿಕ ವ್ಯವಹಾರವು ಜೂನ್ ತ್ರೈಮಾಸಿಕದಲ್ಲಿ ಶೇ 10.98ರಷ್ಟು ಬೆಳವಣಿಗೆ ಕಂಡಿದ್ದು, ₹25,63,984 ಕೋಟಿಗೆ ತಲುಪಿದೆ. ಠೇವಣಿಯಲ್ಲಿ ಶೇ 9.92ರಷ್ಟು ಏರಿಕೆ ದಾಖಲಿಸಿದ್ದು, ₹14,67,655 ಕೋಟಿ ಆಗಿದೆ. ಸಾಲದ ನೀಡಿಕೆ ₹10,96,329 ಕೋಟಿಯಷ್ಟಾಗಿದ್ದು, ಶೇ 12.42ರಷ್ಟು ಹೆಚ್ಚಳವಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ತಿಳಿಸಿದ್ದಾರೆ.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಅಡಿಕೆ ಧಾರಣೆ

ಕುಮಟಾ		ರಾಶಿ	26999-57209	ಚಾಲಿ	36618-43899
ಚಾಲಿ	39769-42569	ಸಿಪ್ಪೆಗೋಟು	12499-19813	ಕೆಂಪುಗೋಟು	16119-16119
ಚಿಪ್ಪು	16610-32619	**ಶಿವಮೊಗ್ಗ**		ರಾಶಿ	45989-48599
ಕೋಕ	7100-28789	ಬೆಟ್ಟೆ	50069-59819	**ಯಲ್ಲಾಪುರ**	
ಹೊಸಚಾಲಿ	33399-42519	ಗೊರಬಲು	20039-32869	ಬಿಳಿಗೋಟು	21579-32000
ಸಾಗರ		ರಾಶಿ	46009-57099	ಚಾಲಿ	33010-42899
ಬಿಳಿಗೋಟು	10700-26485	ಸರಕು	55019-89696	ಕೋಕ	13200-14510
ಚಾಲಿ	24349-37899	**ಶಿರಸಿ**		ಕೆಂಪುಗೋಟು	23899-24733
ಕೋಕ	6269-21999	ಬೆಟ್ಟೆ	34689-40061	ರಾಶಿ	40509-52899
ಕೆಂಪುಗೋಟು	16599-27900	ಬಿಳಿಗೋಟು	23090-35530	ತಟ್ಟಿಬೆಟ್ಟೆ	34608-36699

ಮುಂಬೈ ಧಾರಣೆ (ಶೇಂಗಾ)

24-07-2025	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಪಾಮ್ ವಾರದ ಡೆಲಿವರಿ	1203 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1285 (1280)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,300 (99,800)
ಬೆಳ್ಳಿ ಕೆ.ಜಿಗೆ	1,14,500 (1,15,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಿನ್ನದ ದರ ₹1,400, ಬೆಳ್ಳಿ ₹3 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ದರ ಕಡಿಮೆಯಾಗಿದೆ. ಹೀಗಾಗಿ ದೇಶದ ಚಿನಿವಾರ ಪೇಟೆಯಲ್ಲೂ ಬೆಲೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,400ರಷ್ಟು ಕಡಿಮೆಯಾಗಿ, ₹99,620ರಂತೆ ಮಾರಾಟವಾಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ₹1,200 ಇಳಿಕೆಯಾಗಿ, ₹99,250 ಆಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹3 ಸಾವಿರ ಕಡಿಮೆಯಾಗಿ, ₹1.15 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕವು, ಜಪಾನ್ ಮತ್ತು ಫಿಲಿಪ್ಪೀನ್ಸ್‌ನೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಾಗಿ ಘೋಷಿಸಿದೆ. ಚೀನಾ, ಯುರೋಪ್ ಸೇರಿ ಇತರೆ ರಾಷ್ಟ್ರಗಳೊಂದಿಗೂ ಇಂತಹ ಒಪ್ಪಂದ ನಡೆಯುವ ನಿರೀಕ್ಷೆ ಹೆಚ್ಚಳವಾಗಿದೆ. ಹೀಗಾಗಿ, ಹೂಡಿಕೆದಾರರು ಮತ್ತು ದಾಸ್ತಾನುಗಾರರು ಲಾಭದ ಗಳಿಕೆಗಾಗಿ ಚಿನ್ನದ ಮಾರಾಟಕ್ಕೆ ಮುಂದಾಗಿದ್ದರಿಂದ ಹಳದಿ ಲೋಹದ ಧಾರಣೆಯಲ್ಲಿ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಕ್ತ ವ್ಯಾಪಾರ ಒಪ್ಪಂದ ಕೃಷಿಕರಿಗೆ ಹೆಚ್ಚು ಸಿಹಿ

ಭಾರತ ಮತ್ತು ಬ್ರಿಟನ್ ನಡುವೆ ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಬಿದ್ದಿದೆ. ಈ ಒಪ್ಪಂದವನ್ನು ಅಧಿಕೃತವಾಗಿ 'ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ' (ಸಿಇಟಿಎ) ಎಂದು ಕರೆಯಲಾಗಿದೆ. ಈ ಒಪ್ಪಂದದ ಪ್ರಮುಖ ವಿವರಗಳು ಇಲ್ಲಿವೆ

ಕೃಷಿ ವಲಯ

- ಭಾರತದ ಹಣ್ಣು, ತರಕಾರಿ, ಏಕದಳ ಧಾನ್ಯಗಳು, ಅರಿಸಿನ, ಕಾಳುಮೆಣಸು, ಏಲಕ್ಕಿ, ಮಾವಿನ ತಿರುಳು, ಉಪ್ಪಿನಕಾಯಿ, ದ್ವಿದಳ ಧಾನ್ಯಗಳಂತಹ ಕೃಷಿ ಉತ್ಪನ್ನಗಳಿಗೆ ಬ್ರಿಟನ್ನಿನ ಮಾರುಕಟ್ಟೆಗೆ ಸುಂಕರಹಿತವಾಗಿ ಪ್ರವೇಶ ಸಿಗಲಿದೆ
- ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ಪೈಕಿ ಶೇ 95ಕ್ಕೂ ಹೆಚ್ಚಿನವುಗಳಿಗೆ ಶೂನ್ಯ ಸುಂಕ ಇರಲಿದೆ
- ಸುಂಕ ರಹಿತ ಮಾರುಕಟ್ಟೆ ಲಭ್ಯವಾಗುವ ಕಾರಣದಿಂದಾಗಿ ಭಾರತದ ಕೃಷಿ ಉತ್ಪನ್ನಗಳ ರಫ್ತು ಪ್ರಮಾಣವು ಮುಂದಿನ ಮೂರು ವರ್ಷಗಳಲ್ಲಿ ಶೇ 20ಕ್ಕಿಂತ ಹೆಚ್ಚಳ ಕಾಣುವ ನಿರೀಕ್ಷೆ ಇದೆ
- ಹಲಸಿನ ಹಣ್ಣು, ಸಿರಿಧಾನ್ಯಗಳು ಮತ್ತು ಸಾವಯವ ಔಷಧೀಯ ಗಿಡಮೂಲಿಕೆಗಳಿಗೆ ಹೊಸ ಮಾರುಕಟ್ಟೆ ಲಭ್ಯವಾಗಲಿದೆ
- ಬ್ರಿಟನ್ನಿನಿಂದ ಆಮದು ಮಾಡಿಕೊಳ್ಳುವ ಹೈನು ಉತ್ಪನ್ನಗಳು, ಸೇಬು ಮತ್ತು ಓಟ್ಸ್, ಖಾದ್ಯ ತೈಲಗಳಿಗೆ ಭಾರತ ಸುಂಕ ವಿನಾಯಿತಿ ನೀಡಿಲ್ಲ
- ಭಾರತದ ದ್ರಾಕ್ಷಿ, ಈರುಳ್ಳಿ, ಶೇಂಗಾ, ಹತ್ತಿ, ಬಾಸ್ಮತಿ ಅಕ್ಕಿ, ಸಂಬಾರ ಪದಾರ್ಥಗಳು, ತೋಟಗಾರಿಕಾ ಉತ್ಪನ್ನಗಳಿಗೆ ಒಪ್ಪಂದಿಂದಾಗಿ ಪ್ರಯೋಜನ ಆಗಲಿದೆ

ಸಾಗರ ಉತ್ಪನ್ನಗಳು

- ಭಾರತದ ಸಾಗರೋತ್ಪನ್ನಗಳಿಗೆ ಬ್ರಿಟನ್ನಿನಲ್ಲಿ ಸುಂಕ ಇರುವುದಿಲ್ಲ. ಇದರಿಂದಾಗಿ ಭಾರತದ ರಫ್ತುದಾರರಿಗೆ ಹೆಚ್ಚಿನ ಬೆಲೆ ಸಿಗಲಿದೆ
- ಭಾರತದಿಂದ ರಫ್ತಾಗುವ ಸೀಗಡಿಗೆ ಬ್ರಿಟನ್ನಿನಲ್ಲಿ ಈಗ ಶೇ 4.2ರಿಂದ ಶೇ 8.5ರವರೆಗೆ ತೆರಿಗೆ ಇದೆ. ಒಪ್ಪಂದ ಜಾರಿಗೆ ಬಂದ ನಂತರ ಇದು ಇರುವುದಿಲ್ಲ. ಹೀಗಾಗಿ, ಸೀಗಡಿ ಮತ್ತು ಮೀನು ರಫ್ತು ಹೆಚ್ಚುವ ನಿರೀಕ್ಷೆ ಇದೆ

ಕಾಫಿ, ಚಹಾ, ಸಂಬಾರ ಪದಾರ್ಥಗಳು

- ಭಾರತದಿಂದ ರಫ್ತಾಗುವ ಕಾಫಿ, ಚಹಾ ಮತ್ತು ಸಂಬಾರ ಪದಾರ್ಥಗಳು ಬ್ರಿಟನ್ನಿಗೆ ಗಣನೀಯ ಪ್ರಮಾಣದಲ್ಲಿ ರವಾನೆ ಆಗುತ್ತವೆ. ಆದರೆ ಇನ್ನು ಮುಂದೆ ಈ ಉತ್ಪನ್ನಗಳಿಗೆ ಬ್ರಿಟನ್ನಿನಲ್ಲಿ ಸುಂಕ ಇರುವುದಿಲ್ಲವಾದ ಕಾರಣದಿಂದಾಗಿ ಇವುಗಳ ರಫ್ತು ಹೆಚ್ಚಲಿದೆ
- ಇನ್‌ಸ್ಟಂಟ್ ಕಾಫಿ ಪುಡಿಗೆ ಸುಂಕ ಇಲ್ಲವಾಗುವುದರಿಂದ ಭಾರತದ ಉದ್ದಿಮೆಗಳು ಯುರೋಪಿನ ಇತರ ದೇಶಗಳ ಜೊತೆ ಪೈಪೋಟಿ ನೀಡಲು ಸಾಧ್ಯವಾಗುತ್ತದೆ

ಜವಳಿ

- ಜವಳಿ ವಲಯದ ಒಟ್ಟು 1,143 ವರ್ಗದ ಉತ್ಪನ್ನಗಳು ಬ್ರಿಟನ್ನಿನ ಮಾರುಕಟ್ಟೆಯನ್ನು ಸುಂಕವಿಲ್ಲದೆ ಪ್ರವೇಶಿಸಬಹುದು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಕಾಂಬೋಡಿಯಾದ ಜವಳಿ ಉತ್ಪನ್ನಗಳಿಗೆ ಸುಂಕರಹಿತ ಪ್ರವೇಶ ಇದೆ. ಈಗ ಭಾರತದ ಈ ಉತ್ಪನ್ನಗಳು ಬ್ರಿಟನ್ನಿನ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕ ಆಗಲಿವೆ

- ಸಿದ್ಧಪಡಿಸಿದ ಉಡುಪು, ಮನೆಗಳಲ್ಲಿ ವಿವಿಧ ಉದ್ದೇಶಗಳಿಗೆ ಬಳಕೆ ಮಾಡುವ ಬಟ್ಟೆಗಳು, ನೆಲಹಾಸುಗಳು ಮತ್ತು ಕರಕುಶಲ ವಸ್ತುಗಳು ಸುಂಕ ಇಲ್ಲವಾಗುವ ಕಾರಣಕ್ಕೆ ಹೆಚ್ಚು ಸ್ಪರ್ಧಾತ್ಮಕ ಆಗಲಿವೆ

ಎಂಜಿನಿಯರಿಂಗ್

- ಹಲವು ಉತ್ಪನ್ನಗಳಿಗೆ ಸುಂಕ ಇಲ್ಲವಾಗಲಿದೆ. ಇದರಿಂದಾಗಿ ಭಾರತದಿಂದ ಬ್ರಿಟನ್ನಿಗೆ ರಫ್ತಾಗುವ ಎಂಜಿನಿಯರಿಂಗ್ ಉತ್ಪನ್ನಗಳ ಮೊತ್ತ ಐದು ವರ್ಷಗಳಲ್ಲಿ ದುಪ್ಪಟ್ಟಾಗುವ ನಿರೀಕ್ಷೆ ಇದೆ. ಎಲೆಕ್ಟ್ರಿಕ್ ಯಂತ್ರೋಪಕರಣಗಳು, ವಾಹನ ಬಿಡಿಭಾಗಗಳು, ಕೈಗಾರಿಕಾ ಸಲಕರಣೆಗಳು, ನಿರ್ಮಾಣ ಕಾರ್ಯದಲ್ಲಿ ಬಳಸುವ ಯಂತ್ರೋಪಕರಣಗಳ ರಫ್ತು ಹೆಚ್ಚುವ ನಿರೀಕ್ಷೆ ಇದೆ

ಎಲೆಕ್ಟ್ರಾನಿಕ್ಸ್ ಮತ್ತು ತಂತ್ರಾಂಶ

- ಶೂನ್ಯ ಸುಂಕದ ಕಾರಣದಿಂದಾಗಿ ಭಾರತದ ಎಲೆಕ್ಟ್ರಾನಿಕ್ ಉತ್ಪನ್ನಗಳ ರಫ್ತು ಹೆಚ್ಚಬಹುದು. ಭಾರತದ ಸ್ಮಾರ್ಟ್‌ಫೋನ್, ಇನ್ವರ್ಟರ್, ಆಪ್ಟಿಕಲ್ ಫೈಬರ್ ಕೇಬಲ್ ರಫ್ತು ಜಾಸ್ತಿ ಆಗಬಹುದು

ಔಷಧ, ಆರೋಗ್ಯ ಸೇವೆ

- ಭಾರತದಿಂದ ರಫ್ತಾಗುವ ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಉಪಕರಣಗಳು, ರೋಗಪತ್ತೆ ಸಾಧನಗಳು, ಇಸಿಜಿ ಯಂತ್ರಗಳು, ಎಕ್ಸ್‌ರೇ ಯಂತ್ರಗಳಿಗೆ ಸುಂಕ ಇರುವುದಿಲ್ಲ

ಕ್ರೀಡೆ, ಆಟಿಕೆ

- ಸಾಕರ್ ಚೆಂಡು, ಕ್ರಿಕೆಟ್ ಪರಿಕರಗಳು, ರಗ್ಬಿ ಚೆಂಡು ಹಾಗೂ ಎಲೆಕ್ಟ್ರಾನಿಕ್ ಅಲ್ಲದ ಆಟಿಕೆಗಳ ರಫ್ತು ಹೆಚ್ಚಲಿದೆ ಎಂದು ಅಂದಾಜಿಸಲಾಗಿದೆ

ಚರ್ಮದ ಉತ್ಪನ್ನಗಳು

- ಭಾರತದ ಚರ್ಮದ ಉತ್ಪನ್ನಗಳು, ಪಾದರಕ್ಷೆಗಳು ಶೂನ್ಯ ಸುಂಕದೊಡನೆ ಬ್ರಿಟನ್ ಪ್ರವೇಶಿಸಲಿವೆ

ಸೇವಾ ವಲಯ

- ಬ್ರಿಟನ್ನಿನ ಗ್ರಾಹಕರಿಗಾಗಿ ನಿರ್ದಿಷ್ಟ ಕೆಲಸವೊಂದಕ್ಕಾಗಿ ತೆರಳುವವರಿಗೆ ಅನುಕೂಲ ಆಗಲಿದೆ.
- ಯೋಗ ಶಿಕ್ಷಕರು, ಶಾಸ್ತ್ರೀಯ ಸಂಗೀತಗಾರರು, ನುರಿತ ಬಾಣಸಿಗರಿಗೆ ಬ್ರಿಟನ್ನಿನಲ್ಲಿ ಸೇವೆ ಒದಗಿಸುವುದು ಸುಲಭವಾಗಲಿದೆ

ಇತರೆ

- ಭಾರತದ ಎಣ್ಣೆಕಾಳುಗಳಿಗೆ ಸುಂಕ ಕಡಿಮೆ ಆಗಲಿದೆ. ಇದರಿಂದಾಗಿ ಭಾರತದ ಎಣ್ಣೆಕಾಳುಗಳು ಬ್ರಿಟನ್ನಿನ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕ ಆಗುತ್ತವೆ
- ಪ್ಲಾಸ್ಟಿಕ್ಕಿನ ವಿವಿಧ ಉತ್ಪನ್ನಗಳಿಗೆ ಸುಂಕ ರಹಿತವಾಗಿ ಬ್ರಿಟನ್ ಮಾರುಕಟ್ಟೆಯ ಪ್ರವೇಶ ಸಿಗಲಿದೆ
- ಭಾರತದ ಮುತ್ತು ಮತ್ತು ಆಭರಣಗಳಿಗೆ ಸುಂಕದಲ್ಲಿ ವಿನಾಯಿತಿ ಸಿಗಲಿದೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ.ಕೆ.ಆರ್.ನಾರಾಯಣರೆಡ್ಡಿ ಶ್ರೀಮತಿ॥ ಕಾಂತಮ್ಮ

ಮಾಜಿ ವಿ.ಪಿ. ಛೇರ್ಮನ್ ಮತ್ತು ಪ್ರಥಮ ಸಂಚಾಲಕರು

ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ ಹಳೇಮಡಿವಾಳ-ಬೆಂಗಳೂರು-68

'ನಿಮ್ಮ ನೆನಪು ಸದಾ ಹಚ್ಚ ಹಸಿರು ನಿಮ್ಮ ಆದರ್ಶವೇ ನಮಗೆ ದಾರಿದೀಪ ನಿಮ್ಮ ಮಾರ್ಗದರ್ಶನವೇ ನಮಗೆ ಚೇತನ'

ಸದಾ ಸ್ಮರಿಸುವ :
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

ಚಿರಸ್ಮರಣೆ

ಶ್ರೀಮತಿ. ಗೌರಾಂಬ
ನಿಧನ: 25.07.2020
ಸದಾ ಸ್ಮರಿಸುವ
ಪತಿ: ಕೇಶವಮೂರ್ತಿ.
ನಿವೃತ್ತ ಅಬಕಾರಿ ಅಧೀಕ್ಷಕರು ಮತ್ತು ಕುಟುಂಬ ಮೈಸೂರು

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ನನ್ನ ಗ್ರಾಹಕರಾದ ಶ್ರೀ ವಿ. ಆರ್. ಬೀಡು ರವರು ಕೆಳಕಂಡ ಆಸ್ತಿಗೆ ಹಕ್ಕುದಾರರಾಗಿದ್ದಾರೆ. ನಿವೇಶನ ಸಂಖ್ಯೆ. 1584, ಕೊಡಿಗೇಹಳ್ಳಿ, ಕೋಟಿಹೊಸಹಳ್ಳಿ, ಬ್ಯಾಟರಾಯನಪುರ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕ್, ಸಹಕಾರ ನಗರ, ಬೆಂಗಳೂರು – 560092.

ಈ ಆಸ್ತಿಯನ್ನು ಕ್ರಯ ಪತ್ರ ಸಂಖ್ಯೆ 0941 ದಿನಾಂಕ: 19.02.1992 ರಂದು, ಮಿನಿಸ್ಟ್ರಿ ಆಫ್ ಕಮ್ಯುನಿಕೇಶನ್ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಇವರುಗಳಿಂದ ಖರೀದಿಸಿದ್ದು, ಅವರ ಹೆಸರಿನಲ್ಲಿ ದಾಖಲಾಗಿರುತ್ತದೆ.

ಈ ಕ್ರಯ ಪತ್ರವನ್ನು ಅವರು ಸುರಕ್ಷಿತವಾಗಿ ಇಟ್ಟುಕೊಳ್ಳಲು ಲ್ಯಾಮಿನೇಷನ್ ಮಾಡಿಸಿರುತ್ತಾರೆ.

ಈ ಆಸ್ತಿಗೆ ಎಸ್. ಬಿ.ಐ ಬ್ಯಾಂಕಿನ ಎಸ್. ಪಿ. ಬಿ. ಶಾಖೆ ಸಂಖ್ಯೆ (06866) ಸೆಂಟ್ ಮಾರ್ಕ್ಸ್ ರಸ್ತೆ ಬೆಂಗಳೂರು–560001 ಇವರಲ್ಲಿ ಗೃಹ ಸಾಲ ನಿಮಿತ್ಯ ನೋಂದಾಯಿತ ಅಡಮಾನ ಇಡುವುದಾಗಿ ಇಚ್ಛಿಸಿರುತ್ತಾರೆ. ಯಾರಾದರೂ ಮೇಲ್ಕಂಡ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಹಕ್ಕು ಹೊಂದಿರುವವರು ಇದ್ದರೆ ದಯವಿಟ್ಟು ನನ್ನ ಮೊಬೈಲ್ ಸಂಖ್ಯೆ. 9986349626 ಅಥವಾ ಈಮೇಲ್ ವಿಳಾಸ basappa_1978@yahoo.co.in ಗೆ ಸಂಪರ್ಕಿಸಿ.

ಹೆಚ್.ಡಿ. ಬಸಪ್ಪ,
ವಕೀಲರು

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ14,000-18,000. 8951315839, 7022770052

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಚಾರ್-ಧಾಮ ಪ್ರವಾಸ 11.9.2025. ನೇಪಾಳ,ಕಾಶಿ ಮುಕ್ತಿನಾಥ 04.10.2025. ಆಂಧ್ರ ಪ್ರವಾಸ 27.10.2025. ಅಷ್ಟಜ್ಯೋತಿರ್ಲಿಂಗ ಪ್ರವಾಸ 13.11.2025. ಸಂಪರ್ಕಿಸಿ. ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 9482239855

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
9845114560
*Conditions apply

ಖಾಲಿಸ್ತಾನ ಪರ ಚಟುವಟಿಕೆ ಹೆಚ್ಚಳಕ್ಕೆ ಮೋದಿ ಕಳವಳ

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿ ಖಾಲಿಸ್ತಾನ ಪರ ಚಟುವಟಿಕೆಗಳು ಹೆಚ್ಚುತ್ತಿರುವ ಕುರಿತು ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದರು.

ಪ್ರಧಾನಿ ಕಿಯರ್ ಸ್ಟಾರ್ಮರ್ ಅವರೊಂದಿಗೆ ಮಾತುಕತೆ ನಡೆಸಿದ ವೇಳೆ ಮೋದಿ ಈ ಮಾತು ಹೇಳಿದ್ದಾರೆ. 'ಪ್ರಜಾಸತ್ತಾತ್ಮಕವಾಗಿ ದೊರಕಿರುವ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಉಗ್ರವಾದ ಸಿದ್ಧಾಂತಗಳನ್ನು ಅನುಸರಿಸುವ ಶಕ್ತಿಗಳಿಗೆ ಅವಕಾಶ ನೀಡಬಾರದು' ಎಂದೂ ಮೋದಿ ಪ್ರತಿಪಾದಿಸಿದರು.

ಮೋದಿ ಹೇಳಿದ್ದೇನು?

- ಅಹಮದಾಬಾದ್‌ನಲ್ಲಿ ಕಳೆದ ತಿಂಗಳು ನಡೆದ ವಿಮಾನ ದುರಂತದಲ್ಲಿ ಹಲವು ಬ್ರಿಟಿಷ್ ಪ್ರಜೆಗಳೂ ಮೃತಪಟ್ಟರು. ಅವರ ಕುಟುಂಬಗಳಿಗೆ ಸಂತಾಪ ಸೂಚಿಸುವೆ
- ಆರ್ಥಿಕ ಅಪರಾಧಿಗಳ ಗಡೀಪಾರು ವಿಚಾರವಾಗಿ ಭಾರತದ ಭದ್ರತಾ ಸಂಸ್ಥೆಗಳು ತಮ್ಮ ಸಹಕಾರವನ್ನು ಮುಂದುವರಿಸಲಿವೆ

'ಭಾರತೀಯರಿಗೆ ಉದ್ಯೋಗ ಬೇಡ'

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಚೀನಾದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿರುವ ಮತ್ತು ಭಾರತದ ಕೆಲಸಗಾರರನ್ನು ನೇಮಿಸಿಕೊಂಡಿರುವ ಅಮೆರಿಕ ತಂತ್ರಜ್ಞಾನ ಕಂಪನಿಗಳನ್ನು ಟೀಕಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, 'ಇನ್ನು ಆ ದಿನಗಳು ಮುಗಿದಿವೆ' ಎಂದು ಎಚ್ಚರಿಸಿದ್ದಾರೆ.

ಬುಧವಾರ ನಡೆದ ಕೃತಕ ಬುದ್ಧಿಮತ್ತೆ (ಎ.ಐ) ಶೃಂಗಸಭೆಯಲ್ಲಿ ಎ.ಐಗೆ ಸಂಬಂಧಿಸಿದ ಮೂರು ಕಾರ್ಯಕಾರಿ ಆದೇಶಗಳಿಗೆ ಸಹಿ ಹಾಕಿ ಮಾತನಾಡಿ ಅವರು ಹೀಗೆ ಹೇಳಿದರು.

'ಅಮೆರಿಕದ ಸ್ವಾತಂತ್ರ್ಯವನ್ನು ಅನುಭವಿಸುತ್ತಲೇ ಅನೇಕ ತಂತ್ರಜ್ಞಾನ ಕಂಪನಿಗಳು ಚೀನಾದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ, ಭಾರತದ ಕೆಲಸಗಾರರನ್ನು ನೇಮಿಸಿಕೊಂಡು, ಐರ್ಲೆಂಡ್‌ಗೆ ಲಾಭ ಮಾಡಿಕೊಟ್ಟಿವೆ. ಆದರೆ, ನಮ್ಮ ನಾಗರಿಕರ ಅವಕಾಶಗಳನ್ನು ನಿರಾಕರಿಸುವ ಮೂಲಕ ಅವರ ಹಕ್ಕುಗಳನ್ನು ಕಸಿದಿವೆ. ಆ ದಿನಗಳು ನನ್ನ ಅಧಿಕಾರದ ಅವಧಿಯಲ್ಲೇ ಇಲ್ಲವಾಗಲಿವೆ' ಎಂದು ಟ್ರಂಪ್ ಕಟುವಾಗಿ ಹೇಳಿದರು.

ಗಾಜಾ: ಕದನ ವಿರಾಮಕ್ಕೆ ಭಾರತ ಕರೆ

ವಿಶ್ವಸಂಸ್ಥೆ (ಪಿಟಿಐ): ಗಾಜಾದಲ್ಲಿನ ಮಾನವೀಯ ಬಿಕ್ಕಟ್ಟಿನ ಕುರಿತು ಕಳವಳ ವ್ಯಕ್ತಪಡಿಸಿರುವ ಭಾರತವು, 'ಗಾಜಾದಲ್ಲಿ ಕದನ ವಿರಾಮ ಘೋಷಿಸಬೇಕು. ಅಲ್ಲಿನ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಮಧ್ಯಂತರ ಕದನ ವಿರಾಮವು ಸಾಕಾಗುವುದಿಲ್ಲ' ಎಂದು ಹೇಳಿದೆ.

ವಿಶ್ವಸಂಸ್ಥೆಯು 'ಪ್ಯಾಲೆಸ್ಟೀನ್ ಮತ್ತು ಮಧ್ಯಪ್ರಾಚ್ಯದಲ್ಲಿನ ಪರಿಸ್ಥಿತಿ' ಕುರಿತ ಬಹಿರಂಗ ಚರ್ಚಾಸಭೆ ನಡೆಸಿತು. ಅದರಲ್ಲಿ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಬುಧವಾರ ಮಾತನಾಡಿದರು.

'ಗಾಜಾದಲ್ಲಿನ ಜನರು ಆಹಾರ, ವೈದ್ಯಕೀಯ ಸೇವೆ ಹಾಗೂ ಇಂಧನ ಸೇರಿದಂತೆ ಮೂಲಸೌಕರ್ಯಗಳ ಅಭಾವ ಎದುರಿಸುತ್ತಿದ್ದಾರೆ. ಅಲ್ಲಿನ ಮಕ್ಕಳು ಶಿಕ್ಷಣದಿಂದಲೂ ಹೊರಗುಳಿದಿದ್ದಾರೆ. ಹೀಗಿರುವಾಗ ಅವರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು, ಕಡಿಮೆ ಅವಧಿಯ ಮಧ್ಯಂತರ ಕದನ ವಿರಾಮಗಳು ಸಾಕಾಗುವುದಿಲ್ಲ. ಸಂಪೂರ್ಣ ಕದನ ವಿರಾಮ ಘೋಷಿಸುವ ಅಗತ್ಯವಿದೆ' ಎಂದು ಒತ್ತಿಹೇಳಿದರು.

'ಮುಂದಿನ ದಾರಿ ಸ್ಪಷ್ಟವಾಗಿದೆ. ಈ ನಿಟ್ಟಿನಲ್ಲಿ ಭಾರತ ದೃಢವಾದ ನಿಲುವು ಹೊಂದಿದೆ. ಗಾಜಾದ ಜನರು ಎದುರಿಸುತ್ತಿರುವ ಸಮಸ್ಯೆಗಳು ಮುಂದುವರಿಯಲು ಬಿಡಬಾರದು. ನಿರಂತರ ಮತ್ತು ಸುರಕ್ಷಿತವಾಗಿ ಮಾನವೀಯ ನೆರವನ್ನು ನೀಡಬೇಕಾಗಿದೆ' ಎಂದರು.

ಶ್ರೀಮಂತ ವರ್ಗಕ್ಕೆ ಕೋಟಕ್ ಹೊಸ ಯೋಜನೆ

ಮುಂಬೈ (ಪಿಟಿಐ): ಶ್ರೀಮಂತರಾಗಿದ್ದರೂ ಬ್ಯಾಂಕಿಂಗ್ ಸೇವೆಗಳು 'ಸಂಪೂರ್ಣವಾಗಿ ದೊರೆತಿರದ' ವರ್ಗಕ್ಕೆ ಕ್ರೆಡಿಟ್ ಕಾರ್ಡ್ ಮತ್ತು ಸಾಲ ಸೇವೆ ಒದಗಿಸುವ ಉದ್ದೇಶದಿಂದ ಕೋಟಕ್ ಮಹೀಂದ್ರ ಬ್ಯಾಂಕ್ ಹೊಸ ಯೋಜನೆಯೊಂದನ್ನು ಆರಂಭಿಸಿದೆ.

'ಬ್ಯಾಂಕಿನ ಜೊತೆ ಒಟ್ಟು ₹75 ಲಕ್ಷಕ್ಕಿಂತ ಹೆಚ್ಚು ಹಾಗೂ ₹8 ಕೋಟಿವರೆಗಿನ ವಹಿವಾಟಿನ ಸಂಬಂಧವನ್ನು ಹೊಂದಿರುವ ಈ ವರ್ಗವು' ದೇಶದಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ವರ್ಗಗಳಲ್ಲಿ ಒಂದಾಗಿದೆ. ಆದರೆ ಈ ವರ್ಗಕ್ಕೆ ಬ್ಯಾಂಕಿಂಗ್ ಸೇವೆಗಳು 'ಹೆಚ್ಚಿನ ಮಟ್ಟದಲ್ಲಿ ಸಿಕ್ಕಿಲ್ಲ' ಎಂದು ಬ್ಯಾಂಕ್‌ನ ಹಿರಿಯ ಅಧಿಕಾರಿ ರೋಹಿತ್ ಭಾಸಿನ್ ಹೇಳಿದ್ದಾರೆ.

ಕೋಟಕ್ ಮಹೀಂದ್ರ ಬ್ಯಾಂಕ್‌ನ ಒಟ್ಟು 5.3 ಕೋಟಿ ಗ್ರಾಹಕರ ಪೈಕಿ ಶೇ 1ಕ್ಕಿಂತ ಕಡಿಮೆ ಪ್ರಮಾಣದ ಗ್ರಾಹಕರು ಈ ವರ್ಗಕ್ಕೆ ಸೇರುತ್ತಾರೆ. ಆದರೆ ಬ್ಯಾಂಕ್‌ನ ಒಟ್ಟು ವಹಿವಾಟಿನಲ್ಲಿ ಶೇ 35ಕ್ಕಿಂತ ಹೆಚ್ಚಿನ ಕೊಡುಗೆ ಇವರದ್ದಿದೆ ಎಂದು ಅವರು ತಿಳಿಸಿದ್ದಾರೆ.

ಹೊಸ ಯೋಜನೆಯು ಎಲ್ಲರಿಗೂ ಮುಕ್ತವಲ್ಲ, ಇದು ಆಹ್ವಾನಿತರಿಗೆ ಮಾತ್ರ ಎಂದು ಬ್ಯಾಂಕ್ ಹೇಳಿದೆ. ಈ ಯೋಜನೆಯ ಅಡಿಯಲ್ಲಿ ಕ್ರೆಡಿಟ್ ಕಾರ್ಡ್, ವಿಶೇಷವಾದ ಸಾಲ ಸೌಲಭ್ಯಗಳನ್ನು ಬ್ಯಾಂಕ್ ಒದಗಿಸಲಿದೆ.

ಸಂಕ್ಷಿಪ್ತ ಸುದ್ದಿ

ಬಾಂಗ್ಲಾ: ಮಾಜಿ ಮುಖ್ಯ ನ್ಯಾಯಮೂರ್ತಿ ಬಂಧನ

ಢಾಕಾ (ಪಿಟಿಐ): ದೇಶದ್ರೋಹ ಆರೋಪ ಸೇರಿದಂತೆ ಮೂರು ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಮಾಜಿ ಮುಖ್ಯ ನ್ಯಾಯಮೂರ್ತಿ ಎಬಿಎಂ ಖೈರುಲ್ ಹಕ್ ಅವರನ್ನು ಇಲ್ಲಿ ಗುರುವಾರ ಬಂಧಿಸಲಾಯಿತು.

2010ರಿಂದ 2011ರ ಅವಧಿಯಲ್ಲಿ ದೇಶದ 19ನೇ ಮುಖ್ಯ ನ್ಯಾಯಮೂರ್ತಿಯಾಗಿ ಖೈರುಲ್ ಅವರು ಕರ್ತವ್ಯ ನಿರ್ವಹಿಸಿದ್ದಾರೆ. ಈಗ ಅವರಿಗೆ 81 ವರ್ಷ ವಯಸ್ಸು.

ಖೈರುಲ್ ಅವರು ಮೂರು ಪ್ರಕರಣಗಳಲ್ಲಿ ಆರೋಪಿಯಾಗಿದ್ದಾರೆ. ಇವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಮುನ್ನ ಕನಿಷ್ಠ ಒಂದು ಪ್ರಕರಣದಲ್ಲಿ ಬಂಧಿಸಲಾಗಿದೆ ಎನ್ನುವುದನ್ನು ತೋರಿಸಬೇಕಾಗಿದೆ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪದಚ್ಯುತಿಗೆ ಕಾರಣವಾದ ದಂಗೆ ಬಳಿಕ 2024ರ ಆಗಸ್ಟ್‌ನಲ್ಲಿ ಇವರ ಮೇಲೆ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಕಮಿಷನರ್ ತಲೆಬುರ್ ರೆಹಮಾನ್ ಸುದ್ದಿಗಾರರಿಗೆ ತಿಳಿಸಿದರು.

ಗಡಿ ಸ್ಥಿತಿ–ಭಾರತದೊಂದಿಗೆ ಮಾತುಕತೆ ಮುಕ್ತವಾಗಿತ್ತು: ಚೀನಾ

ಬೀಜಿಂಗ್ (ಪಿಟಿಐ): ಗಡಿ ಪರಿಸ್ಥಿತಿಯ ಬಗ್ಗೆ ಭಾರತದ ಜೊತೆಗಿನ ರಾಜತಾಂತ್ರಿಕ ಮಾತುಕತೆ ಮುಕ್ತವಾಗಿತ್ತು ಎಂದು ಚೀನಾ ಗುರುವಾರ ಹೇಳಿದೆ. ಗಡಿ ವಿಚಾರದ ಬಗ್ಗೆ ನವದೆಹಲಿಯಲ್ಲಿ ಉಭಯ ದೇಶಗಳು ಬುಧವಾರ ಮಾತುಕತೆ ನಡೆಸಿದ್ದವು.

ಸಭೆಯ ಕುರಿತು ಇಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಚೀನಾ ವಿದೇಶಾಂಗ ಸಚಿವಾಲಯ, ಮಾತುಕತೆಯು ಯಾವುದೇ ಮುಚ್ಚುಮರೆಯಿಲ್ಲದೆ ಮುಕ್ತವಾಗಿ ನಡೆಯಿತು ಎಂದು ಹೇಳಿದೆ.

'ಚೀನಾ–ಭಾರತ ಗಡಿ ಕುರಿತ 23ನೇ ವಿಶೇಷ ಪ್ರತಿನಿಧಿಗಳ ಸಭೆಯಲ್ಲಿನ ತೀರ್ಮಾನಗಳನ್ನು ಜಾರಿಗೆ ತರಲು ಎರಡೂ ದೇಶಗಳು ಗಂಭೀರವಾಗಿ ಚರ್ಚಿಸಿ, 24ನೇ ವಿಶೇಷ ಪ್ರತಿನಿಧಿಗಳ ಸಭೆಗೆ ಒಟ್ಟಾಗಿ ಸಿದ್ಧತೆ ನಡೆಸಲು ಒಪ್ಪಿಕೊಂಡವು' ಎಂದು ಚೀನಾ ವಿದೇಶಾಂಗ ಸಚಿವಾಲಯ ಹೇಳಿದೆ.

ರಷ್ಯಾ ವಿಮಾನ ಪತನ 48 ಮಂದಿ ಸಾವು

ಮಾಸ್ಕೊ (ಎಪಿ): ರಷ್ಯಾದ ಆ್ಯಂಟೊನೊವ್–24 (ಎಎನ್–24) ವಿಮಾನವು ಪತನಗೊಂಡ ಪರಿಣಾಮ, ಆರು ಸಿಬ್ಬಂದಿ ಸೇರಿ 48 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಪತನಗೊಂಡ ವಿಮಾನದ ಅವಶೇಷಗಳು ರಷ್ಯಾದ ಪೂರ್ವ ಭಾಗದಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಯಾಗಿವೆ ಎಂದು ಸ್ಥಳೀಯ ತುರ್ತು ಸೇವೆಗಳ ವಿಭಾಗವು ಗುರುವಾರ ತಿಳಿಸಿದೆ.

ವಿಮಾನವು ರಷ್ಯಾ–ಚೀನಾ ಗಡಿ ಸಮೀಪದ ಬ್ಲಗವೆಶ್ಚೆನ್ಸ್ ನಗರದಿಂದ ಟಿಂಡಾ ಪ್ರದೇಶಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ದುರಂತ ಸಂಭವಿಸಿದೆ. ಅವಘಡದ ವೇಳೆ ವಿಮಾನದಲ್ಲಿ ಐವರು ಮಕ್ಕಳು ಇದ್ದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಟಿಂಡಾ ವಿಮಾನ ನಿಲ್ದಾಣದಿಂದ ಕೆಲವೇ ಕಿಲೋಮೀಟರ್ ದೂರದಲ್ಲಿದ್ದಾಗ ವಿಮಾನವು ಸಂಪರ್ಕ ಕಳೆದುಕೊಂಡಿತ್ತು ಎಂದು ಅವರು ತಿಳಿಸಿದ್ದಾರೆ.

ಥಾಯ್ಲೆಂಡ್–ಕಾಂಬೋಡಿಯಾ ಸಂಘರ್ಷ: 12 ಮಂದಿ ಸಾವು

ಬ್ಯಾಂಕಾಕ್ (ಎಎಫ್‌ಪಿ/ಎಪಿ): ಥಾಯ್ಲೆಂಡ್ ಮತ್ತು ಕಾಂಬೋಡಿಯಾ ಸೇನೆಗಳು ಗುರುವಾರ ಪರಸ್ಪರ ದಾಳಿ ನಡೆಸಿದ್ದು, ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ. ಮೃತರಲ್ಲಿ ಹೆಚ್ಚಿನವರು ನಾಗರಿಕರಾಗಿದ್ದಾರೆ.

ರಾಕೆಟ್ ಮತ್ತು ಫಿರಂಗಿ ಶೆಲ್‌ಗಳನ್ನು ಥಾಯ್ಲೆಂಡ್ ಮೇಲೆ ಕಾಂಬೋಡಿಯಾ ಹಾರಿಸಿದೆ. ಥಾಯ್ಲೆಂಡ್ ಎಫ್–16 ಜೆಟ್ ಸಹಾಯದಿಂದ ವೈಮಾನಿಕ ದಾಳಿ ನಡೆಸಿದೆ. ಕಾಬೋಡಿಯಾದ ಭೂಸೇನೆಯನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಲಾಗಿದೆ ಎಂದು ಥಾಯ್ಲೆಂಡ್ ಸೇನೆ ತಿಳಿಸಿದೆ.

'ಒಬ್ಬರು ಸೈನಿಕರು ಮತ್ತು 11 ಮಂದಿ ನಾಗರಿಕರು ಮೃತಪಟ್ಟಿದ್ದಾರೆ. ಪೆಟ್ರೋಲ್ ಬಂಕ್‌ವೊಂದರ ಮೇಲೆ ರಾಕೆಟ್ ದಾಳಿ ನಡೆದಿದ್ದು, ಹೆಚ್ಚಿನವರು ಈ ದಾಳಿಯಲ್ಲಿ ಮೃತಪಟ್ಟಿದ್ದಾರೆ. 35 ನಾಗರಿಕರು ಗಾಯಗೊಂಡಿದ್ದಾರೆ' ಎಂದು ಥಾಯ್ಲೆಂಡ್ ಆರೋಗ್ಯ ಸಚಿವಾಲಯ ತಿಳಿಸಿದೆ.

ಗಡಿಯುದ್ದಕ್ಕೂ ಕನಿಷ್ಠ ಆರು ಪ್ರಾಂತ್ಯಗಳಲ್ಲಿ ಘರ್ಷಣೆ ಮುಂದುವರಿದಿದೆ ಎಂದು ಥಾಯ್ಲೆಂಡ್ ರಕ್ಷಣಾ ಸಚಿವಾಲಯದ ವಕ್ತಾರ ಸುರಸಂತ್ ಕೊಂಗ್ಸಿರಿ ಹೇಳಿದ್ದಾರೆ.

ಥಾಯ್ಲೆಂಡ್ ತನ್ನ ನಾಗರಿಕರಿಗೆ ಕಾಂಬೋಡಿಯಾ ತೊರೆಯುವಂತೆ ಒತ್ತಾಯಿಸಿದ್ದು, ಎಲ್ಲ ಭೂಗಡಿಗಳನ್ನು ಮುಚ್ಚಿದೆ. ಮೇ ತಿಂಗಳಲ್ಲಿ ನಡೆದ ಸಶಸ್ತ್ರ ಮುಖಾಮುಖಿಯಲ್ಲಿ ಕಾಂಬೋಡಿಯಾದ ಸೈನಿಕರೊಬ್ಬರು ಮೃತಪಟ್ಟ ಬಳಿಕ ಎರಡೂ ದೇಶಗಳ ನಡುವಿನ ಸಂಬಂಧ ಹದಗೆಟ್ಟಿದೆ.

ಹೈಕೋರ್ಟ್‌ಗೆ 'ಸುಪ್ರೀಂ' ಛೀಮಾರಿ

ಒಂದನೇ ಪುಟದಿಂದ...

ಹೈಕೋರ್ಟ್ ಇಂತಹ ತೀರ್ಪು ಹೇಗೆ ನೀಡಲು ಸಾಧ್ಯ' ಎಂದು ಕಟುವಾಗಿ ಕೇಳಿತು.

'ಹೈಕೋರ್ಟ್ ಮಾಡಿರುವ ತಪ್ಪನ್ನು ನಮ್ಮ ನ್ಯಾಯಪೀಠ ಮಾಡುವುದಿಲ್ಲ ಎಂದಿರುವ ಪಾರ್ದೀವಾಲಾ, ನಾವು ಶಿಕ್ಷೆ ಅಥವಾ ಖುಲಾಸೆಯ ಕುರಿತು ಯಾವುದೇ ತೀರ್ಪನ್ನು ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಜುಲೈ 17ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ಪೀಠವು, 'ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ತನ್ನ ವಿವೇಚನಾ ಅಧಿಕಾರವನ್ನು ಬಳಕೆ ಮಾಡಿರುವ ರೀತಿ ಸ್ವಲ್ಪವೂ ಒಪ್ಪವಂತಿಲ್ಲ' ಎಂದು ಹೇಳಿತ್ತು.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ 47 ವರ್ಷದ ದರ್ಶನ್ ಅವರನ್ನು 2024ರ ಜೂನ್ 11 ಬಂಧಿಸಲಾಗಿತ್ತು. ಮೃತದೇಹವು ಜೂನ್ 9ರಂದು ಬೆಂಗಳೂರಿನ ಮೋರಿಯಲ್ಲಿ ಪತ್ತೆಯಾಗಿತ್ತು. ದರ್ಶನ್ ಪ್ರಿಯತಮೆ ಪವಿತ್ರಾ ಗೌಡ ಅವರಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ ಕಾರಣಕ್ಕೆ ರೇಣುಕಸ್ವಾಮಿ ಅವರನ್ನು ಕೊಲೆ ಮಾಡಲಾಗಿತ್ತು. ಪ್ರಕರಣ ಸಂಬಂಧ ಪೊಲೀಸರು ದರ್ಶನ್, ಪವಿತ್ರಾ ಗೌಡ ಮತ್ತು 15 ಇತರ ಆರೋಪಿಗಳನ್ನು ಬಂಧಿಸಿದ್ದರು. ಸೆ.3ರಂದು ಈ ಸಂಬಂಧ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದರು.

ನಟನನ್ನು ಬಂಧಿಸಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಇರಿಸಲಾಗಿತ್ತು. ಆದರೆ ಅವರು ಇತರ ಕೆಲವು ಕೈದಿಗಳೊಂದಿಗೆ ವಿಶ್ರಾಂತಿ ಪಡೆಯುತ್ತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಲಾಗಿತ್ತು.

ಪಂತ್ ದಿಟ್ಟತನ; ಸ್ಟೋಕ್ಸ್ ಛಲ

ಭಾರತ ಮೊದಲ ಇನಿಂಗ್ಸ್‌ನಲ್ಲಿ 358 ರನ್ ಇಂಗ್ಲೆಂಡ್ ಎರಡು ವಿಕೆಟ್‌ಗೆ 225 ರನ್

• ಸಿದ್ಧಿ ಕಿರಣ್

ಮ್ಯಾಂಚೆಸ್ಟರ್: ಭಾರತದ ರಿಷಭ್ ಪಂತ್ ಅವರು 'ಶೂರತ್ವ'ವನ್ನು ಹೊಸದೊಂದು ಔನತ್ಯಕ್ಕೆ ಏರಿಸಿದರು. ಕಾಲ್ಬೆರಳು ಮುರಿದ ನೋವಿನಲ್ಲಿಯೂ ಬ್ಯಾಟಿಂಗ್ ಮಾಡಿದ ಪಂತ್ ಕ್ರಿಕೆಟ್ ಲೋಕದ ಮನಗೆದ್ದರು. ಆದರೆ ನಾಯಕ ಬೆನ್ ಸ್ಟೋಕ್ಸ್ ಅವರ ಅಮೋಘ ಬೌಲಿಂಗ್ ಆತಿಥೇಯ ಇಂಗ್ಲೆಂಡ್ ಆತ್ಮಬಲ ಗಟ್ಟಿಯಾಗಿಸಿತು.

ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಾಲ್ಕನೇ ಟೆಸ್ಟ್ ಪಂದ್ಯದ ಎರಡನೇ ದಿನದಾಟವು ರಿಷಭ್ ಅವರ ಎದೆಗಾರಿಕೆಯ ಆಟಕ್ಕೆ ವೇದಿಕೆಯಾಯಿತು. ಬುಧವಾರ ಮೊದಲ ದಿನದಾಟದಲ್ಲಿ ಕ್ರಿಸ್ ವೋಕ್ಸ್ ಹಾಕಿದ್ದ ಯಾರ್ಕರ್ ಎಸೆತವನ್ನು ರಿವರ್ಸ್ ಸ್ವೀಪ್ ಮಾಡುವ ಪ್ರಯತ್ನದಲ್ಲಿ ರಿಷಭ್ ಗಾಯಗೊಂಡಿದ್ದರು. ಚೆಂಡು ಅವರ ಬಲಗಾಲಿನ ಕಿರುಬೆರಳಿನ ಹತ್ತಿರ ಅಪ್ಪಳಿಸಿತ್ತು. ಕಾಲು ಊದಿಕೊಂಡು, ರಕ್ತಸ್ರಾವವಾಗಿ ನಡೆದಾಡಲೂ ಕಷ್ಟಪಟ್ಟಿದ್ದ ರಿಷಭ್ ಅವರು ಗಾಲ್ಫ್ ಕಾರ್ಟ್ ವಾಹನದಲ್ಲಿ ಪೆವಿಲಿಯನ್‌ಗೆ ಮರಳಿದ್ದರು. ನಂತರದ ತಪಾಸಣೆಯಲ್ಲಿ ಮೂಳೆ ಮುರಿತವಿರುವುದು ಪತ್ತೆಯಾಗಿತ್ತು. ಆದ್ದರಿಂದ ಅವರು ಆಡುವುದು ಅನುಮಾನವಿತ್ತು.

ಆದರೆ ಗುರುವಾರ ಕುಂಟುತ್ತಲೇ ಕ್ರೀಸ್‌ಗೆ ಬಂದ ಪಂತ್ (54; 75ಎಸೆತ) ಅರ್ಧಶತಕ ಹೊಡೆದಾಗ ಓಲ್ಡ್ ಟ್ರಾಫರ್ಡ್‌ನಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳಿಂದ ಮೆಚ್ಚುಗೆಯ ಮಹಾಪೂರವೇ ಹರಿಯಿತು.

ಇನ್ನೊಂದೆಡೆ ಆತಿಥೇಯ ತಂಡದ ನಾಯಕ, ಛಲದಂಕಮಲ್ಲ ಸ್ಟೋಕ್ಸ್ (72ಕ್ಕೆ5) ಎಂಟು ವರ್ಷದ ನಂತರ ಟೆಸ್ಟ್ ಕ್ರಿಕೆಟ್‌ನಲ್ಲಿ ಪಂಚಗುಚ್ಛದ ಸಾಧನೆ ಮಾಡಿದರು. ಇದರಿಂದಾಗಿ ಭಾರತ ಮೊದಲ ಇನಿಂಗ್ಸ್‌ನಲ್ಲಿ 358 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು ದಿನದಾಟ ಮುಕ್ತಾಯಕ್ಕೆ 46 ಓವರ್‌ಗಳಲ್ಲಿ 2 ವಿಕೆಟ್‌ಗೆ 225 ರನ್ ಗಳಿಸಿ ಸುಭದ್ರ ಸ್ಥಿತಿಯಲ್ಲಿದೆ. ಇನಿಂಗ್ಸ್ ಚುಕ್ತಾ ಮಾಡಲು 133 ರನ್ ಅಗತ್ಯವಿದೆ. ಬೆನ್ ಡಕೆಟ್ (94;100ಎ) ಮತ್ತು ಜ್ಯಾಕ್ ಕ್ರಾಲಿ (84;113) ಮೊದಲ ವಿಕೆಟ್ ಜೊತೆಯಾಟದಲ್ಲಿ 166 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಭಾರತದ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಈ ಜೋಡಿಯು ಓವರ್‌ಗೆ ಐದು ರನ್ ಸರಾಸರಿಯಲ್ಲಿ ಬ್ಯಾಟ್ ಬೀಸಿತು.

ಅನುಭವಿ ಸ್ಪಿನ್ನರ್ ರವೀಂದ್ರ ಜಡೇಜ ಅವರು ಕ್ರಾಲಿ ವಿಕೆಟ್ ಪಡೆದು ಜೊತೆಯಾಟ ಮುರಿದರು. ಅದರ ಬೆನ್ನಲ್ಲೇ ಶತಕದ ಅಂಚಿನಲ್ಲಿದ್ದ ಡಕೆಟ್ ವಿಕೆಟ್ ಅನ್ಶುಲ್ ಕಂಬೋಜ್ ಪಾಲಾಯಿತು. ಓಲಿ ಪೋಪ್ (ಔಟಾಗದೇ 20) ಮತ್ತು ಜೋ ರೂಟ್ (ಔಟಾಗದೇ 11) ಮೂರನೇ ದಿನಕ್ಕೆ ಆಟವನ್ನು ಕಾಯ್ದುಕೊಂಡಿದ್ದಾರೆ.

ಎರಡನೇ ದಿನದಾಟದ ಬೆಳಿಗ್ಗೆ ಮೋಡ ಕವಿದ ವಾತಾವರಣದಲ್ಲಿ ಹೊಸ ಚೆಂಡು ಪಡೆದ ಸ್ಟೋಕ್ಸ್ ಅವರು ವೋಕ್ಸ್ ಮತ್ತು ಆರ್ಚರ್ ಅವರನ್ನು ದಾಳಿಗಿಳಿಸಿದರು. ಆರ್ಚರ್ ಅಕ್ಷರಶಃ ಬೆಂಕಿಯುಂಡೆಯಂತಹ ಎಸೆತಗಳನ್ನು ಪ್ರಯೋಗಿಸಿದರು. ರವೀಂದ್ರ ಜಡೇಜ ಮತ್ತು ಶಾರ್ದೂಲ್ ಠಾಕೂರ್ ಅವರು ತಲಾ ಒಂದು ಬಾರಿ ಅಲ್ಪ ಅಂತರದಲ್ಲಿ ಔಟಾಗುವುದನ್ನು ತಪ್ಪಿಸಿಕೊಂಡರು.

ಆದರೆ ಛಲ ಬಿಡದ ಆರ್ಚರ್ ಎಸೆತದಲ್ಲಿ ಜಡೇಜ ಅವರ ಅಮೋಘ ಕ್ಯಾಚ್ ಪಡೆದ ಎರಡನೇ ಸ್ಲಿಪ್ ಫೀಲ್ಡರ್ ಹ್ಯಾರಿ ಬ್ರೂಕ್ ಸಂಭ್ರಮಿಸಿದರು.

ಠಾಕೂರ್ ಜೊತೆಗೂಡಿದ ವಾಷಿಂಗ್ಟನ್ ಸುಂದರ್ ಅವರಿಗೂ ಇಂಗ್ಲೆಂಡ್ ಬೌಲರ್‌ಗಳ ದಾಳಿಯ ಬಿಸಿ ತಟ್ಟಿತು. ಅವರಿಬ್ಬರೂ ಅಪಾರ ತಾಳ್ಮೆ ಮತ್ತು ಏಕಾಗ್ರತೆಯಿಂದ ಸಾಧಾರಣ ಎಸೆತಗಳಿಗೆ ಕಾದರು. ಅವುಗಳಿಂದ ರನ್ ಗಳಿಸಿದರು. ಇದರಿಂದಾಗಿ ಇನಿಂಗ್ಸ್‌ನಲ್ಲಿ ಭರವಸೆ ಮೂಡಿತು.

ಈ ಜೊತೆಯಾಟವನ್ನು ಮುರಿಯುವ ಪ್ರಯತ್ನದಲ್ಲಿ ಬೌಲರ್‌ಗಳಿಗೆ ಹೆಚ್ಚು ಯಶಸ್ಸು ಸಿಗಲಿಲ್ಲ. ಆದರೆ ತಮ್ಮ ಕೈಗೆ ಚೆಂಡು ತೆಗೆದುಕೊಂಡ ಸ್ಟೋಕ್ಸ್ ಇದರಲ್ಲಿ ಯಶಸ್ವಿಯಾದರು. ಅವರು ಹಾಕಿದ ಹಾಫ್ ವಾಲಿ ಎಸೆತವನ್ನು ಠಾಕೂರ್ ಡ್ರೈವ್ ಮಾಡಿದರು. ಆದರೆ ಚೆಂಡಿನ ವೇಗವು ನಿರೀಕ್ಷೆಗಿಂತ ಹೆಚ್ಚಿತ್ತು. ಅದರಿಂದಾಗಿ ಚೆಂಡು ಗಾಳಿಯಲ್ಲಿ ತೇಲಿತು. ಗಲ್ಲಿಯಲ್ಲಿದ್ದ ಬೆನ್ ಡಕೆಟ್ ಡೈವ್ ಮಾಡಿ ಕ್ಯಾಚ್ ಪಡೆದರು.

ಠಾಕೂರ್ ನಿರ್ಗಮಿಸುತ್ತಿದ್ದಂತೆ ಪಂತ್ ಪೆವಿಲಿಯನ್ ಮೆಟ್ಟಿಲುಗಳನ್ನು ಇಳಿದು ಬಂದರು. ಕ್ರಿಕೆಟ್ ಅಭಿಮಾನಿಗಳ ಮುಖದಲ್ಲಿ ಅಚ್ಚರಿ, ಮೆಚ್ಚುಗೆಯ ಭಾವಗಳು ಎದ್ದುಕಂಡವು. ಆತಿಥೇಯ ತಂಡದ ಆಟಗಾರರು ಅರೆಕ್ಷಣ ಮೆಚ್ಚುಗೆ ನೋಟ ಸೂಸಿದರು.

ಸ್ಟೋಕ್ಸ್ ಹಾಕಿದ ಶಾರ್ಟ್ ಬಾಲ್‌ನಲ್ಲಿ ಹುಕ್ ಮಾಡಿದ ವಾಷಿಂಗ್ಟನ್ ಡೀಪ್ ಫೈನ್‌ಲೆಗ್‌ನಲ್ಲಿದ್ದ ಕ್ರಿಸ್ ವೋಕ್ಸ್‌ಗೆ ಕ್ಯಾಚ್ ಆದರು. ಪದಾರ್ಪಣೆ ಆಟಗಾರ ಅನ್ಶುಲ್ ಕಂಬೋಜ್ ಅವರಿಗೆ ಖಾತೆ ತೆರೆಯಲು ಕೂಡ ಸ್ಟೋಕ್ಸ್ ಬಿಡಲಿಲ್ಲ. ಈ ನಡುವೆ ಪಂತ್ ಅವರ ಕಾಲುಗಳನ್ನೇ ಗುರಿಯಾಗಿಸಿಕೊಂಡ ಬೌಲರ್‌ಗಳು ಎಸೆತಗಳನ್ನು ಹಾಕಿದರು. ಅವುಗಳನ್ನು ದಿಟ್ಟವಾಗಿಯೇ ಎದುರಿಸಿದ ಪಂತ್, ಅವಕಾಶ ಸಿಕ್ಕಾಗ ರನ್ ಪಡೆದರು. ಬೌಂಡರಿ ಹೊಡೆದರು. ಆದರೆ ಆರ್ಚರ್ ಎಸೆತದಲ್ಲಿ ಆಫ್‌ಸ್ಟಂಪ್ ಕಳೆದುಕೊಂಡರು.

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಐದು ವಿಕೆಟ್ ಗೊಂಚಲು ಗಳಿಸಿ ಸಂಭ್ರಮಿಸಿದರು — ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 358 (114.1 ಓವರ್‌ಗಳಲ್ಲಿ) (ಬುಧವಾರ 4 ವಿಕೆಟ್‌ಗೆ 264)

ಪಂತ್ ಬಿ ಆರ್ಚರ್ 54 (75ಎ, 4x3, 6x2)
ರವೀಂದ್ರ ಜಡೇಜ ಸಿ ಹ್ಯಾರಿ ಬಿ ಆರ್ಚರ್ 20 (40ಎ, 4x3)
ಠಾಕೂರ್ ಸಿ ಡಕೆಟ್ ಬಿ ಸ್ಟೋಕ್ಸ್ 41 (88ಎ, 4x5)
ವಾಷಿಂಗ್ಟನ್ ಸಿ ವೋಕ್ಸ್ ನಿ ಸ್ಟೋಕ್ಸ್ 27 (90ಎ, 4x2)
ಕಂಬೋಜ್ ಸಿ ಜೆಮಿ ಬಿ ಸ್ಟೋಕ್ಸ್ 0 (3ಎ)
ಬೂಮ್ರಾ ಸಿ ಜೆಮಿ ಬಿ ಆರ್ಚರ್ 4 (7ಎ, 4x1)
ಸಿರಾಜ್ ಔಟಾಗದೇ 5 (7ಎ, 4x1)
ಇತರೆ: 30 (ಲೆಗ್‌ಬೈ 4, ಲೆಗ್‌ಬೈ 8, ವೈಡ್ 14, ನೋಬಾಲ್ 4)
ವಿಕೆಟ್ ಪತನ: 5-266 (ರವೀಂದ್ರ ಜಡೇಜ, 84.5), 6-314 (ಶಾರ್ದೂಲ್ ಠಾಕೂರ್, 101.4), 7-337 (ವಾಷಿಂಗ್ಟನ್ ಸುಂದರ್, 109.2), 8-337 (ಅನ್ಶುಲ್ ಕಂಬೋಜ್, 109.5), 9-349 (ರಿಷಭ್ ಪಂತ್, 112.3), 10-358 (ಜಸ್‌ಪ್ರೀತ್ ಬೂಮ್ರಾ, 114.1)
ಬೌಲಿಂಗ್: ಕ್ರಿಸ್ ವೋಕ್ಸ್ 23-5-66-1, ಜೋಫ್ರಾ ಆರ್ಚರ್ 26.1-3-73-3, ಬ್ರೈಡನ್ ಕಾರ್ಸ್ 21-1-71-0, ಬೆನ್ ಸ್ಟೋಕ್ಸ್ 24-3-72-5, ಲಿಯಾಮ್ ಡಾಸನ್ 15-1-45-1, ಜೋ ರೂಟ್ 5-0-19-0

ಇಂಗ್ಲೆಂಡ್: 2 ವಿಕೆಟ್‌ಗೆ 225 (46 ಓವರ್‌ಗಳಲ್ಲಿ)

ಕ್ರಾಲಿ ಸಿ ರಾಹುಲ್ ಬಿ ಜಡೇಜ 84 (113ಎ, 4x13, 6x1)
ಡಕೆಟ್ ಸಿ (ಸಬ್) ಜುರೇಲ್ ಬಿ ಕಂಬೋಜ್ 94 (100ಎ, 4x13)
ಓಲಿ ಪೋಪ್ ಔಟಾಗದೇ 20 (42ಎ, 4x3)
ಜೋ ರೂಟ್ ಔಟಾಗದೇ 11 (27ಎ, 4x2)
ಇತರೆ: 16 (ಬೈ 4, ಲೆಗ್‌ಬೈ 6, ನೋಬಾಲ್ 6)
ವಿಕೆಟ್ ಪತನ: 1-166 (ಜ್ಯಾಕ್ ಕ್ರಾಲಿ, 31.6), 2-197 (ಬೆನ್ ಡಕೆಟ್, 38.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 13-4-37-0, ಅನ್ಶುಲ್ ಕಂಬೋಜ್ 10-1-48-1, ಮೊಹಮ್ಮದ್ ಸಿರಾಜ್ 10-0-58-0, ಶಾರ್ದೂಲ್ ಠಾಕೂರ್ 5-0-35-0, ರವೀಂದ್ರ ಜಡೇಜ 8-0-37-1

ಚೆಸ್: ಸೆಮಿ ಗೆದ್ದ ಹಂಪಿ • ಫೈನಲ್‌ನಲ್ಲಿ ದಿವ್ಯಾ ಎದುರಾಳಿ

ಭಾರತಕ್ಕೆ ಖಚಿತವಾದ ವಿಶ್ವಕಪ್

ಬಟುಮಿ (ಪಿಟಿಐ): ಕುತೂಹಲಕರ ಟೈಬ್ರೇಕರ್‌ನ ಕೊನೆಯ ಎರಡು ಬ್ಲಿಟ್ಜ್ ಗೇಮ್‌ಗಳಲ್ಲಿ ಜಯಶಾಲಿಯಾದ ಭಾರತದ ಗ್ರ್ಯಾಂಡ್ ಮಾಸ್ಟರ್ ಕೋನೇರು ಹಂಪಿ ಗುರುವಾರ 5-3 ರಿಂದ ಚೀನಾದ ಟಿಂಗ್ಜೀ ಲೀ ಅವರನ್ನು ಪರಾಭವಗೊಳಿಸಿ ಫಿಡೆ ಮಹಿಳಾ ಚೆಸ್ ವಿಶ್ವಕಪ್ ಫೈನಲ್ ತಲುಪಿದರು. ಇದರೊಂದಿಗೆ ಫೈನಲ್ ಭಾರತದ ಆಟಗಾರ್ತಿಯರ ವ್ಯವಹಾರವಾಯಿತು.

ಆಂಧ್ರ ಪ್ರದೇಶದ ಗುಡಿವಾಡದ 38 ವರ್ಷ ವಯಸ್ಸಿನ ಹಂಪಿ ಶನಿವಾರ ಆರಂಭವಾಗುವ ಐತಿಹಾಸಿಕ ಫೈನಲ್‌ನಲ್ಲಿ ನಾಗ್ಪುರದ ಯುವ ಆಟಗಾರ್ತಿ, 19 ವರ್ಷ ವಯಸ್ಸಿನ ದಿವ್ಯಾ ದೇಶಮುಖ್ ಅವರನ್ನು ಎದುರಿಸಲಿದ್ದಾರೆ.

ಹಂಪಿ ಮತ್ತು ಟಿಂಗ್ಜೀ ನಡುವಣ ಎರಡು ಕ್ಲಾಸಿಕಲ್ ಪಂದ್ಯ ಡ್ರಾ ಆಗಿ ಸ್ಕೋರ್ 1-1 ಸಮನಾಗಿತ್ತು. ಗುರುವಾರ 15 ನಿಮಿಷಗಳ ರ‍್ಯಾಪಿಡ್ ಟೈಬ್ರೇಕ್‌ನ ಮೊದಲ ಎರಡು ಪಂದ್ಯಗಳು ಸಹ ಡ್ರಾ ಆದವು. ಮೂರನೇ ಪಂದ್ಯದಲ್ಲಿ ಟಿಂಗ್ಜೀ ಗೆದ್ದರು. ಆದರೆ ಒತ್ತಡದಲ್ಲೂ ಧೃತಿಗಡದೇ ಆಡಿದ ಹಂಪಿ ನಾಲ್ಕನೇ ಪಂದ್ಯ 52 ನಡೆಗಳಲ್ಲಿ ಗೆದ್ದೇಬಿಟ್ಟರು. ಸ್ಕೋರ್ 3-3 ರಲ್ಲಿ ಸಮನಾಯಿತು.

ಹೀಗಾಗಿ ನಿಯಮದಂತೆ ಬ್ಲಿಟ್ಜ್ ಪಂದ್ಯಗಳನ್ನು ಆಡಿಲಾಯಿತು. ಮೊದಲ ಪಂದ್ಯದಲ್ಲಿ ತಾಂತ್ರಿಕ ನೈಪುಣ್ಯ ತೋರಿದ ಹಂಪಿ ಸುಲಭವಾಗಿ ಗೆದ್ದರು. ಹೀಗಾಗಿ ಅವರಿಗೆ ಟಿಂಗ್ಜೀ ವಿರುದ್ಧ ಕೊನೆಯ ಪಂದ್ಯ ಡ್ರಾ ಮಾಡಿಕೊಂಡರೂ ಸಾಕಿತ್ತು. ಆದರೆ ಅವರು ಉತ್ತಮ ಕೌಶಲ ಮೆರೆದು ಆ ಪಂದ್ಯವನ್ನೂ ಗೆದ್ದು ಅರ್ಹ ರೀತಿಯಲ್ಲೇ ಫೈನಲ್ ತಲುಪಿದರು.

ಕೋನೇರು ಹಂಪಿ — ಪಿಟಿಐ ಚಿತ್ರ

ದಿವ್ಯಾ ದೇಶಮುಖ್

ದಿವ್ಯಾ ಅವರಂತೆ ಹಂಪಿ ಸಹ ಸೆಮಿಫೈನಲ್ ಗೆಲುವಿನಿಂದ ಮುಂದಿನ ವರ್ಷ ನಡೆಯಲಿರುವ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆಯನ್ನು ಸಂಪಾದಿಸಿದರು. ವಿಶ್ವ ಚಾಂಪಿಯನ್‌ಗೆ ಸವಾಲು ಹಾಕುವ ಆಟಗಾರ್ತಿಯನ್ನು ನಿರ್ಧರಿಸಲು ನಡೆಯುವ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಎಂಟು ಮಂದಿ ಮಾತ್ರ ಅರ್ಹತೆಪಡೆಯುತ್ತಾರೆ.

ಸೆಮಿಫೈನಲ್‌ನಲ್ಲಿ ಸೋತ ಚೀನಾದ ಆಟಗಾರ್ತಿಯರಾದ ತಾನ್ ಝೊಂಗ್ವಿ ಅವರು ಟಿಂಗ್ಜೀ ಲೀ ಅವರು ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನಡೆಯುವ ಪಂದ್ಯದಲ್ಲಿ ಮುಖಾಮುಖಿ ಆಗಲಿದ್ದಾರೆ. ಝೊಂಗ್ವಿ ಮೊದಲ ಸೆಮಿಫೈನಲ್‌ನಲ್ಲಿ ಭಾರತ ಐಎಂ ಆಟಗಾರ್ತಿ ದಿವ್ಯಾ ಎದುರು ಸೋತಿದ್ದರು. ವಿಶ್ವಕಪ್‌ನಲ್ಲಿ ಮೊದಲ ಮೂರು ಸ್ಥಾನ ಪಡೆದವರು ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯುವ ಕಾರಣ ಈ ಸೆಣಸಾಟ ಗೆದ್ದ ಆಟಗಾರ್ತಿ ಸಹ ಆ ಟೂರ್ನಿಗೆ ಅರ್ಹತೆ ಪಡೆಯುತ್ತಾರೆ.

ಪ್ರಣಯ್ ನಿರ್ಗಮನ • ಸಾತ್ವಿಕ್– ಚಿರಾಗ್ ಮುನ್ನಡೆ

ಸಿಂಧುಗೆ ಆಘಾತ ನೀಡಿದ ಉನ್ನತಿ

ಚಾಂಗ್‌ಝೌ (ಚೀನಾ), (ಪಿಟಿಐ): ಸೀನಿಯರ್ ಹಂತದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಭಾರತದ ಉನ್ನತಿ ಹೂಡಾ ಗುರುವಾರ ಚೀನಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರಿಗೆ ಆಘಾತ ನೀಡಿದರು.

ಮೂರು ಗೇಮ್‌ಗಳವರೆಗೆ ಬೆಳೆದ ಪಂದ್ಯದಲ್ಲಿ 17 ವರ್ಷ ವಯಸ್ಸಿನ ಉನ್ನತಿ 21-16, 19-21, 21-13 ರಿಂದ ಸ್ವದೇಶದ ಅನುಭವಿ ಸಿಂಧು ಅವರನ್ನು ಮಣಿಸಿದರು. 73 ನಿಮಿಷಗಳಲ್ಲಿ ಗೆದ್ದ ಉನ್ನತಿ ಇದೇ ಮೊದಲ ಬಾರಿ ಸೂಪರ್ 1000 ಮಟ್ಟದ ಟೂರ್ನಿಯೊಂದರಲ್ಲಿ ಎಂಟರ ಘಟ್ಟ ತಲುಪಿದರು.

ಈ ಹಿಂದೆ, ಸೂಪರ್ 100 ಮಟ್ಟದ ಎರಡು ಟೂರ್ನಿಗಳಲ್ಲಿ ಗೆದ್ದಿರುವ ರೋಹ್ತಕ್‌ನ ಆಟಗಾರ್ತಿ ಎಂಟರ ಘಟ್ಟದ ಪಂದ್ಯದಲ್ಲಿ ಎರಡು ಬಾರಿಯ ವಿಶ್ವ ಚಾಂಪಿಯನ್ ಅಕಾನೆ ಯಮಾಗುಚಿ ಅವರನ್ನು ಎದುರಿಸಲಿದ್ದಾರೆ.

ಮೂರನೇ ಶ್ರೇಯಾಂಕದ ಅಕಾನೆ ಇನ್ನೊಂದು ಪಂದ್ಯದಲ್ಲಿ ಥಾಯ್ಲೆಂಡ್‌ನ ಬುಸಾನನ್ ಒಂಗ್ಬಾಮ್‌ರುಂಗ್ಫಾನ್ ಅವರನ್ನು 21-14, 21-17 ರಿಂದ ಪರಾಭವಗೊಳಿಸಿದರು.

ವಿಶ್ವದ ಆರನೇ ಕ್ರಮಾಂಕದ ಆಟಗಾರ್ತಿ ಟೊಮೊಕಾ ಮಿಯಾಜಾಕಿ ಅವರನ್ನು ಮೊದಲ ಸುತ್ತಿನಲ್ಲಿ ಸೋಲಿಸಿದ್ದ ಸಿಂಧು ಇಲ್ಲಿ ವಿಶ್ವಾಸದೊಡನೆ ಕಣಕ್ಕಿಳಿದಿದ್ದರು. ಆದರೆ, ಹದಿಹರೆಯದ ಎದುರಾಳಿಯ ವೇಗ, ನಿಖರ ಹೊಡೆತಗಳು ಮತ್ತು ದಣಿವರಿಯದ ಆಟದ ಎದುರು ಮಣಿಯಬೇಕಾಯಿತು.

ಈ ಮೂಲಕ, ಏಳು ವರ್ಷಗಳಲ್ಲಿ ಇದೇ ಮೊದಲ ಬಾರಿ ಅಂತರರಾಷ್ಟ್ರೀಯ ಟೂರ್ನಿಯೊಂದರಲ್ಲಿ ಸಿಂಧು ಸ್ವದೇಶದ ಆಟಗಾರ್ತಿಗೆ ಸೋತಂತೆ ಆಗಿದೆ. 2018ರಲ್ಲಿ ಅವರು ಕಾಮನ್‌ವೆಲ್ತ್ ಗೇಮ್ಸ್ ಫೈನಲ್‌ನಲ್ಲಿ ಸೈನಾ ನೆಹ್ವಾಲ್ ಅವರಿಗೆ ಮಣಿದಿದ್ದರು.

ಸಾತ್ವಿಕ್- ಚಿರಾಗ್ ಮುನ್ನಡೆ: ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ -ಚಿರಾಗ್ ಶೆಟ್ಟಿ ಜೋಡಿ ಎರಡನೇ ಸುತ್ತಿನ ಪಂದ್ಯದಲ್ಲಿ 21-19, 21-19 ರಿಂದ ಲಿಯೊ ರೋಲಿ ಕರ್ನಾಂಡೊ- ಬಗಾಸ್ ಮೌಲಾನಾ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿತು.

ಹೊರಬಿದ್ದ ಪ್ರಣಯ್: ಆದರೆ ಎಸ್.ಎಸ್. ಪ್ರಣಯ್ ಸವಾಲು ಅಂತ್ಯಗೊಂಡಿತು. 65 ನಿಮಿಷಗಳವರೆಗೆ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಭಾರತದ ಆಟಗಾರ 21-18, 15-21, 8-21 ರಲ್ಲಿ ಆರನೇ ಶ್ರೇಯಾಂಕದ ಚೌ ಟಿಯೆನ್ ಚೆನ್ ಅವರೆದುರು ಸೋಲನುಭವಿಸಿದರು.

ಉನ್ನತಿ ಹೂಡಾ — ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ಚಿತ್ರ

ಎಸಿಸಿ ಸಭೆಯಲ್ಲಿ ತೀರ್ಮಾನ: ಯುಎಇಯಲ್ಲಿ ಟೂರ್ನಿ

ಭಾರತದ ಆತಿಥ್ಯದಲ್ಲಿ ಏಷ್ಯಾ ಕಪ್

ನವದೆಹಲಿ/ಢಾಕಾ(ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮುಂಬರುವ ಏಷ್ಯಾ ಕಪ್ ಏಕದಿನ ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಯೋಜಿಸುವುದು ಬಹುತೇಕ ಖಚಿತವಾಗಿದೆ.

ಗುರುವಾರ ಢಾಕಾದಲ್ಲಿ ನಡೆದ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎ.ಸಿ.ಸಿ) ವಾರ್ಷಿಕ ಸಭೆಯಲ್ಲಿ ಈ ವಿಷಯ ಪ್ರಕಟವಾಯಿತು. ಸಭೆಯಲ್ಲಿ 25 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದ ಪರವಾಗಿ ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ವರ್ಚುವಲ್ ಮಾಧ್ಯಮದ ಮೂಲಕ ಹಾಜರಿದ್ದರು.

'ಬಿಸಿಸಿಐ ಯುಎಇಯಲ್ಲಿ ಏಷ್ಯಾ ಕಪ್ ಟೂರ್ನಿಯನ್ನು ಆಯೋಜಿಸಲಿದೆ. ಭಾರತ ತಂಡವು ತನ್ನ ಎಲ್ಲ ಪಂದ್ಯಗಳನ್ನೂ ದುಬೈನಲ್ಲಿ ಆಡಲಿದೆ. ಅಂತಿಮ ವೇಳಾಪಟ್ಟಿಯ ಸಿದ್ಧತೆ ಕುರಿತು ಚರ್ಚೆ ಸಾಗಿದೆ' ಎಂದು ಮೂಲಗಳು ಖಚಿತಪಡಿಸಿವೆ.

ಸೆಪ್ಟೆಂಬರ್‌ನಲ್ಲಿ ಸುಮಾರು 15 ದಿನಗಳ ಕಾಲ ಈ ಟೂರ್ನಿ ನಡೆಯಲಿದೆ. ಅದರ ನಂತರ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಟೆಸ್ಟ್ ಸರಣಿ ನಡೆಯಲಿದೆ.

'ನಮ್ಮ ಉಪಾಧ್ಯಕ್ಷ ರಾಜೀವ ಶುಕ್ಲಾ ಅವರು ಸಭೆಯಲ್ಲಿ ಭಾಗವಹಿಸಿದ್ದರು. ಅವರು ನಂತರ ಎಲ್ಲ ಸದಸ್ಯರಿಗೆ ವಿಷಯಗಳನ್ನು ವಿವರಿಸುವರು. ಯಾವುದೇ ಹೆಚ್ಚಿನ ಬದಲಾವಣೆ ಕಾಣುತ್ತಿಲ್ಲ. ಪೂರ್ವನಿಗದಿಯಂತೆಯೇ ವೇಳಾಪಟ್ಟಿ ಸಿದ್ಧವಾಗಿ ಕೆಲವೇ ದಿನಗಳಲ್ಲಿ ಪ್ರಕಟವಾಗಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಹೇಳಿದ್ದಾರೆ.

ರಾಜೀವ್ ಶುಕ್ಲಾ

ಸಭೆಯಲ್ಲಿ ಹಾಜರಿದ್ದ ಎಸಿಸಿ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮುಖ್ಯಸ್ಥ ಮೊಹಸೀನ್ ನಖ್ವಿ ಅವರು ಈ ಟೂರ್ನಿಯಲ್ಲಿ ಭಾರತ ಮತ್ತು ಪಾಕ್ ಪಂದ್ಯ ಕುರಿತು ಪ್ರತಿಕ್ರಿಯಿಸಿದರು.

'ಈ ಕುರಿತು ಶೀಘ್ರದಲ್ಲಿ ವಿವರ ನೀಡುತ್ತೇವೆ. ಬಿಸಿಸಿಐ ಜೊತೆಗೆ ಕೆಲವು ಮಹತ್ವದ ಸಂಗತಿಗಳ ಕುರಿತು ಮಾತುಕತೆ ನಡೆಸುತ್ತಿದ್ದೇವೆ' ಎಂದು ನಖ್ವಿ ಹೇಳಿದರು.

ಈ ಸಭೆಯಲ್ಲಿ ಪೂರ್ವನಿಗದಿಯಂತೆ 10 ವಿಷಯಗಳು ಚರ್ಚೆಯಾಗಬೇಕಿತ್ತು. ಆದರೆ ಬಿಸಿಸಿಐ ಒತ್ತಡದಿಂದಾಗಿ ಕೇವಲ ಎರಡೇ ವಿಷಯಗಳು ಚರ್ಚೆಯಾದವು ಎಂದು ತಿಳಿದುಬಂದಿದೆ.

ಚಿಟಿಕೆ ಸುದ್ದಿ

ಭಾರತ 'ಎ' ತಂಡದಿಂದ ಹೊರಬಿದ್ದ ಶ್ರೇಯಾಂಕ

ನವದೆಹಲಿ (ಪಿಟಿಐ): ಆಫ್ ಸ್ಪಿನ್ನರ್ ಶ್ರೇಯಾಂಕ ಪಾಟೀಲ ಮತ್ತು ಲೆಗ್ ಸ್ಪಿನ್ನರ್ ಪ್ರಿಯಾ ಮಿಶ್ರಾ ಅವರು ಆಸ್ಟ್ರೇಲಿಯಾ ಪ್ರವಾಸ ಮಾಡಲಿರುವ ಭಾರತ ತಂಡದಿಂದ ಹೊರಬಿದ್ದಿದ್ದಾರೆ.

ಫಿಟ್ನೆಸ್ ಪಡೆದಲ್ಲಿ ಮಾತ್ರ ಅವರು ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಬಿಸಿಸಿಐ ಜುಲೈ 10ರಂದು ತಂಡ ಪ್ರಕಟಿಸುವ ಸಂದರ್ಭದಲ್ಲಿ ತಿಳಿಸಿತ್ತು. ಆದರೆ ಇಬ್ಬರೂ ಶ್ರೇಷ್ಠತಾ ಕೇಂದ್ರದಲ್ಲಿ ಬಿಸಿಸಿಐ ವೈದ್ಯಕೀಯ ತಂಡದ ಆರೈಕೆಯಲ್ಲಿ ಇದ್ದಾರೆ.

ಶ್ರೇಯಾಂಕ ಟಿ20 ತಂಡದಲ್ಲಿ ಆಡಬೇಕಿತ್ತು. ಪ್ರಿಯಾ ಮಿಶ್ರಾ ಏಕದಿನ ಮತ್ತು ನಾಲ್ಕು ದಿನಗಳ ಪಂದ್ಯ ಆಡುವ ತಂಡದಲ್ಲಿ ಸ್ಥಾನ ಪಡೆದಿದ್ದರು.

ಆಸ್ಟ್ರೇಲಿಯಾ ಪ್ರವಾಸ ಆ. 7 ರಂದು ಮ್ಯಾಕೆಯಲ್ಲಿ ಮೊದಲ ಟಿ20 ಪಂದ್ಯದೊಡನೆ ಆರಂಭವಾಗಬೇಕಿತ್ತು.

ಟಿ.ಟಿ: ತೃಪ್ತಿಗೆ ಪ್ರಶಸ್ತಿ

ಮೈಸೂರು: ತೃಪ್ತಿ ಪುರೋಹಿತ್ ಅವರು ಗುರುವಾರ ಇಲ್ಲಿನ ಮೈಸೂರು ವಿ.ವಿ. ಜಿಮ್ಖಾನ ಹಾಲ್‌ನಲ್ಲಿ ಆರಂಭಗೊಂಡ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಎತ್ತಿ ಹಿಡಿದರು. ತೀವ್ರ ಹಣಾಹಣಿಯಿಂದ ಕೂಡಿದ್ದ ಮಹಿಳೆಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ತೃಪ್ತಿ 11-8, 11-9, 4-11, 10-12, 11-8, 11-7 ಅಂತರದಿಂದ ವಿ. ಖುಷಿ ಅವರನ್ನು ಮಣಿಸಿದರು

ಅಭಿನವ್‌ಗೆ-ಹಿಮಾಂಶಿಗೆ ಪ್ರಶಸ್ತಿ: 19 ವರ್ಷ ಒಳಗಿನ ಬಾಲಕರ ವಿಭಾಗದ ಫೈನಲ್‌ನಲ್ಲಿ ಅಭಿನವ್ 13-15, 11-9, 9-11, 11-4, 11-5, 9-11, 11-8 ರಿಂದ ವರುಣ್ ಕಶ್ಯಪ್ ಅವರನ್ನು ಮಣಿಸಿದರು.

ಇದೇ ವಯೋಮಿತಿಯ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಹಿಮಾಂಶಿ ಚೌಧರಿ, ತನಿಷ್ಕಾ ಕಪಿಲ್ ಕಾಲಭೈರವ ವಿರುದ್ಧ 11-9, 11-5, 11-13, 8-11, 11-9, 10-12, 11-7 ರಿಂದ ಹೋರಾಟದ ಗೆಲುವು ಪಡೆದರು.

ವಿಶ್ವ ವಿ.ವಿ ಗೇಮ್ಸ್ ವೈಷ್ಣವಿಗೆ ಕಂಚು

ಬರ್ಲಿನ್ (ಪಿಟಿಐ): ಭಾರತದ ಟೆನಿಸ್ ಆಟಗಾರ್ತಿ ವೈಷ್ಣವಿ ಅಡ್ಕರ್ ಇಲ್ಲಿ ನಡೆದ ವಿಶ್ವ ಯೂನಿವರ್ಸಿಟಿ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಅವರು ಪಾತ್ರವಾದರು.

ಸೆಮಿಫೈನಲ್‌ನಲ್ಲಿ ವೈಷ್ಣವಿ 6-2, 4-6, 4-6ರಿಂದ ಸ್ಲೋವಾಕಿಯಾದ ಎಸ್ಟ್ಜರ್ ಮೇರಿ ಅವರಿಗೆ ಸೋತು ಕಂಚು ತಮ್ಮದಾಗಿಸಿಕೊಂಡರು.

ಮತ್ತೊಂದೆಡೆ ಭಾರತದ ಕಾಂಪೌಂಡ್ ಪುರುಷರ ಮತ್ತು ಮಿಶ್ರ ತಂಡಗಳು ಚಿನ್ನದ ಪದಕ ಸುತ್ತು ಪ್ರವೇಶಿಸಿದವು.

ಅನಿಲ್ ಕುಂಬ್ಳೆ ದಿಟ್ಟ ಆಟ ನೆನಪಿಸಿದ ಉಪನಾಯಕ

ಗಾಯದೊಂದಿಗೆ ಆಟ: ರಿಷಭ್ ಶೈಲಿ!

ಪ್ರಜಾವಾಣಿ ವಾರ್ತೆ

ಅನಿಲ್ ಕುಂಬ್ಳೆ

ಬೆಂಗಳೂರು: ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಕ್ರಿಕೆಟ್ ಅಭಿಮಾನಿಗಳಲ್ಲಿ ಒಬ್ಬರಾಗಿದ್ದ ಆ ಬ್ರಿಟಿಷ್ ಮಹಿಳೆಯ ಮೇಲೆ ಟಿ.ವಿ. ಕ್ಯಾಮೆರಾದ ಕಣ್ಣು ಬಹಳ ಹೊತ್ತು ನಿಂತಿತು. ಆಕೆಯ ಮುಖದಲ್ಲಿ ಅಚ್ಚರಿ, ಮೆಚ್ಚುಗೆಯ ಭಾವ ಇದ್ದವು. ಆಕೆಯ ದೃಷ್ಟಿ ಮಾತ್ರ ಭಾರತದ ಪೆವಿಲಿಯನ್ ಮೆಟ್ಟಿಲುಗಳ ಮೇಲೆ ನೆಟ್ಟಿತ್ತು. ಆ ಮೆಟ್ಟಿಲುಗಳ ಮೇಲೆ ಕುಂಟುತ್ತ ಇಳಿಯುತ್ತಿದ್ದ ರಿಷಭ್ ಪಂತ್ ಅವರನ್ನು ನೋಡಿದ ಆಕೆಯ ಕಣ್ಣಂಚುಗಳು ತೇವಗೊಂಡಿದ್ದು ಸ್ಪಷ್ಟವಾಗಿತ್ತು. ಆಕೆಯಷ್ಟೇ ಅಲ್ಲ ಗುರುವಾರ ರಿಷಭ್ ಅವರ ಎದೆಗಾರಿಕೆ ನೋಡಿದವರೆಲ್ಲರೂ ಇದೇ ರೀತಿ ಪ್ರತಿಕ್ರಿಯಿಸಿದ್ದರಲ್ಲವೇ?

ಆದರೆ ವಿಕೆಟ್‌ಕೀಪರ್ ರಿಷಭ್ ಅವರಿಗೆ ಗಾಯದೊಂದಿಗೆ ಆಟವಾಡುವುದು ಒಂದು ರೀತಿಯಲ್ಲಿ 'ಜೀವನಶೈಲಿ'ಯಾಗಿದೆ. ಮೂರು ವರ್ಷಗಳ ಹಿಂದೆ ದೊಡ್ಡ ಅಪಘಾತದಲ್ಲಿ ಜೀವನ್ಮರಣದ ಹೋರಾಟ ಮಾಡಿ ಬದುಕಿ ಬಂದ ಮೇಲೆ ಕ್ರಿಕೆಟ್ ಅಂಗಳದಲ್ಲಿ ಆಗುವ ಗಾಯಗಳಿಗೆ ಪಂತ್ ಹೆದರುತ್ತಲೇ ಇಲ್ಲ. ಬುಧವಾರ ಬ್ಯಾಟಿಂಗ್ ಮಾಡುವಾಗ ವೇಗಿ ಕ್ರಿಸ್ ವೋಕ್ಸ್ ಅವರ ಯಾರ್ಕರ್ ಎಸೆತವು ರಿಷಭ್ ಕಾಲ್ಬೆರಳಿಗೆ ಅಪ್ಪಳಿಸಿತ್ತು. ರಕ್ತ ಜಿನುಗಿತ್ತು. ಗಾಲ್ಫ್ ಕಾರ್ಟ್‌ನಲ್ಲಿ ಪೆವಿಲಿಯನ್‌ಗೆ ಮರಳಿದ್ದರು. ಗುರುವಾರ 'ಅವರ ಕಾಲ್ಬೆರಳು ಮೂಳೆಮುರಿತವಾಗಿದೆ. ಮುಂದಿನ ಆರು ವಾರ ಅವರು ವಿಶ್ರಾಂತಿ ಪಡೆಯಬೇಕು' ಎಂಬ ಮಾಧ್ಯಮ ಪ್ರಕಟಣೆಯೂ ಹೊರಬಿದ್ದಿತ್ತು. ಅದರಿಂದಾಗಿ ನಾಲ್ಕನೇ ಟೆಸ್ಟ್‌ನ ಎರಡನೇ ದಿನ ಅವರು ತಮ್ಮ ಬ್ಯಾಟಿಂಗ್ ಮುಂದುವರಿಸುವುದು ಅನುಮಾನವಿತ್ತು. ಆದರೆ ಎಲ್ಲರ ಲೆಕ್ಕಾಚಾರ ಬುಡಮೇಲು ಮಾಡಿದ ಅವರು ಕ್ರೀಸ್‌ಗೆ ಕಾಲಿಟ್ಟರು. ಕುಂಟುತ್ತಲೇ ಓಡಾಡಿದರು. ಆದರೆ ಕ್ರೀಸ್‌ನಲ್ಲಿ ಬಿದ್ದು, ಎದ್ದು ಪ್ರಯೋಗಿಸುವ ಹೊಡೆತಗಳಿಗೆ ಕಡಿವಾಣ ಹಾಕಿದರು.

ರಿಷಭ್ ಅವರ ಆಟವು, 2002ರಲ್ಲಿ ಸ್ಪಿನ್ ದಿಗ್ಗಜ ಅನಿಲ್ ಕುಂಬ್ಳೆಯವರು ತೋರಿದ್ದ ವೀರಾವೇಷದ ಆಟವನ್ನೂ ನೆನಪಿಗೆ ತಂದಿತು. ಆ್ಯಂಟಿಗಾದಲ್ಲಿ ನಡೆದಿದ್ದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ಮರ್ವಿನ್ ಡಿಲ್ಲೊನ್ ಹಾಕಿದ್ದ ಬೌನ್ಸರ್ ಎಸೆತವು ಕುಂಬ್ಳೆಯ ಅವರ ದವಡೆಗೆ ಅಪ್ಪಳಿಸಿತ್ತು. ಇದರಿಂದ ಅವರು ತೀವ್ರವಾಗಿ ಗಾಯಗೊಂಡರು. ಆದರೆ ವಿಂಡೀಸ್ ಬ್ಯಾಟಿಂಗ್ ಆರಂಭಿಸಿದಾಗ ಕುಂಬ್ಳೆ ಬೌಲಿಂಗ್ ಮಾಡಲು ಕಣಕ್ಕಿಳಿದರು. ತಮ್ಮ ದವಡೆಗೆ ಬ್ಯಾಂಡೇಜ್ ಹಾಕಿಸಿಕೊಂಡೇ ಆಡಿದರು.

ರಿಷಭ್ ಪಂತ್ — ಪಿಟಿಐ ಚಿತ್ರ

2021ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಹನುಮವಿಹಾರಿ ಕೂಡ ಸ್ನಾಯುಸೆಳೆತದ ಅಪಾರ ನೋವಿನಲ್ಲಿಯೂ ದೀರ್ಘ ಇನಿಂಗ್ಸ್ ಆಡಿ ಭಾರತವನ್ನು ಸೋಲಿನಿಂದ ಪಾರು ಮಾಡಿದ್ದರು. 2011ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಯುವರಾಜ್ ಸಿಂಗ್ ಅವರು ತಮ್ಮ ಅನಾರೋಗ್ಯದ ನಡುವೆಯೂ ತಂಡದ ಗೆಲುವಿನ ರೂವಾರಿಯಾಗಿದ್ದರು. ಟೂರ್ನಿಯ ನಂತರ ಯುವರಾಜ್ ಸಿಂಗ್‌ಗೆ ಕ್ಯಾನ್ಸರ್ ಇರುವುದು ಬಹಿರಂಗವಾಗಿತ್ತು. 2010ರಲ್ಲಿ ಮೊಹಾಲಿಯಲ್ಲಿ ಆಸ್ಟ್ರೇಲಿಯಾ ಎದುರು ನಡೆದಿದ್ದ ಟೆಸ್ಟ್‌ನಲ್ಲಿ ವಿವಿಎಸ್ ಲಕ್ಷ್ಮಣ್ ಅವರು ತಮಗಿದ್ದ ವಿಪರೀತ ಬೆನ್ನುನೋವಿನಲ್ಲಿಯೂ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದರು. ಸೊಂಟಕ್ಕೆ ಬೆಲ್ಟ್ ಕಟ್ಟಿಕೊಂಡು ಅವರು ಬ್ಯಾಟಿಂಗ್ ಮಾಡಿದ್ದರು.

ರಿಷಭ್ ಕುಂಟುತ್ತ, ನೋವನ್ನು ಅವಡುಗಚ್ಚಿ ತಡೆದುಕೊಳ್ಳುತ್ತ ಆಡಿದರು. ಮೂರನೇ ಟೆಸ್ಟ್‌ನಲ್ಲಿಯೂ ಅವರ ಕೈಬೆರಳಿಗೆ ಪೆಟ್ಟಾಗಿತ್ತು. ಅದರಲ್ಲಿಯೇ ಬ್ಯಾಟಿಂಗ್ ಮಾಡಿದ್ದರು.

ಐಎಸ್‌ಎಲ್ ನಡೆಯಲಿದೆ: ಚೌಬೆ

ಕಲ್ಯಾಣ್ ಚೌಬೆ

ನವದೆಹಲಿ (ಪಿಟಿಐ): ಸದ್ಯಕ್ಕೆ ನನೆಗುದಿಯಲ್ಲಿರುವ ಇಂಡಿಯನ್ ಸೂಪರ್ ಲೀಗ್ ಟೂರ್ನಿ ಈ ವರ್ಷ ನಡೆಯಲಿದೆ ಎಂದು ಭಾರತ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಗುರುವಾರ ಭರವಸೆ ನೀಡಿದರು. ಆದರೆ ದೇಶದ ಜನಪ್ರಿಯ ಲೀಗ್ ಆರಂಭದ ದಿನಾಂಕವನ್ನು ಅವರು ಸ್ಪಷ್ಟಪಡಿಸಲಿಲ್ಲ.

ಭಾರತ ಪುರುಷರ ತಂಡಕ್ಕೆ ಹೊಸ ಹೆಡ್ ಕೋಚ್ ನೇಮಕ ಮುಂದಿನ 10 ದಿನಗಳ ಒಳಗೆ ನಡೆಯಲಿದೆ. ತಾಂತ್ರಿಕ ಸಮಿತಿಯು ಅಂತಿಮಗೊಳಿಸಿದ ಮೂವರು ಆಕಾಂಕ್ಷಿಗಳ ಹೆಸರನ್ನು ಬುಧವಾರ ಎಐಎಫ್‌ಎಫ್‌ಗೆ ಕಳುಹಿಸಿದೆ.

'ಲೀಗ್ ನಡೆಯಲಿದೆ ಎಂದು ಎಐಎಫ್‌ಎಫ್ ಅಧ್ಯಕ್ಷನಾಗಿ ನಾನು ಭರವಸೆ ನೀಡುತ್ತಿದ್ದೇನೆ. ಆದರೆ ಸಮಯ ನಿಗದಿ ಮಾಡಬೇಕಿದೆ. ಅಂತರ ರಾಷ್ಟ್ರೀಯ ವೇಳಾಪಟ್ಟಿ, ದೇಶದ ಹೊರಗೆ ಮತ್ತು ತವರಿನ ಪಂದ್ಯಗಳು, ಇವೆಲ್ಲವೂ ಗಣನೆಗೆ ಬರುತ್ತವೆ' ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಪತ್ರಿಕಾಗೋಷ್ಠಿಗೆ ಬಂದಿದ್ದ ಸಂದರ್ಭ ದಲ್ಲಿ ಚೌಬೆ ಪಿಟಿಐಗೆ ತಿಳಿಸಿದರು. ಚೌಬೆ ಐಒಎ ಜಂಟಿ ಕಾರ್ಯದರ್ಶಿಯಾಗಿದ್ದಾರೆ.

ಮಣಿಪುರಕ್ಕೆ ಮಣಿದ ಕರ್ನಾಟಕ ತಂಡ

ಅಮೃತಸರ: ಮಣಿಪುರ ತಂಡವು ಡಾ.ಬಿ.ಸಿ.ರಾಯ್ ಟ್ರೋಫಿಗಾಗಿ ನಡೆಯುತ್ತಿರುವ ಜೂನಿಯರ್ ಬಾಲಕರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ 'ಸಿ' ಗುಂಪಿನ ಪಂದ್ಯದಲ್ಲಿ ಗುರುವಾರ 1-0ರಿಂದ ಕರ್ನಾಟಕ ತಂಡವನ್ನು ಸೋಲಿಸಿತು.

ಗುರುನಾನಕ್ ದೇವ್ ವಿ.ವಿ. ಕ್ರೀಡಾ ಸಂಕೀರ್ಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಈ ಪಂದ್ಯದ 11ನೇ ನಿಮಿಷ ಖುಟ್ಲೆಬಮ್ ಸುಲ್ತಾನ್ ನಿರ್ಣಾಯಕ ಗೋಲು ಗಳಿಸಿದರು.

ಡುರಾಂಡ್ ಕಪ್: ಜಮ್ಶೆಡ್‌ಪುರ ಎಫ್‌ಸಿ ಶುಭಾರಂಭ

ಜಮ್ಶೆಡ್‌ಪುರ (ಪಿಟಿಐ): ಜೆಮ್ಶೆಡ್‌ಪುರ ಎಫ್‌ಸಿ ತಂಡವು ಗುರುವಾರ ಡುರಾಂಡ್ ಕಪ್‌ನ 134ನೇ ಆವೃತ್ತಿಯ ಪಂದ್ಯದಲ್ಲಿ 3-2 ಗೋಲುಗಳಿಂದ ನೇಪಾಳದ ತ್ರಿಭುವನ್ ಆರ್ಮಿ ಎಫ್‌ಸಿ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ಇಲ್ಲಿನ ಜೆಆರ್‌ಡಿ ಟಾಟಾ ಕ್ರೀಡಾ ಸಂಕೀರ್ಣದಲ್ಲಿ ನಡೆದ ಪಂದ್ಯದಲ್ಲಿ ಜೆಮ್ಶೆಡ್‌ಪುರ ಪರ ಸಾರ್ಥಕ್ (4ನೇ), ಮನ್ವಿರ್ (31ನೇ) ಮತ್ತು ಬಾರ್ಲಾ (71ನೇ) ಗೋಲು ಗಳಿಸಿದರು. ನೇಪಾಳದ ತ್ರಿಭುವನ್ ಪರ ನಾಯಕ ಜಾರ್ಜ್ ಕರ್ಕಿ (26ನೇ) ಮತ್ತು ಅನಂತ ತಮಾಂಗ್ (64ನೇ) ಗೋಲು ದಾಖಲಿಸಿದರು.

ಈಸ್ಟ್ ಬೆಂಗಾಲ್‌ಗೆ ಮಣಿದ ಸೌತ್ ಯುನೈಟೆಡ್: ಈಸ್ಟ್ ಬೆಂಗಾಲ್ ತಂಡ ಬುಧವಾರ ಆರಂಭವಾದ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಬೆಂಗಳೂರಿನ ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು 5-0 ಗೋಲುಗಳಿಂದ ಸೋಲಿಸಿತು.

ಮುಂದಿನ ವರ್ಷ ಇಂಗ್ಲೆಂಡ್, ಭಾರತ ಕ್ರಿಕೆಟ್ ಸರಣಿ

ಮ್ಯಾಂಚೆಸ್ಟರ್ (ಪಿಟಿಐ): ಭಾರತ ಕ್ರಿಕೆಟ್ ತಂಡವು ಮುಂದಿನ ವರ್ಷ ಇಂಗ್ಲೆಂಡ್‌ನಲ್ಲಿ ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳ ಸರಣಿ ಆಡಲಿದೆ.

ಟಿ20 ಸರಣಿಯ ಪಂದ್ಯಗಳು ಡುರಾಮ್ (ಜುಲೈ 1), ಮ್ಯಾಂಚೆಸ್ಟರ್ (ಜುಲೈ 4), ನಾಟಿಂಗ್‌ಹ್ಯಾಮ್ (ಜುಲೈ 7), ಬ್ರಿಸ್ಟಲ್ (ಜುಲೈ 9) ಮತ್ತು ಸೌತಾಂಪ್ಟನ್ (ಜುಲೈ 11) ಕ್ರೀಡಾಂಗಣಗಳಲ್ಲಿ ನಡೆಯಲಿವೆ.

ಏಕದಿನ ಸರಣಿಯ ಪಂದ್ಯಗಳು ಬರ್ಮಿಂಗ್‌ಹ್ಯಾಮ್ (ಜುಲೈ 14), ಕಾರ್ಡಿಫ್ (ಜುಲೈ 16) ಮತ್ತು ಲಾರ್ಡ್ಸ್ (ಜುಲೈ 19) ಕ್ರೀಡಾಂಗಣದಲ್ಲಿ ನಡೆಯಲಿವೆ.

'2026ರ ಬೇಸಿಗೆಯಲ್ಲಿ ಅಮೋಘವಾದ ಅಂತರ ರಾಷ್ಟ್ರೀಯ ಕ್ರಿಕೆಟ್ ನಡೆಯಲಿದೆ. ಈ ಪಂದ್ಯಗಳಲ್ಲಿ ಆಡಲು ನಾವು ಉತ್ಸುಕರಾಗಿದ್ದೇವೆ. ವಿಶ್ವದರ್ಜೆಯ ತಂಡಗಳು ಐತಿಹಾಸಿಕ ತಾಣಗಳಲ್ಲಿ ಆಡಲಿವೆ. ಅಭಿಮಾನಿಗಳಿಗೆ ಪುರುಷ ಮತ್ತು ಮಹಿಳಾ ಕ್ರಿಕೆಟ್‌ನ ಉತ್ತಮ ಪಂದ್ಯಗಳನ್ನು ಕಣ್ತುಂಬಿಕೊಳ್ಳುವ ಅವಕಾಶ ದೊರೆಯಲಿದೆ' ಎಂದು ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಿಚರ್ಡ್ ಗೌಲ್ಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ಋತುವಿನಲ್ಲಿ ನ್ಯೂಜಿಲೆಂಡ್, ಪಾಕಿಸ್ತಾನ ಎದುರಿನ ಸರಣಿಗಳು ಹಾಗೂ ಶ್ರೀಲಂಕಾ ಎದುರಿನ ಏಕದಿನ ಸರಣಿಗೂ ಇಸಿಬಿ ಆತಿಥ್ಯ ವಹಿಸಲಿದೆ. ಇಂಗ್ಲೆಂಡ್ ಟೆಸ್ಟ್ ತಂಡಕ್ಕೆ ಬೆನ್ ಸ್ಟೋಕ್ಸ್ ಮತ್ತು ಏಕದಿನ ತಂಡಕ್ಕೆ ಹ್ಯಾರಿ ಬ್ರೂಕ್ ನಾಯಕತ್ವ ವಹಿಸುವುದು ಬಹುತೇಕ ಖಚಿತವಾಗಿದೆ.

ಮಹಿಳೆಯರಿಗೆ ಏಕೈಕ ಟೆಸ್ಟ್

ಮುಂದಿನ ವರ್ಷ ಇಂಗ್ಲೆಂಡ್‌ನಲ್ಲಿ ಭಾರತ ಮಹಿಳಾ ತಂಡವು ಮೂರು ಟಿ20 ಪಂದ್ಯಗಳ ಸರಣಿ ಮತ್ತು ಏಕೈಕ ಟೆಸ್ಟ್ ನಡೆಯಲಿದೆ.

ಟಿ20 ಸರಣಿಯ ಪಂದ್ಯಗಳೂ ಚೆಲ್ಮ್ಸ್‌ಫೋರ್ಡ್ (ಮೇ 28), ಬ್ರಿಸ್ಟಲ್ (ಮೇ 30) ಮತ್ತು ಟಾಂಟನ್ (ಜೂನ್ 2) ಕ್ರೀಡಾಂಗಣಗಳಲ್ಲಿ ನಡೆಯಲಿವೆ.

ಏಕೈಕ ಟೆಸ್ಟ್ ಪಂದ್ಯವು ಜುಲೈ 10ರಿಂದ ಲಾರ್ಡ್ಸ್‌ನಲ್ಲಿ ಆಯೋಜನೆಗೊಂಡಿದೆ.

ಭಾರತ ಒಲಿಂಪಿಕ್ ಸಂಸ್ಥೆ • ಅಂತಃಕಲಹಕ್ಕೆ ಕೊನೆಗೂ ಪರಿಹಾರ

ಅಯ್ಯರ್ ನೇಮಕ ದೃಢೀಕರಿಸಿದ ಮಂಡಳಿ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯಲ್ಲಿ ದೀರ್ಘಕಾಲದಿಂದ ಇದ್ದ ಅಂತಃಕಲಹ ಕೊನೆಗೊಂಡಿದ್ದು, ಸಿಇಒ ರಘುರಾಮ್ ಅಯ್ಯರ್ ಅವರ ನೇಮಕವನ್ನು ಕಾರ್ಯಕಾರಿ ಮಂಡಳಿ ಗುರುವಾರ ದೃಢೀಕರಿಸಿದೆ.

ಉದ್ದೀಪನ ಮದ್ದು ಸೇವನೆ ಪ್ರಮಾಣ ದೇಶದಲ್ಲಿ ಗಮನಾರ್ಹ ಮಟ್ಟದಲ್ಲಿ ಏರುತ್ತಿರುವ ಬಗ್ಗೆ ಐಒಸಿ ಎಚ್ಚರಿಸಿದ ಪರಿಣಾಮ ಇದರ ಕಡಿವಾಣಕ್ಕೆ ಸಮಿತಿಯನ್ನು ನೇಮಿಸಿದೆ.

ಸಂಸ್ಥೆಯ ಅಧ್ಯಕ್ಷೆ ಪಿ.ಟಿ.ಉಷಾ ಅವರು 2024ರ ಜನವರಿಯಲ್ಲಿ ಅಯ್ಯರ್ ಅವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡಿದ್ದರು. ಅವರಿಗೆ ತಿಂಗಳಿಗೆ ₹20 ಲಕ್ಷ ಮತ್ತು ಇತರ ಭತ್ಯೆ ನಿಗದಿಗೊಳಿಸಿರುವ ಸಂಬಂಧ ಉಷಾ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ನಡುವೆ ಸಂಘರ್ಷ ತಲೆದೋರಿತ್ತು.

ಪಿ.ಟಿ.ಉಷಾ, ರಘುರಾಮ್ ಅಯ್ಯರ್

ಆದರೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರ ಮಧ್ಯಪ್ರವೇಶದ ನಂತರ ಕಗ್ಗಂಟಿಗೆ ಪರಿಹಾರ ದೊರೆಯಿತು.

ಏಳು ಮಂದಿ ಸದಸ್ಯರನ್ನು ಹೊಂದಿರುವ ಉದ್ದೀಪನ ಮದ್ದು ತಡೆ ಸಮಿತಿಗೆ ಡೇವಿಸ್ ಕಪ್ ಮಾಜಿ ಆಟಗಾರ ರೋಹಿತ್ ರಾಜಪಾಲ್ ಅಧ್ಯಕ್ಷರಾಗಿದ್ದಾರೆ. ಬ್ಯಾಡ್ಮಿಂಟನ್ ಆಟಗಾರ್ತಿ ಅಪರ್ಣಾ ಪೊಪಟ್, ಕ್ರೀಡಾ ವೈದ್ಯ ಪಿ.ಎಸ್.ಎಂ. ಚಂದ್ರನ್ ಮತ್ತಿತರರು ಸಮಿತಿಯಲ್ಲಿದ್ದಾರೆ.

ಭಾರತದಲ್ಲಿ ಉದ್ದೀಪನ ಮದ್ದು ಸೇವನೆ ಪಾಸಿಟಿವಿಟಿ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿದೆ ಎಂದು ಲುಸಾನ್‌ಗೆ ಭೇಟಿ ನೀಡಿದ್ದ ಭಾರತದ ನಿಯೋಗದ ಮುಂದೆ ಐಒಸಿ ಪ್ರಸ್ತಾಪಿಸಿತ್ತು ಎಂದು ಅಯ್ಯರ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಉಷಾ, ಐಒಸಿ ಸದಸ್ಯರು ಈ ವೇಳೆ ಹಾಜರಿದ್ದರು.

ಅಹಮದಾಬಾದಿನಲ್ಲಿ 2036 ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತ ಆಸಕ್ತಿ ವಹಿಸಿದ್ದು, ಈ ಹಿನ್ನೆಲೆಯಲ್ಲಿ, ಕ್ರೀಡಾ ಕಾರ್ಯದರ್ಶಿ ಹರಿರಂಜನ್ ರಾವ್, ಉಷಾ, ಗುಜರಾತ್ ಕ್ರೀಡಾ ಸಚಿವ ಹರ್ಷ ಸಾಂಘ್ವಿ ಅವರನ್ನು ಒಳಗೊಂಡ ನಿಯೋಗ ಸ್ವಿಜರ್ಲೆಂಡ್‌ನ ಲುಸಾನ್‌ಗೆ ಭೇಟಿ ನೀಡಿತ್ತು.

ಡೋಪಿಂಗ್‌ಗೆ ಸಂಬಂಧಿಸಿ 5000 ಅಥವಾ ಹೆಚ್ಚು ಮಾದರಿಗಳ ಪರೀಕ್ಷೆ ನಡೆಸಿದ ದೇಶಗಳ, ವಿಶ್ಲೇಷಣೆಯನ್ನು ವಾಡಾ ನಡೆಸಿದ್ದು, ನಿಷೇಧಿತ ಮದ್ದು ಸೇವನೆಗೆ ಸಂಬಂಧಿಸಿ ಭಾರತದಲ್ಲಿ 3.8ರಷ್ಟು ಪಾಸಿಟಿವಿಟಿ ಪ್ರಮಾಣ ಕಂಡುಬಂದಿತ್ತು.

ಸ್ವಾಗತ: ಹೊಸ ಕ್ರೀಡಾಡಳಿತ ಮಸೂದೆಯನ್ನು ಐಒಎ ಸ್ವಾಗತಿಸಿದೆ. ಆರಂಭದಲ್ಲಿ ಇದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಈ ಮಸೂದೆಯನ್ನು ಕೇಂದ್ರವು ಬುಧವಾರ ಸಂಸತ್ತಿನಲ್ಲಿ ಮಂಡಿಸಿತ್ತು.

LDP ₹1999^

GREEN BONUS OF ₹2000$ FOR VEHICLE SCRAPPING

EXCHANGE BONUS ₹3000~

HDFC BANK | IDFC FIRST Bank | Powered by pine labs
INSTANT DISCOUNT UP TO ₹10000*
*T & C apply. Offer applicable on select cards and on credit card EMI

TOLL FREE NO. 1800-266-0018

INDIA'S FIRST 5 YEAR WARRANTY* *Conditions apply

Regd. Office: Hero MotoCorp Ltd., The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. CIN: L35911DL1984PLC017354. It is our endeavour to improve our product. This could lead to changes in product specifications without notice. Accessories and features shown may not be a part of the standard fitment. Always wear a helmet while riding a two-wheeler. Available at select dealerships. #Compared to all scooters in the 125cc segment as per internal testing. ##Based on the testing report of govt. Certified agency. Actual mileage may vary as per riding conditions. ^Finance scheme is at the sole discretion of financiers and subject to its respective terms and conditions. ~Monsoon exchange carnival offer on scooters valid from 21st July till 28th July. $Green Bonus is applicable Pan India on select Hero products and bonus amount may vary as per model/variant. *T&C apply. Offer valid till 31st July. Offer is for limited period or till stock lasts. For further information, contact nearest Hero MotoCorp authorised outlet (s) or visit website www.heromotocorp.com

Authorised Dealers: **Bengaluru, Hosur Road:** **RT Krishna Hero,** Ph: 9289923177, **Lalbagh Road:** **Prakash Hero,** Ph: 9289922117, **Byatarayanapura:** **Bimal Hero,** Ph: 9289922863, **Peenya:** **Sai Hero,** Ph: 9289922830, **Hosur Road:** **RT Krishna Hero,** Ph: 9289923177, **Banashankari:** **Sai Hero,** Ph: 9289922476, **Banaswadi:** **Bhagath Hero,** Ph: 9289922738, **Magadi Road:** **Poorna Hero,** Ph: 9289923212, **Marathalli:** **Vaayuratha Hero,** Ph: 9289923811, **Rajaji Nagar:** **Max Hero,** Ph: 9289923023, **Kolar:** **Sai Balaji Hero,** Ph, 9821745024, **Chikkaballapur:** **Manjunath Hero,** Ph: 9821751332, **Tumkur:** **Sai Hero,** Ph: 9289922986, **B.H. Road,** **Sai Hero,** Ph, 7022752841, **Kamakshipalya:** **Poorna Motors,** Ph: 9606922534, **JP Nagar:** **Sai Hero,** Ph: 99002 36280, **Kanakpura Road:** **Sai Hero,** Ph: 8904677394, **Hoskote:** **Bhagath Hero,** Ph: 8884600051, **K R Puram:** **Bhagath Hero,** Ph: 7829488706, **Jigani:** **RT Krishna Hero,** Ph: 8762860999, **RT Nagar:** **Bimal Hero,** Ph: 9535327710, **Tiptur:** **Sai Hero,** Ph, 9164840456, **Kunigal:** **Sai Hero,** Ph: 7022752858, **Doddaballapura:** **Bimal Hero,** Ph: 9742202125, **Associate Dealer:** **Belathur:** Ph: 9902649569, **Madiwala:** Ph: 9731660639, **Banashankari: 3rd Stage,** Ph: 9513353864, **Bannerghatta Road:** Ph: 41209619, **Kengeri:** Ph: 9739275523, **Yelahanka:** Ph: 28462524 / 9341025589, **Mysore Road:** Ph: 9611997733, **Devanahalli:** Ph: 9964560599, **Kanakapura:** Ph: 9880212346, **Bagepalli:** Ph: 282828, **Srinivaspur:** Ph: 9738504002, **Sidlaghatta:** Ph: 254827, **Nelamangala:** Ph: 27723395, **Pavagada:** Ph: 9740324639, **Madhugiri:** Ph: 9972278989, **Vijayapura:** Ph: 9449619920, **Sira:** Ph: 9448417393, **Chandapura:** Ph: 9481329064, **Vidyaranyapura:** Ph: 9606934533, **Magadi:** Ph: 9482090890, **Also Available At:** **Dunnasandra:** Ph: 8310166369, **HSR Layout:** Ph: 7428893265, **Mathikere:** Ph: 9035027951, **Domlur:** Ph: 7353919910, **J.P. Nagar:** Ph: 9035024274, **RT Nagar:** Ph: 9535327710, **Attibele:** Ph: 8050609104, **B Narayanapura:** Ph: 9945472149, **Varthur:** Ph: 9900877227, **Papareddypalya:** Ph: 9916678309, **Anekal:** Ph: 9739519252, **Konankunte:** Ph: 9886122251, **Sarjapur Main Road:** Ph: 8762860999, **Bidadi:** Ph: 9844767719, **Ramanagara:** Ph: 9663399909, **Jigani:** Ph: 9986498884, **Chikkanayakanahalli:** Ph: 9880807399, **Turuvekere:** Ph: 9448403205, **Koratagere:** Ph: 9731713711, **Peresandra:** Ph: 9901502049, **For Bulk Deals/Corporate Purchase,** "Bangalore@Heromotocorp, com"& "Kiran, kumart@Heromotocorp, com" **For Buy/Sell/Exchange Old Any Vehicle Contact VV Puram, Bengaluru Olety Sai Hero Sure:** Ph: 9845074491.

RS/Hero/07/25